ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಮಂಗಳೂರು
ಭಾನುವಾರ, 19 ಏಪ್ರಿಲ್ 2026
ಸಂಪುಟ 48, ಸಂಚಿಕೆ 31, ಪುಟಗಳು 12+8
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital



ಬನ್ನೇರುಘಟ್ಟ ಉದ್ಯಾನಕ್ಕೆ ಬಂದ ದಕ್ಷಿಣ ಆಫ್ರಿಕಾದ ನಾಲ್ಕು ಚೀತಾಗಳು

೦೫

ಯಶಸ್ಸಿನ ಶ್ರೇಯಕ್ಕಾಗಿ ಒಪ್ಪಂದ ತಡ ಮಾಡಿದ್ರಾ ಅಧ್ಯಕ್ಷ ಟ್ರಂಪ್?

೦೭



ವಿಪಕ್ಷಗಳಿಂದ ಮಸೂದೆಯ ಭ್ರೂಣಹತ್ಯೆ | ಮೋದಿ ವಾಗ್ದಾಳಿ
ಮಹಿಳೆಯರಲ್ಲಿ ಮೋದಿ ಕ್ಷಮೆ | ಹೋರಾಟ ಮುಂದುವರಿಕೆ

ನಾರೀಶಕ್ತಿಗೆ ಅಪಮಾನ

• **ಹೊಸದಿಲ್ಲಿ:** ಮಹಿಳಾ ಮೀಸಲಾತಿ ತಿದ್ದುಪಡಿ ಮಸೂದೆ ಸಂಸತ್ತಿನಲ್ಲಿ ವಿಫಲವಾದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳನ್ನು ತರಾಟೆಗೆತ್ತಿಕೊಂಡಿದ್ದಾರೆ. 'ನಾರಿ ಶಕ್ತಿ ವಂದನ ಅಧಿನಿಯಮ' ತಿದ್ದುಪಡಿ ಮಸೂದೆ ಜಾರಿಯಾಗದಿರುವುದು ದೇಶದ ಮಹಿಳಾ ಶಕ್ತಿಯ ಕನಸುಗಳ ಮೇಲೆ ಬಿದ್ದ ದೊಡ್ಡ ಹೊಡೆತವಾಗಿದ್ದು, ಇದಕ್ಕಾಗಿ ದೇಶದ ತಾಯಂದಿರು, ಸಹೋದರಿಯರಲ್ಲಿ ಕ್ಷಮೆಯಾಚಿಸುತ್ತೇನೆ ಎಂದು ಹೇಳಿದರು. ಪ್ರತಿಪಕ್ಷಗಳು ಮಹಿಳಾ ಮಸೂದೆಯ ಭ್ರೂಣ ಹತ್ಯೆ ಮಾಡಿವೆ ಎಂದೂ ಆಕ್ರೋಶ ವ್ಯಕ್ತಪಡಿಸಿದರು.

ದೇಶವನ್ನುದ್ದೇಶಿಸಿ ಶನಿವಾರ ರಾತ್ರಿ ಭಾಷಣ ಮಾಡಿದ ಮೋದಿ ಅವರು, ಮಹಿಳಾ ಮಸೂದೆ ವಿಚಾರದಲ್ಲಿ ಪ್ರತಿಪಕ್ಷಗಳ ನಡೆಯನ್ನು ತೀವ್ರವಾಗಿ ಖಂಡಿಸಿದರು.



ಸಂಸತ್ತಿನಲ್ಲಿ ಮಹಿಳೆಯರ ಹಿತಾಸಕ್ತಿಯ ಪ್ರಸ್ತಾವನೆ ಬಿದ್ದಾಗ ವಿಪಕ್ಷಗಳು ತೋರಿದ ವರ್ತನೆ ತೀವ್ರ ನೋವುಂಟುಮಾಡಿದೆ ಎಂದು ಮೋದಿ ಹೇಳಿದರು. ಮಹಿಳೆಯರ ಹಕ್ಕುಗಳನ್ನು ಕಸಿದುಕೊಂಡು ಚಪ್ಪಾಳೆ ತಟ್ಟುವುದು ಅವರ ಸ್ವಾಭಿಮಾನಕ್ಕೆ ಮಾಡಿದ ಪೆಟ್ಟು ಎಂದು ಬೇಸರ ವ್ಯಕ್ತಪಡಿಸಿದರು. ಮಹಿಳೆಯರು ತಮ್ಮ ಮೇಲೆ ಆಗಿರುವ ಅವಮಾನವನ್ನು ಎಂದಿಗೂ ಮರೆಯುವುದಿಲ್ಲ; ಆದ್ದರಿಂದ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳ ನಡೆ ಮಹಿಳೆಯರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಲಿದೆ ಎಂದು ಎಚ್ಚರಿಸಿದರು. 21ನೇ ಶತಮಾನದ ಮಹಿಳೆ ಎಲ್ಲವನ್ನೂ ಗಮನಿಸುತ್ತಿದ್ದು, ಸತ್ಯವನ್ನು ಅರಿತುಕೊಂಡಿದ್ದಾಳೆ. ಮಹಿಳಾ ಮೀಸಲಾತಿ ವಿರೋಧಿಸಿದವರಿಗೆ ತಕ್ಕ ಉತ್ತರ ನೀಡಲಾಗುತ್ತದೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು.

ಎಲ್ಲರಿಗೂ ಅವಕಾಶ ಯತ್ನ: ಈ ತಿದ್ದುಪಡಿ ಯಾರಿಂದಲೂ ಏನನ್ನೂ ಕಸಿದುಕೊಳ್ಳುವ ಉದ್ದೇಶ ಹೊಂದಿರಲಿಲ್ಲ. ಬದಲಿಗೆ ಎಲ್ಲರಿಗೂ ಅವಕಾಶ ನೀಡುವ ಪ್ರಯತ್ನವಾಗಿತ್ತು ಎಂದು ಪ್ರಧಾನಿ ವಿವರಿಸಿದರು. ➡ಪುಟ ೪



ಮೋದಿ ಪ್ರಮುಖ ಹೇಳಿಕೆಗಳು

- 'ಮಹಿಳೆಯರ ಹಕ್ಕು ಕಸಿದುಕೊಂಡ ಘಟನೆ'
- 'ವಿಪಕ್ಷಗಳ ಸ್ವಾರ್ಥದಿಂದ ಮಸೂದೆ ವಿಫಲ'
- 'ಮಹಿಳೆಯರ ಅವಮಾನ ಮರೆಯುವುದಿಲ್ಲ'
- 'ಸಂಕಲ್ಪ ಅಚಲ ಹೋರಾಟ ಮುಂದುವರಿಯುತ್ತದೆ'
- ಛಲವಾದಿ ಕಾಂಗ್ರೆಸ್, ಡಿಎಂಕೆ, ಟಿಎಂಸಿ, ಎಸ್‌ಪಿಗಳಿಂದ ಸ್ವಾರ್ಥ ರಾಜಕಾರಣ
- ಮಸೂದೆ ಸೋತಾಗ ಮೇಜುಕುಟ್ಟಿ ಸಂಭ್ರಮಿಸಿದ್ದು ನೋವುಂಟು ಮಾಡಿತು
- ನಾರಿ ಎಲ್ಲ ಮರೆಯುತ್ತಾಳೆ, ಆದರೆ ತನ್ನ ಮೇಲಿನ ಅಪಮಾನ ಮರೆಯಲ್ಲ
- ಪ್ರತಿಪಕ್ಷಗಳು ಮಹಿಳಾ ಮಸೂದೆ ಸೋಲಿಸಿ ಭ್ರೂಣಹತ್ಯೆ ಮಾಡಿವೆ
- ವಿರೋಧ ಪಕ್ಷಗಳು ಮಾಡಿದ ಪಾಪಕ್ಕೆ ಆಕೆಯೇ ಶಿಕ್ಷೆ ನೀಡುತ್ತಾಳೆ ➡ಪುಟ ೪

ಕ್ಷೇತ್ರ ಪುನರ್ವಿಂಗಡಣೆಯ ಸುಳ್ಳು

ಕ್ಷೇತ್ರ ಪುನರ್ವಿಂಗಡಣೆಯ ವಿಚಾರದಲ್ಲಿ ವಿಪಕ್ಷಗಳು ನಿರಂತರವಾಗಿ ಸುಳ್ಳು ಪ್ರಚಾರ ನಡೆಸುತ್ತಿವೆ ಎಂದು ಮೋದಿ ಆರೋಪಿಸಿದರು. ಯಾವುದೇ ರಾಜ್ಯದ ಪ್ರಾತಿನಿಧ್ಯ ಕಡಿಮೆಯಾಗುವುದಿಲ್ಲ. ಬದಲಿಗೆ ಎಲ್ಲಾ ರಾಜ್ಯಗಳ ಸೀಟುಗಳು ಹೆಚ್ಚಾಗಲಿವೆ ಎಂದು ಸರ್ಕಾರ ಸ್ಪಷ್ಟಪಡಿಸಿದ್ದರೂ ಕಾಂಗ್ರೆಸ್, ಡಿಎಂಕೆ, ಟಿಎಂಸಿ ಮತ್ತು ಸಮಾಜವಾದಿ ಪಕ್ಷಗಳು ಜನರನ್ನು ತಪ್ಪು ದಾರಿಗೆಳೆಯುತ್ತಿವೆ ಎಂದರು. ಈ ಮಸೂದೆ ಅಂಗೀಕಾರವಾಗಿದ್ದರೆ ತಮಿಳುನಾಡು, ಬಂಗಾಳ, ಉತ್ತರ ಪ್ರದೇಶ, ಕೇರಳ ಸೇರಿದಂತೆ ಎಲ್ಲಾ ರಾಜ್ಯಗಳಿಗೆ ಲಾಭವಾಗುತ್ತಿತ್ತು ಎಂದು ಹೇಳಿದರು.

ಮಸೂದೆ ಮುಖ್ಯ ಅಂಶಗಳು

- ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಗೆ ಮೀಸಲಾತಿ
- 2029ರಿಂದ ಜಾರಿಗೆ ಉದ್ದೇಶ
- 40 ವರ್ಷಗಳ ನಿರೀಕ್ಷೆಗೆ ಅಂತ್ಯ ಮಾಡುವ ಪ್ರಯತ್ನ
- ದೇಶದ ಅರ್ಧ ಜನಸಂಖ್ಯೆಗೆ ರಾಜಕೀಯ ಹಕ್ಕು

ಮೀಸಲಾತಿ ಮಸೂದೆ ವಿಫಲ ರಾಹುಲ್ ನಿವಾಸಕ್ಕೆ ಮುತ್ತಿಗೆ

• **ಹೊಸದಿಲ್ಲಿ:** ಮಹಿಳಾ ಮೀಸಲಾತಿ ಜಾರಿಗೆ ತರುವ ಸಂಬಂಧ ಮಂಡಿಸಲಾಗಿದ್ದ 131ನೇ ಸಂವಿಧಾನ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಅಂಗೀಕಾರಗೊಳ್ಳಲು ವಿಫಲವಾದ ಹಿನ್ನೆಲೆಯಲ್ಲಿ, ಬಿಜೆಪಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿತು. ಬಿಜೆಪಿ ಮಹಿಳಾ ಮುಖಂಡರು, ಕಾರ್ಯಕರ್ತರು ಶನಿವಾರ ಲೋಕಸಭಾ ವಿಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಸುನೇಹ್ರಿ ಬಾಗ್ ನಿವಾಸಕ್ಕೆ ಮುತ್ತಿಗೆ ಹಾಕಿ ದ್ದಾರೆ.ಅದೇರೀತಿ ದೇಶದ ಹಲವೆಡೆ ಬಿಜೆಪಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಾಹುಲ್ ಗಾಂಧಿ ನಿವಾಸದ ಬಳಿ ಪ್ರತಿಭಟನೆ ನಡೆಸುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಬಳಸಿದರು. 2023ರಲ್ಲಿ ಅಂಗೀಕರಿಸಲಾದ 'ನಾರೀಶಕ್ತಿ ವಂದನ್ ಅಧಿನಿಯಮ'ವನ್ನು ಪ್ರಾಯೋಗಿಕವಾಗಿ ಜಾರಿಗೆ ತರಲು ಈ ತಿದ್ದುಪಡಿ ಅತ್ಯಗತ್ಯ ಎಂದು ಬಿಜೆಪಿ ಸಮರ್ಥಿಸಿಕೊಂಡಿದೆ.

ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಶೇ.2 ಹೆಚ್ಚಳ

• **ಹೊಸದಿಲ್ಲಿ:** ಕೇಂದ್ರ ಸರಕಾರಿ ನೌಕರರ ತುಟ್ಟಿಭತ್ಯೆ ಮತ್ತು ಪಿಂಚಣಿದಾರರ ಡಿಯರ್‌ನೆಸ್ ರಿಲೀಫ್‌ನ್ನು ಶೇ.2 ರಷ್ಟು ಹೆಚ್ಚಿಸಲಾಗಿದೆ. ಪ್ರಧಾನಿ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಮಂಜೂರಾತಿ ನೀಡಲಾಗಿದೆ. ➡ಪುಟ ೪

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ
ದಕ್ಷಿಣದಲ್ಲಿ ಸುಪ್ರೀಂ ಪೀಠ ನ್ಯಾಯಖಾತ್ರಿಗೆ ಅವಕಾಶ

• **ಬೆಂಗಳೂರು:** ದಕ್ಷಿಣ ಭಾರತದಲ್ಲಿ ಸರ್ವೋಚ್ಚ ನ್ಯಾಯಾಲಯದ ಪೀಠ ಸ್ಥಾಪನೆಯಾದರೆ ನ್ಯಾಯವನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ಬಹು ದೊಡ್ಡ ಹೆಜ್ಜೆ ಇರಿಸಿದಂತಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದಿಂದ ಶನಿವಾರ ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾದ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯ ಸಹಾಯದಿಂದ ತ್ವರಿತ ಕಾನೂನು ಸಂಶೋಧನೆ, ಪ್ರಕರಣ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಸುಧಾರಿತ ನಿರ್ವಹಣೆ ವ್ಯವಸ್ಥೆಗಳ ಮೂಲಕ ಬಾಕಿ ಇರುವ ಪ್ರಕರಣಗಳನ್ನು ಕಡಿಮೆ ಮಾಡುವ ಸಾಧ್ಯತೆಯಿದೆ ಎಂದರು. ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ಅಳವಡಿಸಿಕೊಳ್ಳುವುದರ ಕುರಿತು ಆಳವಾದ ಕಳವಳಗಳು ಮೂಡದೆ ಇರಲಾರದು. ಅಲ್ಗಾರಿದಮಿಕ್ ಪಕ್ಷಪಾತವು ಕಾನೂನಿನ ಮುಂದೆ ಸಮಾನತೆಯ ಖಾತರಿ ಹಾಳುಮಾಡಬಹುದು. ➡ಪುಟ ೪

4 ಉಗ್ರರ ಸೆರೆ | ಅಯೋಧ್ಯೆ, ಸಂಸತ್ ಗುರಿ
ರಿಮೋಟ್ ಕಾರಲ್ಲಿ ಬಾಂಬ್ ಭಾರೀ ಸ್ಫೋಟಕ್ಕೆ ಸಂಚು

• **ಹೊಸದಿಲ್ಲಿ:** ರಾಜಧಾನಿಯಲ್ಲಿ ದೊಡ್ಡ ಭಯೋತ್ಪಾದಕ ಸಂಚನ್ನು ಭೇದಿಸಿದ ದಿಲ್ಲಿ ಪೊಲೀಸರು ಮಹಾರಾಷ್ಟ್ರ, ಒಡಿಶಾ ಹಾಗೂ ಬಿಹಾರ ಮೂಲದ ನಾಲ್ವರು ಶಂಕಿತ ಉಗ್ರರನ್ನು ಬಂಧಿಸಿದ್ದಾರೆ. ಇವರು ರಾಮಮಂದಿರ, ಸಂಸತ್ ಸೇರಿದಂತೆ ಪ್ರಮುಖ ಸ್ಥಳಗಳ ಮೇಲೆ ದಾಳಿ ನಡೆಸಲು ಯೋಜನೆ



ರೂಪಿಸಿದ್ದು, ಆನ್‌ಲೈನ್ ಎನ್‌ಕ್ರಿಪ್ಟೆಡ್ ವೇದಿಕೆಗಳ ಮೂಲಕ ಇತರರನ್ನು ಸೇರಿಸಿಕೊಳ್ಳಲು ಯತ್ನಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಪೊಲೀಸರು ಕಾರ್ಯಾಚರಣೆ ವೇಳೆ ಸ್ಫೋಟಕ ಸಾಧನ (ಎಲ್‌ಇಡಿ) ಹಾಗೂ ಸಂಬಂಧಿತ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿಗಳಲ್ಲಿ ಇಬ್ಬರು ರಿಮೋಟ್ ನಿಯಂತ್ರಿತ ಆಟಿಕೆ ಕಾರಿನಲ್ಲಿ ಬಾಂಬ್ ಅಳವಡಿಸಿ ಜನಸಂದಣಿ ಪ್ರದೇಶಗಳಲ್ಲಿ ದಾಳಿ ನಡೆಸಲು ಸಿದ್ಧತೆ ನಡೆಸುತ್ತಿದ್ದರು ಎಂದು ಆರೋಪಿಸಲಾಗಿದೆ. ವಿಶೇಷ ದಳವು ಗುಪ್ತಚರ ಮಾಹಿತಿ ಆಧಾರದ ಮೇಲೆ ಮಹಾರಾಷ್ಟ್ರದಿಂದ ಇಬ್ಬರು, ಒಡಿಶಾ, ಬಿಹಾರದಿಂದ ತಲಾ ಒಬ್ಬರನ್ನು ಬಂಧಿಸಿದೆ. ಬಂಧಿತರಲ್ಲಿ ಮೋಸೈಬ್ ಅಹ್ಮದ್, ಮೊಹಮ್ಮದ್ ಹಮ್ಮಾದ್, ಮೊಹಮ್ಮದ್ ಸೋಹೈಲ್, ಶೇಖ್ ಇಮ್ರಾನ್ ಸೇರಿದ್ದಾರೆ. ➡ಪುಟ ೪

ಭಾರತದ ತೈಲ ಹಡಗಿನ ಮೇಲೆ ಇರಾನ್ ದಾಳಿ!

- 14 ಭಾರತೀಯ ಹಡಗುಗಳ ಕಾನ್ವಾಯ್ ಮೇಲೆ ದಾಳಿ
- ಗುಂಡಿನ ದಾಳಿಯಿಂದ ಯಾವುದೇ ಹಾನಿಯಾಗಿಲ್ಲ
- ಒಂದು ಹಡಗು ಹಾರ್ಮುಜ್ ದಾಟುವಲ್ಲಿ ಯಶಸ್ವಿ
- ದಾಳಿ ವಿರುದ್ಧ ಎಂಇಎ ಆಕ್ರೋಶ, ಇರಾನ್ ರಾಯಭಾರಿಗೆ ಸಮನ್ಸ್

• **ಮುಂಬೈ:** ಹಾರ್ಮುಜ್ ಜಲಸಂಧಿಯಿಂದ ಭಾರತದತ್ತ 20 ಲಕ್ಷ ಬ್ಯಾರೆಲ್ ಇರಾಕಿ ಕಚ್ಚಾ ತೈಲ ಹೊತ್ತು ಹೊರಟಿದ್ದ ಭಾರತೀಯ ಹಡಗೊಂದರ ಸಹಿತ ಒಟ್ಟು 14 ತೈಲ ಹಡಗುಗಳ ಕಾನ್ವಾಯ್ ಮೇಲೆ ಶನಿವಾರ ಇರಾನ್



ನೌಕಾಪಡೆಗೆ ಸೇರಿದ 2 ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿವೆ. 14 ಹಡಗುಗಳಲ್ಲಿ ಕೇವಲ 2 ಹಡಗುಗಳ ಮೇಲೆ ಇರಾನ್ ಗನ್‌ಬೋಟುಗಳು ದಾಳಿ ನಡೆಸಿದ್ದು, ಅವುಗಳಲ್ಲಿ ಒಂದು ಹಡಗಿಗೆ ಮಾತ್ರ ಗುಂಡು ತಗುಲಿದೆ. ➡ಪುಟ ೪

ಇರಾನ್–ಅಮೆರಿಕ ಉದ್ವಿಗ್ನತೆ ತೀವ್ರ | ಜಾಗತಿಕ ತೈಲ ಸರಬರಾಜಿಗೆ ಭೀತಿ | ನಿರ್ಬಂಧಕ್ಕೆ ಪ್ರತಿಯಾಗಿ ಇರಾನ್ ಕಠಿಣ ನಿಯಂತ್ರಣ

ಹಾರ್ಮುಜ್‌ನಲ್ಲಿ ಇರಾನ್ ಗುಂಡಿನ ದಾಳಿ

ಕೈರೋ: ಜಾಗತಿಕ ತೈಲ ಸಾಗಾಟದ ಪ್ರಮುಖ ದ್ವಾರವಾದ ಹಾರ್ಮುಜ್ ಜಲಸಂಧಿಯಲ್ಲಿ ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ಮತ್ತಷ್ಟು ತೀವ್ರಗೊಂಡಿದ್ದು, ಜಾಗತಿಕ ಆರ್ಥಿಕತೆಗೆ ಹೊಸ ಆತಂಕವನ್ನುಂಟುಮಾಡಿದೆ. ಅಮೆರಿಕ ಇರಾನ್ ಬಂದರುಗಳ ಮೇಲೆ ಹೇರಿರುವ ನಿರ್ಬಂಧಕ್ಕೆ ಪ್ರತಿಯಾಗಿ ಇರಾನ್ ತನ್ನ ನಿಯಂತ್ರಣವನ್ನು ಮರುಸ್ಥಾಪಿಸಿ, ಜಲಸಂಧಿಯಲ್ಲಿ ಸಾಗಾಟಕ್ಕೆ ಕಟ್ಟುನಿಟ್ಟಿನ ನಿಯಂತ್ರಣ ಹೇರಿದೆ.

ಶನಿವಾರ ಈ ಉದ್ವಿಗ್ನತೆ ಹೊಸ ತಿರುವು ಪಡೆದುಕೊಂಡಿದ್ದು, ಜಲಸಂಧಿ ದಾಟುತ್ತಿದ್ದ ಒಂದು ತೈಲ ಟ್ಯಾಂಕರ್ ಮೇಲೆ ಇರಾನ್ ರೆವಲ್ಯೂಷನರಿ ಗಾರ್ಡ್‌ಗೆ ಸೇರಿದ ಎರಡು ಗನ್‌ಬೋಟ್‌ಗಳು ಗುಂಡಿನ ದಾಳಿ ನಡೆಸಿವೆ. ಬ್ರಿಟನ್ ಸೇನೆಯ ಯುನೈಟೆಡ್ ಕಿಂಗ್‌ಡಮ್ ಮೆರಿಟೈಮ್ ಟ್ರೇಡ್ ಆಪರೇಷನ್ಸ್ ಕೇಂದ್ರ ಈ ಘಟನೆಯನ್ನು ದೃಢಪಡಿಸಿದ್ದು, ಹಡಗು ಮತ್ತು ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ತಿಳಿಸಿದೆ. ಹಡಗಿನ ಹೆಸರು ಅಥವಾ ಗಮ್ಯಸ್ಥಾನವನ್ನು ಬಹಿರಂಗಪಡಿಸಲಿಲ್ಲ.



ಇದರ ನಡುವೆ, ಇರಾನ್ ಸಂಯುಕ್ತ ಸೇನಾ ಕಮಾಂಡ್ 'ಹಾರ್ಮುಜ್ ಜಲಸಂಧಿಯ ಮೇಲಿನ ನಿಯಂತ್ರಣ ಮತ್ತೆ ನಮ್ಮ ಹಸ್ತದಲ್ಲಿದ್ದು, ಕಠಿಣ ಮೇಲ್ವಿಚಾರಣೆಯಲ್ಲಿದೆ' ಎಂದು ಘೋಷಿಸಿದೆ. ಅಮೆರಿಕ ನಿರ್ಬಂಧ ಮುಂದುವರಿದಿರುವವರೆಗೆ ಜಲಸಂಧಿಯಲ್ಲಿ ಸಾಗಾಟವನ್ನು ತಡೆಯಲಾಗುತ್ತದೆ ಎಂದು ಎಚ್ಚರಿಕೆ ನೀಡಿದೆ.

ಇದಕ್ಕೂ ಮೊದಲು, ಇರಾನ್ ಜಲಸಂಧಿಯನ್ನು ಮರುತೆರೆಯುವ ಸೂಚನೆ ನೀಡಿತ್ತು. ಆದರೆ ಅಮೆರಿಕದ ನಿರ್ಬಂಧಕ್ಕೆ ಪ್ರತಿಯಾಗಿ ತನ್ನ ನಿಲುವು ಬದಲಿಸಿ, ಮತ್ತೆ ನಿರ್ಬಂಧ ಹೇರಿದೆ. ಕಳೆದ ಏಳು ವಾರಗಳ ಯುದ್ಧದ ಅವಧಿಯಲ್ಲಿ, ಇರಾನ್ ತನ್ನ ಅನುಮತಿ ಪಡೆದ ಹಡಗುಗಳಿಗೆ ಮಾತ್ರ ಸಾಗಾಟಕ್ಕೆ ಅವಕಾಶ ನೀಡುತ್ತಿದ್ದು, ಇತರ ಹಡಗುಗಳನ್ನು ತಡೆಯುತ್ತಿದೆ. ಇರಾನ್ ಸಂಸತ್ತಿನ ರಾಷ್ಟ್ರೀಯ ಭದ್ರತಾ ಆಯೋಗದ ಮುಖ್ಯಸ್ಥ ಎಬ್ರಾಹಿಂ ಅಜಿಜಿ, 'ಜಲಸಂಧಿ ಹಿಂದಿನ ಸ್ಥಿತಿಗೆ ಮರಳುತ್ತಿದೆ' ಎಂದು ಹೇಳಿದ್ದು, ಹಡಗುಗಳು ಇರಾನ್ ನೌಕಾಪಡೆಯ ಅನುಮತಿ ಪಡೆದು, ಶುಲ್ಕ ಪಾವತಿಸಿದ ಬಳಿಕವೇ ಸಾಗಲು ಅವಕಾಶ ದೊರೆಯುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಈ ಬದಲಾವಣೆ ಒಂದು ದಿನದ ಹಿಂದಷ್ಟೇ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಜಲಸಂಧಿಯನ್ನು ತೆರೆದಿರುವುದಾಗಿ ಘೋಷಿಸಿದ್ದ ಹಿನ್ನೆಲೆ ನಡೆದಿದೆ. ಅದೇ ವೇಳೆ, ಲೆಬನಾನ್‌ನಲ್ಲಿ ಇಸ್ರೇಲ್ ಮತ್ತು ಇರಾನ್ ಬೆಂಬಲಿತ ಹೆಜ್ಬೊಲ್ಲಾ ಸಂಘಟನೆ ನಡುವಿನ 10 ದಿನಗಳ ಯುದ್ಧ ವಿರಾಮ ಘೋಷಿಸಲಾಗಿತ್ತು. ಇಸ್ರೇಲ್–ಹೆಜ್ಬೊಲ್ಲಾ ಸಂಘರ್ಷದ ಅಂತ್ಯ ಇರಾನ್ ಮಾತುಕತೆಗಳ ಪ್ರಮುಖ ಬೇಡಿಕೆಯಾಗಿದೆ.

ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಪ್ರಾರಂಭದಲ್ಲಿ ಜಲಸಂಧಿ ಮರುತೆರೆಯುವ ವಿಚಾರದಲ್ಲಿ ಸಮಾನ ನಿಲುವು ತೋರಿದರೂ, ನಂತರ ಇರಾನ್ ಜೊತೆಗೆ ಪರಮಾಣು ಕಾರ್ಯಕ್ರಮ ಸೇರಿದಂತೆ ಒಪ್ಪಂದವಾಗುವವರೆಗೆ ಅಮೆರಿಕದ ನಿರ್ಬಂಧ ಸಂಪೂರ್ಣವಾಗಿ ಮುಂದುವರಿಯುತ್ತದೆ ಎಂದು ಹೇಳಿದ್ದಾರೆ.

ಹಾರ್ಮುಜ್ ಜಲಸಂಧಿ ವಿಶ್ವದ ಒಟ್ಟು ತೈಲ ಸಾಗಾಟದ ಸುಮಾರು ಐದನೇ ಭಾಗವನ್ನು ಹೊತ್ತೊಯ್ಯುವ ಪ್ರಮುಖ ಮಾರ್ಗವಾಗಿದ್ದು, ಇಲ್ಲಿ ಉಂಟಾಗುವ ಯಾವುದೇ ಅಡ್ಡಿ ಜಾಗತಿಕ ಆರ್ಥಿಕತೆಗೆ ದೊಡ್ಡ ಹೊಡೆತ ನೀಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಗೊಂದಲ ತೈಲ ಸಂಕಷ್ಟವನ್ನು ಮತ್ತಷ್ಟು ಗಂಭೀರಗೊಳಿಸುವ ಆತಂಕವಿದೆ. ಇರಾನ್ ಈ ಜಲಸಂಧಿಯನ್ನು ತನ್ನ ಪ್ರಮುಖ ಒತ್ತಡ ಸಾಧನವಾಗಿ ಬಳಸಿಕೊಂಡಿದ್ದು, ಅಮೆರಿಕ ತನ್ನ ಪಡೆಗಳನ್ನು ನಿಯೋಜಿಸಿ, ಇರಾನ್ ಬಂದರುಗಳ ಮೇಲೆ ನಿರ್ಬಂಧ ಹೇರಿದೆ. ಈ ಕ್ರಮಗಳ ಉದ್ದೇಶ, ಇಸ್ರೇಲ್–ಅಮೆರಿಕ–ಇರಾನ್ ನಡುವೆ ಸುಮಾರು ಏಳು ವಾರಗಳಿಂದ ನಡೆಯುತ್ತಿರುವ ಯುದ್ಧಕ್ಕೆ ಅಂತ್ಯ ತರಲು ಪಾಕಿಸ್ತಾನದ ಮಧ್ಯವರ್ತಿತ್ವದಲ್ಲಿ ನಡೆಯುತ್ತಿರುವ ಯುದ್ಧ ವಿರಾಮ ಒಪ್ಪಂದವನ್ನು ಇರಾನ್ ಒಪ್ಪಿಕೊಳ್ಳುವಂತೆ ಒತ್ತಾಯಿಸುವುದು ಎಂದು ಹೇಳಲಾಗಿದೆ.

ಡೇಟಾ ಸಂಸ್ಥೆ ಕಪ್ಲರ್ ಪ್ರಕಾರ, ಪ್ರಸ್ತುತ ಜಲಸಂಧಿಯಲ್ಲಿ ಸಾಗಾಟವು ಇರಾನ್ ಅನುಮತಿ ಅಗತ್ಯವಿರುವ ನಿರ್ದಿಷ್ಟ ಮಾರ್ಗಗಳಿಗೆ ಮಾತ್ರ ಸೀಮಿತವಾಗಿದೆ. ಅಮೆರಿಕ ಕೇಂದ್ರ ಕಮಾಂಡ್ ಮಾಹಿತಿ ಪ್ರಕಾರ, ಸೋಮವಾರದಿಂದ ಆರಂಭವಾದ ನಿರ್ಬಂಧದ ಬಳಿಕ 21 ಹಡಗುಗಳನ್ನು ಹಿಂದಿರುಗಿಸಲಾಗಿದೆ.



ಜಾಗತಿಕ ತೈಲ ಮಾರುಕಟ್ಟೆಗೆ 50 ಬಿಲಿಯನ್ ಡಾಲರ್ ನಷ್ಟ

ದುಬೈ: ಸುಮಾರು 50 ದಿನಗಳ ಹಿಂದೆ ಇರಾನ್ ಯುದ್ಧ ಪ್ರಾರಂಭವಾದಾಗಿನಿಂದ ವಿಶ್ವವು 50 ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚು ಮೌಲ್ಯದ ಕಚ್ಚಾ ತೈಲ ಉತ್ಪಾದನೆಯನ್ನು ಕಳೆದುಕೊಂಡಿದೆ. ಇದು ಆಧುನಿಕ ಇತಿಹಾಸದಲ್ಲೇ ಅತಿದೊಡ್ಡ ಇಂಧನ ಪೂರೈಕೆ ವ್ಯತ್ಯಯ ಎಂದು ಗುರುತಿಸಲ್ಪಟ್ಟಿದೆ. ಕೆಪ್ಲರ್ ಅಂಕಿಅಂಶಗಳ ಪ್ರಕಾರ, ಫೆಬ್ರವರಿ ಅಂತ್ಯದಿಂದ ಜಾಗತಿಕ ಮಾರುಕಟ್ಟೆಯಿಂದ 500 ಮಿಲಿಯನ್ ಬ್ಯಾರೆಲ್‌ಗಿಂತಲೂ ಹೆಚ್ಚು ಕಚ್ಚಾ ತೈಲ ಮತ್ತು ಕಂಡೆನ್ಸೇಟ್ ಹೊರಬಿದ್ದಿದೆ. ಮಾರ್ಚ್ ತಿಂಗಳಿನಲ್ಲಿ ಗಲ್ಫ್ ಅರಬ್ ರಾಷ್ಟ್ರಗಳು ದಿನಕ್ಕೆ ಸುಮಾರು 8 ಮಿಲಿಯನ್ ಬ್ಯಾರೆಲ್ ಉತ್ಪಾದನೆ ಕಳೆದುಕೊಂಡಿವೆ. ಫೆಬ್ರವರಿಯಲ್ಲಿ 19.6 ಮಿಲಿಯನ್ ಬ್ಯಾರೆಲ್ ಇದ್ದ, ಸೌದಿ ಅರೇಬಿಯಾ, ಕತಾರ್ ಮತ್ತು ಇತರ ಪ್ರಾದೇಶಿಕ ರಾಷ್ಟ್ರಗಳ ಜೆಟ್ ಇಂಧನ ರಫ್ತು, ಮಾರ್ಚ್– ಏಪ್ರಿಲ್ ಅವಧಿಯಲ್ಲಿ 4.1 ಮಿಲಿಯನ್ ಬ್ಯಾರೆಲ್‌ಗಳಿಗೆ ಕುಸಿದಿದೆ. ಲೆಬನಾನ್ ಕದನ ವಿರಾಮ ಒಪ್ಪಂದದ ನಂತರ ಹಾರ್ಮುಜ್ ಜಲಸಂಧಿ ಮುಕ್ತವಾಗಿದ್ದರೂ, ಮೂಲಸೌಕರ್ಯ ಹಾಗೂ ಉತ್ಪಾದನಾ ಮಟ್ಟ ಸಹಜ ಸ್ಥಿತಿಗೆ ಮರಳಲು ತಿಂಗಳುಗಳು ಅಥವಾ ವರ್ಷಗಳೇ ಬೇಕಾಗಬಹುದು ಎನ್ನಲಾಗಿದೆ.

ಮುಖ್ಯಾಂಶಗಳು

- ಜಲಸಂಧಿಯಲ್ಲಿ ಸಾಗುತ್ತಿದ್ದ ಟ್ಯಾಂಕರ್ ಮೇಲೆ ಇರಾನ್ ಗನ್‌ಬೋಟ್‌ಗಳಿಂದ ಗುಂಡಿನ ದಾಳಿ
- ಅಮೆರಿಕ ನಿರ್ಬಂಧ ಮುಂದುವರಿದರೆ ಸಾಗಾಟ ತಡೆಯುವ ಇರಾನ್ ಎಚ್ಚರಿಕೆ
- ಜಾಗತಿಕ ತೈಲ ಸರಬರಾಜಿನ ಪ್ರಮುಖ ಮಾರ್ಗದಲ್ಲಿ ಗೊಂದಲ
- ಪಾಕಿಸ್ತಾನ ಮಧ್ಯವರ್ತಿತ್ವದಲ್ಲಿ ಒಪ್ಪಂದದತ್ತ ಪ್ರಗತಿ
- ಲೆಬನಾನ್‌ನಲ್ಲಿ ಯುದ್ಧ ವಿರಾಮದ ನಡುವೆಯೂ ಅನುಮಾನಗಳು

ಯಶಸ್ಸಿನ ಶ್ರೇಯಕ್ಕಾಗಿ ಒಪ್ಪಂದ ತಡಮಾಡಿದ್ರಾ ಅಧ್ಯಕ್ಷ ಟ್ರಂಪ್?

ವಾಷಿಂಗ್ಟನ್: ಅಮೆರಿಕ–ಇರಾನ್ ನಡುವಿನ ಐತಿಹಾಸಿಕ ಕದನ ವಿರಾಮ ಒಪ್ಪಂದ ಬಹುತೇಕ ಅಂತಿಮ ಗೊಂಡಿದ್ದರೂ, ಕೊನೆಯ ಕ್ಷಣದಲ್ಲಿ ಯಶಸ್ಸಿನ ಶ್ರೇಯಕ್ಕಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಂದ ಘೋಷಿಸಲುತಡಮಾಡಿರುವಸಾಧ್ಯತೆಯಿದೆ ಎಂಬ ಸಂಶಯ ವ್ಯಕ್ತವಾಗಿದೆ.

ಪಾಕಿಸ್ತಾನದಲ್ಲಿ ನಡೆದಿದ್ದ ಅಮೆರಿಕ–ಇರಾನ್ ನಡುವಿನ ಮೊದಲ ಹಂತದ ಕದನ ವಿರಾಮ ಚರ್ಚೆ ಬಹುತೇಕ ಯಶಸ್ವಿಯಾಗಿದ್ದು, ಕೊನೆಯ ಕ್ಷಣದಲ್ಲಿ ಅಧ್ಯಕ್ಷ ಟ್ರಂಪ್ ಮಧ್ಯಪ್ರವೇಶದಿಂದ ತಡವಾಗಿದೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ಇರಾನ್ ನಿಯೋಗದ ನಡುವಿನ ನಿರಂತರ ಮಾತುಕತೆಗಳ ಪರಿಣಾಮ ಕದನ ವಿರಾಮ ಒಪ್ಪಂದವು ಬಹುತೇಕ ಅಂತಿಮ ಘಟ್ಟವನ್ನು ತಲುಪಿತ್ತು. ಇದೇ ಕಾರಣದಿಂದ ಒಂದು ಒಡಂಬಡಿಕೆ (ಎಂಒಯು) ಅಂತಿಮಗೊಳಿಸಲಾಗಿತ್ತು. ಇನ್ನೇನು ಸಹಿ ಮಾಡುವುದೊಂದೇ ಬಾಕಿಯಿತ್ತು. ಆದರೆ ಈ ಸಂದರ್ಭ ಒಪ್ಪಂದ ಸಹಿ ಮಾಡುವುದಕ್ಕೆ ತಯಾರಿದೆ ಎಂಬ ಮಾಹಿತಿಯನ್ನು ಅಧ್ಯಕ್ಷ ಟ್ರಂಪ್‌ಗೆ ನೀಡಲು ಉಪಾಧ್ಯಕ್ಷ ವ್ಯಾನ್ಸ್ ಕರೆ ಮಾಡಿದ್ದರು. ಈ ಸಂದರ್ಭ ಅಮೆರಿಕ–ಇರಾನ್ ನಡುವಿನ ಶಾಂತಿ ಸಭೆಯ ಯಶಸ್ಸಿನ ಶ್ರೇಯ ತಮ್ಮದಾಗಿಸಲು ಅಧ್ಯಕ್ಷ ಟ್ರಂಪ್ ಒಪ್ಪಂದ ಘೋಷಿಸಲು ತಡ ಮಾಡುತ್ತಿದ್ದಾರೆಂದು ಮೂಲಗಳಿಂದ ತಿಳಿದುಬಂದಿದೆ.




- ಕೊನೆಯ ಕ್ಷಣದಲ್ಲಿ ಇಸ್ಲಾಮಾಬಾದ್‌ನಿಂದ ಉಪಾಧ್ಯಕ್ಷ ವ್ಯಾನ್ಸ್ ಕರೆ
- ಬಹುತೇಕ ಅಂತಿಮ ಗೊಂಡಿದ್ದ ಅಮೆರಿಕ–ಇರಾನ್ ಐತಿಹಾಸಿಕ ಒಪ್ಪಂದ

ಪಾಕ್‌ಗೆ ಭದ್ರತಾ ಆತಂಕ, ಪ್ರಾದೇಶಿಕ ಒತ್ತಡ: ಮೂಲಗಳ ಪ್ರಕಾರ, ಇರಾನ್‌ನೊಂದಿಗೆ ಸುಮಾರು 900 ಕಿ.ಮೀ. ಗಡಿ ಹಂಚಿಕೊಳ್ಳುವ ಪಾಕಿಸ್ತಾನಕ್ಕೆ ಭದ್ರತಾ ಆತಂಕ ಹೆಚ್ಚಾಗಿದ್ದರಿಂದ ಎಚ್ಚರಿಕೆಯ ನಿಲುವು ತೆಗೆದುಕೊಳ್ಳಲು ಕಾರಣವಾಗಿದೆ. ಇರಾನ್ ಮತ್ತು ಸೌದಿ ಅರೇಬಿಯಾ ನಡುವಿನ ಭಿನ್ನಾಭಿಪ್ರಾಯ, ಪಾಕ್ ಮತ್ತು ಸೌದಿ ನಡುವಿನ ಸ್ನೇಹಕ್ಕೂ ಆತಂಕ ಸೃಷ್ಟಿಸಿದೆ. ಈ ಪ್ರಾದೇಶಿಕ ಒತ್ತಡವನ್ನು ಚೀನಾ ಸಹಾಯ ಪಡೆದು ಪಾಕ್ ಪ್ರಾದೇಶಿಕ ಉದ್ವಿಗ್ನತೆ ಕಡಿಮೆಗೊಳಿಸಲು ಪ್ರಯತ್ನಿಸುತ್ತಿದೆ. ಉದ್ವಿಗ್ನತೆ ಹೆಚ್ಚಾದರೆ, ಪಾಕ್ ಭದ್ರತೆಗೂ ಸಮಸ್ಯೆಯಾಗಲಿದ್ದು, ಚೀನಾ ಹೂಡಿಕೆಗಳಲ್ಲಿನ ಕಳವಳ ಬಹಿರಂಗವಾಗುವ ಸಾಧ್ಯತೆ ಇರಲಿದೆ.

ಸಭೆ ತೊರೆಯಲು ನಿರಾಕರಿಸಿದ್ದ ಇರಾನ್: ತಾವು ಮೊದಲಿಗೆ ಸಭೆ ತೊರೆಯಲು ಸಿದ್ಧರಿಲ್ಲ ಎಂದು ಇರಾನ್ ನಿಯೋಗವು ಪಾಕಿಸ್ತಾನಿ ಮಧ್ಯವರ್ತಿಗಳಿಗೆ ಸ್ಪಷ್ಟವಾಗಿ ಹೇಳಿತ್ತೆಂದು ತಿಳಿದುಬಂದಿದೆ. ಪಾಕ್ ಮತ್ತು ಚೀನಾ ಭರವಸೆಗಳ ಮೇರೆಗೆ ತಾವು ಅಮೆರಿಕದೊಂದಿಗೆ ಮಾತುಕತೆ ನಡೆಸುವುದಕ್ಕೆ ಒಪ್ಪಿಕೊಂಡು ಇಸ್ಲಾಮಾಬಾದ್‌ಗೆ ಬಂದಿದ್ದಾಗಿ ಇರಾನ್ ನಿಯೋಗ ಹೇಳಿತ್ತೆಂದು ಮೂಲಗಳು ತಿಳಿಸಿವೆ.

ಲೆಬನಾನ್ ಕದನ ವಿರಾಮದ ಮೇಲೆ ಅನುಮಾನಗಳು



ಇಸ್ರೇಲ್ ಮತ್ತು ಲೆಬನಾನ್ ನಡುವೆ ಕದನ ಏರ್ಪಡುವ ಬಗ್ಗೆ ಮಧ್ಯವರ್ತಿಗಳು ವಿಶ್ವಾಸ ವ್ಯಕ್ತಪಡಿಸಿದರೂ, ಹೆಜ್ಬೊಲ್ಲಾ ಈ ಯುದ್ಧ ವಿರಾಮವನ್ನು ಸಂಪೂರ್ಣವಾಗಿ ಪಾಲಿಸಬಹುದೇ ಎಂಬುದರ ಬಗ್ಗೆ ಅನುಮಾನಗಳಿವೆ. ಈ ಒಪ್ಪಂದದಲ್ಲಿ ಹೆಜ್ಬೊಲ್ಲಾ ನೇರವಾಗಿ ಭಾಗಿಯಾಗಿರಲಿಲ್ಲ ಮತ್ತು ದಕ್ಷಿಣ ಲೆಬನಾನ್‌ನ ಕೆಲವು ಭಾಗಗಳಲ್ಲಿ ಇಸ್ರೇಲ್ ಪಡೆಗಳು ಉಳಿದಿವೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇಸ್ರೇಲ್‌ಗೆ ಲೆಬನಾನ್ ಮೇಲೆ ಮುಂದಿನ ದಾಳಿಗಳನ್ನು ನಿಲ್ಲಿಸುವಂತೆ ಸೂಚಿಸಿದ್ದಾರೆ. ಆದರೆ, ಅಮೆರಿಕ ವಿದೇಶಾಂಗ ಇಲಾಖೆ ಈ ನಿರ್ಬಂಧವು ಕೇವಲ ದಾಳಿ ಕ್ರಮಗಳಿಗೆ ಮಾತ್ರ ಅನ್ವಯಿಸುತ್ತದೆ, ಆತ್ಮರಕ್ಷಣಾ ಕ್ರಮಗಳಿಗೆ ಅಲ್ಲ ಎಂದು ಸ್ಪಷ್ಟಪಡಿಸಿದೆ. ಇದಕ್ಕೂ ಮೊದಲು, ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು, 'ಟ್ರಂಪ್ ವಿನಂತಿಯ ಮೇರೆಗೆ ಯುದ್ಧ ವಿರಾಮ ಒಪ್ಪಿಕೊಂಡಿದ್ದೇವೆ, ಆದರೆ ಹೆಜ್ಬೊಲ್ಲಾ ವಿರುದ್ಧದ ಕಾರ್ಯಾಚರಣೆ ಇನ್ನೂ ಪೂರ್ಣಗೊಂಡಿಲ್ಲ' ಎಂದು ಹೇಳಿದ್ದಾರೆ. ಅವರು ಹೆಜ್ಬೊಲ್ಲಾ ಬಳಿ ಇದ್ದ ಸುಮಾರು ಶೇ.90 ಕ್ಷಿಪಣಿ ಶಸ್ತ್ರಾಗಾರವನ್ನು ನಾಶಪಡಿಸಿದ್ದೇವೆ ಎಂದು ಹೇಳಿದ್ದಾರೆ. ಬೇರುತ್‌ನಲ್ಲಿ ಸ್ಥಳಾಂತರಗೊಂಡ ಜನರು ಮನೆಗಳಿಗೆ ಮರಳಲು ಆರಂಭಿಸಿದರೂ, ಅಧಿಕಾರಿಗಳು ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ ಅನಿಶ್ಚಿತತೆ ಮುಂದುವರಿದಿದೆ. ಯುದ್ಧ ವಿರಾಮ ಜಾರಿಗೆ ಬಂದ ಕೆಲವೇ ಗಂಟೆಗಳಲ್ಲೇ ದಕ್ಷಿಣ ಲೆಬನಾನ್‌ನ ಕೆಲವು ಭಾಗಗಳಲ್ಲಿ ಗುಂಡಿನ ದಾಳಿಗಳು ವರದಿಯಾಗಿವೆ.

ಒಪ್ಪಂದದತ್ತ ಪ್ರಗತಿ: ಪಾಕಿಸ್ತಾನ

ಹಾರ್ಮುಜ್ ಜಲಸಂಧಿಯಲ್ಲಿ ಉದ್ವಿಗ್ನತೆ ಹೆಚ್ಚಾದರೂ, ಅಮೆರಿಕ ಮತ್ತು ಇರಾನ್ ನಡುವಿನ ಒಪ್ಪಂದದತ್ತ ಪ್ರಗತಿ ಕಂಡುಬರುತ್ತಿದೆ ಎಂದು ಪಾಕಿಸ್ತಾನ ಅಧಿಕಾರಿಗಳು ತಿಳಿಸಿದ್ದಾರೆ. ಏಪ್ರಿಲ್ 22ರ ಯುದ್ಧ ವಿರಾಮ ಗಡುವಿನೊಳಗೆ ಒಪ್ಪಂದ ಸಾಧ್ಯತೆ ಇದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಟರ್ಕಿಯ ಅಂಟಾಲ್ಯಾದಲ್ಲಿ ನಡೆದ ರಾಜತಾಂತ್ರಿಕ ವೇದಿಕೆಯಲ್ಲಿ ಮಾತನಾಡಿದ ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದರ್, ಲೆಬನಾನ್ ಯುದ್ಧ ವಿರಾಮವನ್ನು ಸಕಾರಾತ್ಮಕ ಬೆಳವಣಿಗೆ ಎಂದು ಹೇಳಿದ್ದಾರೆ. ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆಗಳು 'ಒಪ್ಪಂದದ ಬಹಳ ಸಮೀಪಕ್ಕೆ' ಬಂದಿದ್ದವು ಎಂದು ಅವರು ತಿಳಿಸಿದ್ದಾರೆ. ಪಾಕಿಸ್ತಾನ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಂ ಮುನೀರ್ ಟೆಹ್ರಾನ್‌ಗೆ ಭೇಟಿ ನೀಡಿದರೆ, ಪ್ರಧಾನಮಂತ್ರಿ ಶೆಹಬಾಜ್ ಶರೀಫ್ ಟರ್ಕಿ ಅಧ್ಯಕ್ಷ ರೆಸೆಪ್ ತಯಿಪ್ ಎರ್ಡೋಗಾನ್ ಮತ್ತು ಕತಾರ್ ಅಮೀರ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರನ್ನು ಭೇಟಿಯಾಗಿದ್ದಾರೆ. ಮುಂದಿನ ವಾರ ಅಮೆರಿಕ–ಇರಾನ್ ಮಾತುಕತೆಗಳ ಎರಡನೇ ಹಂತ ಪಾಕಿಸ್ತಾನದಲ್ಲಿ ನಡೆಯುವ ನಿರೀಕ್ಷೆಯಿದೆ.

ಪಾಕ್ ಸೀಮಿತ ಪಾತ್ರ, ಚೀನಾ ಭರವಸೆದಾರ?

ಅಮೆರಿಕ–ಇರಾನ್ ಐತಿಹಾಸಿಕ ಒಪ್ಪಂದ ಮಾತುಕತೆಯಲ್ಲಿ ಪಾಕಿಸ್ತಾನದ ಪಾತ್ರವು ಸೀಮಿತವಾಗಿದ್ದು, ಇದರಲ್ಲಿ ಎರಡೂ ಬದಿಗೂ ಪ್ರಮುಖ ಭರವಸೆದಾರ ರಾಷ್ಟ್ರವಾಗಿ ಚೀನಾ ಹೊರಹೊಮ್ಮಿದೆ. ಮಾರ್ಚ್‌ನಲ್ಲಿ ಚೀನಾ ಅಧಿಕಾರಿಗಳು ಮತ್ತು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ನಡುವೆ ಚರ್ಚೆ ನಡೆದಿತ್ತು. ಇಸ್ಲಾಮಾಬಾದ್ ಸ್ವತಂತ್ರ ಮಧ್ಯವರ್ತಿಯಲ್ಲ, ಚೀನಾ ಹಿತಾಸಕ್ತಿಗಳಿಗೆ ಮಧ್ಯಸ್ಥಿಕೆಯ ಮಾರ್ಗವಾಗಿ ಕಾರ್ಯ ನಿರ್ವಹಿಸಿದೆ. ಪಾಕ್ ಆರ್ಥಿಕ ಸವಾಲು ಎದುರಿಸುವ ಸಮಯದಲ್ಲೇ ಇದು ನಡೆದಿದ್ದರಿಂದ ಇದನ್ನು ಯಶಸ್ಸಿನ ರೀತಿ ಪಾಕ್ ಪ್ರದರ್ಶಿಸುತ್ತಿದೆ.

ಕೊನೆಯ ಕ್ಷಣ ಸಹಿ ಮಾಡದಂತೆ ಸಲಹೆ?

ಅಧ್ಯಕ್ಷರ ಸಲಹೆ ಕೇಳಲೆಂದು ಉಪಾಧ್ಯಕ್ಷ ವ್ಯಾನ್ಸ್ ಇಸ್ಲಾಮಾಬಾದ್‌ನಿಂದ ದೂರವಾಣಿ ಕರೆ ಮಾಡಿದ್ದಾಗ, ಇರಾನ್ ಜತೆಗಿನ ಒಪ್ಪಂದ ತಕ್ಷಣವೇ ಅಂತಿಮಗೊಳಿಸದಂತೆ ಮತ್ತು ಸಹಿ ಮಾಡದಂತೆ ಟ್ರಂಪ್ ಸಲಹೆ ನೀಡಿದ್ದರು. ಸಹಿ ಮಾಡುವುದಕ್ಕೂ ಮುನ್ನ ವೈಯಕ್ತಿಕವಾಗಿ ಒಪ್ಪಂದವನ್ನು ಪರಾಮರ್ಶೆ ಮಾಡಲು ಟ್ರಂಪ್ ಬಯಸಿದ್ದು, ಅದರೊಂದಿಗೆ 45 ವರ್ಷಗಳ ನಂತರ ಅಮೆರಿಕ–ಇರಾನ್ ನಡುವಿನ ಐತಿಹಾಸಿಕ ಒಪ್ಪಂದದ ಯಶಸ್ಸಿನ ಶ್ರೇಯ ಪಡೆದುಕೊಳ್ಳಲು ಅಧ್ಯಕ್ಷ ಟ್ರಂಪ್ ಒಪ್ಪಂದ ಘೋಷಿಸಲು ತಡ ಮಾಡಿರುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ದೂರವಾಣಿ ಕರೆಯಲ್ಲಿ ಟ್ರಂಪ್ ಸಲಹೆ ಪಡೆದ ಬಳಿಕ ಅಮೆರಿಕ–ಇರಾನ್ ಕದನ ವಿರಾಮ ಮಾತುಕತೆ ಕೊಠಡಿಗೆ ಮರಳಿದ ಉಪಾಧ್ಯಕ್ಷ ವ್ಯಾನ್ಸ್, ನಮ್ಮ ಅಧ್ಯಕ್ಷರು ವೈಯಕ್ತಿಕವಾಗಿ ಒಪ್ಪಂದವನ್ನು ಪರಾಮರ್ಶೆ ಮಾಡಬೇಕೆಂದಿದ್ದಾರೆ. ಹೀಗಾಗಿ ಒಪ್ಪಂದ ಈಗಲೇ ಅಂತಿಮಗೊಳಿಸಲು ಅಥವಾ ಸಹಿ ಮಾಡುವುದು ಸಾಧ್ಯವಿಲ್ಲ. ಯಾವುದೇ ಅಧಿಕೃತ ಬದ್ಧತೆ ನೀಡುವ ಮುನ್ನ ಅಧ್ಯಕ್ಷರು ಚರ್ಚೆ ನಡೆಸಲು ಬಯಸಿದ್ದಾಗಿ ವ್ಯಾನ್ಸ್ ಇರಾನ್ ನಿಯೋಗಕ್ಕೆ ತಿಳಿಸಿದ್ದಾರೆ ಎಂದು ಅಮೆರಿಕ ಮೂಲಗಳು ಹೇಳಿವೆ.

ಕಿರುಸುದ್ದಿ

ಭಾರತ ಸಿದ್ಧತೆ ಸಮರ್ಪಕ

ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಅಸ್ಥಿರ ಪರಿಸ್ಥಿತಿಯ ನಡುವೆ ಭಾರತ ಯಾವುದೇ ಪರಿಸ್ಥಿತಿಗೂ ಸಜ್ಜಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು. ಸಚಿವರ ಅನೌಪಚಾರಿಕ ಗುಂಪು ಸಭೆಯಲ್ಲಿ ಸಿದ್ಧತೆ ಪರಿಶೀಲನೆ ನಡೆಯಿತು. ದೇಶದಲ್ಲಿ 60 ದಿನಗಳಿಗೆ ಸಾಕಷ್ಟು ಇಂಧನ ಸಂಗ್ರಹವಿದ್ದು, ಹೋರ್ಮುಜ್ ಅವಲಂಬನೆ ಕಡಿಸಲು ಆಮದು ಮೂಲಗಳನ್ನು ವೈವಿಧ್ಯಗೊಳಿಸಲಾಗಿದೆ. ಮೆರಿಟೈಮ್ ಇನ್ಸುರೆನ್ಸ್ ಪೂಲ್ ರಚನೆಗೆ ಅನುಮೋದನೆ ನೀಡಲಾಗಿದೆ.

ರಷ್ಯಾ ತೈಲ ಖರೀದಿ ನಿರ್ಬಂಧ ಸಡಿಲಿಸಿದ ಅಮೆರಿಕ

ವಾಷಿಂಗ್ಟನ್: ಭಾರತ ಸೇರಿದಂತೆ ವಿವಿಧ ದೇಶಗಳು ವಾಷಿಂಗ್ಟನ್ ವಿಧಿಸಿರುವ ನಿರ್ಬಂಧಗಳಿಗೆ ಒಳಗಾಗದೆ ರಷ್ಯಾದಿಂದ ಇಂಧನ ಖರೀದಿಸಲು ಅನುವು ಮಾಡಿಕೊಡುವ ಹೊಸ 30 ದಿನಗಳ ಸಾಮಾನ್ಯ ಪರವಾನಿಗೆಯನ್ನು ಅಮೆರಿಕ ಶುಕ್ರವಾರ ನೀಡಿದೆ. ಅಮೆರಿಕದ ಖಜಾನೆ ಇಲಾಖೆಯ ಈ ವಿಸ್ತರಣೆ, ಏಪ್ರಿಲ್ 17 ರಿಂದ ಮೇ 16 ರ ನಡುವೆ ಹಡಗುಗಳಿಗೆ ತುಂಬಲಾದ ತೈಲವನ್ನು ಖರೀದಿಸಲು ಅನುಮತಿ ನೀಡುತ್ತದೆ.

ಡಿಎಂಕೆ ಭ್ರಷ್ಟಾಚಾರ ತನಿಖೆ, ಮೋದಿ ಭರವಸೆ

ಕೋಯಮತ್ತೂರು: ತಮಿಳುನಾಡಿನಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದ ನಂತರ ಡಿಎಂಕೆ ಪಕ್ಷದ ಕ್ಯಾಶ್–ಫಾರ್–ಪೋಸ್ಟಿಂಗ್ ಸೇರಿದಂತೆ ಎಲ್ಲಾ ಭ್ರಷ್ಟಾಚಾರ ಪ್ರಕರಣಗಳನ್ನು ತನಿಖೆಗೆ ಒಳಪಡಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭರವಸೆ ನೀಡಿದರು. ಏಪ್ರಿಲ್ 23ರ ವಿಧಾನಸಭೆ ಚುನಾವಣೆಯ ನಂತರ ಸರ್ಕಾರ ರಚನೆಯಾಗುತ್ತಿದ್ದಂತೆ ಕ್ರಮ ಆರಂಭವಾಗಲಿದೆ ಎಂದು ಹೇಳಿದರು.

ಇಲ್ಲಿ ಎನ್‌ಡಿಎ ಅಭ್ಯರ್ಥಿಗಳ ಪರ ಪ್ರಚಾರ ಸಭೆ ನಡೆಸಿದ ಅವರು, ರಾಜ್ಯದ ಕಾನೂನು–ಸುವ್ಯವಸ್ಥೆಯನ್ನು ಸಂಪೂರ್ಣವಾಗಿ ಸರಿಪಡಿಸಲಾಗುವುದು ಹಾಗೂ ಮಹಿಳೆಯರ ಭದ್ರತೆಗೆ ಪ್ರಾಥಮ್ಯ ನೀಡಲಾಗುವುದು ಎಂದು ಅವರು ಹೇಳಿದರು. ಭೂಮಿ, ಮರಳು ಮತ್ತು ಮದ್ಯ ಮಾಫಿಯಾಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ, ಮಾದಕ ವಸ್ತುಗಳಿಂದ ಮುಕ್ತ ತಮಿಳುನಾಡು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಡಿಎಂಕೆ ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಉದ್ಯೋಗ ಹಗರಣವನ್ನು ಉಲ್ಲೇಖಿಸಿದ ಮೋದಿ, ನೇಮಕಾತಿಗಳಲ್ಲಿ ಪಾರದರ್ಶಕತೆ ತರಲಾಗುವುದು ಎಂದರು. ಮದ್ಯ ಮತ್ತು ಮಾದಕ ವಸ್ತುಗಳ ವಿರುದ್ಧದ ಕ್ರಮ ಸಾವಿರಾರು ಜನರ ಜೀವ ಉಳಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ಭಾರೀ ಜನಸ್ತೋಮವನ್ನು ಉಲ್ಲೇಖಿಸಿದ ಅವರು, 'ಜನರು ಈಗಾಗಲೇ ಸಂದೇಶ ನೀಡಿದ್ದು ಎನ್‌ಡಿಎ ಒಳಗೆ, ಡಿಎಂಕೆ ಹೊರಗೆ' ಎಂದು ಹೇಳಿದರು. ಕೊಂಗು ನಾಡು ಮತ್ತು ಕೋಯಮತ್ತೂರಿನ ಜನರ ಪರಿಶ್ರಮ ಹಾಗೂ ಬೆಂಬಲವನ್ನು ಅವರು ಪ್ರಶಂಸಿಸಿದರು.

ಪ್ರಜಾಪ್ರಭುತ್ವದ ಗೆಲುವು ಎಂದ ಪ್ರಿಯಾಂಕಾ ವಾದ್ರಾ

ಹೊಸದಿಲ್ಲಿ: ಸಂಸತ್ತಿನಲ್ಲಿ ಕ್ಷೇತ್ರ ಮರುವಿಂಗಡಣೆ (ಡಿಲಿಮಿಟೇಶನ್) ಮಸೂದೆ ಸೋಲನ್ನು ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಸಂದ ಜಯ ಎಂದು ವಯನಾಡು ಸಂಸದೆ ಪ್ರಿಯಾಂಕಾ ವಾದ್ರಾ ಬಣ್ಣಿಸಿದ್ದಾರೆ.

ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಯೊಂದಿಗೆ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಉದ್ದೇಶಿಸಿದ್ದ ಈ ಮಸೂದೆ ಲೋಕಸಭೆಯಲ್ಲಿ ಅಗತ್ಯವಿದ್ದ ಮೂರನೇ ಎರಡರಷ್ಟು ಬಹುಮತವನ್ನು ಪಡೆಯುವಲ್ಲಿ ವಿಫಲವಾಯಿತು. ಅಂತಿಮ ಮತ ಎಣಿಕೆಯಲ್ಲಿ 298 ಸದಸ್ಯರು ಮಸೂದೆಯ ಪರವಾಗಿ ಮತ್ತು 230 ಸದಸ್ಯರು ವಿರುದ್ಧವಾಗಿ ಮತ ಚಲಾಯಿಸಿದ್ದರು.

ವಿರೋಧ ಪಕ್ಷದ ನಿಲುವು: ಅಧಿಕಾರದಲ್ಲಿ ಮುಂದುವರಿಯಲು ದೇಶದ ಒಕ್ಕೂಟ ವ್ಯವಸ್ಥೆಯನ್ನು ಬದಲಿಸಲು ಸರ್ಕಾರ ಸಂಚು ರೂಪಿಸುತ್ತಿದೆ ಎಂದು ಪ್ರಿಯಾಂಕಾ ಗಾಂಧಿ ಆರೋಪಿಸಿದರು. ಈ ಫಲಿತಾಂಶ, ವಿರೋಧ ಪಕ್ಷಗಳ ಒಗ್ಗಟ್ಟಿಗೆ ಸಂದ ಗೆಲುವು ಎಂದು ಅವರು ತಿಳಿಸಿದರು. ವಿರೋಧ ಪಕ್ಷಗಳು ಮಹಿಳಾ ಮೀಸಲಾತಿಯನ್ನು ತಾತ್ವಿಕವಾಗಿ ಬೆಂಬಲಿಸಿದರೂ, ಮಸೂದೆಯಲ್ಲಿ ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆಗಳನ್ನು ಸೇರಿಸಿರುವುದನ್ನು ಆಕ್ಷೇಪಿಸಿವೆ.

ಸರ್ಕಾರದ ಪ್ರತಿಕ್ರಿಯೆ: ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡುವ ಐತಿಹಾಸಿಕ ಸುಧಾರಣೆಯನ್ನು ವಿರೋಧ ಪಕ್ಷಗಳು ತಡೆಹಿಡಿದಿವೆ ಎಂದು ಬಿಜೆಪಿ ಟೀಕಿಸಿದೆ. ಮಸೂದೆ ವಿಫಲವಾದ ಹಿನ್ನೆಲೆಯಲ್ಲಿ, ಇದಕ್ಕೆ ಸಂಬಂಧಿಸಿದ ಉಳಿದ ಎರಡು ಮಸೂದೆಗಳೊಂದಿಗೆ ಸರ್ಕಾರ ಮುಂದೆ ಹೋಗುವುದಿಲ್ಲ, ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಖಚಿತಪಡಿಸಿದ್ದಾರೆ.

ಸಿಪಿಎಂ ಕಾರ್ಯಕರ್ತನಿಗೆ 25 ವರ್ಷಗಳ ಜೈಲು ಶಿಕ್ಷೆ

ಕಣ್ಣೂರು(ಕೇರಳ): 2011ರಲ್ಲಿ ಆರ್‌ಎಸ್‌ಎಸ್–ಬಿಜೆಪಿ ಕಾರ್ಯಕರ್ತರ ಮೇಲೆ ನಡೆದ ಬಾಂಬ್ ದಾಳಿ ಪ್ರಕರಣದಲ್ಲಿ ಸಿಪಿಐ(ಎಂ)ಗೆ ಸೇರಿದ 10 ಕಾರ್ಯಕರ್ತರಿಗೆ ಕೇರಳದ ನ್ಯಾಯಾಲಯವು 10 ವರ್ಷದಿಂದ 25 ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ವಿಧಿಸಿದೆ.

ತಾಲಿಪರಂಬ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶ ಪ್ರಸಾಂತ್ ಕೆ.ಎನ್. ಅವರು ಭಾರತೀಯ ದಂಡ ಸಂಹಿತೆ (ಬಿಎನ್‌ಎಸ್) ಹಾಗೂ ಸ್ಫೋಟಕ ವಸ್ತುಗಳ ಕಾಯ್ದೆಯ ವಿವಿಧ ವಿಧಿಗಳಡಿ ಆರೋಪಿಗಳಿಗೆ ವಿಭಿನ್ನ ಅವಧಿಯ ಶಿಕ್ಷೆಗಳನ್ನು ವಿಧಿಸಿದ್ದಾರೆ.

ಈ ಪ್ರಕರಣದ ಎರಡನೇ ಆರೋಪಿ ಟಿ.ವಿ. ಬಿನು ಅಲಿಯಾಸ್ ಉರುಂಬನ್ ಬಿನು ಬಾಂಬ್ ಎಸೆದ ಮುಖ್ಯ ವ್ಯಕ್ತಿಯಾಗಿದ್ದರಿಂದ, ಅವನಿಗೆ ವಿಧಿಸಲಾದ ಶಿಕ್ಷೆಗಳು ಕ್ರಮವಾಗಿ ಅನುಸರಿಸಬೇಕಾಗಿ ಬರುತ್ತವೆ. ಇದರ ಪರಿಣಾಮವಾಗಿ ಅವನು ಒಟ್ಟು 25 ವರ್ಷ ಜೈಲಿನಲ್ಲಿ ಕಳೆದಿರಬೇಕು ಎಂದು ನ್ಯಾಯಾಲಯ ಸೂಚಿಸಿದೆ.

ಇನ್ನುಳಿದ ಒಂಬತ್ತು ಆರೋಪಿಗಳಾದ ಎಂ.ಕೆ. ಪ್ರದೀಪ್ ಕುಮಾರ್, ಪಿ.ಪಿ. ಸತ್ಯನ್, ಸಿಪಿಐ(ಎಂ) ಪಂಚಾಯತ್ ಸದಸ್ಯ ಪಿ.ವಿ. ಬಾಬುರಾಜ್, ಇ.ವಿ. ವಿನೋದ್ ಕುಮಾರ್, ವಿಜಯನ್, ಕೆ.ಪಿ. ಸುರೇಶ್, ಟೋಬಿ, ಜನಾರ್ಧನನ್ ಕೆ.ವಿ. ಹಾಗೂ ಶಿವಪ್ರಕಾಶ್ ಇವರಿಗೆ ವಿಧಿಸಲಾದ ಶಿಕ್ಷೆಗಳು ಒಂದೇ ಸಮಯದಲ್ಲಿ ಅನುಷ್ಠಾನಗೊಳ್ಳುವ ಕಾರಣ, ಅವರಿಗೆ ಗರಿಷ್ಠ 10 ವರ್ಷಗಳ ಜೈಲು ಶಿಕ್ಷೆ ಅನ್ವಯವಾಗುತ್ತದೆ.

ನ್ಯಾಯಾಲಯವು ಪ್ರತಿಯೊಬ್ಬ ಆರೋಪಿಗೂ 2.6 ಲಕ್ಷ ರೂ. ದಂಡವನ್ನು ವಿಧಿಸಿದೆ.

ಕಲಾಪ ಅನಿರ್ದಿಷ್ಟಾವಧಿ ಮುಂದೂಡಿಕೆ

ಹೊಸದಿಲ್ಲಿ: ಕೇಂದ್ರ ಸರ್ಕಾರದ ಮಹಿಳಾ ಮೀಸಲಾತಿ ಕಾಯ್ದೆ ಮಂಡನೆಯೊಂದಿಗೆ ಬಜೆಟ್ ಅಧಿವೇಶನವು ಮುಕ್ತಾಯಗೊಂಡಿದ್ದು, ಲೋಕಸಭೆ ಮತ್ತು ರಾಜ್ಯಸಭೆ ಕಲಾಪಗಳನ್ನು ಅನಿರ್ದಿಷ್ಟಾವಧಿ ಸಮಯದವರೆಗೆ ಮುಂದೂಡಲಾಗಿವೆ. ಜ.28ರಿಂದ ಆರಂಭವಾಗಿದ್ದ ಬಜೆಟ್ ಅಧಿವೇಶನದ ಮೊದಲ ಹಂತದಲ್ಲಿ ಒಟ್ಟು 13, ಎರಡನೇ ಹಂತದಲ್ಲಿ 15 ಮತ್ತು ಮೂರನೇ ಹಂತದಲ್ಲಿ 3 ಕಲಾಪಗಳು ನಡೆದಿದ್ದವು. ಒಟ್ಟು 81 ದಿನಗಳಲ್ಲಿ 31 ಕಲಾಪಗಳು ನಡೆದಿವೆ. 31 ಕಲಾಪಗಳಲ್ಲಿ ಕೇಂದ್ರ ಸರ್ಕಾರವು 9 ಕಾಯ್ದೆಗಳನ್ನು ಅಂಗೀಕರಿಸಿದೆ. ಲೋಕಸಭೆಯ ಕಲಾಪಗಳು ಶೇ.93ರಷ್ಟು ಉತ್ಪಾದಕತೆ ಮತ್ತು ರಾಜ್ಯಸಭೆ ಕಲಾಪಗಳು ಶೇ.100ಕ್ಕೂ ಅಧಿಕ (ಬಹುತೇಕ ಶೇ.110) ಉತ್ಪಾದಕತೆಯನ್ನು ಸಾಧಿಸಿವೆ. ಮೋದಿ ಸರ್ಕಾರ ಮಂಡಿಸಿದ 12 ಕಾಯ್ದೆಗಳಲ್ಲಿ, 9 ಕಾಯ್ದೆಗಳು ಎರಡೂ ಮನೆಗಳಲ್ಲಿ ಅಂಗೀಕಾರವಾಗಿವೆ.

ದೌರ್ಜನ್ಯ ಎಸಗಿದಾತ ಟಿಸಿಎಸ್ ಸಹೋದ್ಯೋಗಿ | ಸಂತ್ರಸ್ತೆಯ ಆರೋಪ

ಹಿಂದಿನ ವಿವಾಹ ಬಚ್ಚಿಟ್ಟು ಸುಳ್ಳು ಭರವಸೆ

ಮುಂಬೈ: ನಾಸಿಕ್ ಲೈಂಗಿಕ ದೌರ್ಜನ್ಯ ಮತ್ತು ಬಲವಂತದ ಮತಾಂತರ ಪ್ರಕರಣದ ಸಂತ್ರಸ್ತೆಯೊಬ್ಬರು ಗಂಭೀರ ಆರೋಪಗಳನ್ನು ಮಾಡಿದ್ದು, ತನ್ನ ಹಿಂದಿನ ವಿವಾಹವನ್ನು ಮರೆಮಾಚಿದ ಆರೋಪಿಯೊಬ್ಬ ಆಕೆಗೆ ವಿವಾಹ ಆಗುವುದಾಗಿ ಸುಳ್ಳು ಭರವಸೆ ನೀಡಿದ್ದನೆಂದು ಆರೋಪಿಸಿದ್ದಾರೆ.

ಸಂತ್ರಸ್ತ ಮಹಿಳೆ ಪೊಲೀಸರಿಗೆ ನೀಡಿದ ದೂರಿನಲ್ಲಿ, 2022ರ ಜುಲೈನಲ್ಲಿ ಡಿಯೋಲಾಲಿ ಕ್ಯಾಂಪ್ ಪ್ರದೇಶದಲ್ಲಿ ಭೇಟಿಯಾದಾಗ ಆರೋಪಿಯೊಬ್ಬ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದನೆಂದೂ, ಟಿಸಿಎಸ್‌ನಲ್ಲಿ ಉದ್ಯೋಗಕ್ಕೆ ಸೇರಿದಾಗ ಆರೋಪಿಯೂ ಅಲ್ಲಿ ನೌಕರಿ ಮಾಡುತ್ತಿದ್ದನು. 2026ರ ಫೆಬ್ರವರಿ ವೇಳೆ ಆತನಿಗೆ ಈಗಾಗಲೇ ಪತ್ನಿ ಮತ್ತು ಇಬ್ಬರು ಮಕ್ಕಳಿದ್ದಾರೆ ಎಂಬುದನ್ನು ಆತನ ಪತ್ನಿ ಸಂಪರ್ಕಿಸಿದಾಗ ತಿಳಿದುಬಂದಿತ್ತೆಂದು ಉಲ್ಲೇಖಿಸಿದ್ದಾರೆ.

ಇನ್ನೂ ಕೆಲವು ಆರೋಪಿಗಳು ಲೈಂಗಿಕ ಕಿರುಕುಳ ನೀಡಿ ಇಸ್ಲಾಂಗೆ ಮತಾಂತರವಾಗಲು ಬೆದರಿಕೆ ಹಾಕಿದ್ದರೆಂದೂ ಸಂತ್ರಸ್ತ ಮಹಿಳೆ ಆರೋಪಿಸಿದ್ದಾರೆ.

ಕ್ಯಾಂಟೀನ್‌ನಲ್ಲಿ ಹಿಂದು ದೇವತೆಗಳ ಅವಹೇಳನ!: ಆರೋಪಿ ಮತ್ತು ಇನ್ನಿಬ್ಬರು ಮುಸ್ಲಿಂ ಸಹೋದ್ಯೋಗಿಗಳು ಟಿಸಿಎಸ್ ಕಂಪನಿ ಕ್ಯಾಂಟೀನ್‌ನಲ್ಲಿ ಆಕೆಯನ್ನು ಭೇಟಿಯಾಗಿ, ಹಿಂದು ದೇವತೆಗಳ ಬಗ್ಗೆ ಕೆಟ್ಟದಾಗಿ ಅಪಮಾನಕಾರಿ ಮಾತುಗಳನ್ನಾಡಿದ್ದರು. ಶಿವಲಿಂಗವನ್ನು ಪೂಜಿಸುವ ಕುರಿತು ಅಸಭ್ಯ ಮಾತನ್ನಾಡಿದ್ದರು. ಇಸ್ಲಾಂ ಶ್ರೇಷ್ಠ ಮತವೆಂದೂ, ಇಸ್ಲಾಂಗೆ ಮತಾಂತರ ಆಗಬೇಕೆಂದೂ ಪೀಡಿಸುತ್ತಿದ್ದರೆಂದು ಸಂತ್ರಸ್ತೆ ಆರೋಪಿಸಿದ್ದಾರೆ.

ಪೊಲೀಸರು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದ್ದು, ಒಟ್ಟು 9 ಎಫ್‌ಐಆರ್‌ಗಳನ್ನು ದಾಖಲಿಸಿಕೊಂಡಿದ್ದಾರೆ. ಈಗಾಗಲೇ 8 ಆರೋಪಿಗಳನ್ನು ಬಂಧಿಸಿದ್ದಾರೆ. ಪ್ರಕರಣದಲ್ಲಿ ಶೂನ್ಯ ಸಹಿಷ್ಣುತೆಯ ನೀತಿ ಪಾಲಿಸುವುದಾಗಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಶುಕ್ರವಾರ ಹೇಳಿಕೊಂಡಿದೆ.

ಬಾಯಿ ಬಿಟ್ಟ ನಿದಾ ಪತಿ ಇಕ್ಬಾಲ್ ಖಾನ್: ಟಿಸಿಎಸ್ ನಾಸಿಕ್ ಲೈಂಗಿಕ ದೌರ್ಜನ್ಯ ಮತ್ತು ಕಾರ್ಪೊರೇಟ್ ಜಿಹಾದ್ ಪ್ರಕರಣದ ಪ್ರಮುಖ ಆರೋಪಿ ನಿದಾ ಖಾನ್ ತನ್ನ ಸಂಬಂಧಿಕರ ಮನೆಯಲ್ಲಿ ಅಡಗಿದ್ದಾಳೆಂದು ಆಕೆಯ ಪತಿ ಮೊಯಿನ್ ನವೀದ್ ಇಕ್ಬಾಲ್ ಖಾನ್ ಪೊಲೀಸರಿಗೆ ಮಾಹಿತಿ ಬಿಟ್ಟುಕೊಟ್ಟಿದ್ದಾನೆ. ಅಲ್ಲಿಗೆ ಪೊಲೀಸರು ಭೇಟಿ ನೀಡಿದ್ದಾಗ ಮನೆಗೆ ಬೀಗ ಜಡಿದಿತ್ತೆಂಬ ಮಾಹಿತಿ ಸಿಕ್ಕಿದೆ. ನಿದಾ ಖಾನ್ ಪತಿಯನ್ನು ಶುಕ್ರವಾರ ಪೊಲೀಸರು ಬಂಧಿಸಿದ್ದು, ವಿಚಾರಣೆಗೆ ಒಳಪಡಿಸಿದ್ದರು. ಪತಿ ಇಕ್ಬಾಲ್ ನೀಡಿದ ಮಾಹಿತಿಯ ಪ್ರಕಾರ, ನಾಸಿಕ್ ಕೇಸ್‌ನಲ್ಲಿ ಆಕೆಯ ಹೆಸರು ಕೇಳಿಬರುತ್ತಿದ್ದಂತೆ, ಟಿಸಿಎಸ್ ಉದ್ಯೋಗದಿಂದ ಆಕೆಯನ್ನು ಅಮಾನತು ಮಾಡಲಾಗಿತ್ತು. ಇದೇ ಸಂದರ್ಭ ಏ.14ರಂದು ನಿದಾ ಮನೆ ತೊರೆದು ಸಂಬಂಧಿಕರ ಮನೆಗೆ ತೆರಳಿದ್ದಳು ಎಂದು ಇಕ್ಬಾಲ್ ಪೊಲೀಸ್ ತನಿಖೆಯಲ್ಲಿ ಬಾಯಿ ಬಿಟ್ಟಿದ್ದಾನೆ. ಇಕ್ಬಾಲ್ ನೀಡಿದ ಮಾಹಿತಿ ಆಧಾರದಲ್ಲಿ ನಿದಾ ಅತ್ತೆ ನೂರಿ ಶೇಖ್ ಮನೆಗೆ ಪೊಲೀಸರು ಭೇಟಿ ನೀಡಿದ್ದು, ನೂರಿ ಶೇಖ್ ಮನೆಗೆ ಬೀಗ ಹಾಕಿತ್ತು. ಸದ್ಯ ನಿದಾ ಎಲ್ಲಿದ್ದಾಳೆಂದು ಮಾಹಿತಿಯಿಲ್ಲ ಎಂದು ಇಕ್ಬಾಲ್ ಕೈಚೆಲ್ಲಿದ್ದಾನೆ.

ಶಾಲೆ, ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸುವ ಗ್ರಾಮೀಣ ರಸ್ತೆ ನಿರ್ಮಾಣಕ್ಕೆ ಆದ್ಯತೆ

ರೈಲ್ವೆ ಕಾರಿಡಾರ್ ನಿರ್ಮಾಣಕ್ಕೆ ಕೇಂದ್ರ ಅಸ್ತು

ಹೊಸದಿಲ್ಲಿ: ವ್ಯಾಪಕ ಮೂಲಸೌಕರ್ಯ, ಸಾಮಾಜಿಕ ಭದ್ರತೆ, ವ್ಯಾಪಾರೋದ್ದಿಮೆಗಳ ಬಲವರ್ಧನೆ, ಸಾಗರ ವಿಮೆ, ಸುಮಾರು 1.18 ಕೋಟಿ ಸರಕಾರಿ ನೌಕರರ ತುಟ್ಟಿಭತ್ಯೆ ಹೆಚ್ಚಳ ಮತ್ತು ಹೊಸ ರೈಲ್ವೆ ಕಾರಿಡಾರ್ ನಿರ್ಮಾಣ ಸಹಿತ ಹಲವು ಮಹತ್ವದ ನಿರ್ಧಾರಗಳಿಗೆ, ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಮಂಜೂರಾತಿ ನೀಡಲಾಗಿದೆ. ರೈಲ್ವೆ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ಈ ಮಹತ್ವದ ಮಾಹಿತಿಗಳನ್ನು ನೀಡಿದರು.

ಭಾರತ್ ಮೆರಿಟೈಮ್ ಇನ್ಶುರೆನ್ಸ್ ಪೂಲ್ : ಸುಮಾರು 12,980 ಕೋಟಿ ರೂ. ಸಾರ್ವಭೌಮ ಗ್ಯಾರಂಟಿಯಿರುವ ದೇಶೀ ಸಾಗರ ವಿಮಾ ಸೌಲಭ್ಯವನ್ನು ಸಂಪುಟ ಸಭೆಯಲ್ಲಿ ಮಂಜೂರು ಮಾಡಲಾಗಿದೆ. ಇದು ಹಲ್ ಮತ್ತು ಮೆಷಿನರಿ , ಸರಕು ಸಾಗಣೆ ಹಡಗು, ಪಿ ಆ್ಯಂಡ್ ಐ, ಸಮರ ಸಂಬಂಧಿತ ಅಪಾಯಗಳು ಇತ್ಯಾದಿಗಳಿಗೆ ಸ್ಪಂದಿಸಲಿರುವ ವಿಮೆಯಾಗಿದೆ. ಭಾರತದ ಧ್ವಜವುಳ್ಳ, ಭಾರತ ನಿಯಂತ್ರಿತ ಮತ್ತು ಭಾರತಕ್ಕೆ ಸೇರಿದ ಹಡಗುಗಳಿಗೆ ಸುಮಾರು 10 ವರ್ಷಗಳ ಅವಧಿಯ ಸಾಗರ ವಿಮೆ ಅನ್ವಯಿಸುತ್ತದೆ. ವಿಮಾ ಅವಧಿಯನ್ನು 15ವರ್ಷಗಳಿಗೆ ವಿಸ್ತರಿಸಲು ಅವಕಾಶವಿದೆ. ಪ.ಏಷ್ಯಾ ಸಂಘರ್ಷ ಮತ್ತು ದಿನೇ ದಿನೇ ಹೆಚ್ಚುತ್ತಿರುವ ಜಾಗತಿಕ ಅನಿಶ್ಚಿತತೆ ನಡುವೆ ,ಅಂತಾರಾಷ್ಟ್ರೀಯ ಪಿಆ್ಯಂಡ್‌ಐ ಕ್ಲಬ್‌ಗಳ ಮೇಲಿನ ಅವಲಂಬನೆ ಕುಗ್ಗಿಸಲು ಪ್ರಧಾನಿ ಮೋದಿ ಸಾಗರ ವಿಮೆಗೆ ಮಂಜೂರಾತಿ ನೀಡಿದ್ದಾರೆ.

ಪಿಎಂ ಗ್ರಾಮ ಸಡಕ್ ಯೋಜನೆ ವಿಸ್ತರಣೆ: ರಸ್ತೆಗಳು ಮತ್ತು ಬಯಲು ಪ್ರದೇಶಗಳಲ್ಲಿ ಸೇತುವೆ ನಿರ್ಮಾಣ ನಿಟ್ಟಿನಲ್ಲಿ ,ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ–111ನ್ನು 2028 ಮಾರ್ಚ್‌ವರೆಗೆ ವಿಸ್ತರಿಸಲಾಗಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ಸೇತುವೆ ನಿರ್ಮಾಣಕ್ಕೆ 2029 ಮಾರ್ಚ್‌ವರೆಗೂ ಕಾಲಾವಕಾಶ ಕಲ್ಪಿಸಲಾಗಿದೆ. ಸರಕಾರದ ಈ ನಿರ್ಧಾರದಿಂದ ಪರಿಷ್ಕೃತ ಅಂದಾಜುವೆಚ್ಚ ಮೊತ್ತವು 80,250 ಕೋಟಿ ರೂ.ಗಳಿಂದ 83,977 ಕೋಟಿ ರೂ.ಗಳಿಗೆ ಏರಿಕೆಯಾಗಲಿದೆ. ಜನವಸತಿ ಪ್ರದೇಶಗಳಿಂದ ಮಾರುಕಟ್ಟೆ, ಶಾಲೆ ಮತ್ತು ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸುವ ಗ್ರಾಮೀಣ ರಸ್ತೆಗಳ ನಿರ್ಮಾಣಕ್ಕೆ ಪ್ರಾಧಾನ್ಯತೆ ನೀಡಲಾಗಿದೆ.

ಘಾಜಿಯಾಬಾದ್–ಸೀತಾಪುರ ರೈಲ್ವೆ ಕಾರಿಡಾರ್: ದಿಲ್ಲಿ–ಗುವಾಹಟಿ ಹೈ ಡೆನ್ಸಿಟಿ ನೆಟ್‌ವರ್ಕ್ ಭಾಗವಾಗಿರುವ , 403ಕಿಮೀ ವ್ಯಾಪ್ತಿ ಘಾಜಿಯಾಬಾದ್ –ಸೀತಾಪುರ ಸೆಕ್ಷನ್‌ನಲ್ಲಿ ತೃತೀಯ ಮತ್ತು ಚತುರ್ಥ ರೈಲ್ವೆ ಲೈನ್‌ಗಳನ್ನು ನಾಲ್ಕು ವರ್ಷಗಳೊಳಗೆ ನಿರ್ಮಿಸುವ 14,926 ಕೋಟಿ ರೂ. ಮೊತ್ತದ ಯೋಜನೆಗೆ ಸರಕಾರ ಮಂಜೂರಾತಿ ನೀಡಿದೆ. ಯೋಜನೆ ಭಾಗವಾಗಿ ಆರು ಹೊಸ ರೈಲು ನಿಲ್ದಾಣಗಳು ನಿರ್ಮಾಣವಾಗಲಿವೆ. ಉತ್ತರಪ್ರದೇಶದ ಮೊರಾದಾಬಾದ್, ಬರೇಲಿ, ರಾಂಪುರ, ಲಖಿಮ್‌ಪುರ ಖೇರಿ ಸಹಿತ ಉತ್ತರಪ್ರದೇಶದ 5 ಜಿಲ್ಲೆಗಳ ವ್ಯಾಪ್ತಿಯನ್ನು ಪ್ರಸ್ತಾವಿತ ಯೋಜನೆ ಒಳಗೊಳ್ಳುವುದು. ರೇವಾ ಜಿಲ್ಲೆಯಲ್ಲಿ 82.39 ಕೋಟಿ ರೂ. ಮೊತ್ತದ ಮಹಾನಾ ಸಣ್ಣ ನೀರಾವರಿ ಯೋಜನೆಗೆ ಸಂಪುಟ ಸಭೆ ಮಂಜೂರಾತಿ ನೀಡಿದೆ.


JANATHA
GROUP OF INSTITUTIONS
JANATHA
Pre University College Hemmady
ಜನತಾ ರಾಜ್ಯಕ್ಕೆ ದ್ವಿತೀಯ ರ್‍ಯಾಂಕ್. ಉಡುಪಿಗೆ ಪ್ರಥಮ ರ್‍ಯಾಂಕ್
ಕರ್ನಾಟಕಕ್ಕೆ ಉಡುಪಿ ಪ್ರಥಮ. ಉಡುಪಿಗೆ ಜನತಾ ಪ್ರಥಮ.
CHAIRMAN
JANATHA GROUP OF INSTITUTIONS
Hemmady | Kirimanjeshwara | Sulse
II PU ANNUAL RESULTS 2026
ಗುಣಮಟ್ಟದ ಶಿಕ್ಷಣ ಹಾಗೂ ಕಠಿಣ ಪರಿಶ್ರಮದಿಂದ ಪರೀಕ್ಷೆ ಎದುರಿಸಿ
ಅತ್ಯುತ್ತಮ ಫಲಿತಾಂಶ ತಂದಿರುವ ಜನತಾ ವಿದ್ಯಾರ್ಥಿಗಳು
COLLEGE CODE: SU0229
GOVERNMENT OF KARNATAKA
RECOGNISED BY GOVT OF KARNATAKA
JANATHA GROUP OF INSTITUTIONS
RASHMI PAI 598/600 2nd RANK
SHRAVYA DEVADIGA 597/600 3rd RANK
SHAMYA SHETTY 597/600 4th RANK
AKSHATHA VEERANNA 596/600 4th RANK
PRATHAM G KANCHAN 596/600 5th RANK
SUCHITHRA 595/600 6th RANK
PRAJNA S POOJARY 594/600
INCHARA ASHOK 594/600
ANVITHA 594/600
SANIKA 593/600
MANYA POOJARY 592/600
KALPITHA D MANOOR 592/600
HIRANMAYI 592/600
PRASAD POOJARY 591/600
PREETHAN 591/600
DHANYA S BILLAVA 590/600
SMRUTHIKA 590/600
OUTSTANDING ACHIEVER OF UCEED
Undergraduate Common Entrance Exam for Design-2026
OBC-NCL 179 All India Rank
AIR 925 All India Rank
2026 Result
SUJAL S THOLAR
OUTSTANDING ACHIEVER OF JEE-MAINS
BACHELOR OF ARCHITECTURE-2026
98.17 Percentile 98.1738977
JANATHA "YOUR ULTIMATE LAUNCHPAD TO CRACK EVERY COMPETITIVE EXAM"
JEE MAIN 2026 SESSION - 1 RESULT
99.3604
98.6832
98.4693
97.5834
97.4402
96.1817
96.1127
CSEET-2026 Results Jan-2026
42 CLEARED 44 APPEARED
ಹೊಸ ದಾಖಲೆ
168 SCORE SAHANA
166 SCORE AMULYA R
164 SCORE DHANUSH R
159 SCORE PRATHAM G
156 SCORE SHAMYA
155 SCORE SHIVAM
154 SCORE SHAYAN
154
154
153
153
151
148
145
142 SCORE PREETHAN
142 SCORE SANJAY
136
134
134
133 SCORE MOHITH
130 SCORE SPANDANA
130 SCORE NISCHITH
126 SCORE THANVI LAVA
125 SCORE SHRESHTA R
123 SCORE PALLAVI R
122
120
118
116 SCORE SANIKA
115
114
112
112
111
111
110
109
101
100
100
100
100
JANATHA COLLEGE HOSTEL
SHLAGHANA SHANAYA - JANATHA HOSTEL
SHLAGHANA SHANAYA
Separate Boys & Girls Hostel
* Safe & Secure Hostel Facility
* Separate AC & Non AC Rooms
* Cafeteria
* Yoga
* Separate Boys & Girls Gym
Smt. Chithra Karanth
Academic Advisor
ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಅನುಭವ ಹೊಂದಿರುವ ಶ್ರೀಮತಿ ಚಿತ್ರ ಕಾರಂತ ರವರ ಸಾರಥ್ಯದಲ್ಲಿ......
Smt. Shyamala Ganesh
Secretary
JANATHA GROUP OF INSTITUTIONS
Hemmady | Kirimanjeshwara | Sulse
COURSES OFFERED
SCIENCE: PCMB & PCMC
COMMERCE: SEBA, ABCS, CEBA
LANGUAGES: ENGLISH KANNADA/ HINDI/SANSKRIT
SCIENCE: INTEGRATED CET/NEET/JEE/NATA/NDA
COMMERCE: INTEGRATED CA/CS/BANKING/ BUSINESS DAY INDUSTRIAL VISIT
Contact Us:-
7899769900
8951371853

ವಿನಯ ಕುಲಕರ್ಣಿಗೆ ಕೈದಿ ನಂಬರ್ 16110

• **ಬೆಂಗಳೂರು:** ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ದೋಷಿಯಾಗಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ವಿನಯ ಕುಲಕರ್ಣಿಗೆ ಸೇರಿದಂತೆ 16 ಮಂದಿ ಅಪರಾಧಿಗಳಿಗೆ ಸಜಾ ಬಂಧಿ ಖೈದಿ ನಂಬರ್ ನೀಡಲಾಗಿದೆ. ಶುಕ್ರವಾರದ ಮೊದಲ ದಿನ ಜೈಲಿನಲ್ಲಿ ಊಟವಿಲ್ಲದೇ, ವಿನಯ ಕುಲಕರ್ಣಿ ಕೇವಲ ಹಣ್ಣು ತಿಂದಿದ್ದಾರೆ. ಅಲ್ಲದೆ, ರಾತ್ರಿಯಿಡಿ ನಿದ್ದೆ ಮಾಡದೆ ಚಿಂತೆಗೀಡಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಗರದ ಸಿಸಿಎಚ್–82 ನ್ಯಾಯಾಲಯ ವಿಧಿಸಿದ ಜೀವಾವಧಿ ಶಿಕ್ಷೆ ತೀರ್ಪು ಪ್ರಕ್ರಿಯೆ ಮುಗಿದ ನಂತರ, ಶುಕ್ರವಾರ ರಾತ್ರಿ 11 ಗಂಟೆ ಸುಮಾರಿಗೆ ಪೊಲೀಸರು ಜೈಲಿನಲ್ಲಿ ಬಿಟ್ಟು ಬಂದಿದ್ದಾರೆ, ವಿನಯ ಕುಲಕರ್ಣಿ ಸೇರಿದಂತೆ 16 ಮಂದಿ ಅಪರಾಧಿಗಳಿಗೂ ಪ್ರಸ್ತುತ ಡಿ ಬ್ಯಾರಕ್‌ನ ಕ್ವಾರಂಟೈನ್ ಸೆಲ್‌ಗೆ ಕಳುಹಿಸಲಾಗಿದೆ.

ಎರಡು ಗುಂಪುಗಳನ್ನಾಗಿ ವಿಂಗಡಿಸಿರುವ ಜೈಲು ಸಿಬ್ಬಂದಿ, ವಿನಯ ಕುಲಕರ್ಣಿ ಜತೆಗೆ ಇತರೆ ಮೂವರು ಅಪರಾಧಿಗಳನ್ನು ಒಂದು ಬ್ಯಾರಕ್‌ನಲ್ಲಿ ಇರಿಸಿದರೆ, ಪಕ್ಕದ ಬ್ಯಾರಕ್‌ನಲ್ಲಿ ಇತರೆ ಅಪರಾಧಿಗಳನ್ನು ಇರಿಸಲಾಗಿದೆ. ಮುಮದಿನ 10 ದಿನಗಳ ಕಾಲ ಎಲ್ಲರೂ ಇಲ್ಲೇ ಇರಲಿದ್ದು, ನಂತರ ಅವರನ್ನು ಬೇರೆಡೆಗೆ ಸ್ಥಳಾಂತರಿಸಲಾಗುತ್ತದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ರಾಜಕೀಯ ಉತ್ತುಂಗದಲ್ಲಿ ಪ್ರತಿದಿನ ಐಷಾರಾಮಿ ಜೀವನ ನಡೆಸುತ್ತಿದ್ದ ವಿನಯ ಕುಲಕರ್ಣಿ ಜೈಲಿನಲ್ಲಿ ಇರಲಾಗದೆ ಶುಕ್ರವಾರ ರಾತ್ರಿಯಿಡೀ ಚಿಂತೆಗೆ ಒಳಗಾಗಿದ್ದರು. ಜತೆಗೆ ರಾತ್ರಿ ಚಪಾತಿ ಊಟ ನೀಡಲಾಗಿತ್ತು. ಸರಿಯಾಗಿ ಆಹಾರ ಸೇವಿಸದೆ ಬೇಜಾರಿನಲ್ಲಿ ಮಲಗಿದ್ದರು. ಶನಿವಾರ ಮುಂಜಾನೆ ಬೇಗ ಎದ್ದು ಸಹ ಕೈದಿಗಳೊಂದಿಗೆ ಕೊಂಚ ಚರ್ಚಿಸಿ, ಬಳಿಕ ಮೌನಕ್ಕೆ ಜಾರಿದ್ದಾರೆ. ಬೆಳಗ್ಗೆ ಸ್ವಲ್ಪ ಉಪಹಾರ ಮತ್ತು ರಾತ್ರಿಯೂ ಸಾಮಾನ್ಯ ಕೈದಿಗಳಂತೆ ಜೈಲಿನ ಊಟವನ್ನು ಸೇವಿಸಿದ್ದಾರೆ ಎಂದು ತಿಳಿದುಬಂದಿದೆ.

ದರ್ಶನ್ ಬ್ಯಾರಕ್‌ನ ಕೂಗಳತೆಯ ದೂರದಲ್ಲಿ ವಿನಯ ವಾಸ್ತವ್ಯ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ವಾಸವನ್ನು ಅನುಭವಿಸುತ್ತಿರುವ ದರ್ಶನ್ ಇರುವ ಬ್ಯಾರಕ್‌ನಿಂದ ಅದೇ ಮಾರ್ಗದಲ್ಲಿ ಮುಂದೆ ಸಾಗುವ ದಾರಿಯ ಕೂಗಳತೆಯ ದೂರದಲ್ಲೇ ವಿನಯ ಕುಲಕರ್ಣಿ ವಾಸ್ತವ್ಯದ ಬ್ಯಾರಕ್ ಇದೆ ಎಂದು ಗೊತ್ತಾಗಿದೆ.

ಅಪರಾಧಿ ಸಂಖ್ಯೆ

- ವಿಕ್ರಂ ಬಳ್ಳಾರಿ - 16097
- ಕೀರ್ತಿ ಕುಮಾರ್ ಬೆಳ್ಳಟ್ಟಿ - 16098
- ಸಂದೀಪ್ ಸವದತ್ತಿ - 16099
- ವಿನಾಯಕ ಕಟಗಿ - 16100
- ಮಹಾಬಲೇಶ್ವರ ಹೊಂಗಳೇ- 16101
- ಸಂತೋಷ ಸವದತ್ತಿ - 16102
- ದಿನೇಶ್ - 16103
- ಅಶ್ವಥ್ - 16104
- ಸುನಿಲ್ - 16105
- ನಜೀರ್ ಅಹ್ಮದ್ - 16106
- ಶನವಾಜ್ - 16107
- ನೂತನ್ - 16108
- ಹರ್ಷಿತ್ - 16109
- ವಿನಯ ಕುಲಕರ್ಣಿ - 16110
- ಚಂದ್ರಶೇಖರ್ ಇಂಡಿ - 16111
- ವಿಕಾಸ್ ಕಲಬುರಗಿ - 16112
- ಚನ್ನಕೇಶವ ಟಿಂಗರಿಕರ್ - 16113


ಕೆ.ಎಸ್. ಸೋಮಶೇಖರ್ ರಾಜ್ಯಸಭೆ ಕಾರ್ಯದರ್ಶಿ

• **ಹೊಸದಿಲ್ಲಿ:** ರಾಜ್ಯಸಭಾ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವರು ಕೆ.ಎಸ್. ಸೋಮಶೇಖರ್ ಅವರನ್ನು ರಾಜ್ಯಸಭೆ ಕಾರ್ಯಾಲಯದ ಕಾರ್ಯದರ್ಶಿಯಾಗಿ



ನೇಮಕ ಮಾಡಿದ್ದು, ಶನಿವಾರದಿಂದ ಜಾರಿಗೆ ಬಂದಿದೆ. 1993ರಲ್ಲಿ ಕಾರ್ಯಾಲಯಕ್ಕೆ ಸೇರಿದ ಅವರು ಹೆಚ್ಚುವರಿ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಸೇರಿದಂತೆ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸಂಸತ್ತಿನ ವ್ಯಾಖ್ಯಾನ, ಆಡಳಿತ ಹಾಗೂ ಸಮಿತಿ ಕಾರ್ಯಗಳಲ್ಲಿ ಪರಿಣಿತಿ ಹೊಂದಿರುವ ಅವರು ಕರ್ನಾಟಕ ಸರ್ಕಾರದಲ್ಲೂ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅಂತರರಾಷ್ಟ್ರೀಯ ಸಂಸದೀಯ ವೇದಿಕೆಗಳಲ್ಲಿ ಭಾರತವನ್ನು ಪ್ರತಿನಿಧಿಸಿರುವ ಅವರು ಯುಕೆ ಮತ್ತು ಯುರೋಪಿಯನ್ ಯೂನಿಯನ್‌ನಲ್ಲಿ ತರಬೇತಿ ಪಡೆದು, ಜಿನೀವಾ ದ ಐಪಿಯು ಸಭೆಗಳಲ್ಲೂ ಭಾಗವಹಿಸಿದ್ದಾರೆ.

ರಾಮ ಬಾಣ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ : ಬಿದಿಗೆ, ನಕ್ಷತ್ರ: ಭರಣಿ ಉಪರಿ ಕೃತ್ತಿಕೆ

ದಿನದ ಮಾತು

ನಾಲಿಗೆಯ ತುದಿಯಲ್ಲಿ ಲಕ್ಷ್ಮಿ ನೆಲೆಸಿದ್ದಾಳೆ. ಅಲ್ಲಿಯೇ ಮಿತ್ರರು, ಬಂಧುಗಳು, ಅದರಿಂದಲೇ ಬಂಧನ ಹಾಗೂ ಮರಣ ಒದಗುತ್ತದೆ. ಇದು ಸತ್ಯ.

▲ ಶಾರ್ಙ್ಗಧರ ಪದ್ಧತಿ

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಯೋಗೀಶ್ ಗೌಡ ಹತ್ಯೆ ಪ್ರಕರಣದಲ್ಲಿ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ – ವರದಿ

– ಮಾಡಿದ್ದುಣ್ಣೋ ಮಹರಾಯ, ತಡವಾಗಿರಬಹುದು, ಆದರೆ ಕರ್ಮಫಲ ಉಣ್ಣುವುದನ್ನು ತಡೆಯಲಾಗದು ಎಂಬುದನ್ನು ನಾವು ಮರೆಯಬಾರದು!

ದಿನ ಭವಿಷ್ಯ

ಮೇಷ ಸಕಾರಾತ್ಮಕ ಬೆಳವಣಿಗೆ ಇಂದು ನೀವು ಕಾಣುವಿರಿ. ಭಾವುಕ ಪ್ರಸಂಗದಲ್ಲಿ ಮನಸ್ಸು ದೃಢವಾಗಿರಲಿ. ನಿಮ್ಮ ದೌರ್ಬಲ್ಯ ಪ್ರದರ್ಶಿಸದಿರಿ.

ವೃಷಭ ಬಾಕಿ ಇರುವ ಕೆಲಸ ಪೂರೈಸಿ ಸಮಾಧಾನ ಪಟ್ಟುಕೊಳ್ಳುವಿರಿ. ಹಣದ ಕೊರತೆ ನೀಗಲಿದೆ. ಬಂಧುಮಿತ್ರರ ಭೇಟಿ. ಆರೋಗ್ಯ ಚಿಂತೆ ಮಾಯ.

ಮಿಥುನ ಒತ್ತಡ ಹೆಚ್ಚು. ಕೆಲವು ಕಿರಿಕಿರಿಗೆ ಒಳಗಾಗುವಿರಿ. ಮನೆಯಲ್ಲಿ ಸಂಗಾತಿ ಜತೆ ವಾಗ್ವಾದ ನಡೆದೀತು. ತಾಳ್ಮೆಯಿಂದ ವ್ಯವಹರಿಸಿ. ವಿದ್ಯಾರ್ಥಿಗಳಿಗೆ ಯಶ.

ಕಟಕ ಮನೆಯವರ ಜತೆ ಹೆಚ್ಚು ಸೂಕ್ಷ್ಮವಾಗಿ ವರ್ತಿಸುವಿರಿ. ಅವರ ಭಾವನೆಗೆ ಸ್ಪಂದಿಸುವಿರಿ. ಖರೀದಿ ಉತ್ಸಾಹದಲ್ಲಿ ಜೇಬಿಗೆ ತೂತು ಬಿದ್ದೀತು.

ಸಿಂಹ ದಿನದ ಆರಂಭ ಉತ್ಸಾಹದಿಂದ. ಆದರೆ ಸಂಜೆ ವೇಳೆಗೆ ಬೇಸರದ ಬೆಳವಣಿಗೆ ನಡೆದೀತು. ಕೆಲವರನ್ನು ಅತಿಯಾಗಿ ಹಚ್ಚಿಕೊಳ್ಳದಿರಿ.

ಕನ್ಯಾ ಹೆಚ್ಚು ಪರಿಶ್ರಮ ಬೇಡುವ ದಿನ. ಏಕೆಂದರೆ ಯಾವುದೂ ಸುಲಭದಲ್ಲಿ ಸಾಧ್ಯವಾಗದು. ಆಪ್ತರು ಮುನಿಸಿಕೊಳ್ಳಬಹುದು. ಆರ್ಥಿಕ ವ್ಯಯ ಹೆಚ್ಚು.

ತುಲಾ ಪ್ರವಾಸದ ಸಾಧ್ಯತೆ. ಹೊಸ ವ್ಯವಹಾರದಲ್ಲಿ ಹಣ ಹೂಡದಿರಿ. ಬಾಕಿ ಇರುವ ಕಾರ್ಯ ಮುಗಿಸಿ. ಇಲ್ಲವಾದರೆ ಒತ್ತಡ ಎದುರಿಸುವಿರಿ.

ವೃಶ್ಚಿಕ ಮಾನಸಿಕ ಒತ್ತಡವು ನಿಮ್ಮ ಕಾರ್ಯದಲ್ಲಿ ಪ್ರತಿಫಲಿಸಬಹುದು. ನಿಮ್ಮ ಮಿತಿಯಲ್ಲೆ ಕಾರ್ಯಾಚರಿಸಿ. ಕೈಗೆ ಎಟುಕದ ವಿಷಯ ಬಿಡಿ.

ಧನು ನಿಮ್ಮ ಯಾವುದೋ ಕೆಲಸ ಅರ್ಧದಲ್ಲೆ ನಿಂತು ಬಿಟ್ಟಿದೆ. ಅದರ ವ್ಯಾಕುಲ ಕಾಡುವುದು. ಇನ್ನೂ ಕೆಲವು ದಿನ ನೀವು ಕಾಯಬೇಕಾಗುವುದು.

ಮಕರ ವೃತ್ತಿಯಲ್ಲಿ ಉನ್ನತಿ. ಉದ್ದೇಶಿತ ಕಾರ್ಯ ಪೂರ್ಣ. ಆದರೆ ಕೌಟುಂಬಿಕ ಅಸಹನೆ. ಶಾಂತಿ, ಸೌಹಾರ್ದತೆ ದೂರ. ಧನವ್ಯಯ ಅಧಿಕ.

ಕುಂಭ ಸಮಸ್ಯೆ ಪರಿಹಾರಕ್ಕೆ ಆತುರ ತೋರಬೇಡಿ. ಸಾವಧಾನವಾಗಿ ಯೋಚಿಸಿ ನಿರ್ಧಾರ ತಾಳಿ. ಅವಶ್ಯ ಸಹಕಾರ ಪಡೆಯಿರಿ. ಬಂಧು ಭೇಟಿ.

ಮೀನ ನಿರಾಳ ದಿನ. ಕಾಡುತ್ತಿದ್ದ ಚಿಂತೆ ಪರಿಹಾರ. ಉತ್ಸಾಹ ತುಂಬುವ ಕಾರ್ಯದಲ್ಲಿ ತೊಡಗಿ. ಬಂಧುಮಿತ್ರರ ಭೇಟಿ ಸಂತೋಷ ತರಲಿದೆ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 1,6.3,8

ಕೇಂದ್ರ ಸರ್ಕಾರಿ ನೌಕರರಿಗೆ ತುಟಿ ಭತ್ಯೆ ಶೇ.2 ಹೆಚ್ಚಳ

ಪುಟ ೧➡ ಈ ಮೂಲಕ ಡಿಎ–ಡಿಆರ್ ದರವು ಮೂಲ ವೇತನದ ಶೇ.60ರಷ್ಟಾಗಲಿದೆ. ಈ ಹೆಚ್ಚಳವು 2026ರ ಜ.1 ರಿಂದಲೇ ಪೂರ್ವಾನ್ವಯ ವಾಗಲಿದೆ. ಸರಕಾರದ ಈ ಮಹತ್ವದ ನಿರ್ಧಾರದಿಂದ ಬರೋಬ್ಬರಿ 50.46 ಲಕ್ಷ ಸರಕಾರಿ ಉದ್ಯೋಗಿಗಳು ಮತ್ತು 68.27ಲಕ್ಷ ಪಿಂಚಣಿದಾರರಿಗೆ ತುಂಬು ಪ್ರಯೋಜನವಾಗಲಿದೆ. ಈ ಪ್ರಮುಖ ನಿರ್ಧಾರ ದಿಂದ ಸರಕಾರದ ಬೊಕ್ಕಸಕ್ಕೆ ವಾರ್ಷಿಕ ರೂ.6,791ಕೋಟಿ ರೂ.ಗಳಷ್ಟು ಹೆಚ್ಚುವರಿ ವೆಚ್ಚವಾಗಲಿದೆ.

ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಇತ್ತು: ಬಿಎಸ್‌ವೈ

ಕಾಂಗ್ರೆಸ್ ಮಹಿಳಾ ವಿರೋಧಿ

• **ಬೆಂಗಳೂರು:** ಮಹಿಳಾ ಮೀಸಲಾತಿ ವಿರೋಧಿಸುವುದು ಸಮಾನತೆಯ ತತ್ವವನ್ನು ವಿರೋಧಿಸಿದಂತೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.



ಶನಿವಾರ ಮಾಧ್ಯಮಗಳ ಜೊತೆ ಮಾತನಾಡಿ, ವಿಪಕ್ಷಗಳ ಮಹಿಳಾ ವಿರೋಧಿ ನೀತಿಯನ್ನು ಖಂಡಿಸಿದರು. ಬಸವಣ್ಣನವರ ಅನುಭವ ಮಂಟಪದಲ್ಲಿ ಸಮಾನ ಅವಕಾಶ ಇತ್ತು. ಮಹಿಳೆಯರಿಗೆ ರಾಜಕೀಯದಲ್ಲಿ ಪ್ರವೇಶ ಸಿಗುವುದೆಂದರೆ ಅದು ಅವರ ಹಕ್ಕು. ಅದನ್ನು ವಿರೋಧಿಸುವುದು ಸಮಾನತೆಯ ವಿರುದ್ಧ ಎಂದು ನುಡಿದರು.

ಹಣಕಾಸಿನ ವ್ಯವಹಾರ ಸರಿ ಮಾಡದೇ, ವಿದ್ಯುತ್ ದರವನ್ನು ಏರಿಸಿದ್ದು ಖಂಡಿತ ಸರಿಯಲ್ಲ.ಸರ್ಕಾರಈ ನಿರ್ಧಾರವನ್ನು ತಕ್ಷಣ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಜನರು ನೆಮ್ಮದಿ, ಸ್ವಾಭಿಮಾನದಿಂದ ಬದುಕಲು ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿದರು. ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸುವುದು ನಿಶ್ಚಿತ ಎಂದು ಅವರು ತಿಳಿಸಿದರು.

ಮಹಿಳೆಯರಿಗೆ ಕಾಂಗ್ರೆಸ್ ದ್ರೋಹ ಬಗೆದಿದೆ: ಅಶೋಕ

ಮಹಿಳಾ ಮೀಸಲಿಗೆ ತಡೆವೊಡ್ಡಿದ ಕಾಂಗ್ರೆಸ್ ಕೋಟ್ಯಂತರ ಮಹಿಳೆಯರಿಗೆ ದ್ರೋಹ ಬಗೆದಿದೆ. ಮಹಿಳೆಯರ ಶಕ್ತಿ ನಿರ್ಲಕ್ಷಿಸಿದ ಕಾಂಗ್ರೆಸ್‌ನ್ನು ದೇಶದ ಜನ ಕ್ಷಮಿಸುವುದಿಲ್ಲ. ಮುಂಬರುವ ರಾಜ್ಯಗಳ ಚುನಾವಣೆಯಲ್ಲಿ ಜನರು ಬುದ್ಧಿ ಕಲಿಸಲಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಭವಿಷ್ಯ ನುಡಿದಿದ್ದಾರೆ. ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಮಹಿಳಾ ಮೀಸಲು ಮಸೂದೆಗೆ



ಸೋಲಾಗಿದ್ದು ಸಾಮಾನ್ಯ ವಿಚಾರ ಅಲ್ಲ. ಇದು ರಾಜಕೀಯ ಪಕ್ಷಗಳ ಪಿತೂರಿ, ನಿರ್ಲಕ್ಷ್ಯ, ಮಹಿಳಾ ವಿರೋಧಿ ಭಾವನೆಯ ಸ್ಪಷ್ಟ ಸಂಕೇತ ಎಂದರು.

ಫ್ರೀ ಬಸ್ ಕೊಟ್ಟರೆ ಸಾಕು: ಮಹಿಳೆಯರಿಗೆ ಪುಕ್ಕಟೆಯಾಗಿ ಎರಡು ಸಾವಿರ ಕೊಟ್ಟರೆ ಸಾಕು. ಫ್ರೀ ಬಸ್ ಕೊಟ್ಟರೆ ಸಾಕು ಮನೆಯಲ್ಲೇ ಇರ್ತಾರೆ. ಅಡಿಗೆ ಮಾಡಿಕೊಂಡು, ದೇವಸ್ಥಾನಕ್ಕೆ ತಿರುಗಿಕೊಂಡು ಇರ್ತಾರೆ. ಅವರಿಗೆ ರಾಜಕೀಯ ಪ್ರಾತಿನಿಧ್ಯ ಸಿಗಬಾರದು. ಸಂಸತ್‌ಗೆ, ವಿಧಾನಸಭೆಗೆ ಹೋಗುವುದು ಬೇಡ ಎಂದು ಕಾಂಗ್ರೆಸ್‌ನವರು ತಿಳಿದಿದ್ದಾರೆ. ಮೀಸಲಾತಿ ಕಸಿದ ದ್ರೋಹಿ ಕಾಂಗ್ರೆಸ್ಸಿಗರು ಎಂದರು. ಕ್ಷೇತ್ರ ಮರುವಿಂಗಡಣೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಹೆಚ್ಚಿನ ಕ್ಷೇತ್ರಗಳು ಸಿಗುವಂತೆ ಮಾಡಲು ಅವಕಾಶ ಇತ್ತು. ಆದರೆ ಕಾಂಗ್ರೆಸ್ನವರು ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡಿದರು. ಈ ಬಗ್ಗೆ ಚರ್ಚೆ ಮಾಡಬಹುದಿತ್ತು. ಹಿಂದೆ ಹಲವು ಬಾರಿ ಕ್ಷೇತ್ರ ಮರುವಿಂಗಡಣೆ ಆದಾಗ ಅವರು ವಿರೋಧಿಸಲಿಲ್ಲ. ಇದೇ ಮೊದಲ ಬಾರಿಗೆ ಆಗಿಲ್ಲ. ಆಗಲೂ ಸಂಸತ್ ಸೀಟು ಹೆಚ್ಚಳ ಆಗಿದೆ. ಆಗ ಇವರು ಬಾಯಿಗೆ ಬಟ್ಟೆ ತುರುಕಿಕೊಂಡಿದ್ದರೇ ಎಂದರು. ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿರೋಧ ಪಕ್ಷಗಳ ನೀತಿಗೆ ಯಡಿಯೂರಪ್ಪ ಖಂಡನೆ

• **ಚಿಕ್ಕಮಗಳೂರು:** ಮಹಿಳಾ ಮೀಸಲಾತಿಯನ್ನು ವಿರೋಧಿಸುವುದು ಬಸವಣ್ಣನವರ ಸಮಾನತೆ ತತ್ವಕ್ಕೆ ವಿರುದ್ಧವಾಗಿದೆ. ವಿರೋಧ ಪಕ್ಷಗಳ ಈ ನೀತಿಯನ್ನು ನಾನು ಖಂಡಿಸುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು. ಅವರು ಶನಿವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಮಹಿಳಾ ಮೀಸಲಾತಿಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಮಹಿಳಾ ಮೀಸಲಾತಿ ಬಗ್ಗೆ ಬಹಳ ದಶಕಗಳಿಂದ ಮಾತನಾಡಿಕೊಂಡು ಬರುತ್ತಿದ್ದೇವೆ. ಈಗ ಮತ್ತೆ ಅದರ ಬಗ್ಗೆ ಇನ್ನೂ ಚರ್ಚೆ ಆಗಬೇಕು ಎಂದರೆ ಅದು ವಿಳಂಬಮಾಡುವ ನೀತಿ ಎನ್ನುವುದು ಸ್ಪಷ್ಟವಾಗುತ್ತದೆ ಎಂದು ದೂರಿದರು. ರಾಜಕೀಯ ಲಾಭಕ್ಕಾಗಿ ಮಸೂದೆ ತರಲಾಗುತ್ತಿದೆ ಎನ್ನವುದು ತಪ್ಪು. ಒಳ್ಳೆಯ ನೀತಿ ಯಾವುದಾದರೂ ಒಳ್ಳೆಯದೆ. ಬಸವಣ್ಣನವರು ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಅವಕಾಶಗಳ ಬಗ್ಗೆ ಹೇಳಿದ್ದಾರೆ. ಅವರ ಕಾಲದಲ್ಲಿ ಹೆಣ್ಣು, ಗಂಡು ಭೇದವಿಲ್ಲದೆ ಎಲ್ಲರಿಗೂ ಸಮಾನ ಹಕ್ಕು ಕೊಡಲು ಹೋರಾಟ ಮಾಡಿದರು. ಈಗ ಮಹಿಳಾ ಮೀಸಲಾತಿ ವಿರೋಧಿಸುವುದು ಸಮಾನತೆ ತತ್ವಕ್ಕೆ ವಿರುದ್ಧವಾಗಿದೆ ಎಂದರು. ಮಹಿಳೆಯರು ರಾಜಕೀಯ ಪ್ರವೇಶಿಸುವುದು ಅವರ ಹಕ್ಕು ಅದನ್ನು ವಿರೋಧಿಸುವುದು ಸಮಾನತೆಯ ವಿರುದ್ಧ. ಇದನ್ನು ಅರ್ಥ ಮಾಡಿಕೊಂಡು ವಿರೋಧ ಮಾಡುತ್ತಿರುವವರು ಪ್ರಧಾನಿ ಅವರ ಐತಿಹಾಸಿಕ ತೀರ್ಮಾನಕ್ಕೆ ಬೆಂಬಲ ಕೊಡಬೇಕು ಎಂದರು.

ವಿದ್ಯುತ್ ದರ ಏರಿಕೆಗೆ ಖಂಡನೆ: ರಾಜ್ಯ ಸರ್ಕಾರ ಬೇಕಾಬಿಟ್ಟಿ ವಿದ್ಯುತ್ ದರ ಏರಿಸುತ್ತಿದೆ. ಇದು ಖಂಡಿತ ಸರಿಯಲ್ಲ ಎಂದು ಯಡಿಯೂರಪ್ಪ ಹೇಳಿದರು. ಸರಿಯಾಗಿ ಆಡಳಿತ ಮಾಡದೆ, ಹಣಕಾಸಿನ ವ್ಯವಹಾರವನ್ನೂ ಸರಿ ಮಾಡದೆ. ಈಗ ವಿದ್ಯುತ್ ದರ ಹೆಚ್ಚಿಸಿದರೆ ಸಾಮಾನ್ಯ ಜನ ಅದನ್ನು ಭರಿಸಲು ಸಾಧ್ಯವಾಗುವುದಿಲ್ಲ. ತಕ್ಷಣ ಈ ನಿರ್ಧಾರ ವಾಪಾಸ್ ತೆಗೆದುಕೊಳ್ಳಬೇಕು. ಜನರು ಸ್ವಾಭಿಮಾನದಿಂದ, ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿದರು.

ದಕ್ಷಿಣದಲ್ಲಿ ಸುಪ್ರೀಂ ಪೀಠ ನ್ಯಾಯಖಾತ್ರಿಗೆ ಅವಕಾಶ

ಪುಟ ೧➡ ಅಪಾರದರ್ಶಕ ವ್ಯವಸ್ಥೆ ನ್ಯಾಯಾಂಗ ವ್ಯವಸ್ಥೆಯ ತಾರ್ಕಿಕ ನಿರ್ಧಾರಗಳ ಸಿದ್ಧಾಂತ ದುರ್ಬಲಗೊಳಿಸುವ ಆತಂಕವನ್ನು ಅಲ್ಲಗಳೆಯುವಂತಿಲ್ಲ ಎಂದರು.

ಎಐ ನಿಯಂತ್ರಿಸುವಲ್ಲಿ ನ್ಯಾಯಾಂಗ ಪಾತ್ರ ನಿರ್ಣಾಯಕ: ಭಾರತದಲ್ಲಿ ಎಐ ನಿಯಂತ್ರಕ ಚೌಕಟ್ಟನ್ನು ರೂಪಿಸುವಲ್ಲಿ ನ್ಯಾಯಾಂಗವು ನಿರ್ಣಾಯಕ ಪಾತ್ರ ವಹಿಸುತ್ತದೆ. ಸರಿಯಾದ ಪ್ರಕ್ರಿಯೆ, ಅನುಪಾತ ಮತ್ತು ಗೌಪ್ಯತೆಯ ಹಕ್ಕಿನ ಸಂರಕ್ಷಣೆಯಂತಹ ವಿಶ್ವಾಸಾರ್ಹ ಸಾಂವಿಧಾನಿಕ ಸಿದ್ಧಾಂತಗಳ ಮೂಲಕ ಕೃತಕ ಬುದ್ಧಿಮತ್ತೆಯ ಪರಿಧಿಯನ್ನು ನಿರ್ಧರಿಸಬೇಕಿದೆ. ನ್ಯಾಯಾಂಗವು ತಂತ್ರಜ್ಞಾನದ ಬಳಕೆದಾರ ಮಾತ್ರವಲ್ಲದೆ ಸಮಾಜದಲ್ಲಿ ಅದರ ನಿಯೋಜನೆಗೆ ಮಾರ್ಗದರ್ಶನ ನೀಡುವ ನೈತಿಕ ದಿಕ್ಸೂಚಿಯೂ ಆಗಿದೆ ಎಂದು ಹೇಳಿದರು.

ನ್ಯಾಯಾಂಗ ಪ್ರಕ್ರಿಯೆಗಳನ್ನು ಬಲಪಡಿಸಲು ತಂತ್ರಜ್ಞಾನವು ಅರ್ಥಪೂರ್ಣ ಅವಕಾಶಗಳನ್ನು ನೀಡುತ್ತದೆ. ಕೃತಕ ಬುದ್ಧಿಮತ್ತೆಯು ನೆರವಿನಿಂದ ಕಾನೂನು ನಿರ್ವಹಣಾ ವ್ಯವಸ್ಥೆ ಸುಧಾರಿಸಬಹುದು. ಸವಾಲಿನ ಪ್ರಕರಣಗಳ ನಿರ್ವಹಣೆಯನ್ನು ಸುಗಮಗೊಳಿಸಬಹುದು. ಆಗಬಹುದಾದ ವಿಳಂಬವನ್ನು ತಪ್ಪಿಸಬಹುದು. ಆದರೆ ಈ ಎಲ್ಲಾ ನಾವೀನ್ಯತೆಗಳನ್ನು ಜಾಗರೂಕತೆಯಿಂದ ಅಳವಡಿಸಿಕೊಳ್ಳಬೇಕು ಎಂಬುದನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮಾತನಾಡಿ, ಈಗ ನ್ಯಾಯಾಂಗ ವ್ಯವಸ್ಥೆಯಲ್ಲಿ ಎಐ ಅಳವಡಿಸಬೇಕೇ ಅಥವಾ ಬೇಡವೇ ಎಂಬುದು ಪ್ರಶ್ನೆಯಾಗಿ ಉಳಿದಿಲ್ಲ. ಯಾವ ರೀತಿಯಲ್ಲಿ ಇದನ್ನು ಅಳವಡಿಸಬೇಕು ಎಂಬುದಷ್ಟೇ ಈಗಿನ ಪ್ರಶ್ನೆಯಾಗಿದೆ. ಕರ್ನಾಟಕದ ನ್ಯಾಯಾಂಗ ವ್ಯವಸ್ಥೆಯಲ್ಲಿ ದಾಖಲೆಗಳ ಡಿಜಿಟಲೀಕರಣ, ಇ-ಫೈಲಿಂಗ್ ಹಾಗೂ ಕಾಗದರಹಿತ ವ್ಯವಸ್ಥೆ ನಿರ್ಮಿಸುವ ದಿಸೆಯಲ್ಲಿ ಉಪಕ್ರಮಗಳು ಆರಂಭಗೊಂಡಿದ್ದು, ಇದು ವೇಗ ಪಡೆದುಕೊಳ್ಳಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಬೆಂಗಳೂರಿನ ನ್ಯಾಯಾಲಯಗಳಲ್ಲಿ ಕಡತಗಳ ಸಂಗ್ರಹ ಹಾಗೂ ಬೇಕೆಂದಾಗ ಅವುಗಳ ಲಭ್ಯತೆಯೇ ದೊಡ್ಡ ತೊಡಕಾಗಿತ್ತು. ಈ ಕೊರತೆ ನೀಗಿಸುವ ಸಲುವಾಗಿ, ಆನೇಕಲ್‌ನಲ್ಲಿ 1.40 ಲಕ್ಷ ಚದರ ಅಡಿಗಳಷ್ಟು ವಿಸ್ತೀರ್ಣದಲ್ಲಿ ದಾಖಲೆಗಳ ಸ್ಕ್ಯಾನಿಂಗ್, ಸಂಗ್ರಹ ಹಾಗೂ ಕಡತಗಳ ನಿರ್ವಹಣೆ ಸೌಲಭ್ಯವನ್ನು ಸ್ಥಾಪಿಸಲಾಗುತ್ತಿದ್ದು, ಇದರಿಂದ ಕಾರ್ಯದಕ್ಷತೆ ಹೆಚ್ಚಲಿದೆ ಎಂದರು.

ಲೋಕಾ ಅತ್ಯಂತ ಪರಿಣಾಮಕಾರಿ: ಸಿಜೆಐ

• **ಬೆಂಗಳೂರು:** ಕರ್ನಾಟಕ ಲೋಕಾಯುಕ್ತ ಸಂಸ್ಥೆ ದೇಶದಲ್ಲೇ ಅತ್ಯಂತ ಪರಿಣಾಮಕಾರಿ ಲೋಕಾಯುಕ್ತ ಸಂಸ್ಥೆಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಭ್ರಷ್ಟಾಚಾರಮುಕ್ತ ಆಡಳಿತ ಮತ್ತು ಸಾಮಾನ್ಯ ಜನರ ಹಕ್ಕುಗಳ ರಕ್ಷಣೆಯಲ್ಲಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯು ದೇಶಕ್ಕೇ ಮಾದರಿಯಾಗಿದೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದರು.

ನಾರೀಶಕ್ತಿಗೆ ಅಪಮಾನ

ಪುಟ ೧➡ 40 ವರ್ಷಗಳಿಂದ ಬಾಕಿ ಉಳಿದಿದ್ದ ಮಹಿಳೆಯರ ಹಕ್ಕನ್ನು 2029ರಿಂದ ಜಾರಿಗೊಳಿಸುವ ಮಹತ್ವದ ಹೆಜ್ಜೆ. ದೇಶದ ಅರ್ಧ ಜನಸಂಖ್ಯೆಗೆ ನ್ಯಾಯ ನೀಡುವ ಪವಿತ್ರ ಪ್ರಯತ್ನವಾಗಿತ್ತು ಎಂದರು. ಆದರೆ ಕಾಂಗ್ರೆಸ್ ಹಾಗೂ ಅದರ ಮಿತ್ರಪಕ್ಷಗಳು ಈ ಪ್ರಾಮಾಣಿಕ ಪ್ರಯತ್ನವನ್ನು ಭ್ರೂಣದಲ್ಲೇ ಕೊಂದಿವೆ ಎಂದು ಅವರು ಟೀಕಿಸಿದರು.

ವಂಶಪಾರಂಪರ್ಯಕ್ಕೆ ಪೆಟ್ಟು ಆತಂಕ: ವಿಪಕ್ಷಗಳ ವಿರೋಧದ ಹಿಂದೆ 'ಭಯ'ವೇ ಕಾರಣ ಎಂದು ಮೋದಿ ಆರೋಪಿಸಿದರು. ಮಹಿಳೆಯರು ಸಬಲರಾದರೆ ತಮ್ಮ ವಂಶಪಾರಂಪರ್ಯ ರಾಜಕೀಯಕ್ಕೆ ಧಕ್ಕೆ ಉಂಟಾಗುತ್ತದೆ ಎಂಬ ಆತಂಕವೇ ಇದಕ್ಕೆ ಮೂಲ ಎಂದು ಹೇಳಿದರು. ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ ಮಹಿಳೆಯರು ಮುಂದೆ ಬಂದು ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಸೇವೆ ಸಲ್ಲಿಸುವ ಸಾಧ್ಯತೆಯೇ ಈ ಪಕ್ಷಗಳಿಗೆ ಭೀತಿಯಾಗಿದೆ ಎಂದು ಅವರು ವಿವರಿಸಿದರು.

ಸುಧಾರಣೆ ವಿರೋಧಿ ಕಾಂಗ್ರೆಸ್: ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಪ್ರಧಾನಿ, ಅದು ಸದಾ ಸುಧಾರಣೆಗೆ ವಿರೋಧಿಸುವ ಪಕ್ಷವಾಗಿದೆ ಎಂದು ಆರೋಪಿಸಿದರು. ಜನ್‌ಧನ್, ಆಧಾರ್, ಡಿಜಿಟಲ್ ಪಾವತಿ, ಜಿಎಸ್‌ಟಿ, ತ್ರಿವಳಿ ತಲಾಖ್ ನಿಷೇಧ, 370ನೇ ವಿಧಿ ರದ್ದತಿ, ಸಿಎಎ, ಒಂದು ರಾಷ್ಟ್ರ ಒಂದು ಚುನಾವಣೆ, ಸಮಾನ ನಾಗರಿಕ ಸಂಹಿತೆ, ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೇರಿದಂತೆ ಅನೇಕ ನಿರ್ಧಾರಗಳನ್ನು ಕಾಂಗ್ರೆಸ್ ವಿರೋಧಿಸಿತ್ತು ಎಂದು ಹೇಳಿದರು.

ಇದೇ ಮನೋಭಾವ ದೇಶದ ಅಭಿವೃದ್ಧಿಯನ್ನು ತಡೆದಿದೆ ಮತ್ತು ಮಹಿಳಾ ಮೀಸಲಾತಿ ಮಸೂದೆಗೂ ಅಡ್ಡಿಯಾಗಿದೆ ಎಂದು ಅವರು ಟೀಕಿಸಿದರು. ಹಾಗೆಯೇ, ಒಬಿಸಿ ಮೀಸಲಾತಿ ಮತ್ತು ಒಂದು ರ‍್ಯಾಂಕ್, ಒಂದು ಪೆನ್ಶನ್ ಅನ್ನು 40 ವರ್ಷಗಳ ವಿಳಂಬ ಮಾಡಿದ್ದು ಇದೇ ಕಾಂಗ್ರೆಸ್ ಎಂದರು. ಇದೇ ಕಾಂಗ್ರೆಸ್‌ಗೆ ಮಹಿಳೆಯರು ಮತ್ತು ಸಹೋದರಿಯರು ಪಾಠ ಕಲಿಸುತ್ತಾರೆ ಎಂದರು.

ಮಹಿಳೆಯರ ಬೆಂಬಲ ತಮಗೆ: ಮಸೂದೆ ಅಂಗೀಕಾರಕ್ಕೆ ಅಗತ್ಯವಿದ್ದ 66 ಶೇಕಡಾ ಮತಗಳು ಸಿಗದಿದ್ದರೂ ದೇಶದ ಮಹಿಳಾ ಶಕ್ತಿಯ ಸಂಪೂರ್ಣ ಬೆಂಬಲ ನಮ್ಮೊಂದಿಗಿದೆ ಎಂದು ಮೋದಿ ವಿಶ್ವಾಸ ವ್ಯಕ್ತಪಡಿಸಿದರು. ಈ ಹೋರಾಟ ಇಲ್ಲಿ ಅಂತ್ಯವಾಗುವುದಿಲ್ಲ; ಮುಂದೆಯೂ ಎಲ್ಲಾ ಅಡೆತಡೆಗಳನ್ನು ನಿವಾರಿಸಿ ಮಹಿಳೆಯರಿಗೆ ನ್ಯಾಯ ಒದಗಿಸಲಾಗುವುದು ಎಂದು ಭರವಸೆ ನೀಡಿದರು. 'ಸಂಖ್ಯಾಬಲ ಇರಲಿಲ್ಲ ಅಷ್ಟೇ, ಆದರೆ ನಮ್ಮ ಸಂಕಲ್ಪ ಅಚಲವಾಗಿದೆ. ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ನಮ್ಮ ಪ್ರಯತ್ನ ಮುಂದುವರಿಯುತ್ತದೆ' ಎಂದು ಅವರು ಘೋಷಿಸಿದರು.

ಮೋದಿ ಹೇಳಿಕೆಗಳು

- ಪುಟ ೧➡ ಸಂವಿಧಾನ ಶಿಲ್ಪಿಗಳ ಆಶಯಕ್ಕೂ ಪ್ರತಿಪಕ್ಷಗಳಿಂದ ಧಕ್ಕೆ
- 40 ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಮಸೂದೆಗೆ ಒಪ್ಪಿಗೆ ಯತ್ನ
- ಮಹಿಳೆಯರಿಗೆ ಹೊಸ ಅವಕಾಶ ಮಾಡಿಕೊಡುವ ಮಹಾಯಜ್ಞ
- ಭಾರತದ ವಿಕಾಸ ಯಾತ್ರೆಯಲ್ಲಿ ಸಹಯಾತ್ರಿ ಮಾಡುವ ಮಹಾನ್ ಉದ್ದೇಶ
- ಎಲ್ಲ ರಾಜ್ಯಗಳಿಗೂ ಸಮಾನವಾಗಿ ಕ್ಷೇತ್ರಗಳ ಮರು ಹಂಚಿಕೆ ಯತ್ನ
- ಹಿಂದಿನಿಂದಲೂ ಮಹಿಳಾ ಮಸೂದೆಗೆ ಕಾಂಗ್ರೆಸ್‌ನಿಂದಲೇ ಅಡ್ಡಿ
- ಕ್ಷೇತ್ರ ಪುನರ್‌ವಿಂಗಡಣೆ ವಿಚಾರದಲ್ಲಿ ಪ್ರತಿಪಕ್ಷಗಳಿಂದ ದೊಡ್ಡ ಸುಳ್ಳು
- ಬಂಗಾಳ, ಉತ್ತರ ಪ್ರದೇಶ, ಕೇರಳದ ಸ್ಥಾನ ಹೆಚ್ಚುತ್ತಿದ್ದವು
- ತಮಿಳುನಾಡಿನ ಕ್ಷೇತ್ರಗಳು ಹೆಚ್ಚಳವಾಗಿ ಹೆಚ್ಚು ಸಂಸದರಿಗೆ ಅವಕಾಶ
- ಲಟ್ಕಾನಾ, ಭಟ್ಕಾನಾ ಮತ್ತು ಅಟ್ಕಾನಾ ಕಾಂಗ್ರೆಸ್‌ನ ಬುದ್ಧಿ

ರಿಮೋಟ್ ಕಾರಲ್ಲಿ ಬಾಂಬ್ ಭಾರೀ ಸ್ಫೋಟಕ್ಕೆ ಸಂಚು

ಪುಟ ೧➡ ಇವರು ಸಾಮಾನ್ಯ ಸಾಮಾಜಿಕ–ಆರ್ಥಿಕ ಹಿನ್ನೆಲೆಯವರಾಗಿದ್ದು, ತಾಂತ್ರಿಕ ಕೌಶಲ್ಯ ಬಳಸಿ ದಾಳಿ ರೂಪಿಸಲು ಯತ್ನಿಸುತ್ತಿದ್ದರೆಂದು ಪೊಲೀಸರು ಹೇಳಿದ್ದಾರೆ.

ಜತೆಗೆ ಈ ನಾಲ್ವರು ಖಲೀಫತ್ ಸ್ಥಾಪನೆ ಎಂಬ ಅತಿರೇಕಿ ಚಿಂತನೆಗಳಿಂದ ಪ್ರೇರಿತರಾಗಿದ್ದು, 'ಘಜ್ವಾ–ಎ–ಹಿಂದ್' ಮುಂತಾದ ಅಭಿಯಾನಗಳನ್ನು ಪ್ರಚಾರ ಮಾಡುತ್ತಿದ್ದರೆಂದು ಪೊಲೀಸರು ತಿಳಿಸಿದ್ದಾರೆ. ಅವರ ಚಟುವಟಿಕೆಗಳು ಗುಪ್ತ ಹಾಗೂ ಎನ್‌ಕ್ರಿಪ್ಟೆಡ್ ಸೋಶಿಯಲ್ ಮೀಡಿಯಾ ಗುಂಪುಗಳ ಮೂಲಕ ನಡೆಯುತ್ತಿದ್ದು, ಅಲ್ಲಿ ಜಿಹಾದ್, ಅತಿರೇಕಿ ಸಿದ್ಧಾಂತ ಮತ್ತು ಶಸ್ತ್ರಾಸ್ತ್ರಗಳ ಕುರಿತು ವಿಷಯ ಹಂಚಿಕೊಳ್ಳಲಾಗುತ್ತಿತ್ತು. ಹೊಸ ಸದಸ್ಯರನ್ನು ಗುರುತಿಸಿ, ಅವರನ್ನು ಪ್ರಭಾವಿತಗೊಳಿಸಿ ನೇಮಕಾತಿ ಮಾಡುವುದೇ ಉದ್ದೇಶವಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ತನಿಖೆಯಲ್ಲಿ 2025 ಡಿಸೆಂಬರ್‌ನಲ್ಲಿ ಆರೋಪಿಗಳಲ್ಲಿ ಒಬ್ಬರು ದೆಹಲಿಗೆ ಭೇಟಿ ನೀಡಿ ರೆಡ್ ಫೋರ್ಟ್ ಹಾಗೂ ಇಂಡಿಯಾ ಗೇಟ್ ಸೇರಿದಂತೆ ಪ್ರಮುಖ ಸ್ಥಳಗಳ ಪರಿಶೀಲನೆ ನಡೆಸಿದ್ದುದೂ ಬೆಳಕಿಗೆ ಬಂದಿದೆ. ರಾಮಮಂದಿರ (ಅಯೋಧ್ಯೆ), ಸಂಸತ್ ಭವನ ಮತ್ತು ಕೆಲವು ಸೇನಾ ಸ್ಥಾಪನೆಗಳ ಮೇಲೆ ದಾಳಿ ನಡೆಸುವ ಕುರಿತು ಚರ್ಚೆಗಳು ನಡೆದಿದ್ದವು ಎನ್ನಲಾಗಿದೆ.

ಪೊಲೀಸರು ಹಲವು ಮೊಬೈಲ್ ಫೋನ್‌ಗಳು ಹಾಗೂ ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಂಡಿದ್ದು, ದೊಡ್ಡ ಜಾಲದ ಸಂಪರ್ಕಗಳ ಕುರಿತು ತನಿಖೆ ಮುಂದುವರಿದಿದೆ.

ರಾಜ್ ನಡವಳಿಕೆಯೇ ಒಂದು ಸಂದೇಶ

• **ಬೆಂಗಳೂರು:** ವರನಟ ಡಾ.ರಾಜ್‌ಕುಮಾರ್ ಅವರು ಬದುಕಿನ ಒಂದೊಂದು ಹೆಜ್ಜೆಯನ್ನೂ ಹೇಳಿಕೊಟ್ಟರು. ಯಾರಿಗೂ ನೇರವಾಗಿ ಏನನ್ನೂ ಹೇಳದ ಅವರು, ತಮ್ಮ ನಡವಳಿಕೆ ಮುಖಾಂತರವೇ ಸಂದೇಶ ನೀಡುತ್ತಿದ್ದರು ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ. ಜಯಮಾಲಾ ತಿಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದ ನಯನ ಸಭಾಂಗಣದಲ್ಲಿ ನಡೆದ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತದ ತೈಲ ಹಡಗಿನ ಮೇಲೆ ಇರಾನ್ ದಾಳಿ!

ಪುಟ ೧➡ 14ರಲ್ಲಿ ಒಂದು ಹಡಗು ಹಾರ್ಮುಜ್ ಜಲಸಂಧಿಯನ್ನು ದಾಟುವಲ್ಲಿ ಯಶಸ್ವಿಯಾಗಿದ್ದು, ಉಳಿದ 13 ಹಡಗುಗಳು ಗುಂಡಿನ ದಾಳಿ ಕಾರಣ ಹಿಂದಿರುಗಿವೆ. ಒಮಾನ್‌ನಿಂದ 37 ಕಿ.ಮೀ. ಈಶಾನ್ಯದಲ್ಲಿ ಗನ್‌ಬೋಟುಗಳು ದಾಳಿ ನಡೆಸಿವೆ. ಖೆಶ್ಮ್ ಮತ್ತು ಲರಾಕ್ ದ್ವೀಪಗಳ ನಡುವೆ ಘಟನೆ ಸಂಭವಿಸಿದೆ ಎಂದು ವರದಿಯಾಗಿದೆ.

ಹಾರ್ಮುಜ್‌ನಲ್ಲಾದ ಆಘಾತಕಾರಿ ಬೆಳವಣಿಗೆಯ ಹಿನ್ನೆಲೆ ಭಾರತದತ್ತ ಪ್ರಯಾಣಿಸುತ್ತಿದ್ದ ಎರಡೂ ತೈಲ ಹಡಗುಗಳು ಬಲವಂತವಾಗಿ ಹಿಂದಿರುಗುವ ಪರಿಸ್ಥಿತಿ ಎದುರಾಗಿದೆ ಎಂದು ತಿಳಿದುಬಂದಿದೆ.

ಘಟನೆಯ ವಿರುದ್ಧ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ದಿಲ್ಲಿಯಲ್ಲಿನ ಇರಾನ್ ರಾಯಭಾರಿ ಡಾ.ಮೊಹಮ್ಮದ್ ಫಥಾಲಿ ಅವರಿಗೆ ಸಮನ್ಸ್ ಕಳುಹಿಸಿ ಕರೆಸಿಕೊಂಡಿದ್ದು, ತನ್ನ ಪ್ರತಿಭಟನೆಯನ್ನು ಸಲ್ಲಿಸಿದೆ. ಅಲ್ಲದೆ, ಆದಷ್ಟು ಬೇಗನೆ ಭಾರತೀಯ ಹಡಗುಗಳ ಸುರಕ್ಷಿತ ಸಂಚಾರ ಪ್ರಕ್ರಿಯೆಗೆ ಅನುವು ಮಾಡಿಕೊಡಬೇಕು ಎಂದು ರಕ್ಷಣಾ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಇರಾನ್ ರಾಯಭಾರಿಗೆ ತಾಕೀತು ಮಾಡಿದ್ದಾರೆ.

ಜಗ್ ಅರ್ಣಾವ್ ಮತ್ತು ಸನ್ಮಾರ್ ಹೆರಾಲ್ಡ್ ಎಂಬ ಹೆಸರಿನ ಎರಡು ತೈಲ ಹಡಗುಗಳು ಹಾರ್ಮುಜ್‌ನಿಂದ ಹೊರಟಿದ್ದು, ಜಗ್ ಅರ್ಣಾವ್ ಹಡಗಿನ ಮೇಲೆ ಇರಾನ್ ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿದ್ದವು. ಆದರೆ ಸನ್ಮಾರ್ ಹೆರಾಲ್ಡ್ ಅನ್ನು ಗುರಿಯಾಗಿಸಿ ದಾಳಿ ನಡೆದಿರಲಿಲ್ಲ. ಗುಂಡಿನ ದಾಳಿ ಹೊರತಾಗಿಯೂ ಜಗ್ ಅರ್ಣಾವ್ ತೈಲ ಟ್ಯಾಂಕರ್‌ಗೆ ಹಾನಿಯಾಗಿಲ್ಲ.


ಪರಿಸ್ಥಿತಿ ಅವಲೋಕಿಸಿದ ಭಾರತೀಯ ನೌಕಾಪಡೆ:

ಹಾರ್ಮುಜ್‌ನಲ್ಲಿ ಈ ಹಿಂದೆಯೇ ಭಾರತ ನಿಯೋಜಿಸಿದ್ದ ಭಾರತೀಯ ನೌಕಾಪಡೆಗೆ ಸೇರಿದ ಎರಡು ಯುದ್ಧನೌಕೆಗಳು ಪರಿಸ್ಥಿತಿಯ ಅವಲೋಕನ ನಡೆಸುತ್ತಿವೆ. ಘಟನೆಗೆ ಕಾರಣವೇನೆಂದು ಮಾಹಿತಿಯನ್ನು ಕಲೆಹಾಕುವಲ್ಲಿ ಭಾರತೀಯ ನೌಕಾಪಡೆ ಅಧಿಕಾರಿಗಳು ವ್ಯಸ್ತವಾಗಿದ್ದಾರೆಂಬ ಮಾಹಿತಿ ಲಭ್ಯವಾಗಿದೆ.

ಭಾರತೀಯ ತೈಲ ಹಡಗುಗಳು ಸುರಕ್ಷಿತ!: ಇರಾನ್ ಗನ್‌ಬೋಟುಗಳ ಗುಂಡಿನ ದಾಳಿ ಹೊರತಾಗಿಯೂ ಎರಡು ಹಡಗುಗಳಿಗೂ ಅದರಲ್ಲಿದ್ದ ಸಿಬ್ಬಂದಿಗೂ ಯಾವುದೇ ಹಾನಿಯಾಗಿಲ್ಲ ಎಂದು ತಿಳಿದುಬಂದಿದೆ. ಇವೆರಡರಲ್ಲಿ ಒಂದು ವಿಎಲ್‌ಸಿಸಿ (ಬೃಹತ್ ತೈಲ ಕ್ಯಾರಿಯರ್) ಸೂಪರ್ ಟ್ಯಾಂಕರ್ ಹಡಗು ಆಗಿದ್ದು, ಇವೆರಡರಲ್ಲಿ 2 ದಶಲಕ್ಷ ಬ್ಯಾರೆಲ್ ಇರಾಕಿ ಕಚ್ಚಾ ತೈಲವಿತ್ತೆಂದು ಟ್ಯಾಂಕರ್ ಟ್ರ್ಯಾಕರ್ ದೃಢೀಕರಿಸಿದೆ.

ಇರಾನ್ ರಾಯಭಾರಿಗೆ ಎಂಇಎ ಸಮನ್ಸ್

ಭಾರತೀಯ ತೈಲ ಹಡಗುಗಳ ಮೇಲೆ ಇರಾನ್ ಗನ್‌ಬೋಟುಗಳು ಗುಂಡಿನ ದಾಳಿ ನಡೆಸಿದ ಬಳಿಕ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ದಿಲ್ಲಿಯಲ್ಲಿನ ಇರಾನ್ ರಾಯಭಾರಿ ಡಾ.ಮೊಹಮ್ಮದ್ ಫಥಾಲಿ ಅವರಿಗೆ ಸಮನ್ಸ್ ಕಳುಹಿಸಿದೆ.



ಭಾರತದ ವ್ಯಾಪಾರಿ ಹಡಗುಗಳ ಮೇಲೆ ನಡೆಸಿದ ದಾಳಿಯನ್ನು ಸಭೆಯಲ್ಲಿ ರಕ್ಷಣಾ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ವಿರೋಧಿಸಿದ್ದಾರೆ. ಭಾರತದ ದೃಷ್ಟಿಕೋನವನ್ನು ಇರಾನ್ ಆಡಳಿತಕ್ಕೆ ತಿಳಿಸುವಂತೆ ಮಿಸ್ರಿ ಇರಾನ್ ರಾಯಭಾರಿಗೆ ಸ್ಪಷ್ಟಪಡಿಸಿದ್ದಾರೆ. ಭಾರತದತ್ತ ಪ್ರಯಾಣಿಸುವ ಎಲ್ಲಾ ಹಡಗುಗಳ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮಿಸ್ರಿ ಇರಾನ್‌ಗೆ ತಾಕೀತು ಮಾಡಿದ್ದಾರೆ. ಈ ಸಂಬಂಧ ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಅಧಿಕೃತ ಹೇಳಿಕೆಯನ್ನು ಎಕ್ಸ್ ಪೋಸ್ಟ್ ನಲ್ಲಿ ಹಂಚಿಕೊಂಡಿದ್ದಾರೆ. ಇರಾನ್ ರಾಯಭಾರಿಯನ್ನು ಕರೆಸಿಕೊಂಡು ಘಟನೆ ವಿರುದ್ಧ ಕೇಂದ್ರ ಸರ್ಕಾರ ತನ್ನ ಪ್ರತಿಭಟನೆಯನ್ನು ಸಲ್ಲಿಸಿದೆ. ಈ ಮೂಲಕ ಇರಾನ್ ಆಡಳಿತದ ಮೇಲೆ ಭಾರತ ಒತ್ತಡ ಹೇರಿದೆ. ಯಾವ ಕಾರಣಕ್ಕಾಗಿ ಭಾರತೀಯ ತೈಲ ಹಡಗುಗಳ ಮೇಲೆ ಗುಂಡಿನ ದಾಳಿ ನಡೆಸಿದ್ದೀರಿ? ಸ್ನೇಹ ರಾಷ್ಟ್ರವಾದ ಭಾರತದ ತೈಲ ಹಡಗುಗಳ ಮೇಲೆ ಯಾಕೆ ದಾಳಿ ಮಾಡಲಾಗಿದೆ? ಎಂದು ಇರಾನ್ ರಾಯಭಾರಿಯನ್ನು ಪ್ರಶ್ನಿಸಲಾಗಿದೆ ಎಂದು ವರದಿಯಾಗಿದೆ.

ಹಾರ್ಮುಜ್ ಸುರಕ್ಷಿತವೇ?

ಇತ್ತೀಚಿಗೆ ಘಟನೆಯಿಂದಾಗಿ ಇಂತಹದ್ದೊಂದು ಪ್ರಶ್ನೆ ಎದುರಾಗಿದೆ. ಭಾರತೀಯ ಹಡಗುಗಳ ಮೇಲೆ ಗುಂಡಿನ ದಾಳಿ ಆಗಿರುವುದರ ಹಿಂದಿನ ಕಾರಣವೇನೆಂಬ ಬಗ್ಗೆ ಇರಾನ್ ತನ್ನ ಸ್ಪಷ್ಟನೆ ನೀಡುವುದು ಬಾಕಿಯಿದೆ. ಇರಾನ್ ಮತ್ತು ಒಮಾನ್ ನಡುವಿನ ಈ ಜಲಸಂಧಿಯ ಮೂಲಕ ಜಾಗತಿಕ ಕಚ್ಚಾ ತೈಲ ಮಾರಾಟದ ಶೇ.20ರಷ್ಟು ಪಾಲು ದಾಟುತ್ತವೆ. ಆದರೆ ಈ ಘಟನೆಯಿಂದ ಹಾರ್ಮುಜ್‌ನಲ್ಲಿ ಸಾಗರೋತ್ತರ ಸುರಕ್ಷತೆ ವಿಚಾರದಲ್ಲಿ ಹೊಸ ಆತಂಕ ಸೃಷ್ಟಿಸಿದೆ.




ಬನ್ನೇರುಘಟ್ಟಕ್ಕೆ ಬಂದ ದಕ್ಷಿಣ ಆಫ್ರಿಕಾದ ಚೀತಾಗಳು



ಬೆಂಗಳೂರು/ಆನೇಕಲ್: ಬನ್ನೇರುಘಟ್ಟ ಮೃಗಾಲಯಕ್ಕೆ ದಕ್ಷಿಣ ಆಫ್ರಿಕಾದಿಂದ ತರಿಸಿಕೊಂಡ 4 ಶಿವಂಗಿ (ಚೀತಾ)ಚಿನ್ನು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಶುಕ್ರವಾರ ಮಧ್ಯರಾತ್ರಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬರಮಾಡಿಕೊಂಡರು.

ಶುಕ್ರವಾರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸರಕು ಸಾಗಣೆ ವಿಭಾಗಕ್ಕೆ ತೆರಳಿ ಬನ್ನೇರುಘಟ್ಟ ಮೃಗಾಲಯಕ್ಕೆ ಆಗಮಿಸಿರುವ ಈ ವಿದೇಶೀ ಅತಿಥಿಗಳನ್ನು ಬರಮಾಡಿ ಕೊಂಡರು. ದಕ್ಷಿಣ ಆಫ್ರಿಕಾದಿಂದ ಬೆಂಗಳೂರಿಗೆ ಆಗಮಿಸಿರುವ ಈ ಚೀತಾಗಳಿಗೆ ವಾತಾವರಣ, ಹವಾಮಾನ ಬದಲಾವಣೆಯಾಗುವ ಕಾರಣ ಅವುಗಳಿಗೆ ಯಾವುದೇ ತೊಂದರೆ ಆಗದಂತೆ, ಆರೋಗ್ಯ ಸಮಸ್ಯೆ ಎದುರಾಗದ ರೀತಿಯಲ್ಲಿ ಸೂಕ್ತ ನಿಗಾ ಇಡಬೇಕು. ವನ್ಯಜೀವಿಗಳನ್ನು ಕ್ವಾರಂಟೈನಲ್ಲಿಡಬೇಕು. 30 ದಿನಗಳ ಕಾಲ ಗೊತ್ತುಪಡಿಸಿದ ಆಹಾರ ನೀಡಬೇಕು, ಈ ವಿದೇಶಿ ವನ್ಯಜೀವಿಗಳಿಗೆ ಸೋಂಕು ಏನಾದರೂ ಇದೆಯೇ ಎಂದು ಪರಿಶೀಲಿಸಬೇಕು. ಪ್ರಾಣಿಗಳನ್ನು ಸುರಕ್ಷಿತವಾಗಿ ಬನ್ನೇರುಘಟ್ಟಕ್ಕೆ ಸಾಗಿಸಬೇಕು ಎಂದು ಅಧಿಕಾರಿಗಳಿಗೆ ಮತ್ತು ಪಶು ವೈದ್ಯಾಧಿಕಾರಿಗಳಿಗೆ ಸೂಚನೆ ನೀಡಿದರು. ಒಂದು ಕಾಲದಲ್ಲಿ ಕರ್ನಾಟಕದ ಕಾಡುಗಳಲ್ಲಿಯೇ ಶಿವಂಗಿ ಎಂದು ಕರೆಸಿಕೊಳ್ಳುವ ಚೀತಾಗಳಿದ್ದವು. ಆದರೆ ರಾಜ್ಯದ ಕಾಡಿನಲ್ಲಿ ಇವು ನಾಮಾವಶೇಷ ಆಗಿವೆ. ಹೀಗಾಗಿ ಮೃಗಾಲಯಗಳಲ್ಲಾದರೂ ಇವುಗಳನ್ನು ನೋಡಲು ಅವಕಾಶ ಆಗಬೇಕು. ಈ ನಿಟ್ಟಿನಲ್ಲಿ ಅವುಗಳ ಸುರಕ್ಷತೆಗೆ ಆದ್ಯ ಗಮನ ನೀಡುವಂತೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನೀಲ್ ಪನ್ವಾರ್ ಅವರಿಗೆ ಸೂಚಿಸಿದರು.





4
ಚೀತಾಗಳ ಆಗಮನ

ಕಾಡು ಪ್ರಾಣಿಗಳ ದಾಳಿ ತಡೆಗೆ ಕ್ರಮ: ಸಚಿವ ಈಶ್ವರ ಖಂಡ್ರೆ

ಚಿಕ್ಕಮಗಳೂರು: ಕಾಡು ಪ್ರಾಣಿಗಳ ದಾಳಿಯಿಂದ ಸಂಭವಿಸುತ್ತಿರುವ ಸಾವುಗಳ ನಿಯಂತ್ರಣಕ್ಕೆ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಲಾಗುವುದು, ಈ ಸಂಬಂಧ ಹಿರಿಯ ಅಧಿಕಾರಿಗಳ ಜತೆ ಚರ್ಚಿಸಲಾಗುವುದು ಎಂದು ಅರಣ್ಯ ಸಚಿವ ಖಂಡ್ರೆ ತಿಳಿಸಿದರು.

ಕಳಸದ ಯಮಗೊಂಡ ಎಸ್ಟೇಟ್‌ನಲ್ಲಿ ಶನಿವಾರ ಕಾಡುಕೋಣ ದಾಳಿ ಯಿಂದ ತೋಟ ಕಾರ್ಮಿಕರೊಬ್ಬರು ಮೃತಪಟ್ಟ ಕುರಿತು ಚಿಕ್ಕಮಗಳೂರು ನಗರದಲ್ಲಿ ಸಂತಾಪ ವ್ಯಕ್ತಪಡಿಸಿ ಪ್ರತಿಕ್ರಿಯಿಸಿದ ಸಚಿವರು, ಕಾಡು ಪ್ರಾಣಿಗಳಿಂದ ಯಾವುದೇ ಸಾವು ಸಂಭವಿಸಬಾರದು ಎನ್ನುವುದು ನಮ್ಮ ಗುರಿ. ನಮ್ಮ ಅಧಿಕಾರಿಗಳು ಇಂತಹ ಘಟನೆ ತಪ್ಪಿಸಲು ಹಗಲಿರುಳೂ ಶ್ರಮಿಸುತ್ತಿದ್ದಾರೆ. ನಿದ್ರೆಯಿಲ್ಲದೆ ಓಡಾಡುತ್ತಿದ್ದಾರೆ. ಸರ್ಕಾರ ಸಹ ಬಹಳಷ್ಟು ಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದೆ ಎಂದರು.

ಬ್ಯಾರಿಕೇಡ್ ಅಳವಡಿಸುವುದು, ಟೆಂಟೆಕಲ್ ಫೆನ್ಸಿಂಗ್, ಕಂದಕ ನಿರ್ಮಾಣ, ಆಧುನಿಕ ಉಪಕರಣಗಳ ಬಳಕೆ, ಎಲ್‌ಟಿಎಫ್, ಇಕೆಎಫ್‌ರಚನೆ, ಟಾಸ್ಕ್‌ಫೋರ್ಸ್, ಆ್ಯಂಟಿ ಪೋಚಿಂಗ್ ಕ್ಯಾಂಪ್‌ಗಳನ್ನು ಬಲಪಡಿಸುವ ಕೆಲಸ ಮಾಡಿದ್ದೇವೆ. ಇಷ್ಟೆಲ್ಲಾ ಆದರೂ ಈ ದಾಳಿ ನಡೆದಿದೆ ಎಂದು ವಿಷಾದಿಸಿದರು. ಟ್ರೆಕ್ಕಿಂಗ್ ತೆರಳುವವರಿಗೆ ನಿನ್ನೆ ಇಲಾಖೆಯಿಂದ ಎಸ್‌ಒಪಿ ಬಿಡುಗಡೆ ಮಾಡಲಾಗಿದೆ. ಯಾರ‍್ಯಾರು ಚಾರಣಿಗರಿದ್ದಾರೋ ಅವರೆಲ್ಲರೂ ಈ ಎಸ್‌ಒಪಿಗಳನ್ನು ಪಾಲನೆ ಮಾಡಬೇಕು. ಇಲ್ಲವಾದಲ್ಲಿ ಚಾರಣಿಗರು ಮತ್ತು ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ವಿದ್ಯುತ್ ದರ ಏರಿಕೆ ಕುರಿತು ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಏರಿಕೆಯಾಗಿದೆ. ಈ ಬಗ್ಗೆ ಬಿಜೆಪಿ ಮೊದಲು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದರೂ ಭಾರತದಲ್ಲಿದರ ಹೆಚ್ಚಿದೆ. ಕೇಂದ್ರದಿಂದ ಬಡವರ ಹಣ ಲೂಟಿಯಾಗುತ್ತಿದೆ. ತೆರಿಗೆ ಪಾಲು ಹಂಚಿಕೆ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದರು.

ಸಿಮೆಂಟ್ ನಾಮಫಲಕ ಕುಸಿದು 2 ಮಕ್ಕಳು ಸಾವು

ರಾಯಚೂರು (ಮಾನ್ವಿ): ಜಿಲ್ಲೆಯ ಮಾನ್ವಿ ತಾಲೂಕಿನ ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯ ಬೈಲ್ ಮಾರ್ಚೆಡ್ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಬಯಲು ನಾಟಕದ ಪ್ರದರ್ಶನ ವೀಕ್ಷಿಸುತ್ತಿದ್ದ ಸಮಯದಲ್ಲಿ ಸಮುದಾಯ ಭವನದ ಸಿಮೆಂಟಿನ ನಾಮಫಲಕ ಕುಸಿದು ಬಿದ್ದು ಸ್ಥಳದಲ್ಲೇ ಇಬ್ಬರು ಮಕ್ಕಳು ಮೃತಪಟ್ಟಿದ್ದು, ಓರ್ವ ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದಾರೆ.





ಮೃತರನ್ನು ಕುರ್ಡಿ ಗ್ರಾಮದ ವಿಶ್ವನಾಥ ನಾಯಕ(9) ಹಾಗೂ ವಡವಟ್ಟಿ ಗ್ರಾಮ ಸನ್ವಿತಾ ನಾಯಕ(2) ಎಂದು ಗುರುತಿಸಲಾಗಿದೆ. ಮೃತ ಸಾನ್ವಿತ್ ನಾಯಕನ ತಾಯಿ ವಿಶಾಲಾಕ್ಷಿ ಅವರ 2 ಕಾಲುಗಳು ಮುರಿದು ಗಂಭಿರವಾಗಿ ಗಾಯಗೊಂಡಿದ್ದಾರೆ. ತಂಗಿ ಯಲ್ಲಮ್ಮ ಹಾಗೂ ಗ್ರಾಮದ ಇನ್ನೋರ್ವ ನಿವಾಸಿ ಬಸಮ್ಮ, ಮಗಳು ಲಕ್ಷ್ಮೀ ಗಂಭಿರವಾಗಿ ಗಾಯಗೊಂಡಿದ್ದಾರೆ. ಇವರನ್ನು ರಾಯಚೂರಿನ ಓಪೇಕ್ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಈಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಅಂಗವಾಗಿ ರಾತ್ರಿ ಸಮಯದಲ್ಲಿ ಮನರಂಜಾನೆಗಾಗಿ ನಡೆದ ಬಯಲು ನಾಟಕದ ಪ್ರದರ್ಶನ ಸಂದರ್ಭದಲ್ಲಿ ರಾತ್ರಿ 11.40ರ ಸಮಯದಲ್ಲಿ ಈ ಘಟನೆ ಸಂಭವಿಸಿದೆ.

ಕಿರುಸುದ್ದಿ

ಕಾಂಗ್ರೆಸ್ ಸರ್ಕಾರದಿಂದ ಬೆಲೆ ಏರಿಕೆ: ಸಿ.ಟಿ.ರವಿ

ಚಿಕ್ಕಮಗಳೂರು: ರಾಜ್ಯದ ಕಾಂಗ್ರೆಸ್ ಸರ್ಕಾರ ಎಲ್ಲದರ ದರವನ್ನೂ ಏರಿಸಿದೆ. ಬಾಕಿ ಉಳಿದಿರುವುದು ಗಾಳಿಯೊಂದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆರೋಪಿಸಿದರು. ವಿದ್ಯುತ್‌ದರವನ್ನು ಮತ್ತೆ ಏರಿಕೆ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರದ ನಡೆಯನ್ನು ಖಂಡಿಸಿದ ಅವರು, ಮುಖ್ಯಮಂತ್ರಿಗಳೇ ದರ ಏರಿಸಿಲು ಯಾವುದನ್ನಾದರೂ ಉಳಿಸಿದ್ದೀರ ಎಂದು ಪ್ರಶ್ನಿಸಿದರಲ್ಲದೆ, ನೀವ್ಯಾರಾದರೂ ಗಾಳಿಯೊಂದು ಉಳಿದಿದೆ ಎಂದು ನೆನಪು ಮಾಡಿದರೆ ಅದಕ್ಕೂ ತೆರಿಗೆ ಹಾಕಿಬಿಡುತ್ತಾರೆ ಎಂದು ಟೀಕಿಸಿದರು. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಗಾಳಿಯನ್ನೂ ಬಿಡದ ಕಾಂಗ್ರೆಸಿಗರು ಎನ್ನುವ ಜಾಗತಿಕ ದಾಖಲೆ ಆಗಲಿದೆ. ಜಗತ್ತಿನಲ್ಲಿ ಸರ್ವಾಧಿಕಾರಿಗಳೂ ಗಾಳಿ ಮೇಲೆ ತೆರಿಗೆ ಹಾಕಿಲ್ಲ. ಕಾಂಗ್ರೆಸಿಗರಿಗೆ ಅದಕ್ಕೂ ಒಂದು ಅವಕಾಶ ಇದೆ ಅದನ್ನೂ ಮಾಡಿಬಿಡಿ ಎಂದರು. ಕಸದ ಮೇಲೆ ತೆರಿಗೆ ಹೆಚ್ಚಿಸಿ ಆಯಿತು. ನೀರು, ಸ್ಟಾಂಪ್ ಪೇಪರ್, ಜನನ-ಮರಣ ಪತ್ರಗಳು, ಅಡಿಗೆ ಎಣ್ಣೆ, ಕುಡಿಯುವ ಎಣ್ಣೆ, ರೈತರ ಪಹಣಿ ಎಲ್ಲದರ ದರ, ತೆರಿಗೆಯನ್ನು ಏರಿಸಿ ಆಗಿದೆ. ಇನ್ನಾವುದಾದರೂ ಉಳಿದಿದ್ದರೆ ಅದು ಗಾಳಿ ಮಾತ್ರ ಎಂದರು. ನಿಮ್ಮ ಚಿನ್ನ ನೀವು ಒತ್ತೆಯಿಟ್ಟು ಸಾಲ ಪಡೆಯಲು ಶೇ.0.5 ಸ್ಟಾಂಪ್ ಡ್ಯೂಟಿ ಕಟ್ಟಬೇಕು. ಪೆಟ್ರೋಲ್, ಡೀಸೆಲ್ ಮೇಲೆ ಎರಡು ಬಾರಿ ಸೆಸ್ ಹಾಕಿದರು. ಬಸ್ ದರ ಏರಿಸಿದರು. ಪಂಪ್‌ಸೆಟ್‌ಗೆ ಟಿಸಿ ಕೂರಿಸುವ ದರ ಏರಿಸಿದರು. ಗಾಳಿ ಮೇಲೆ ತೆರಿಗೆ ಹಾಕಿಬಿಟ್ಟರೆ ದಾಖಲೆ ಆಗುತ್ತದೆ ಎಂದರು.



ಪ್ಯಾರಚೂಟ್ ತರಬೇತಿ: ಸೈನಿಕರಿಬ್ಬರಿಗೆ ಗಾಯ

ಬಳ್ಳಾರಿ: ನಗರದ ಹೊರವಲಯದ ಪಿ.ಡಿ ಹಳ್ಳಿ ಪ್ರದೇಶದಲ್ಲಿ ನಡೆದ ಪ್ಯಾರಚೂಟ್ ತರಬೇತಿ ವೇಳೆ ಇಬ್ಬರು ಸೈನಿಕರು ಗಾಯಗೊಂಡ ಘಟನೆ ಶನಿವಾರ ನಡೆದಿದೆ. ಚಿನ್ನರಾಜ್ (25) ಹಾಗೂ ಇನ್ನೊಬ್ಬ ಯೋಧರು ಗಾಯಗೊಂಡವರು. ತರಬೇತಿ ವೇಳೆ ಜಿಗಿಯುವ ಸಂದರ್ಭದಲ್ಲಿ ಸುಮಾರು 50 ಅಡಿ ಎತ್ತರದಿಂದ ಕೆಳಗೆ ಬಿದ್ದ ಹಿನ್ನೆಲೆ ಚಿನ್ನರಾಜ್ (25) ಸೇರಿದಂತೆ ಮತ್ತೊಬ್ಬ ಸೇನಾ ಸಿಬ್ಬಂದಿಗೆ ಗಂಭೀರ ಗಾಯಗಳಾಗಿದ್ದು, ಇವರಲ್ಲಿ ಒಬ್ಬರ ಕಾಲಿನ ಮೂಳೆ ಮುರಿದಿದ್ದು, ಸ್ಥಿತಿ ಗಂಭೀರವಾಗಿದೆ ಎಂದು ತಿಳಿದು ಬಂದಿದೆ. ಈ ತರಬೇತಿಯಲ್ಲಿ ಒಟ್ಟು 417 ಸೈನಿಕರು ಭಾಗವಹಿಸಿದ್ದರು. ಅಪಘಾತ ಸಂಭವಿಸಿದ ಕೂಡಲೇ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕಲ್ಪಿಸಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಇಬ್ಬರನ್ನೂ ಹೆಲಿಕಾಪ್ಟರ್ ಮೂಲಕ ಬೆಂಗಳೂರಿಗೆ ಏರ್‌ಲಿಫ್ಟ್ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಪರಾಧಿ ಸ್ಥಾನದಲ್ಲಿ ಕಾಂಗ್ರೆಸ್: ಜೋಶಿ

ಹೊಸದಿಲ್ಲಿ: ಕಾಂಗ್ರೆಸ್ ಶೇ.33 ಮಹಿಳಾ ಮೀಸಲಾತಿಗೆ ವಿರೋಧಿಸುತ್ತ ಅಪರಾಧಿ ಸ್ಥಾನದಲ್ಲಿ ನಿಂತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು. ಶನಿವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿ, ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಒಬಿಸಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮತ್ತು ಮಹಿಳಾ ವಿರೋಧಿಯಾಗಿಯೇ ನಡೆದುಕೊಂಡಿದೆ ಎಂದು ವಾಗ್ದಾಳಿ ನಡೆಸಿದರು. ನೆಹರೂ ಅವರು ಎಸ್‌ಸಿ, ಎಸ್‌ಟಿ, ರಾಜೀವ್ ಗಾಂಧಿ ಒಬಿಸಿಯನ್ನು, ಮಂಡಲ ಕಮಿಷನ್ ಅನ್ನು ವಿರೋಧಿಸಿದರು. ಇದೀಗ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಮಹಿಳಾ ಮೀಸಲಾತಿಯನ್ನು ಧಿಕ್ಕರಿಸುತ್ತಿದ್ದಾರೆ. ಕಾಂಗ್ರೆಸ್, ಇಂಡಿ ಒಕ್ಕೂಟ ದೇಶದಲ್ಲಿ ಜನರ ವಿಶ್ವಾಸ ಕಳೆದುಕೊಂಡಿದೆ ಎಂದರು.

ಸುಪ್ರೀಂ ಮುಖ್ಯ ನ್ಯಾಯಾಧೀಶ ಸೂರ್ಯಕಾಂತ್ ಇಂಗಿತ

ನ್ಯಾಯಾಂಗದಲ್ಲಿ ಎಐ ಅಸಾಧ್ಯ

ಬೆಂಗಳೂರು: ಕೃತಕಬುದ್ಧಿಮತ್ತೆ ಸೇರಿದಂತೆ ಯಾವುದೇ ಆಧುನಿಕ ತಂತ್ರಜ್ಞಾನದ ಅಳವಡಿಕೆಗೆ ನ್ಯಾಯಾಂಗ ವ್ಯವಸ್ಥೆಯು ಹೊರತಾಗಿರಲು ಸಾಧ್ಯವಿಲ್ಲ. ಆದರೆ, ಈ ತಾಂತ್ರಿಕತೆಗಳು ನ್ಯಾಯನಿರ್ಣಯ ಪ್ರಕ್ರಿಯೆಯನ್ನು ಯಾಂತ್ರಿಕವಾಗಿಸಲು ಆಸ್ಪದ ನೀಡಬಾರದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶ ಸೂರ್ಯಕಾಂತ್ ಹೇಳಿದರು.

ಕರ್ನಾಟಕ ರಾಜ್ಯ ನ್ಯಾಯಾಂಗ ಅಧಿಕಾರಿಗಳ ಸಂಘದಿಂದ ಶನಿವಾರ ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾದ ನ್ಯಾಯಾಂಗ ಅಧಿಕಾರಿಗಳ 22ನೇ ದ್ವೈವಾರ್ಷಿಕ ಸಮ್ಮೇಳನದಲ್ಲಿ ಮಾತನಾಡಿದ ಅವರು, ತಂತ್ರಜ್ಞಾನವು ಪರ್ಯಾಯವಾಗಿ ಅಲ್ಲ, ಸಹಾಯಕವಾಗಿ ಉಳಿಯಬೇಕು, ನ್ಯಾಯಾಂಗ ಪ್ರಕ್ರಿಯೆಯಲ್ಲಿ ಎಐ ಏಕೀಕರಣವು ಸಮತೋಲನ ತತ್ವದಿಂದ ಮಾರ್ಗದರ್ಶಿಸಲ್ಪಡಬೇಕು, ದಕ್ಷತೆ ಹೆಚ್ಚಿಸಲು ಅದರ ಪ್ರಯೋಜನ ಬಳಸಿಕೊಳ್ಳಬೇಕು ಎಂದು ಹೇಳಿದರು.

ನ್ಯಾಯ ನಿರ್ಣಯದಲ್ಲಿ ಸಹಾನುಭೂತಿ, ಅನುಭವಗಳ ಆಧಾರದಲ್ಲಿ ವಿಶ್ಲೇಷಣೆ, ಮೌಲ್ಯ ಪ್ರಜ್ಞೆ, ಸಾಂವಿಧಾನಿಕ ಆಶಯಗಳು ಪ್ರಧಾನ ಅಂಶಗಳಾಗಿದ್ದು, ಇವುಗಳ ಜಾಗವನ್ನು ಯಾವುದೇ ತಾಂತ್ರಿಕತೆಯು ತುಂಬಲಾರದು. ಹೀಗಾಗಿ, ನ್ಯಾಯಾಧೀಶರ ಗ್ರಹಿಕೆ, ವಿಶ್ಲೇಷಣೆ, ತರ್ಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳ ಅವಲೋಕನ ಇವುಗಳು ನ್ಯಾಯ ನಿರ್ಣಯದ ಬೆನ್ನೆಲುಬಾಗಿರಬೇಕು ಎಂದರು.

ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಅರವಿಂದ್ ಕುಮಾರ್ ಮಾತನಾಡಿ, ನ್ಯಾಯಾಂಗ ಕಟ್ಟಡ ಹಾಗೂ ನ್ಯಾಯಾಧೀಶರ ನಿವಾಸವನ್ನು ವಿವಿಧ ಜಿಲ್ಲೆಗಳಲ್ಲಿ ನಿರ್ಮಾಣ ಮಾಡುವುದು ಅತ್ಯವಶ್ಯಕವಾಗಿದ್ದು, ಈ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದಾಗ ಅಧಿಕಾರಿಗಳು ಮಂದಗತಿಯಲ್ಲಿ ಗಮನಹರಿಸಿದ್ದಾರೆ. ಪ್ರತಿವರ್ಷ ವ್ಯಾಜ್ಯ ದಾಖಲಾಗುತ್ತಿರುವುದು ಅಧಿಕವಾಗುತ್ತಿದೆ.



2023ರಲ್ಲಿ 17 ಲಕ್ಷವಾಗಿತ್ತು, 2025ರಲ್ಲಿ 22 ಲಕ್ಷವಾಗಿದೆ. ಹೊಸ ಕಾನೂನು ಮಂಡನೆಯಾಗುತ್ತಿದೆ, ಆ ಕಾನೂನಿನ ಅಡಿಯಲ್ಲಿ ನ್ಯಾಯ ವಿತರಣೆ ಮಾಡಬೇಕಾಗುತ್ತದೆ. ಆದರೆ ಮೂಲಸೌಕರ್ಯ ನ್ಯಾಯಾಧೀಶರ ನೇಮಕಾತಿ, ಸರ್ಕಾರಿ ವಕೀಲರ ನೇಮಕ ಬಗ್ಗೆ ನ್ಯಾಯಾಲವು ಪ್ರಸ್ತಾವನೆಯನ್ನು ಸಲ್ಲಿಸಿದಾಗ ಅಧಿಕಾರಿಗಳು ಅದರ ಬಗ್ಗೆ ಗಮನ ಹರಿಸದೇ, ಬೇಡಿಕೆ ಕಡಿತಗೊಳಿಸಿ ಅನುಮೋದಿಸಿರುವ ಉದಾಹರಣೆ ಸಾಕಷ್ಟಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕಳೆದ ಮೂರು ವರ್ಷದಲ್ಲಿ ಉಚ್ಚನ್ಯಾಯಾಲಯ ಹಾಗೂ ಜಿಲ್ಲಾ ನ್ಯಾಯಾಲಯದಿಂದ ನ್ಯಾಯಾಂಗ ಶುಲ್ಕ, ದಂಡ ಹಾಗೂ ಮುದ್ರಾಂಕ ಶುಲ್ಕವನ್ನು ಹೊರತುಪಡಿಸಿ ವಸೂಲಿ ಮಾಡಿದ ಮೊತ್ತ ರಾಜ್ಯ ಸರ್ಕಾರಕ್ಕೆ ನೀಡಲಾದ ಮೊತ್ತ 2023-24ರಲ್ಲಿ 376 ಕೋಟಿ ರೂ., 2024-2025 439 ಕೋಟಿ ರೂ. 2025-20256ರಲ್ಲಿ 470 ಕೋಟಿ ರೂ. ನೀಡಿಲಾಗಿದೆ. ಸಿಬ್ಬಂದಿ ವರ್ಗದ ಸಂಬಳ ಅಲ್ಲದೇ ಬೇರೆ ಖರ್ಚಿನ ವೆಚ್ಚವನ್ನು ಸರ್ಕಾರ ನೀಡಿರುವುದು ಕಳೆದ ಮುರು ವರ್ಷದಲ್ಲಿ ಕ್ರಮವಾಗಿ 1.3 ಕೋಟಿ ರೂ., 40 ಲಕ್ಷ, 137 ಲಕ್ಷ ಹಾಗೂ 141 ಲಕ್ಷ ರೂ.ನೀಡಿದೆ. ಹಾಗಾಗಿ ನ್ಯಾಯಾಂಗದಿಂದ ವಸೂಲಿ ಮಾಡಿದ ಮೊತ್ತದಲ್ಲಿ ಕನಿಷ್ಟ ಶೇ.75 ರಿಂದ 80ರಷ್ಟು ಮೊತ್ತವನ್ನು ನೀಡುವಂತೆ ಮನವಿ ಮಾಡಿದರು.

ನ್ಯಾಯಾಲಯವು ನೀಡಿದ ಪ್ರಸ್ತಾವನೆಯನ್ನು ಕಡಿತಗೊಳಿಸದೆ ತ್ವರಿತಗತಿಯಲ್ಲಿ ಅನುಮೋದನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು. ಹಾಗಾದರೆ ನ್ಯಾಯಾಧೀಶರು ಕರ್ನಾಟಕ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿಸುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದರು. ಸಂಘದ ಅಧ್ಯಕ್ಷೆ ಎಸ್.ನಾಗಶ್ರೀ, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಶೆಟ್ಟಿಗಾರ್ ಇದ್ದರು.

ನಕಲಿ ಪ್ರಕರಣಗಳ ಉಲ್ಲೇಖ

ನ್ಯಾಯಾಂಗ ವ್ಯವಸ್ಥೆಗೆ ಎಐ ಅಳವಡಿಸುವಾಗ ಹೆಚ್ಚಿನ ಜವಾಬ್ದಾರಿಯೂ ಅತ್ಯಗತ್ಯ. ಎಐನಿಂದಾಗಿ, ಸುಪ್ರೀಂ ಕೋರ್ಟ್‌ನಲ್ಲೂ ನಕಲಿ ಪ್ರಕರಣಗಳ ಉಲ್ಲೇಖಗಳು ಕಂಡುಬರುತ್ತಿವೆ. ಇದಕ್ಕೆ ಕಡಿವಾಣ ಹಾಕುವಲ್ಲಿ ವಕೀಲರ ಪಾತ್ರ ಮುಖ್ಯವಾಗುತ್ತದೆ. ಹಾಗೆಯೇ, ವೈಯಕ್ತಿಕ ಮಾಹಿತಿಗಳ ಗೋಪ್ಯತೆ ಮತ್ತು ದತ್ತಾಂಶಗಳ ರಕ್ಷಣೆಯೂ ಪ್ರಮುಖವಾಗುತ್ತದೆ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಡಾ. ಬಿ.ವಿ.ನಾಗರತ್ನ ತಿಳಿಸಿದರು.

ಕೈನಿಂದ ಮಹಿಳಾ ಶಕ್ತಿಗೆ ಅಪಮಾನ

ಬೆಂಗಳೂರು: ಮಹಿಳಾ ಮೀಸಲಾತಿ ವಿಧೇಯಕವನ್ನು ವಿರೋಧ ಮಾಡಿದ ಕಾಂಗ್ರೆಸ್ ಸಮಗ್ರ ಭಾರತದ ಮಹಿಳಾ ಶಕ್ತಿಗೆ ಅಪಮಾನ ಮಾಡಿದೆ. ಕಾಂಗ್ರೆಸ್ ನಿಯತ್ತು ಯಾವತ್ತೂ ಮಹಿಳೆಯರಿಗೆ ಮೀಸಲಾತಿ ಕೊಡಲು ಇರಲಿಲ್ಲ. ಕಾಂಗ್ರೆಸ್‌ಗೆ ಮಹಿಳೆಯರ ಶಾಪ ತಟ್ಟೇ ತಟ್ಟುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.



ಈ ಕುರಿತು ಎಕ್ಸ್ ಮಾಡಿರುವ ಅವರು, ಒಂದು ಪ್ರಗತಿಪರವಾದ ಚಿಂತನೆ ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರು ಪಾಲ್ಗೊಳ್ಳಬೇಕು ಎನ್ನುವ ಅಭಿವೃದ್ಧಿ ಪರ ಚಿಂತನೆಗೆ ವಿರೋಧವಾಗಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ನಡೆದುಕೊಂಡಿವೆ. ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗದಿರುವುದನ್ನು ಇಡೀ ದೇಶ ಗಮನಿಸುತ್ತಿದೆ ಎಂದಿದ್ದಾರೆ.

ಕಾಂಗ್ರೆಸ್ ಈಗ ಸುಳ್ಳು ಸಮರ್ಥನೆ ಮಾಡಲು ಹೊರಟಿದೆ. ಯಾಕೆಂದರೆ 2023ರಲ್ಲಿ ಶೇ 50% ರಷ್ಟು ಕ್ಷೇತ್ರಗಳ ಹೆಚ್ಚಳ ಮಾಡಬೇಕು. ಮುಂದಿನ ಜನಸಂಖ್ಯೆ ಆಧಾರದ ಮೇಲೆ ಮಾಡಬೇಕು ಅಂತ ಆಗಿತ್ತು. 2034 ಕ್ಕೆ ಜಾರಿ ಮಾಡಬೇಕೆಂದು ತೀರ್ಮಾನ ಆಗಿತ್ತು. ಅದನ್ನು 2029ಕ್ಕೆ ಮಾಡಬೇಕು ಎನ್ನುವ ಕಾರಣದಿಂದ ಶೇ 50% ರಷ್ಟು ಸ್ಥಾನಗಳನ್ನು ಹೆಚ್ಚಿಗೆ ಮಾಡಬೇಕು. ಮಹಿಳೆಯರಿಗೆ ಶೇ 33% ರಷ್ಟು ಸ್ಥಾನ ಮೀಸಲಿಡಬೇಕು ಎಂದು ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಶೇ 50% ರಷ್ಟು ಸ್ಥಾನಗಳನ್ನು ಹೆಚ್ಚಳ ಮಾಡಬೇಕೆನ್ನುವ ಉದ್ದೇಶದಿಂದ ತಂದರೆ ಇವರು ಅದರಲ್ಲಿ ರಾಜಕಾರಣ ಮಾಡಲು ಹೊರಟಿದ್ದಾರೆ. ಈ ರಾಜಕೀಯ ಡೊಂಬರಾಟಕ್ಕೆ ಕಾಂಗ್ರೆಸ್ ಪಕ್ಷ ಮುಂದಿನ ದಿನಗಳಲ್ಲಿ ದೊಡ್ಡ ಬೆಲೆ ತೆರಬೇಕಾಗುತ್ತದೆ. ಈ ಕಟು ಸತ್ಯ ನಮಗೆಲ್ಲರಿಗೂ ಗೊತ್ತಾಗುತ್ತಿದೆ ಎಂದು ತಿಳಿಸಿದ್ದಾರೆ.

ಮಹಿಳಾ ಮೀಸಲಾತಿಗೆ ಕೈನಿಂದ ವಿರೋಧವಿಲ್ಲ

ಬೆಂಗಳೂರು: ಮಹಿಳಾ ಮೀಸಲಾತಿಗೆ ಕಾಂಗ್ರೆಸ್‌ನಿಂದ ವಿರೋಧವಿಲ್ಲ. 2023ರಲ್ಲಿಯೇ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಅಂಗೀಕಾರವಾಗಿದೆ. ಸಾಂವಿಧಾನಿಕ ತಿದ್ದುಪಡಿ ತಂದಿದ್ದರಿಂದ ಅದು ವಿಫಲವಾಯಿತು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಶಾಂಗ್ರಿಲಾ ಹೋಟೆಲ್‌ನಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ರಾಜಕೀಯಕ್ಕಾಗಿ ಕ್ಷೇತ್ರ ಮರು ವಿಂಗಡನೆ ಮತ್ತು ಮಹಿಳಾ ಮೀಸಲಾತಿಯನ್ನು ಒಟ್ಟಿಗೆ ತಂದಿದ್ದರಿಂದ ಮಹಿಳಾ ಮೀಸಲಾತಿ ಮಸೂದೆ ವಿಫಲವಾಗಿದೆ ಎಂದರು. ಕ್ಷೇತ್ರ ಮರುವಿಂಗಡನೆ ಮಾಡದೆಯೇ ಮಹಿಳಾ ಮೀಸಲಾತಿ ಒಂದೇ ಮಂಡನೆಯಾಗಿದ್ದರೆ ಅಂಗೀಕಾರವಾಗುತ್ತಿತು ಎಂದರು.

ಕಾಂಗ್ರೆಸ್ಸಿಗೆ ಮುಖಭಂಗ ಕಾದಿದೆ: ಛಲವಾದಿ

ಬೆಂಗಳೂರು: ಕಾಂಗ್ರೆಸ್ಸಿನ ಮಹಿಳಾ ವಿರೋಧಿ ಕ್ರಮದಿಂದ ಮುಂದಿನ ದಿನಗಳಲ್ಲಿ ಆ ಪಕ್ಷಕ್ಕೆ ಮುಖಭಂಗ ಆಗಲಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶನಿವಾರ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಂಡಿ ಒಕ್ಕೂಟದ ಬ್ರದರ್ಸ್‌ಗಳಿಗೆ ಸಿಸ್ಟರ್ಸ್‌ಗಳ ಬಗ್ಗೆ ಗೌರವ ಇಲ್ಲ. ಕುತಂತ್ರದಿಂದ ಮಹಿಳಾ ಮೀಸಲಾತಿ ಮಸೂದೆಗೆ ಸೋಲಾಗಿದೆ. ದಲಿತರು, ಹಿಂದುಳಿದವರನ್ನು, ಮುಸ್ಲಿಂ ಹೆಣ್ಣು ಮಕ್ಕಳನ್ನು ಕಾಂಗ್ರೆಸ್ ಶೋಷಣೆ ಮಾಡುತ್ತಾ ಬಂದಿದೆ. ಕಾಂಗ್ರೆಸ್ ಪಕ್ಷ ಇರುವುದು ದೇಶವನ್ನು ಪೋಷಣೆ ಮಾಡಲಿಕ್ಕಲ್ಲ. ಶೋಷಣೆ ಮಾಡಲಿಕ್ಕೆ ಎಂಬುದು ಸ್ಪಷ್ಟವಾಗಿ ಗೊತ್ತಾಗಿದೆ ಎಂದರು.

ಮಹಿಳಾ ಮೀಸಲಾತಿಯ ವಿಧೇಯಕದ ಸೋಲು ಕಾಂಗ್ರೆಸ್ಸಿನ ಗೆಲುವು ಎಂದು ಸಂಭ್ರಮಿಸುತ್ತಿದ್ದಾರೆ. ಬಿಜೆಪಿ, ಎನ್‌ಡಿಎಗೆ ಮುಖಭಂಗ ಎನ್ನುತ್ತಿದ್ದಾರೆ. ಇದು ಬಿಜೆಪಿಯ ಮುಖಭಂಗವೂ ಅಲ್ಲ; ಬಿಜೆಪಿಯ ಸೋಲೂ ಅಲ್ಲ. ಕಾಂಗ್ರೆಸ್ ವ್ಯವಸ್ಥಿತವಾಗಿ ಮಾಡಿಕೊಂಡು ಬಂದ ಮಹಿಳಾ ಮುಖಭಂಗವನ್ನು ಇವತ್ತೂ ಮಾಡಿದ್ದೀರಿ ಎಂದು ಟೀಕಿಸಿದರು.



ಮಹಿಳಾ ವಿರೋಧಿ ಕಾಂಗ್ರೆಸ್ ವಿರುದ್ಧ ಹೋರಾಟ

ಬೆಂಗಳೂರು: ಮಹಿಳಾ ವಿರೋಧಿ ಕಾಂಗ್ರೆಸ್ ವಿರುದ್ಧ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾದಿಂದ ಹೋರಾಟ ಸಂಘಟಿಸಲಿದೆ ಎಂದು ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ಅವರು ತಿಳಿಸಿದ್ದಾರೆ. ಶನಿವಾರ ಮಾಧ್ಯಮಗಳ ಜೊತೆ ಅವರು ಮಾತನಾಡಿದರು. ರಾಜಕೀಯ ಮೀಸಲಾತಿ ಲಭಿಸುವ ಹಿನ್ನೆಲೆಯಲ್ಲಿ ನಾವು ಸಂಭ್ರಮಾಚರಣೆಗೆ ಸಿದ್ಧತೆ ಮಾಡಿಕೊಂಡಿದ್ದೆವು, ಅದು ಈಗ ಆಕ್ರೋಶವಾಗಿ ಪರಿವರ್ತನೆಗೊಂಡಿದೆ ಎಂದರು. ಶನಿವಾರ ಮೈಸೂರು, ಗದಗ, ನೆಲಮಂಗಲ, ಕೋಲಾರ ಮೊದಲಾದ ಕಡೆ ಪ್ರತಿಭಟನೆ ಆರಂಭವಾಗಲಿದೆ. ಈ ಪ್ರತಿಭಟನೆ ನಿರಂತರವಾಗಿ ಇರಲಿದೆ. ಈ ಆಕ್ರೋಶವು ಕಾಂಗ್ರೆಸ್ಸನ್ನು ಅಧಿಕಾರದಿಂದ ಕೆಳಗಿಳಿಸುವವರೆಗೂ ಮುಂದುವರೆಯಲಿದೆ ಎಂದು ತಿಳಿಸಿದರು. ನಾಳೆ ಬೆಂಗಳೂರು ಮಹಾನಗರದ 3 ಜಿಲ್ಲೆಗಳಿಂದ ಹೋರಾಟ ಹಮ್ಮಿಕೊಂಡಿದ್ದೇವೆ. ಮಹಿಳಾ ಮೀಸಲಾತಿ ವಿಚಾರದಲ್ಲಿ ಕಾಂಗ್ರೆಸ್ಸಿನಲ್ಲೇ ವೈರುಧ್ಯವಿದೆ ಎಂದು ಟೀಕಿಸಿದರು. ಕಾಂಗ್ರೆಸ್, ಟಿಎಂಸಿ ಮೊದಲಾದ ಪಕ್ಷಗಳ ಮಹಿಳಾ ವಿರೋಧಿ ನೀತಿಯನ್ನು ಬಯಲಿಗೆ ಎಳೆಯಲಿದ್ದೇವೆ ಎಂದು ಹೇಳಿದರು.

ನ್ಯಾಯಕ್ಕಾಗಿ ನಡೆದ ಹೋರಾಟದ ಪಯಣ: ನ್ಯಾ.ಅರವಿಂದ್ ಕುಮಾರ್

ಲೋಕಾಯುಕ್ತದಿಂದ ಜನರಿಗೆ ನ್ಯಾಯ

ಬೆಂಗಳೂರು: ಲೋಕಾಯುಕ್ತ ಸಂಸ್ಥೆಯು ತನ್ನ ಅಸ್ತಿತ್ವದ ನಾಲ್ಕು ದಶಕಗಳನ್ನು ಪೂರೈಸಿದೆ. ಇದು ನ್ಯಾಯಕ್ಕಾಗಿ ನಡೆದ ಸತತ ಹೋರಾಟದ ಪಯಣವಾಗಿದೆ ಎಂದು ಸುಪ್ರೀಂಕೋರ್ಟ್‌ನ ನ್ಯಾಯಮೂರ್ತಿ ಅರವಿಂದ ಕುಮಾರ್ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಲೋಕಾಯುಕ್ತ ಸಂಸ್ಥೆಗೆ ನಲವತ್ತರ ಸಂಭ್ರಮ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿ, ಲೋಕಾಯುಕ್ತವು ಕಾರ್ಯಾಂಗದಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ವಿನ್ಯಾಸಗೊಳಿಸಲಾಗಿದೆ, ಸಾರ್ವಜನಿಕ ಹಿತಾಸಕ್ತಿಯನ್ನು ಕಾಯುವ ಸಂಸ್ಥೆಯಾಗಿದೆ ಎಂದರು. ಲೋಕಾಯುಕ್ತ ಸಂಸ್ಥೆಯು ಸರ್ಕಾರ ಮತ್ತು ಸಾರ್ವಜನಿಕರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ, ಸಾಮಾನ್ಯ ನಾಗರಿಕರು ತಮ್ಮ ಸ್ಥಾನಮಾನವನ್ನು ಲೆಕ್ಕಿಸದೆ ದೂರು ಸಲ್ಲಿಸಲು ಅವಕಾಶ ನೀಡಿದೆ. ಯಾವುದೇ ದೂರು ಇಲ್ಲದಿದ್ದರೂ ತಾನೇ ಸ್ವತಃ ಸ್ವಯಂ ಪ್ರೇರಿತ ತನಿಖೆಯನ್ನು ಪ್ರಾರಂಭಿಸುವ ಅಧಿಕಾರ ಹೊಂದಿದೆ ಎಂದು ಹೇಳಿದರು.

ಹೆಗಡೆ ಸ್ಮರಣೆ: ಲೋಕಾಯುಕ್ತ ರಚನೆಯ ಶ್ರೇಯಸ್ಸು ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಅವರಿಗೆ ಸಲ್ಲುತ್ತದೆ. ಅವರು ಸಾರ್ವಜನಿಕ ಕುಂದುಕೊರತೆ ಮತ್ತು ಭ್ರಷ್ಟಾಚಾರವನ್ನು ಹೋಗಲಾಡಿಸಲು ರೂಪಿಸಿದರು. ನ್ಯಾ.ಸಂತೋಷ್ ಹೆಗಡೆ ಅವಧಿಯುಲ್ಲಿ ಲೋಕಾ ಸಂಸ್ಥೆ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದ, ಸಾರ್ವಜನಿಕ ವಿಶ್ವಾಸಗಳಿಸಿದೆ ಎಂದರು.

ಸ್ಥಿರತೆ, ಬದ್ಧತೆಗೆ ಸಾಕ್ಷಿ: ಪ್ರಾಸ್ತವಿಕವಾಗಿ ಮಾತನಾಡಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು, ಕರ್ನಾಟಕ ಲೋಕಾಯುಕ್ತ ಸಂಸ್ಥೆಯು 1984 ರಲ್ಲಿ ಸ್ಥಾಪನೆಯಾದಾಗಿನಿಂದಲೂ ಭ್ರಷ್ಟಚಾರದ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸುತ್ತಾ ಬಂದಿದೆ ಎಂದರು.

40,648 ಪ್ರಕರಣ ಬಾಕಿ

ಲೋಕಾಯುಕ್ತ ಸ್ಥಾಪನೆಯಾದ 1986 ರಿಂದ ಈವರೆಗೆ ಈ ಸಂಸ್ಥೆಯಲ್ಲಿ ದಾಖಲಾದ ಒಟ್ಟು 1,75,126 ಪ್ರಕರಣಗಳಲ್ಲಿ 1,51,233 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ಪ್ರಸ್ತುತ ಲೋಕಾಯುಕ್ತದಲ್ಲಿ ಒಟ್ಟು 40,648 ಪ್ರಕರಣಗಳು ಬಾಕಿ ಇವೆ. ಪ್ರಸ್ತುತ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ಸೇರಿ ಇತ್ತೀಚಿನ ಅವಧಿಯಲ್ಲಿ 24,085 ಪ್ರಕರಣಗಳನ್ನು ವಿಲೇವಾರಿ ಮಾಡುವ ಮೂಲಕ ಹೆಚ್ಚಿನ ವೇಗ ನೀಡಲಾಗುತ್ತಿದೆ ಎಂದು ಉಪ ಲೋಕಾಯುಕ್ತ ಬಿ.ಎಸ್. ಪಾಟೀಲ್ ವಿವರಿಸಿದರು.



74 ಕ್ಯೂಸೆಕ್ ಒಳ ಹರಿವು ಇದ್ದರೆ, 4,033 ಕ್ಯೂಸೆಕ್ ನೀರನ್ನು ಜಲಾಶಯದಿಂದ ಹೊರಗೆ

ಕೆಆರ್‌ಎಸ್ ನೀರಿನ ಮಟ್ಟ 99 ಅಡಿಗೆ ಕುಸಿತ

ಕೆ. ಶ್ರೀನಿವಾಸ್ ಬೆಳ್ಳೂರು

ದಿಗಂತ ವಿಶೇಷ

ಮಂಡ್ಯ: ಬೇಸಿಗೆಯ ತೀವ್ರ ಬಿಸಿಲಿನ ಪರಿಣಾಮ ಜೀವನಾಡಿ ಕೃಷ್ಣರಾಜಸಾಗರ ಜಲಾಶಯದ ನೀರಿನ ಮಟ್ಟದ 99 ಅಡಿಗೆ ಕುಸಿದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ.

ಈ ವರ್ಷ ಅವಧಿಗೂ ಮುನ್ನವೇ ಕೆ.ಆರ್.ಎಸ್. ಅಣೆಕಟ್ಟೆ ಭರ್ತಿಯಾಗುವ ಮೂಲಕ ದಾಖಲೆ ಬರೆದಿತ್ತು. 124.80 ಅಡಿ ಗರಿಷ್ಠ ಮಟ್ಟವಿದ್ದರೂ, ಪ್ರಸ್ತುತ ಅಣೆಕಟ್ಟೆಯಲ್ಲಿ ನೀರಿನ ಮಟ್ಟ 99.98 ಅಡಿಗೆ ಕುಸಿದಿದೆ. ಕೇವಲ 74 ಕ್ಯೂಸೆಕ್ ಒಳ ಹರಿವು ಇದ್ದರೆ, 4,033 ಕ್ಯೂಸೆಕ್ ನೀರನ್ನು ಜಲಾಶಯದಿಂದ ಹೊರಗೆ ಬಿಡಲಾಗುತ್ತಿದೆ. ಅಣೆಕಟ್ಟೆಯಲ್ಲಿ ನೀರಿನ ಮಟ್ಟ ಕಡಿಮೆಯಾಗಿದ್ದರೂ ಸಹ ಬೆಳೆದು ನಿಂತ ಬೆಳೆಗಳಿಗೆ ಕಟ್ಟು ನೀರು ಪದ್ಧತಿಯಂತೆ ನೀರು ಬಿಡಲಾಗುತ್ತಿದೆ.

ಜಲಾಶಯದಲ್ಲಿ ನೀರಿನ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಬೆಳೆದು ನಿಂತ ಬೆಳೆಗೆ ನೀರಿನ ಅವಶ್ಯಕತೆಯೂ ಹೆಚ್ಚಬಹುದು. ಕಟ್ಟು ನೀರು ಪದ್ಧತಿ ಅನುಸಾರ ಏಪ್ರಿಲ್ ಅಂತ್ಯದವರೆಗೆ ನಾಲೆಗಳಲ್ಲಿ ನೀರು ಹರಿಸುವ ಬಗ್ಗೆ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಆದರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಅವಶ್ಯಕತೆ ಬೆಳೆಗಳಿಗೆ ಇರುವ ಕಾರಣ ಮತ್ತೊಂದು ಕಟ್ಟು ನೀರು ಹರಿಸಲು ನಿರ್ಧರಿಸಲಾಗಿದೆ.



ಆದರೂ ಬಿಸಿಲಿನ ತಾಪಕ್ಕೆ ನೀರು ಆವಿಯಾಗುವ ಕಾರಣ ಮತ್ತು ಬಿಸಿಯಾದ ವಾತಾವರಣದ ಹಿನ್ನೆಲೆಯಲ್ಲಿ ಜಮೀನಿನಲ್ಲಿ ಬೇಗನೇ ನೀರು ಇಂಗಿ ಒಣಗಿ ಹೋಗುತ್ತದೆ. ಇದರಿಂದಾಗಿ ಬೆಳೆಯ ಇಳುವರಿ ಪ್ರಮಾಣವೂ ಕುಸಿತವಾಗುವ ಆತಂಕ ಎದುರಾಗಿದ್ದು, ಮತ್ತೊಂದು ಕಟ್ಟು ನೀರಿನ ಅವಶ್ಯಕತೆ ಬೆಳೆಗಳಿಗೆ ಅಗತ್ಯವಾಗಿದೆ ಎಂಬ ಒತ್ತಾಯವೂ ರೈತರದ್ದಾಗಿದೆ. ಜತೆಗೆ ಇತರೆ ಬೆಳೆಗಳ ರಕ್ಷಣೆಯನ್ನೂ ಮಾಡಬೇಕಿರುವುದರಿಂದ ನಾಲೆಗಳಲ್ಲಿ ನಿರಂತರವಾಗಿ ನೀರು ಹರಿಸುವಂತೆ ಆಗ್ರಹಿಸಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಕಾವೇರಿ ನದಿ ನೀರನ್ನು ಕುಡಿಯಲು ಅವಲಂಬಿಸಿರುವ ಮಂಡ್ಯ, ಮೈಸೂರು, ರಾಮನಗರ, ಬೆಂಗಳೂರು ಜಿಲ್ಲೆಯ ಜನರಿಗೆ ಮುಂಗಾರುವರೆಗೂ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಡ್ಯಾಂನಲ್ಲಿ 60 ಅಡಿ ಬರುವವರೆಗೂ ನೀರು ಬಳಸಲು ಸಾಧ್ಯವಿದೆ. ಅಂದರೆ ಇನ್ನೂ 15 ಟಿ.ಎಂ.ಸಿ ನೀರು ಬಳಸಲು ಲಭ್ಯವಿದೆ. 2003ರಲ್ಲಿ ಕೆ.ಆರ್.ಸಾಗರ ಅಣೆಕಟ್ಟೆಯಲ್ಲಿ ಏಪ್ರಿಲ್ ತಿಂಗಳಲ್ಲಿ ನೀರಿನ ಮಟ್ಟ 65.90 ಅಡಿ ತಲುಪಿದ್ದು ಈವರೆಗಿನ ಕನಿಷ್ಠ ಮಟ್ಟದ ದಾಖಲೆಯಾಗಿತ್ತು. ಎಲ್ ನಿನೋ ಪ್ರಭಾವದಿಂದಾಗಿ ಈ ಬಾರಿ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗುವುದಿಲ್ಲ ಎನ್ನುವ ಹವಾಮಾನ ತಜ್ಞರ ವರದಿ ಆತಂಕಕ್ಕೆ ಕಾರಣವಾಗಿದೆ. ಮುಂಗಾರಿನ ಅವಧಿಯಲ್ಲಿ ರಾಜ್ಯದ ಬಹುತೇಕ ಕಡೆ ಮಳೆ ಕ್ಷೀಣಿಸುವ ಸಾಧ್ಯತೆ ಇದೆ.

ಮುಂಗಾರು ಕ್ಷೀಣಿಸುವ ಸೂಚನೆ

ಈ ಬಾರಿ ಕೆಆರ್‌ಎಸ್ ಅಣೆಕಟ್ಟೆ ಜೂನ್ ತಿಂಗಳಲ್ಲೇ ಭರ್ತಿಯಾಗುವ ಮೂಲಕ ಹೊಸ ದಾಖಲೆ ಬರೆದು ರೈತರ ಮುಖದಲ್ಲಿ ಮಂದಹಾಸ ಮೂಡಿತ್ತು. ಆದರೆ ಈ ಬಾರಿ ಮುಂಗಾರು ಕ್ಷೀಣಿಸುವ ಸೂಚನೆಯಿಂದ ಭಯದ ವಾತಾವರಣವೂ ನಿರ್ಮಾಣವಾಗಿದೆ. ಭವಿಷ್ಯದಲ್ಲಿ ಕುಡಿಯುವ ನೀರಿನ ತೊಂದರೆಯ ಆತಂಕವನ್ನು ಹೆಚ್ಚಿಸಿದೆ.



10 ವರ್ಷದಲ್ಲಿ ನೀರಿನ ಸಂಗ್ರಹ
(ಏ.18ಕ್ಕೆ)

ವರ್ಷ	ನೀರಿನ ಮಟ್ಟ (ಅಡಿಗಳಲ್ಲಿ)
2017	74.32
2018	73.94
2019	92.37
2020	103.39
2021	97.72
2022	103.26
2023	93.46
2024	83.22
2025	101.35
2026	99

ಕುಕ್ಕರ್ ಬಾಂಬ್: ಏ.25ಕ್ಕೆ ತೀರ್ಪು

ಬೆಂಗಳೂರು: ಕಳೆದ ನಾಲ್ಕು ವರ್ಷಗಳ ಹಿಂದೆ ಮಂಗಳೂರು ಬಳಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ನ್ಯಾಯಾಲಯ ಬಂಧನದಲ್ಲಿರುವ ಶಂಕಿತ ಉಗ್ರ ಮೊಹಮ್ಮದ್ ಶಾರೀಕ್ ತಪ್ಪೊಪ್ಪಿಕೊಂಡಿದ್ದು, ಈ ಸಂಬಂಧ ಎನ್‌ಐಎ (ರಾಷ್ಟ್ರೀಯ ತನಿಖಾ ಸಂಸ್ಥೆ) ವಿಶೇಷ ನ್ಯಾಯಾಲಯ ಅಂತಿಮ ತೀರ್ಪನ್ನು ಏ.25 ಕ್ಕೆ ಕಾಯ್ದಿರಿಸಿದೆ.

ಬಾಂಬ್ ಸ್ಫೋಟ ಎಸಗಿರುವುದಾಗಿ ಶಿವಮೊಗ್ಗದ ತೀರ್ಥಹಳ್ಳಿ ಮೂಲದ ಶಾರೀಕ್, ಕಳೆದ ಡಿಸೆಂಬರ್ ತಿಂಗಳಿನಲ್ಲಿ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದು, ಮೂರು ತಿಂಗಳ ಬಳಿಕ ನ್ಯಾಯಾಲಯ ಆರೋಪಿಯ ಅರ್ಜಿ ಪುರಸ್ಕರಿಸಿತ್ತು. ಬಳಿಕ ವಾದ-ಪ್ರತಿವಾದ ನಡೆದು, ನಂತರ ತಾಂತ್ರಿಕ ಕಾರಣಗಳಿಂದಾಗಿ ಅಂತಿಮ ತೀರ್ಪನ್ನು ಏ.25ಕ್ಕೆ ಮುಂದೂಡಿದೆ.

ಪ್ರಕರಣ ಸಂಬಂಧ 2024ರಲ್ಲಿ ಶಾರೀಕ್, ಸೈಯದ್ ಯಾಸೀನ್ ವಿರುದ್ಧ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ವೇಳೆ ಶಾರೀಕ್ ತಾನು ನಿರಪರಾಧಿ ಎಂದು ಹೇಳಿಕೆ ನೀಡಿ, ತನ್ನ ಮೇಲಿನ ಆರೋಪವನ್ನು ತಳ್ಳಿಹಾಕಿದ್ದ. ಈ ಮಧ್ಯೆ 2025ರ ಡಿಸೆಂಬರ್‌ನಲ್ಲಿ ನ್ಯಾಯಾಲಯಕ್ಕೆ ತಪ್ಪೊಪ್ಪಿಗೆ ಅರ್ಜಿ ಸಲ್ಲಿಸಿದ್ದ. ನನ್ನ ವಿರುದ್ಧ ಎನ್‌ಐಎ ತನಿಖಾಧಿಕಾರಿಗಳು ದೋಷಾರೋಪ ಪಟ್ಟಿಯಲ್ಲಿ ನಮೂದಿಸಿರುವ ಆರೋಪಗಳು ಸತ್ಯವಾಗಿದ್ದು, 2022ರ ನ.19ರಂದು ಸಂಜೆ 4.40 ರ ಸುಮಾರಿಗೆ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಆಟೋ ರಿಕ್ಷಾದೊಳಗೆ ಕುಕ್ಕರ್ ಬಾಂಬ್ (ಐಇಡಿ) ಇಟ್ಟು ಸ್ಫೋಟಿಸಲು ಯತ್ನಿಸಿರುವೆ.

ನನಗೆ ಈಗ ಪಶ್ಚಾತಾಪವಾಗಿದೆ. ಕಾನೂನು ಪ್ರಕಾರ ನನ್ನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದ. ಮೂರು ತಿಂಗಳ ವಿಚಾರಣೆ ನಂತರ ನ್ಯಾಯಾಲಯವು ಶಂಕಿತನ ಅರ್ಜಿಯನ್ನು ಮಾನ್ಯ ಮಾಡಿತ್ತು. ಇದೀಗ ನ್ಯಾಯಾಲಯ ಅಂತಿಮ ತೀರ್ಪನ್ನು ಕಾಯ್ದಿರಿಸಿದ್ದು, ಈ ತೀರ್ಪಿನಲ್ಲಿ ಆರೋಪಿಗೆ ವಿಧಿಸುವ ಶಿಕ್ಷೆಯ ಬಗ್ಗೆ ನಿರ್ಧಾರ ಮಾಡಲಿದೆ. ಹಾಗೂ ಉಗ್ರ ಚಟುವಟಿಕೆಗಳ ವಿರುದ್ಧ ಕಠಿಣ ಸಂದೇಶ ನೀಡುವ ಸಾಧ್ಯತೆ ಇದೆ.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಕುಲರೂಪವಾದ ಕಮಲಕ್ಕೆ ಸೂರ್ಯನಂತೆ ಅರಳಿಸುವ ಸಾಧನ ಯಾವುದು?

▶ಉತ್ತರ: ವಿದ್ಯಾ, ದಯಾ ಮೊದಲಾದ ದೈವೀಗುಣಗಳಿದ್ದರೂ ನಮ್ರನಾಗಿರುವುದು.

ಒಬ್ಬ ವ್ಯಕ್ತಿ ಒಂದು ಉತ್ತಮಕುಲದಲ್ಲಿ ಹುಟ್ಟಿದ್ದಾನೆ; ಆತನ ಕುಲವು ಅತ್ಯಂತ ಶ್ರೇಷ್ಠವಾದದ್ದು; ಅಷ್ಟೇ ಅಲ್ಲ, ಅವನಿಗೆ ವಿದ್ಯೆ, ದಯೆ ಮೊದಲಾದ ಅನೇಕ ಉತ್ತಮ ಗುಣಗಳಿವೆ. ಅಷ್ಟೇ ಅಲ್ಲ ಇನ್ನೂ ಅನೇಕ ದೈವದತ್ತ ಶ್ರೇಷ್ಠ ಗುಣಗಳೂ ಕೂಡ ಇವೆ. ಕುಲ ಎಂಬುದು ಒಂದು ಕಮಲವಿದ್ದಂತೆ. ಕಮಲವು ಅರಳಬೇಕಾದರೆ ಸೂರ್ಯನ ಕಿರಣ ಅತ್ಯಂತ ಅವಶ್ಯಕ. ಇಲ್ಲಿ ನಾವು ತಿಳಿಯಬೇಕಾದ ವಿಷಯ ಬಹಳ ಇದೆ. ಏಕೆಂದರೆ ಕುಲ, ಕಮಲ ಮತ್ತು ಸೂರ್ಯನ ಕಿರಣ ಇವೆಲ್ಲವೂ ಇವೆ. ಆದರೆ ಇವಕ್ಕೊಂದು ಕಿರೀಟಪ್ರಾಯವಾದ ಒಂದು ಬೆಳಗಿಸುವ ಸಾಧನ ಇದ್ದಾಗ ಮಾತ್ರ ಇವೆಲ್ಲಕ್ಕೂ ಸಾರ್ಥಕತೆ ಬರುತ್ತದೆ ಎಂದು. ದಯೆ, ವಿದ್ಯೆ, ಸಂಸ್ಕಾರ ಇವೆಲ್ಲವೂ ಅತ್ಯಂತ ಶ್ರೇಷ್ಠವಾದ ಗುಣಗಳೇ. ಇವು ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇರಬೇಕಾದವುಗಳೇ. ಆದರೆ ಈ ನಮ್ರತೆ ಅಥವಾ ವಿನಯ ಎಂಬ ಗುಣ ಇಲ್ಲದಿದ್ದರೆ ಈ ಹಿಂದೆ ಹೇಳಿದ ಯಾವ ಗುಣಗಳು ಇದ್ದರೂ ಪ್ರಯೋಜನವಿಲ್ಲ. ಹಾಗಾಗಿ ಇದಕ್ಕೆ ಅಷ್ಟೊಂದು ಬೆಲೆಯನ್ನು ಕೊಡಲಾಗಿದೆ. ಹಾಗಾದರೆ ಇದಕ್ಕೆ ಅಷ್ಟು ಬೆಲೆ ಬರಲು ಕಾರಣ ಏನು? ವಿನಯ ಎಂದರೇನು?

ವಿದ್ಯೆ, ಸಂಸ್ಕಾರ, ದಯಾ ಮೊದಲಾದ ಗುಣಗಳಿಂದ ವ್ಯಕ್ತಿ ಮೇಲಕ್ಕೆ ಏರುತ್ತಾನೆ. ಎಷ್ಟೇ ಮೇಲಕ್ಕೆ ಏರಿದರೂ, ವ್ಯಕ್ತಿತ್ವ ಎಷ್ಟೇ ಬೆಳೆದಿದ್ದರೂ, ವ್ಯಕ್ತಿಶಃ ಚಿಕ್ಕವನು ಎಂಬ ಒಂದು ಅರಿವಿದ್ದಾಗ ಮಾತ್ರ ಈ ಎಲ್ಲಕ್ಕೂ ಬೆಲೆ ಬರುತ್ತದೆ. ಹೀಗೆ ಒಬ್ಬ ಕವಿ ಹೇಳುತ್ತಾನೆ–''ಏರಿದವನು ಚಿಕ್ಕವನಿರಬೇಕಲೇ ಎಂಬ ಮಾತನು ಸಾರುವನು'' ಎಂದು. ಎಷ್ಟೇ ಮೇಲೆ ಏರಿದರೂ ಅದು ಶಾಶ್ವತವಲ್ಲ, ಒಂದಲ್ಲ ಒಂದು ಕಾಲದಲ್ಲಿ ಮತ್ತೆ ಕೆಳಗಿಳಿಯಬೇಕಾಗುತ್ತದೆ ಎಂಬ ಯಾವ ಅರಿವಿದೆಯೋ ಅದನ್ನೇ ವಿನಯ ಎಂಬುದಾಗಿ ಕರೆಯಬೇಕು. ವಿನಯ ಎಂದರೆ ಬಾಗುವುದು. ದೊಡ್ಡದಕ್ಕೆ ಗೌರವವನ್ನು ಕೊಡುವುದು. ಅದು ನಮಗೆ ಅರಿವಿಗೆ ಬಾರದಿರುವಾಗ ದಂಭಭಾವ, ಅಹಂಕಾರ ಮೊದಲಾದ ದುಷ್ಟಗುಣಗಳು ಆವಿರ್ಭಾವಗೊಳ್ಳುತ್ತವೆ. ಇವುಗಳು ನಮ್ಮ ಅಧಃಪತನಕ್ಕೆ ಕಾರಣವಾಗುತ್ತವೆ. ಕೆಲವರು ವಿದ್ಯಾವಂತರಾಗಿರುತ್ತಾರೆ, ಆದರೆ ಅವರಲ್ಲಿ ವಿನಯವೆಂಬುದು ಇರುವುದಿಲ್ಲ. ಇನ್ನು ಕೆಲವರು ಅನೇಕ ದೈವದತ್ತ ಗುಣಗಳಿಂದ ಕೂಡಿರುತ್ತಾರೆ. ಆದರೆ ಅದು ಅವರಿಗೆ ತಲೆಗೆ ಹತ್ತಿ ಕೊನೆಗೆ ಈ ಪ್ರಪಂಚವೇ ಕಾಣದಿರುವಷ್ಟು ಅಂಧತೆ ಆವರಿಸುತ್ತದೆ. ಹಾಗಾಗಿ ಈ ವಿನಯ ಎಂಬ ಗುಣವು ಈ ಮೌಢ್ಯವನ್ನು ಅಹಂಕಾರದ ಅಂಧತ್ವವನ್ನು ತೊಲಗಿಸುವ ಒಂದು ದೀಪದಂತೆ ಎಂಬುದಾಗಿ ಇಲ್ಲಿ ವಿವರಿಸಲಾಗಿದೆ. ಕಮಲವು ಶ್ರೇಷ್ಠವಾದದ್ದು, ಹಾಗೇ ಇದ್ದರೆ ಅದು ಅರಳದು. ಅದಕ್ಕೆ ಸೂರ್ಯಕಿರಣ ಬೇಕಷ್ಟೇ. ಒಳ್ಳೆಯ ಹಸು, ಆದರೆ ಹಾಲೇ ಕೊಡದಿದ್ದರೆ ಹೇಗೇ! ಎಂಬಂತೆ ವಿದ್ಯೆ ಮೊದಲಾದ ಗುಣಗಳು ಅತ್ಯಂತ ಶ್ರೇಷ್ಠವಾದವುಗಳೇ ಆದರೂ ಅವುಗಳು ಪ್ರಕಾಶಕ್ಕೆ ಬರಬೇಕಾದರೆ ದೀಪದಂತಿರುವ ವಿನಯ ಎಂಬುದು ಅತ್ಯಂತ ಮುಖ್ಯ ಎಂಬುದು ಈ ಪ್ರಶ್ನೋತ್ತರದ ಸಾರವಾಗಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಜಟ್ಟಿಗಳಿಬ್ಬರ ದೀರ್ಘಕಾಲಿಕ ಕಾಳಗ

ಭೀಮಸೇನನಿಗೂ ಜರಾಸಂಧನಿಗೂ ತೀವ್ರವಾದ ಯುದ್ಧವು ಆರಂಭವಾಯಿತಷ್ಟೆ? ಅವರಿಬ್ಬರ ಜಟ್ಟಿಕಾಳಗ ಅಲ್ಪಕಾಲದಲ್ಲಿ ಮುಗಿಯುವಂತಹುದಲ್ಲ. ಅವರ ಮಲ್ಲಯುದ್ಧವನ್ನು ಸಾಕಷ್ಟು ದೀರ್ಘವಾಗಿಯೇ ವ್ಯಾಸರು ಚಿತ್ರಿಸಿರುವರು.

ಬಾಹುಪಾಶ–ಚರಣಪಾಶಗಳೆಂಬ ಪಟ್ಟುಗಳನ್ನು ಹಾಕಿ ಒಬ್ಬರ ಪಾದದಿಂದ ಮತ್ತೊಬ್ಬರ ಶಿರಸ್ಸಿಗೆ ಹೊಡೆತವಿತ್ತರು. ಉರೋಹಸ್ತ–ಪೂರ್ಣಕುಂಭಗಳೆಂಬ ವರಸೆಗಳಿಂದಾಗಿ ಎದೆಗಳಿಗೆ ಗುದ್ದಿದರು. ಒಬ್ಬರ ಕೈಯನ್ನು ಮತ್ತೊಬ್ಬರು ಹಿಸುಕಿದರು. ಘೀಳಿಡುವ ಗಜಗಳಂತೆ ಅವರು ತೋರಿದರು. ಬಹುಪ್ರಹಾರಗಳನ್ನು ಪರಸ್ಪರ ಮಾಡುತ್ತಾ ಗುಡುಗುವ ಮೋಡಗಳಂತೆ ಕಂಡರವರು. ಅಂಗೈಯಿಂದ ಒಬ್ಬರಿಗೊಬ್ಬರು ಚಚ್ಚಿದರು. ಸಿಂಹಗಳ ಹಾಗೆ ಒಬ್ಬರನ್ನೊಬ್ಬರು ದಿಟ್ಟಿಸಿ ನೋಡುತ್ತಾ ಒಬ್ಬರನ್ನೊಬ್ಬರು ಎಳೆದಾಡಿ ಎಳೆದಾಡಿ ಕಾದಿದರು. ಒಬ್ಬರ ಅಂಗವನ್ನು ಮತ್ತೊಬ್ಬರು ಮರ್ದಿಸಿದರು. ತೋಳುಗಳಿಂದ ಒಬ್ಬರಿಗೊಬ್ಬರು ಬಾಹುಬಂಧವನ್ನು ಮಾಡಿದರು. ಒಬ್ಬರ ಹೊಟ್ಟೆಯನ್ನು ಮತ್ತೊಬ್ಬರು ತೋಳಿನಿಂದ ಬಳಸಿ ಅತ್ತಿಂದಿತ್ತ ತಳ್ಳಿಹಾಕಿದರು. ಒಬ್ಬರ ಸೊಂಟಕ್ಕೆ ಮತ್ತೊಬ್ಬರು ಕೈಹಾಕಿ ದೂರಕ್ಕೆ ಬಿಸಾಡುತ್ತಿದ್ದರು. ಬಗೆ ಬಗೆಯ ಜಟ್ಟಿಪಟ್ಟುಗಳನ್ನು ಕಟ್ಟಿದರು. ಅವರಿಬ್ಬರು ಹೀಗೆ ಯುದ್ಧ ಮಾಡುತ್ತಿರಲಾಗಿ, ಪುರವಾಸಿಗಳೆಲ್ಲ ಅಲ್ಲಿ ನೆರೆದರು. ಬ್ರಾಹ್ಮಣರು, ವೈಶ್ಯರು, ಕ್ಷತ್ರಿಯರು, ಶೂದ್ರರು, ಸ್ತ್ರೀಯರು, ವೃದ್ಧರು–ಇವರುಗಳೆಲ್ಲ ಸಾವಿರಗಟ್ಟಲೆ ಸಂಖ್ಯೆಯಲ್ಲಿ ಸುತ್ತುಗಟ್ಟಿದರು. ಅವರಿಬ್ಬರ ಪಾರಸ್ಪರಿಕವಾದ ಆಘಾತಗಳು ಪರ್ವತ–ವಜ್ರಾಯುಧಗಳ ಡಿಕ್ಕಿಗಳಂತೆ ಕಂಡವು. ಹೋರಾಟದಲ್ಲಿ ಇಬ್ಬರಿಗೂ ಖುಷಿಯಿತ್ತು. ಇಬ್ಬರೂ ಬಲಶಾಲಿಗಳಾಗಿದ್ದು, ಒಬ್ಬರಲ್ಲಿಯ ದೋಷವನ್ನು ಬಳಸಿಕೊಳ್ಳಲು ಮತೊಬ್ಬರು ಎಳಸುತ್ತಿದ್ದರು. ಪರಸ್ಪರ ಜಯಾಪೇಕ್ಷೆ ಇಬ್ಬರಿಗೂ ಇದ್ದಿತು.

ಒಬ್ಬರನ್ನೊಬ್ಬರು ಹೊಡೆದಾಡುತ್ತಿರಲಾಗಿ ಅದು ವೃತ್ರ–ವಾಸವರ ಯುದ್ಧದಂತೆ ಕಂಡುಬಂದಿತು. ಅವರ ಪರಸ್ಪರ ಘರ್ಜನ–ತರ್ಜನಗಳು ಅಸಾಧಾರಣವಾಗಿದ್ದವು. ಬಂಡೆಗಳ ಘಟ್ಟನ–ಕಬ್ಬಿಣದ ಪರಿಘಗಳಿಂದ ಪರಸ್ಪರ ಘರ್ಷಣ ಮುಂತಾದುವು ಅಲ್ಲಿ ಘಟಿಸಿದುವು. ಎಷ್ಟು ಕಾಲ ನಡೆಯಿತು, ಅವರ ಈ ಯುದ್ಧ? ಕಾರ್ತಿಕಮಾಸದ ಮೊದಲ ದಿನದಂದು ಆರಂಭವಾದ ಈ ಯುದ್ಧಕ್ಕೆ ಬಿಡುವೆಂಬುದೇ ಇರಲಿಲ್ಲ. ಹಗಲಿರುಳೂ ಯುದ್ಧ. ಆಹಾರವಿಲ್ಲದೇ ಯುದ್ಧ. ವಿಶ್ರಾಂತಿಯಿಲ್ಲದೇ ಯುದ್ಧ. ಹೀಗೆ ಮುಂದುವರೆಯಿತು, ಅವರಿಬ್ಬರ ಸಂಗರ. ಪ್ರಥಮೆಯಂದು ಆರಂಭವಾದದ್ದು ತ್ರಯೋದಶಿಯವರೆಗೂ ಎಡೆಬಿಡದೆ ನಡೆಯಿತು. ಚತುರ್ದಶಿಯ ರಾತ್ರಿಯ ಹೊತ್ತಿಗೆ ಜರಾಸಂಧನು ದಣಿದುಹೋದನು. ಜರಾಸಂಧನು ಹಾಗೆ ದಣಿದಿರಲಾಗಿ, ಅದನ್ನು ಗಮನಿಸಿದ ಕೃಷ್ಣನು ಭೀಮನಿಗೆ ಅರ್ಥವಾಗುವ ಪರಿಯಲ್ಲಿ ಹೀಗೆ ನುಡಿದನು: ಶತ್ರುವು ಬಳಲಿಹೋಗಿದ್ದಲ್ಲಿ ಆತನಿಗೆ ಅಧಿಕವಾದ ಪೀಡೆಯುಂಟುಮಾಡುವುದು ತರವಲ್ಲ. ಪೂರ್ಣವಾಗಿ ಪೀಡಿಸಿದಲ್ಲಿ ಆತನ ಪ್ರಾಣವೇ ಹಾರಿಹೋದೀತು. ಆದ್ದರಿಂದ ರಾಜನಿಗೆ ಅತಿಯಾದ ಪೀಡೆಯುಂಟುಮಾಡದೆ ಆತನೊಂದಿಗೆ ಬಾಹುಯುದ್ಧವನ್ನು ಮುಂದುವರೆಸು ಎಂದನು. ಶತ್ರುವೀರನನ್ನು ನಾಶಪಡಿಸಿಯೇ ತೀರುವ ಆ ಭೀಮನು, ಜರಾಸಂಧನು ಇದ್ದ ಆ ಅವಸ್ಥೆಯನ್ನು ಕಂಡು ಆತನನ್ನು ಕೊಲ್ಲುವ ನಿಶ್ಚಯವನ್ನು ಮಾಡಿದನು. ಅಪರಾಜಿತನೆನಿಸಿದ್ದ ಆ ಜರಾಸಂಧನನ್ನು ಜಯಿಸಲೋಸುಗ ಆಗ ಭೀಮನು ಉತ್ಕಟವಾದ ಕ್ರೋಧವನ್ನು ತಾಳಿದನು. ಜರಾಸಂಧನನ್ನು ವಧಿಸಬೇಕೆಂಬ ಸಂಕಲ್ಪವು ಉಂಟಾದ ಭೀಮಸೇನನು, ಕೃಷ್ಣನನ್ನು ಕುರಿತು ಹೇಳಿದನು: ಈ ಪಾಪಿ ಜರಾಸಂಧನು ಇಷ್ಟೇಟು ತಿಂದೂ ಇನ್ನೂ ಯುದ್ಧವಸ್ತ್ರವನ್ನು ಧರಿಸಿಯೇ ಯುದ್ಧಮಾಡುತ್ತಿರುವನು! ಇನ್ನು ಅವನನ್ನು ಪ್ರಾಣದೊಂದಿಗೆ ಉಳಿಸುವುದು ತರವಲ್ಲ.

ನೆನ್ನೆ ಎಂಬ ನೆಚ್ಚಿನ ಸಂಗಾತಿ

'ನಾಳೆ'ಯೆಂಬ ಭವನಕ್ಕೆ 'ನೆನ್ನೆ'ಯೇ ಬುನಾದಿ. 'ನೆನ್ನೆ' ಎನ್ನುವುದು ಕಾಲನು 'ಇಂದು' ಎಂದಿದ್ದ ದಿನಕ್ಕೆ ಹೊದೆಸುವ ಅವಧಿ ಕಂಬಳಿ.

ವಕ್ರದೃಷ್ಟಿ

• ಎನ್. ರಾಮನಾಥ್
anakuramanath@gmail.com



ನೆನ್ನೆ...
ಕನಸುಗಳ ನಾಳೆಗಿಂತ,
ವಾಸ್ತವದ ಇಂದಿಗಿಂತ ಆಪ್ತವಾದ ದಿನ.

'ನೆನ್ನೆ ಏನಾಯ್ತೂಂದ್ರೇ...' ಎಂದು ಆರಂಭಿಸಿದರೆ ಸಾಕು... ಕೌತುಕದ ಭಾವ ಗರಿಗೆದರುತ್ತದೆ. ಇಂದು ನೆನ್ನೆಯಾಗುವ ಪರಿಯೇ ಒಂದು ವಿಸ್ಮಯ. ನೆನ್ನೆ ಎನ್ನುವುದು ಒಬ್ಬೊಬ್ಬರಿಗೆ ಒಂದೊಂದು ಸಮಯದಲ್ಲಿ ಸಂಭವಿಸುತ್ತದೆ. ರೈಲ್ವೇ ಸಮಯವನ್ನು ಅನುಸರಿಸುವವರಿಗೆ ಗಡಿಯಾರದ ಮುಳ್ಳು ಶೂನ್ಯಮದಃ ಶೂನ್ಯಮಿದಂ ಎನ್ನುವುದನ್ನು ಸಕಲ ಸೊನ್ನೆಗಳ ಮೂಲಕ ಸೂಚಿಸಿದ ಕ್ಷಣದಲ್ಲಿ ಸೊನ್ನೆಗಿಂತ ಹಿಂದಿನದೆಲ್ಲ ನೆನ್ನೆ, ಮುಂದಿನದೆಲ್ಲ ಇಂದು. ಸಾಮಾನ್ಯನಿಗೆ ನೆನ್ನೆ ಎನ್ನುವುದು ಆರಂಭವಾಗಲು ಇಂದಿನ ಕಾಲುಭಾಗವಾದರೂ ವ್ಯಯವಾಗಿರುತ್ತದೆ. ಆರಕ್ಕೆ ಏಳುವ ಮನುಜನಿಗೆ ಇಂದು ಎಂದು ದೊರಕುವುದು ಕೇವಲ ಹದಿನಾರು ಗಂಟೆಗಳು. ರಾತ್ರಿ ಪಾಳಿಯವರಿಗೂ ನೆನ್ನೆ ಎನ್ನುವುದು ಆ ಪಾಳಿ ಮುಗಿಯುವವರೆಗೂ ಇರುತ್ತದೆ. 'ಆರನೆಯ ತಾರೀಕಿನ ರಾತ್ರಿ ಡ್ಯೂಟಿ' ಎನ್ನುವುದು ಏಳನೆಯ ತಾರೀಕಿನ ಬೆಳಗಿನವರೆಗೆ ಹರಡುವುದರಿಂದ 'ಡ್ಯೂಟಿ'ಯ ಲೆಕ್ಕದಲ್ಲಿ ಏಳರ ಆರು ಆರರ ಲೆಕ್ಕಕ್ಕೇ ಬಂದಿತಲ್ಲ!

ನೆನ್ನೆ ಎನ್ನುವುದು ನಾಳೆ, ಇಂದುಗಳಂತೆಯೇ ಒಂದು ನಿರಂತರ ಕ್ರಿಯೆ. 'ಇಂದು' ನಾಳೆಗೆ ನೆನ್ನೆ. ನಾಳೆಯು ನಾಳಿದ್ದಿಗೆ ನೆನ್ನೆ. ಆದರೆ ಇಂದಿನ ನೆನ್ನೆ ನಾಳೆಗಾಗಲಿ, ಇನ್ನೆಂದಿಗೂ ಆಗಲಿ ನೆನ್ನೆಯಾಗಿ ಬರುವುದಿಲ್ಲ. ನೆನ್ನೆ ಅದು 'ಇಂದು' ಆಗಿತ್ತು. ನಾಳೆ ಅದು ಮೊನ್ನೆ ಆಗಿಬಿಡುತ್ತದೆ. ಹೀಗಾಗಿ ನೆನ್ನೆ ಎನ್ನುವುದು ಅಲ್ಪಾಯುಷಿಯಾದರೂ 'ಇಂದು'ಗೆ ಹೋಲಿಸಿದರೆ ದೀರ್ಘಾಯುಷಿ. 'ನೆನ್ನೆ' ಬೆಳಗಿನ ಜಾವವೇ ಆರಂಭವಾಗಿ 'ನೆನ್ನೆ ರಾತ್ರಿ ಕನಸಿನಲ್ಲಿ' ಎಂದಾಗ ಇಂದಿನ ಬೆಳಗಿನ ಸಮಯವೂ ಸೇರಬಹುದಾದ್ದರಿಂದ ಅವಧಿಯ ಲೆಕ್ಕದಲ್ಲಿ ನೆನ್ನೆ ಇಂದಿಗಿಂತಲೂ ದೀರ್ಘವಾದುದು.

ನೆನ್ನೆ ಎನ್ನುವ ಪದದಲ್ಲೇ ನೆನೆ ಎನ್ನುವ ಪದವೂ ಅಡಗಿದೆ. ಈ ನೆನೆ ಎನ್ನುವ ಪದವೇ ವಿಶಿಷ್ಟವಾದುದು. 'ಬಹಳ ನೆನೆಯುತ್ತಿದ್ದೇನೆ; ನನಗೆ ಬೇಕಾದ್ದು ; ಕೊಡೆ' ಎಂದು ಬರೆದಿದ್ದರು ಕವಿ ಜರಗನಹಳ್ಳಿ ಶಿವಶಂಕರ್. ಇಲ್ಲಿನ ನೆನೆ ನೆನ್ನೆಯ ನೆನೆಯಲ್ಲಿ ಇರುವುದೂ ಹೌದು, ಇಲ್ಲದಿರುವುದೂ ಹೌದು. ಪ್ರೇಯಸಿಯ ಜೊತೆ ಕಳೆದ ಕಾಲ ನೆನ್ನೆಯದು. ಪ್ರಿಯಕರ ಅದರ ಸ್ಮರಣೆಯಲ್ಲಿ ಕಾಲ ಕಳೆಯುತ್ತಾ 'ನೆನೆಯುತ್ತಿದ್ದೇನೆ' ಎನ್ನುವ ಅರ್ಥವೊದಗಿ 'ಕೊಡೆ' ಎನ್ನುವುದಕ್ಕೆ 'ನೀಡೆ' ಎನ್ನುವ ಅರ್ಥ ಸುತಃಸ್ಫುರಿಸಿದರೆ 'ನೆನೆ' ಎನ್ನುವುದು ಕ್ಲಿನ್ನವಾಗು ಎನ್ನುವುದನ್ನು ಸೂಚಿಸಿದಾಗ ಕೊಡೆ ಎನ್ನುವುದಕ್ಕೆ ಛತ್ರಿ, ಆತಪತ್ರವೆಂಬ ಅರ್ಥಗಳು ಮೂಡುತ್ತವೆ. ಛತ್ರಿ, ಆತಪತ್ರಗಳೂ ನೆನ್ನೆಯವೇ. ಆತಪತ್ರವಂತೂ ಅದೆಷ್ಟೋ ನೆನ್ನೆಗಳಷ್ಟು ಹಳೆಯದು.

'ನೆನ್ನೆ'ಯಲ್ಲಿರುವ 'ನೆನೆ'ಯನ್ನು ಹೆಕ್ಕಿ, ಅದಕ್ಕೊಂದು 'ಕ್ತಿ'ಯನ್ನು ಸೇರಿಸಿ 'ನೆನೆಕ್ತಿ'ಯಾಗಿಸಿದರೆ ಅದು ನೆನ್ನೆಯ ಗುಣಗಳನ್ನು ಕರಾರುವಾಕ್ಕಾಗಿ ಬಿಂಬಿಸುತ್ತದೆ. 'ನೆನೆಕ್ತಿ' ಎಂದರೆ 'ಪೋಷಿಸು', ಶುದ್ಧಗೊಳಿಸು', 'ತೊಳೆ' ಎಂಬ ಅರ್ಥಗಳಿವೆ. ಮೊದಲಿಗೆ ಪೋಷಕ ಎಂಬ ಅರ್ಥವನ್ನು ತೆಗೆದುಕೊಳ್ಳೋಣ. ನೆನ್ನೆಯನ್ನು ನೆನೆಸಿಕೊಳ್ಳಿ – ಅದು ಇಂದಿನ ಕೆಲಸಗಳಿಗೆ ಪೋಷಕ. ನೆನ್ನೆಯ ಪಾಠವೇ ಇಂದಿನ ಪಾಠದ ಹಿನ್ನೆಲೆ. ನೆನ್ನೆಯ ದೋಸೆಯ ಹಿಟ್ಟೇ ಇಂದಿನ ತಿಂಡಿಗೆ ಅವಶ್ಯವಾದ ಸೂಪರ್ ಹಿಟ್ಟು. ನೆನ್ನೆಯ ತರಬೇತಿಯೇ ಇಂದಿನ ಕವಾಯತಿಗೆ ಆಧಾರ. ನೆನ್ನೆ ಪ್ರಿಯಕರ ಕಿವಿಯಲ್ಲುಸುರಿದ ಪಿಸುಮಾತುಗಳೇ ಇಂದು ಕೆನ್ನೆಗೆ ಶೋಣಿತವರ್ಣವೇರಲು ಪೋಷಕ, ಪ್ರೇರಕ. ನೆನ್ನೆ ಇಂದೆಂಬ ಕಾಲನಿರ್ಮಿತ ಸ್ವಿಮ್ಮಿಂಗ್ ಪೂಲ್‌ಗೆ ಜಿಗಿಯಲು ಬೇಕಾದ ಸ್ಪ್ರಿಂಗ್ ಬೋರ್ಡು!

ನೆನೆಕ್ತಿ ಎಂದರೆ ಶುದ್ಧಗೊಳಿಸು ಎನ್ನುವ ಅರ್ಥವನ್ನು ಅವಲೋಕಿಸೋಣ. ಅಬ್ರಹಾಂ ಲಿಂಕನ್ನನ ಹಲವಾರು 'ನೆನ್ನೆಗಳ' ಸೋಲೇ ಮುಂದಿನ ಗೆಲುವಿಗೆ ಕಾರಣವಾಯಿತು. ಸೋಲೆಂಬ ಹಿನ್ನಡೆಯನ್ನು ಪರಿಶ್ರಮ, ಸಾಧನೆಗಳೆಂಬ ಸೋಪು, ನೀರುಗಳಿಂದ ಶುದ್ಧಗೊಳಿಸಿದರ ಪರಿಣಾಮವಾಗಿ ಅವನು ಸಕಲ ನಾಳೆಗಳಿಗೂ ಪ್ರಸ್ತುತವೆನಿಸುವ ವ್ಯಕ್ತಿತ್ವವನ್ನು ಪಡೆದನು. ನೆನ್ನೆಯೆಂಬುದನ್ನು ದುಃಖದ ಮಡುವಾಗಿಸಿಕೊಂಡು, ಮಡುವಿನಲ್ಲಿ ಆತ್ಮಗ್ಲಾನಿಯೆಂಬ ಪಾಚಿಯನ್ನು ಕಟ್ಟಿಕೊಂಡಿದ್ದಿದ್ದರೆ ಅವನು ಅಲ್ಲಿಯೇ ಮುಳುಗಿರುತ್ತಿದ್ದ. ಎಡಿಸನ್ ಸಹ ನೆನ್ನೆಯನ್ನೊಂದು 'ಫೇಲ್ಡ್ ಎಡಿಷನ್' ಎಂದಷ್ಟೇ ಪರಿಗಣಿಸಿ ಮುಂದುವರಿದುದರಿಂದ ನೆನ್ನೆಯ ಕತ್ತಲೆ ಕಳೆದು ಇಂದಿನ ಬೆಳಕು ಮೂಡಿದುದು. ಕೊಂಚ ಇರಿ... 'ನೆನ್ನೆಯ ಕತ್ತಲೆ' ಎಂದೆನಲ್ಲವೆ? ಇದೊಂದು ಸಾಮಾನ್ಯವಾಗಿ ಬಳಸಲ್ಪಡುವ ಪದಪುಂಜ. ಆದರೆ 'ನೆನ್ನೆ' ಎನ್ನುವುದು ನಿಜಕ್ಕೂ ಇಂದು–ನಾಳೆಗಳ ಬೆಳಕಿಗೆ ಬೇಕಾದ ಮೋಂಬತ್ತಿಯೇ ವಿನಹ ಕತ್ತಲಲ್ಲವೆನ್ನುವುದು ಅಪ್ಪಟ ಸತ್ಯ.



ನೆನೆಕ್ತಿ ಎನ್ನುವುದನ್ನು 'ತೊಳೆ' ಎಂಬ ಅರ್ಥದಲ್ಲಿ ಪರಿಗಣಿಸಿದರೆ 'ನೆನ್ನೆಯನ್ನು ತೊಳೆದಾಗಲೇ 'ಇಂದು' ಹೊಳೆಯುವುದು' ಎಂಬುದು ವ್ಯಕ್ತವಾಗುತ್ತದೆ. ತೊಳೆಯುವುದರಲ್ಲೂ ಎರಡು ಹಂತಗಳು; ನೆನ್ನೆ ನಡೆದ ವಿಷಯಗಳ ಮೇಲೆ ಚಿಂತನೆ ನಡೆಸಿ ಅವನ್ನು ಮನದಲ್ಲಿ ಬೆಳಗಿಸಿಕೊಳ್ಳುವುದೊಂದು ತೊಳೆವ ಹಂತ; 'ನೆನ್ನೆಯೆಂಬ ಅವಧಿ ತೊಳೆದುಹೋಯಿತು' ಎನ್ನುತ್ತಾ ಕಾಲನ ಕಾಲಘಟ್ಟ ಕೊಚ್ಚುವಿಕೆಯನ್ನು ಸ್ವೀಕರಿಸುವುದು ಇನ್ನೊಂದು ಹಂತ. ನೆನೆಕ್ತಿಯ ನೆನೆ ಈ ಮೂರೂ ವಿಧಗಳಲ್ಲಿ ನೆನ್ನೆಯಲ್ಲಿ ಅಡಗಿರುವ ನೆನೆಗೆ ಪೂರಕ, ಪ್ರೇರಕ. ನೆನ್ನೆಯ ನೆನೆಗೆ 'ಕ್ತಿ' ಎಂಬ ಬಾಲ ಸೇರಿಸಿದರೆ ನೆನ್ನೆಯ ಗುಣಗಳ ಅನಾವರಣ!

ನೆನ್ನೆ ಎನ್ನುವುದು 'ಇಂದು'ವಿನ ರೀತಿಯಲ್ಲಿಯೇ ಒಂಟಿ. 'ನೆನ್ನೆಗಳು' ಅಥವಾ 'ಇಂದುಗಳು' ಎಂಬ ಉಲ್ಲೇಖವಿಲ್ಲ. ಅಂತೆಯೇ 'ನಾಳಿದ್ದುಗಳು' ಎನ್ನುವುದೂ ಇಲ್ಲ. 'ನಾಳೆ' ಮಾತ್ರ ಬಹುವಾಗಲೂ ಸಾಧ್ಯವೆನ್ನಲು 'ನಾಳೆಗಳು' ಪದ ಬಳಕೆಯಲ್ಲಿದೆ. 'ನಾಳೆಗಳು' ಎಂಬ ಪದವು ಸೂಚಿಸುವ ಅವಧಿಯಲ್ಲಿ ನಾವು ಮಾಡಬಹುದಾದ ಕ್ರಿಯೆಗಳನ್ನು 'ನಾಳೆಗಳಲ್ಲಿ' ಎನ್ನದೆ ಮುಂದಿನ ದಿನಗಳಲ್ಲಿ ಎನ್ನುವ ಮೂಲಕ ಭವಿಷ್ಯತ್ತನ್ನು ಸೂಚಿಸುವಂತೆಯೇ, 'ನೆನ್ನೆಗಳಲ್ಲಿ' ಎನ್ನುವ ಬಳಕೆಯೂ ಇಲ್ಲದೆ ಹಿಂದಿನ ದಿನಗಳಲ್ಲಿ ಎನ್ನುವ ಮೂಲಕ ಭೂತವನ್ನು ಸೂಚಿಸುತ್ತೇವೆ. ಸಕಲ ನಾಳೆಗಳ ಮೊತ್ತವೇ ಭವಿಷ್ಯತ್. ಸಕಲ ನೆನ್ನೆಗಳ ಮೊತ್ತವೇ ಭೂತಕಾಲ. ತಮಾಷೆಯೆಂದರೆ ಭೂತಕಾಲ ನಮ್ಮನ್ನು ಎಚ್ಚರಿಸುವ ಕಾಲ; ಭವಿಷ್ಯತ್ ನಮ್ಮನ್ನು ಭೂತದಂತೆ ಹೆದರಿಸಬಲ್ಲ ಅನಿಶ್ಚಿತ ಕಾಲ.

'ನೆನ್ನೆ ನೆನ್ನೆಗೆ; ನಾಳೆ ನಾಳೆಗೆ; ಇಂದು ನಮ್ಮದೇ; ಚಿಂತೆ ಏತಕೆ' ಎಂಬ ಹಾಡನ್ನೋ, 'ಭೋಡೋ ಕಲ್ ಕೀ ಬಾತೇ; ಕಲ್ ಕೀ ಬಾತ್ ಪುರಾನೀ' ಎಂಬ ಸಾಲುಗಳನ್ನೋ ಕೇಳಿದಾಗ 'ಛೆ! ನೆನ್ನೆಗೆ ಇಷ್ಟು ಕಡಿಮೆ ಪ್ರಾಶಸ್ತ್ಯ ನೀಡಬಾರದಿತ್ತು' ಎನ್ನಿಸಿದೆ. ನೆನ್ನೆಯದನ್ನು ಮರೆಯುವುದು ಅಷ್ಟು ಸುಲಭವೆ?

'ತಿಂಮ, ನೆನ್ನೆ ಕೊಟ್ಟ ಹೋಂವರ್ಕ್ ಮಾಡಿದ್ದೀಯೇನೋ?'

'ಇಲ್ಲ ಸಾರ್! ಅದು ನೆನ್ನೆಗೇ ಮುಗಿದುಹೋದ ಕಥೆಯಲ್ಲವೇ ಸಾರ್' ಎಂದು ನುಡಿದರೆ ಮೇಷ್ಟು ಸುಮ್ಮನಿದ್ದಾರೇನು? ಕಚೇರಿಯಲ್ಲಿ ಬಾಸ್ 'ನೆನ್ನೆ ಕೊಟ್ಟಿದ್ದ ಫೈಲ್ ಮುಗಿಸಿದಿರೇನ್ರೀ?' ಎಂದರೆ 'ಭೋಡೋ ಕಲ್ ಕೀ ಬಾತೇ' ಎಂದರೆ ಅವರೂ 'ಭೋಡೋ ಕಲ್ ಕೀ ಬಾತೇ' ಎನ್ನುತ್ತಾ 'ನಾಳೆಯಿಂದ ನಿನ್ನ ಇರುವಿಕೆಯೇ ಬೇಡ' ಎನ್ನುವುದನ್ನು ಸೂಚಿಸಿಯಾರು. ನೆನ್ನೆ, ನಾಳೆಗಳೆರಡನ್ನೂ ಸೂಚಿಸುವ ಹಿಂದಿಯ 'ಕಲ್' ಯಾರಿಗೆ ಯಾವಾಗ ಕಲ್ಲಾಗಿ ಪರಿಣಮಿಸಿ ಭವಿಷ್ಯದ ಗಾಜನ್ನು ಫಳ್ಳೆನಿಸುವುದೋ ಹೇಳಲಾಗದು.

ನಾಳೆಯ ಅನಿಶ್ಚಿತತೆಗಳು ಏನೇ ಇರಲಿ, ನಮ್ಮನ್ನು ಕಾಡುವುದಂತೂ ನೆನ್ನೆಗಳೇ. 'ಅಶೋಕನು ಯಾವ ಇಸವಿಯಲ್ಲಿ ಹುಟ್ಟಿದನು?' ಎಂದು ಕೇಳಿ ಎಂದೋ ಆಗಿಹೋದ ಘಟನೆಗಳನ್ನು ಇಂದಿನ ಸ್ಮೃತಿಫಲಕಕ್ಕೆ ಲಗತ್ತಿಸಿಕೊಳ್ಳಿರೆಂದು ಬೇಡಿಕೆ ಮುಂದಿರಿಸಿ ವಿದ್ಯಾರ್ಥಿಗಳನ್ನು ಗೋಳು ಹೊಯ್ದುಕೊಳ್ಳುವ ಪರಿ ನಾಳೆಗೂ ಮುಂದುವರಿಯುವುದೇ. 'ನೆನ್ನೆ ಬೀಗ ಹಾಕಿ ಕೀ ಎಲ್ಲೋ ಇಟ್ಟೆ; ನೀವೇನಾದರೂ ನೋಡಿದಿರೆ?' ಎಂದುಬಿಟ್ಟರೆ ಶೋಧನ, ಪರಿಶೋಧನ ಕ್ರಿಯೆಗಳು ನಾಳೆಗೂ ಮುಂದುವರಿದಾವು. ನೆನ್ನೆಯ ಮರೆವಿನಿಂದ ಇಂದಿನ ಮೂಲೆಮುಂಗಡಿಗಳು ಜೇಡರಬಲೆರಹಿತವಾಗುವುದು ನೆನ್ನೆಯ ಕೊಡುಗೆಯೆಂಬುದೇ ಈ ಶೋಧದಲ್ಲಿ ಕಂಡುಬರುವ ಪ್ಲಸ್ ಪಾಯಿಂಟ್. 'ನೆನ್ನೆ ಯಾವುದೋ ಮದುವೆಗೆ ಹೋಗಬೇಕಾಗಿತ್ತಲ್ಲ...' ಎನ್ನುವುದಕ್ಕೆ ಕೆಲವೊಮ್ಮೆ ಉತ್ತರ ಸಿಗುವುದು ತಿಂಗಳುಗಳಾದ ಮೇಲೆ, ಮದುವೆಯಾದವನು ಎದುರಾಗಿ ನಮ್ಮ ಜನ್ಮ ಜಾಲಾಡಿದಾಗ. ನೆನ್ನೆ ಕಟ್ಟಬೇಕಾಗಿದ್ದ ಸಾಲದ ಮೀಟರ್ ಬಡ್ಡಿಯನ್ನು ಕಟ್ಟದಿದ್ದರಂತೂ ಇಂದು 'ಪ್ರಭಾತೇ ರೌಡಿದರ್ಶನಂ' ಎನ್ನುವುದು ಕಟ್ಟಿಟ್ಟ ಬುತ್ತಿ. 'ನೆನ್ನೆ' ಎನ್ನುವುದು ಕಾಲನು 'ಇಂದು' ಎಂದಿದ್ದ ದಿನಕ್ಕೆ ಹೊದೆಸುವ ಅವಧಿ ಕಂಬಳಿ.

'ನಾಳೆ'ಯೆಂಬ ಭವನಕ್ಕೆ 'ನೆನ್ನೆ'ಯೇ ಬುನಾದಿ. ಕನಸುಗಳ ಮೂಟೆಯಾಗಿ, ಅನುಭವಗಳ ಊಟೆಯಾಗಿ, ನೆನಪುಗಳ ಮೆರವಣಿಗೆಯನ್ನೇ ಹೊರಡಿಸುವ 'ನೆನ್ನೆ' ನಮಗೆ ಇನ್ನೊಂದು ನಾಳೆ ಇಲ್ಲ ಎನ್ನುವವರೆಗಿನ ದಿನದ ವರೆಗೆ ಅತ್ಯವಶ್ಯವಾದ ಮಾರ್ಗಸೂಚಕ, ಉಲ್ಲಾಸದಾಯಕ, ಪ್ರಬೋಧಕ, ಸಮಸಂಚಾರಿ ಸಂಗಾತಿ.

ಬಟ್ಟೆಯಿಂದ ಬ್ಯಾಲೆಟ್ ಬಾಕ್ಸ್‌ವರೆಗೆ: ಕೇರಳ 'ಟ್ವೆಂಟಿ–20' ಕ್ರಾಂತಿ!

▶ ಎಸ್. ಎನ್. ಭಟ್, ಸೈಪಂಗಲ್ಲು



ಉದ್ಯಮಿ ಜಾಕೋಬ್ ಅವರ 'ಟ್ವೆಂಟಿ–20 ಪಕ್ಷವು' ಕೇರಳ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಸಂಕೇತಗಳು ತೋರುತ್ತಿವೆ.

ಕೇರಳದ ಎರ್ನಾಕುಲಂ ಜಿಲ್ಲೆಯ ಮಡಿಲಲ್ಲಿರುವ ಕಿಳಕ್ಕಂಬಲಂ ಇಂದು ಕೇವಲ ಒಂದು ಹಳ್ಳಿಯಲ್ಲ; ಅದು ಭಾರತೀಯ ಪ್ರಜಾಪ್ರಭುತ್ವದ ದಿಕ್ಕನ್ನೇ ಬದಲಿಸಬಲ್ಲ ಮಹಾನ್ ರಾಜಕೀಯ ಪ್ರಯೋಗಶಾಲೆ. ಬೆಟ್ಟಗುಡ್ಡಗಳ ಹಸಿರು, ಫಲವತ್ತಾದ ಕೆಂಪು ಮಣ್ಣು ಮತ್ತು ಸಮೃದ್ಧ ಅಂತರ್ಜಲದ ಈ ಕೃಷಿ ಪ್ರಧಾನ ಭೂಮಿ ಇಂದು ಕಾರ್ಪೊರೇಟ್ ಶಿಸ್ತಿನ ಆಡಳಿತಕ್ಕೆ ಸಾಕ್ಷಿಯಾಗಿದೆ.

ಸಾಂಪ್ರದಾಯಿಕ ರಾಜಕೀಯದ ಜಡತ್ವವನ್ನು ಕೊಡವಿ ಹಾಕಿದ ಈ ಗ್ರಾಮವು, ಉದ್ಯಮದ ದಕ್ಷತೆ ಮತ್ತು ಸಾರ್ವಜನಿಕ ಸೇವೆಯ ಸಮನ್ವಯದಿಂದ ಜಾಗತಿಕ ಮಟ್ಟದ ಮಾದರಿಯಾಗಿ ಹೊರಹೊಮ್ಮಿರುವುದು ಪ್ರಚಲಿತ ವಿದ್ಯಮಾನಗಳ ಅಚ್ಚರಿ. 1968ರಲ್ಲಿ ಎಂ.ಸಿ. ಜಾಕೋಬ್ ಅವರು ಬಿತ್ತಿದ 'ಕಿಟೆಕ್ಸ್' (Kitex) ಎಂಬ ಉದ್ಯಮದ ಬೀಜ ಇಂದು ವಿಶ್ವದ ಎರಡನೇ ಅತಿದೊಡ್ಡ ಮಕ್ಕಳ ಉಡುಪು ತಯಾರಿಕಾ ಸಾಮ್ರಾಜ್ಯವಾಗಿ ಬೆಳೆದು ನಿಂತಿದೆ. ಸಾಬು ಎಂ. ಜಾಕೋಬ್ ಅವರ ನೇತೃತ್ವದಲ್ಲಿ ಈ ಸಂಸ್ಥೆಯು ಲಾಭದ ಬೆನ್ನತ್ತುವುದರ ಜೊತೆಗೆ ಸಮಾಜದ ಋಣ ತೀರಿಸಲು 'ಟ್ವೆಂಟಿ–20' ಎಂಬ ಚಾರಿಟೇಬಲ್ ಟ್ರಸ್ಟ್ ಅನ್ನು 2015ರಲ್ಲಿ ಸ್ಥಾಪಿಸುವ ಮೂಲಕ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಗೆ ಹೊಸ ಭಾಷ್ಯ ಬರೆಯಿತು. ಪ್ರತಿಯೊಂದು ಕುಟುಂಬಕ್ಕೂ ವಿತರಿಸಲಾದ 'ಸದಸ್ಯತ್ವ ಕಾರ್ಡ್' ಮೂಲಕ ಉನ್ನತ ವೈದ್ಯಕೀಯ ಸೇವೆ ಮತ್ತು ಶೇ. 50ರಿಂದ 70ರಷ್ಟು ರಿಯಾಯಿತಿಯ ದಿನಸಿ ನೀಡುವ 'ಫುಡ್ ಸೆಕ್ಯೂರಿಟಿ ಮಾರ್ಕೆಟ್' ಇಡೀ ರಾಜ್ಯದ ಗಮನ ಸೆಳೆಯಿತು. ಈ ಯೋಜನೆಯು ಕೇವಲ ದಾನವಾಗಿರದೆ, ಮಧ್ಯಮ ವರ್ಗದ ಸಂಸಾರದ ಆರ್ಥಿಕ ಶಿಸ್ತನ್ನು ಕಾಪಾಡುವ ಭದ್ರಬುನಾದಿಯಾಗಿ ಬದಲಾಯಿತು.

ಟ್ವೆಂಟಿ–20 ಕೇವಲ ಸೇವಾ ಸಂಸ್ಥೆಯಾಗಿ ಉಳಿಯದೆ ರಾಜಕೀಯ ಶಕ್ತಿಯಾಗಿ ರೂಪಾಂತರಗೊಂಡ ಹಾದಿ ಬಹಳ ರೋಚಕವಾಗಿದೆ. ರಸ್ತೆ ಮತ್ತು ಮನೆ ನಿರ್ಮಾಣದಂತಹ ಜನಪರ ಕಾರ್ಯಗಳಿಗೆ ಅಂದಿನ ಪಂಚಾಯತ್ ಆಡಳಿತಗಾರರು ಭ್ರಷ್ಟಾಚಾರದ ಮಸಲತ್ತಿನಿಂದ ಅಡೆತಡೆಗಳನ್ನು ಒಡ್ಡಿದಾಗ, ಸಾಬು ಜಾಕೋಬ್ ಅವರಿಗೆ ವ್ಯವಸ್ಥೆಯನ್ನು ಒಳಗಿನಿಂದಲೇ ಬದಲಿಸಬೇಕೆಂಬ ಜಾಗೃತಿ ಮೂಡಿತು. ಕೇವಲ ದಾನ ಮಾಡುವುದಕ್ಕಿಂತ, ತಾವೇ ಆಡಳಿತ ನಡೆಸಿದರೆ ಕಂಪನಿಯ ನಿಧಿ ಮತ್ತು ಸರ್ಕಾರದ ಅನುದಾನವನ್ನು ಸೇರಿಸಿ ಹತ್ತು ಪಟ್ಟು ಹೆಚ್ಚು ಕೆಲಸ ಮಾಡಬಹುದು ಎಂಬ ದೃಢ ಸಂಕಲ್ಪದೊಂದಿಗೆ ಚುನಾವಣಾ ಕಣಕ್ಕಿಳಿದರು. ಇದು ಕಾರ್ಪೊರೇಟ್ ದಕ್ಷತೆಯನ್ನು ರಾಜಕೀಯಕ್ಕೆ ತಂದ ಮೊದಲ ಐತಿಹಾಸಿಕ ಕ್ರಾಂತಿ. 2015ರ ಪಂಚಾಯತ್ ಚುನಾವಣೆಯಲ್ಲಿ ಯಾವುದೇ ಸಾಂಪ್ರದಾಯಿಕ ಪಕ್ಷದ ಹಂಗಿಲ್ಲದೆ 'ಅರಾಜಕೀಯ ಅಭಿವೃದ್ಧಿ ವೇದಿಕೆ' ಟ್ವೆಂಟಿ–20 ಜಯಭೇರಿ ಬಾರಿಸಿತು. 19 ಸ್ಥಾನಗಳಲ್ಲಿ 17 ಸ್ಥಾನಗಳನ್ನು ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ ಈ ತಂಡ, ಕೇವಲ ಐದು ವರ್ಷಗಳಲ್ಲಿ ಗ್ರಾಮದ ಮೂಲಭೂತ ಸೌಕರ್ಯಗಳನ್ನು ವಿಶ್ವದರ್ಜೆಗೆ ಏರಿಸಿ, ರಾಜಕೀಯ ಸಿದ್ಧಾಂತಗಳಿಗಿಂತ 'ಜನರ ಜೀವನಮಟ್ಟದ ಸುಧಾರಣೆಯೇ ಮುಖ್ಯ' ಎಂದು ಸಾರುವ ಕಲ್ಯಾಣ ರಾಜ್ಯದ ಮಾದರಿಯನ್ನು ಕಟ್ಟಿಕೊಟ್ಟಿತು. ಇದು ಕೇವಲ ರಸ್ತೆಗಳ ಸುಧಾರಣೆಯಲ್ಲ, ಬದಲಾಗಿ ಜನರ ಆಲೋಚನಾ ಕ್ರಮದಲ್ಲಿ ತಂದ ಗುಣಾತ್ಮಕ ಬದಲಾವಣೆಯಾಗಿತ್ತು.

ಇಂದು 'ಟ್ವೆಂಟಿ–20 ಪಕ್ಷವು' ಕೇವಲ ಒಂದು ಗ್ರಾಮದ ಶಕ್ತಿಯಾಗಿ ಉಳಿಯದೆ, 2026ರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದೊಂದಿಗೆ ಕೈಜೋಡಿಸಿ ಕೇರಳ ರಾಜಕೀಯದಲ್ಲಿ ಮಹತ್ತರ ತಿರುವು ಸೃಷ್ಟಿಸಿದೆ. ಎಡರಂಗ ಸರ್ಕಾರದ ನಿರಂತರ ರಾಜಕೀಯ ಸೇಡು ಮತ್ತು ಕಿರುಕುಳದಿಂದ ಬೇಸತ್ತ ಸಾಬು ಜಾಕೋಬ್, 'ರಾಜಕೀಯ ರಕ್ಷಣೆ ಇಲ್ಲದೆ ಅಭಿವೃದ್ಧಿ ಅಸಾಧ್ಯ' ಎಂಬ ಕಟು ಸತ್ಯದೊಂದಿಗೆ ಕಣಕ್ಕಿಳಿದಿದ್ದಾರೆ. ಕೆಲ ದಿನಗಳ ಹಿಂದೆ ನಡೆದ ವಿಧಾನಸಭಾ ಚುನಾವಣೆಯು ರಾಜ್ಯದ ಜನತೆಯ ಗಮನ ಸೆಳೆದಿದ್ದು, ರಾಜ್ಯದ ಇತಿಹಾಸದಲ್ಲೇ ಹಿಂದೆಂದೂ ಕಾಣದಂತಹ ದಾಖಲೆ ಮಟ್ಟದ (ಅಂದಾಜು 82% ಕ್ಕೂ ಹೆಚ್ಚು) ಮತದಾನ ದಾಖಲಾಗಿದೆ. ಈ ಬೃಹತ್ ಮತದಾನವು ಕೇವಲ 'ಆಡಳಿತ ವಿರೋಧಿ ಅಲೆ' ಮಾತ್ರವಲ್ಲದೆ, ರಾಜಕೀಯದಿಂದ ದೂರವಿದ್ದ ತಟಸ್ಥ ಮತದಾರರು ಮತ್ತು ಯುವಜನತೆಯನ್ನು ಟ್ವೆಂಟಿ–20 ಪಕ್ಷವು ತನ್ನ ಅಭಿವೃದ್ಧಿ ಮಂತ್ರದ ಮೂಲಕ ಮತಗಟ್ಟೆಗೆ ಸೆಳೆಯುವಲ್ಲಿ ಯಶಸ್ವಿಯಾಗಿರುವುದಕ್ಕೆ ಸಾಕ್ಷಿಯಾಗಿದೆ. ಮತಗಟ್ಟೆಗಳ ಮುಂದೆ ಕಂಡುಬಂದ ಸುದೀರ್ಘ ಸರತಿ ಸಾಲುಗಳು ಮತ್ತು ಉತ್ಸಾಹವು ಸಾಂಪ್ರದಾಯಿಕ ಮೈತ್ರಿಕೂಟಗಳಾದ ಎಲ್.ಡಿ.ಎಫ್ ಮತ್ತು ಯು.ಡಿ.ಎಫ್‌ಗಳ ಪಾಲಿಗೆ ನಡುಕ ಹುಟ್ಟಿಸಿವೆ. ಕಮ್ಯುನಿಸ್ಟ್ ಚಳವಳಿಯ ಗಟ್ಟಿನೆಲವಾಗಿದ್ದ ಪ್ರದೇಶಗಳಲ್ಲಿಯೂ ಕಾರ್ಪೊರೇಟ್ ದಕ್ಷತೆಯ ಬಗ್ಗೆ ಚರ್ಚೆಗಳು ಆರಂಭವಾಗಿರುವುದು ಸಣ್ಣ ವಿಷಯವಲ್ಲ.

ಈ ಬಾರಿಯ ಚುನಾವಣಾ ಫಲಿತಾಂಶವು ಕೇರಳದ ದಶಕಗಳ ಹಳೆಯ ರಾಜಕೀಯ ಧ್ರುವೀಕರಣವನ್ನು ಬುಡಮೇಲು ಮಾಡುವುದು ನಿಶ್ಚಿತವಾಗಿದೆ. ಎರ್ನಾಕುಲಂ ಜಿಲ್ಲೆಯ ಕನಿಷ್ಠ 10–12 ಕ್ಷೇತ್ರಗಳಲ್ಲಿ ಈ ಮೈತ್ರಿಕೂಟವು ನೀಡಲಿರುವ ಪ್ರಬಲ ಪೈಪೋಟಿಯು ದ್ವಿಪಕ್ಷೀಯ ಸ್ಪರ್ಧೆಯನ್ನು ಮೀರಿ ತ್ರಿಕೋನ ಸ್ಪರ್ಧೆಗೆ ದಾರಿ ಮಾಡಿಕೊಟ್ಟಿದೆ. ಕಳೆದೆರಡು ದಶಕಗಳಲ್ಲಿ ಅತಿ ಸಣ್ಣ ಮತಗಳ ಅಂತರದಿಂದ ನಿರ್ಧರಿಸಲ್ಪಡುತ್ತಿದ್ದ ಕ್ಷೇತ್ರಗಳಲ್ಲಿ, ಟ್ವೆಂಟಿ–20 ಸೆಳೆಯಲಿರುವ 20,000 ದಿಂದ 30,000 ಮತಗಳು ಸಾಂಪ್ರದಾಯಿಕ ಪಕ್ಷಗಳ ಭದ್ರಕೋಟೆಯನ್ನು ಕುಸಿಯುವಂತೆ ಮಾಡಬಹುದು. ಈ ಮೈತ್ರಿಕೂಟವು ಕೆಲವಾರು ಸ್ಥಾನಗಳನ್ನು ಗೆಲ್ಲುವ ಮೂಲಕ ಹೊಸ ಶಾಸನಸಭೆಯಲ್ಲಿ 'ಕಿಂಗ್ ಮೇಕರ್' ಆಗುವ ವಿಶ್ವಾಸ ಹೊಂದಿದೆ. ಇದು ಸಾಂಪ್ರದಾಯಿಕ ಮತಬ್ಯಾಂಕ್‌ಗಳನ್ನು ಛಿದ್ರಗೊಳಿಸಲಿದ್ದು, ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಎಂಬ ಭೇದವಿಲ್ಲದೆ ಜನಪರ ಆಡಳಿತ ಬಯಸುವ ಮತದಾರರನ್ನು ಸೆಳೆಯುವ ಮೂಲಕ ರಾಜ್ಯ ರಾಜಕಾರಣದ ಒಟ್ಟಾರೆ ದಿಕ್ಕನ್ನೇ ಬದಲಿಸುವುದೆಂದು ನಿರೀಕ್ಷಿಸಲಾಗಿದೆ.

ಆಸಕ್ತಿದಾಯಕ ಸಂಗತಿಯೆಂದರೆ, ಕ್ರಿಕೆಟ್ ಮೈದಾನದಲ್ಲಿ ಟ್ವೆಂಟಿ–20 ಮಾದರಿಯು ಹೇಗೆ ಸಾಂಪ್ರದಾಯಿಕ ಶೈಲಿಯನ್ನು ಬದಿಗೊತ್ತಿ ವೇಗ ಮತ್ತು ದಕ್ಷತೆಯಿಂದ ಜನಮನ ಗೆದ್ದಿದೆಯೋ, ಅದೇ ಕ್ರಾಂತಿಯನ್ನು ನಾವು ಇಂದು ಕೇರಳದ ರಾಜಕೀಯದಲ್ಲೂ ಕಾಣುತ್ತಿದ್ದೇವೆ. ಕ್ರಿಕೆಟ್‌ನಲ್ಲಿ ಈ ಮಾದರಿಯು ಸುದೀರ್ಘ ಕಾಯುವಿಕೆಯನ್ನು ಕೊನೆಗೊಳಿಸಿ ಕ್ಷಿಪ್ರ ಫಲಿತಾಂಶ ಮತ್ತು ಮನರಂಜನೆಯನ್ನು ನೀಡುವಂತೆ, ರಾಜಕೀಯದಲ್ಲಿ ಟ್ವೆಂಟಿ–20 ಪಕ್ಷವು ಸಾಂಪ್ರದಾಯಿಕ ಪಕ್ಷಗಳ ದಶಕಗಳ ವಿಳಂಬ ನೀತಿಗೆ ಪರ್ಯಾಯವಾಗಿ 'ಕಾರ್ಪೊರೇಟ್ ವೇಗ' ಮತ್ತು 'ನಿಖರ ಅಭಿವೃದ್ಧಿ'ಯನ್ನು ಜನರ ಮುಂದೆ ಇಟ್ಟಿದೆ. ಐದು ದಿನಗಳ ಟೆಸ್ಟ್ ಪಂದ್ಯದ ತಾಳ್ಮೆ ಇಲ್ಲದ ಇಂದಿನ ಯುವ ಪೀಳಿಗೆಗೆ, ಕೇವಲ 20 ಓವರ್‌ಗಳ ರೋಚಕತೆಯಂತೆ ಶೀಘ್ರ ಅಭಿವೃದ್ಧಿ ಬೇಕಾಗಿದೆ. ಕ್ರೀಡೆಯಲ್ಲಿ ಟಿ20 ಹೇಗೆ ಆಟದ ಹಳೆಯ ನಿಯಮಗಳನ್ನು ಬದಲಿಸಿ ಯುವಜನತೆಯನ್ನು ಹುಚ್ಚೆಬ್ಬಿಸಿದೆಯೋ, ಅದೇ ರೀತಿ ಕೇರಳದ ರಾಜಕೀಯದಲ್ಲಿ ಈ ಪಕ್ಷವು ದ್ವಿಪಕ್ಷೀಯ ವ್ಯವಸ್ಥೆಯ ಭದ್ರಕೋಟೆಯನ್ನು ಭೇದಿಸಿ, ಜನರ ಆಶೋತ್ತರಗಳಿಗೆ ತಕ್ಷಣ ಸ್ಪಂದಿಸುವ ಹೊಸ ಪೀಳಿಗೆಯ 'ಪವರ್ ಪ್ಲೇ' ಆರಂಭಿಸಿದೆ. ಟ್ವೆಂಟಿ–20 ಎನ್ನುವುದು ಕೇವಲ ಹೆಸರಲ್ಲ; ಅದು ಹಳೆಯ ವ್ಯವಸ್ಥೆಯನ್ನು ಮುರಿದು ಹೊಸ ಯುಗವನ್ನು ಸೃಷ್ಟಿಸಿದ ಕ್ರಾಂತಿಯ ಸಂಕೇತ.

ಈ ಹೊಸ ಯುಗದ ರಾಜಕಾರಣದಲ್ಲಿ ಜನರು ಕೇವಲ ಭರವಸೆಗಳನ್ನು ಕೇಳಲು ಸಿದ್ಧರಿಲ್ಲ. ಕಾಂಗ್ರೆಸ್ ಮತ್ತು ಸಿಪಿಐಎಂ ನಡುವಿನ ಜಂಗಿ–ಕುಸ್ತಿಯಲ್ಲಿ ನಲುಗಿದ್ದ ಸಾಮಾನ್ಯ ಜನರಿಗೆ, ಟ್ವೆಂಟಿ–20 ಮತ್ತು ಎನ್‌ಡಿಎ ಮೈತ್ರಿಯು ಒಂದು ವಿಭಿನ್ನ ಆಯಾಮವನ್ನು ತೆರೆದಿಟ್ಟಿದೆ. ಇದರ ಪರಿಣಾಮ ರಾಜ್ಯದ ಗಡಿಯನ್ನೂ ಮೀರಿ ಬೆಳೆಯುವ ಲಕ್ಷಣಗಳಿವೆ.

ಬಟ್ಟೆ ಮಾರುಕಟ್ಟೆಯಿಂದ ಆರಂಭವಾದ ಈ ಮಹಾನ್ ಪಯಣ ಈಗ ಬ್ಯಾಲೆಟ್ ಬಾಕ್ಸ್‌ನ ಪವಿತ್ರ ಅಂಗಳಕ್ಕೆ ಬಂದು ನಿಂತಿದೆ. ಇದು ಕೇವಲ ಒಂದು ಉದ್ಯಮದ ಯಶಸ್ಸಿನ ಕಥೆಯಲ್ಲ; ಇದು ಅಧಿಕಾರದ ಹಪಾಹಪಿ ಇಲ್ಲದ, ಅಭಿವೃದ್ಧಿಯ ಹಸಿವಿನಿಂದ ಕೂಡಿದ ಒಂದು ಹಳ್ಳಿ ರಾಜ್ಯದ ಹಣೆಬರಹವನ್ನೇ ನಿರ್ಧರಿಸುವ ಹಂತಕ್ಕೆ ಬೆಳೆದ ಪ್ರಜಾಪ್ರಭುತ್ವದ ಅಪ್ರತಿಮ ಪವಾಡ! ಮುಂಬರುವ ದಿನಗಳಲ್ಲಿ ಈ ಪ್ರಯೋಗವು ಭಾರತದ ಇತರ ಭಾಗಗಳಿಗೂ ಹರಡಬಹುದು. ಸಮಾಜಸೇವೆ ಮತ್ತು ಉದ್ಯಮ ಶಿಸ್ತು ಸೇರಿದರೆ ರಾಜಕೀಯವು ಎಷ್ಟು ಪರಿಶುದ್ಧವಾಗಬಹುದು ಎಂಬುದಕ್ಕೆ ಟ್ವೆಂಟಿ–20 ಕಿಳಕ್ಕಂಬಲಂ ಒಂದು ಜ್ವಲಂತ ಉದಾಹರಣೆ. ಫಲಿತಾಂಶ ಏನೇ ಇರಲಿ, ಈ ಕಾರ್ಪೊರೇಟ್ ಕ್ರಾಂತಿ ಈಗಾಗಲೇ ಕೇರಳದ ರಾಜಕೀಯ ಇತಿಹಾಸದ ಸುವರ್ಣ ಪುಟಗಳಲ್ಲಿ ದಾಖಲಾಗಿದೆ.

ಧರ್ಮದ ಉಳಿವಿಗಾಗಿ ಪರಶುರಾಮ ಅವತಾರ

▶ಎಂ.ರಾಘವೇಂದ್ರ, ಭಂಡಾರ್ಕರ್

ಶ್ರೀಮನ್ನಾರಾಯಣನ ಹತ್ತು ಅವತಾರಗಳಲ್ಲೊಂದಾದ ಭಗವಾನ್ ಪರಶುರಾಮನ ಜನನ ವೈಶಾಖ ಶುಕ್ಲ ಪಕ್ಷ ತೃತೀಯಾದಂದು ತ್ರೇತಾಯುಗದ ಪ್ರಾರಂಭದಲ್ಲಿ ಮಹರ್ಷಿ ಜಮದಗ್ನಿ ಮತ್ತು ರೇಣುಕಾ ಮಾತೆಯ ಉದರದಲ್ಲಿ ಆಯಿತೆಂದು ಪುರಾಣಗಳಲ್ಲಿ ಉಲ್ಲೇಖವಿದೆ. ಭಾರ್ಗವ ಗೋತ್ರಿಯಾಗಿದ್ದರಿಂದ ಭಾರ್ಗವ ರಾಮನೆಂದೂ ಪರಶುರಾಮ ಪ್ರಸಿದ್ಧ.

ಸಾವಿರಾರು ಕೈಗಳುಳ್ಳ ಮಹಾಕ್ಷತ್ರಿಯ ಅರಸ ಕಾರ್ತವೀರ್ಯಾರ್ಜುನನು ತನ್ನನ್ನು ಸತ್ಕರಿಸಿದ ಜಮದಗ್ನಿಯ ಸತ್ಕಾರದ ಮೂಲಕ್ಕೆ ಕೈ ಹಾಕಿ ಕಾಮಧೇನುವನ್ನು ಬಲಾತ್ಕಾರದಿಂದ ಅಪಹರಿಸಿ ತನ್ನೊಂದಿಗೆ ಕೊಂಡೊಯ್ಯುತ್ತಾನೆ. ವಿಚಾರ ತಿಳಿದ ಪರಶುರಾಮ ಕಾರ್ತವೀರ್ಯಾರ್ಜುನನ ಸಹಸ್ರ ಕೈಗಳನ್ನು ಕತ್ತರಿಸಿ ಆತನ ತಲೆಯನ್ನು ಧರೆಗುರುಳಿಸುತ್ತಾನೆ. ಕೋಪಗೊಂಡ ಕಾರ್ತವೀರ್ಯಾರ್ಜುನನ ಸುತರು ಪರಶುರಾಮನು ಇಲ್ಲದ ಸಂದರ್ಭದಲ್ಲಿ ಜಮದಗ್ನಿಯ ತಲೆಯನ್ನು ಕಡಿದು ರುಂಡವನ್ನು ತೆಗೆದು ಕೊಂಡು ಹೋಗುತ್ತಾರೆ. ಇದನ್ನರಿತ ಪರಶುರಾಮನು ಕೆಂಡಾಮಂಡಲನಾಗಿ ರೌದ್ರಾವತಾರ ತಾಳುತ್ತಾನೆ. ತನ್ನ ತಂದೆಯ ಹತ್ಯೆಗೆ ಕಾರಣರಾದ ಎಲ್ಲರ ರುಂಡಗಳನ್ನು ಚೆಂಡಾಡಿ, ಅಮಂಗಲ ಕಾರ್ಯ ನಿರತವಾದ ರಾಜರನ್ನು ಹುಡುಕಿ ಹುಡುಕಿ ಬಿಡದೆ ಕೊಲ್ಲುತ್ತಾನೆ.

ಹೀಗೆ ಸಪ್ತ ಚಿರಂಜೀವಿಗಳಲ್ಲಿ ಒಬ್ಬರಾಗಿರುವ ಶ್ರೀಹರಿಯ ಸ್ವರೂಪಾಂಶ ಜಾತನಾದ ಭಾರ್ಗವ ರಾಮನು ದುಷ್ಕೃತ್ಯ ದಲ್ಲಿ ನಿರತರಾದ ದುಷ್ಟ ರಾಜರುಗಳ ಮೇಲೆ 21 ಸಲ ದಂಡಯಾತ್ರೆಯನ್ನು ಮಾಡಿ ಅವರುಗಳನ್ನು ಕೊಂದು ಭೂಮಿಯು ನಿಃಕ್ಷತ್ರಿಯವಾಗುವಂತೆ ಮಾಡಿದನು. ಅಧರ್ಮಿಗಳು, ಪ್ರಜಾಪೀಡಕರು, ವಿಪ್ರ ವಿರೋಧಿಗಳು, ರಜಸ್ತಮಹ ಸ್ವಭಾವದವರು, ದುರಾಹಂಕಾರಿಗಳೂ ಆದ ರಾಜರುಗಳನ್ನು ಸಂಹರಿಸಿ ಭೂಭಾರವನ್ನು ಇಳಿಸಿದನು.

ಭಗವಂತನು ಅನೇಕಾನೇಕ ಅವತಾರಗಳನ್ನು ಎತ್ತಿದ್ದರೂ ಅವುಗಳಲ್ಲಿ ಪ್ರಮುಖವಾಗಿ ಹತ್ತು ಅವತಾರಗಳು ಮಹತ್ತರ ಕಾರಣಗಳಿಂದಾಗಿ ಅದರಲ್ಲೂ ಧರ್ಮ ಸಂಸ್ಥಾಪನೆಗಾಗಿ ಅವಿರ್ಭವಿಸಿದಂತಾಗಿವೆ. ಹೀಗೆ ಪರಶುರಾಮ ಅವತಾರವೂ ಕೂಡ ಇಂತಹ ಮಹತ್ತರ ಕಾರಣಕ್ಕಾಗಿ ಕಾರಣೀಭೂತವಾಗಿದ್ದು ಭಕ್ತ ಜನರ ಉದ್ಧಾರಕ್ಕಾಗಿ ಭಗವಂತನು ಪರಶುರಾಮನ ರೂಪದಲ್ಲಿ ಜಗತ್ತಿಗೆ ತೋರಿ ಬಂದಿದ್ದಾನೆ.



ಪರಶುರಾಮನು ಶಾಸ್ತ್ರ ಬಲ(ಅಂದರೆ ಜ್ಞಾನ ಬಲ) ಮತ್ತು ಶಸ್ತ್ರ ಬಲ (ಅಂದರೆ ಬಾಹುಬಲ) ಇವೆರಡರ ಸಂಯೋಗದಿಂದ ಶತ್ರು ದಮನ ಮಾಡಿದನು. ಆಧ್ಯಾತ್ಮಿಕ ಪರಿಭಾಷೆಯಲ್ಲಿ ಜ್ಞಾನ ಬಲವೆಂದರೆ ಬ್ರಹ್ಮ ತೇಜ, ಬಾಹು ಬಲವೆಂದರೆ ಕ್ಷಾತ್ರ ತೇಜವಾಗಿದೆ.

ಪರಶುರಾಮನು ಶಾಸ್ತ್ರ ಬಲದಿಂದ ಸಂಕಲ್ಪದಲ್ಲಿ ಶಾಪಕೊಟ್ಟು ಹಾಗೂ ಬಾಹುಬಲದಿಂದ ಅಂದರೆ ಕ್ಷಾತ್ರ ತೇಜದ ಬಲದಿಂದ ಪರಶುವಿನಿಂದ ಆಘಾತ ಮಾಡಿ, ಅಂದರೆ ಪ್ರತ್ಯಕ್ಷ ಸಂಹಾರ ಮಾಡಿ ಅಧರ್ಮಿಗಳನ್ನು ಸಂಹಾರ ಮಾಡಿದನು. ಹೀಗೆ ಪರಶುರಾಮನು ದುಷ್ಟರನ್ನು ನಾಶಗೊಳಿಸಲು ಬ್ರಹ್ಮ ಹಾಗೂ ಕ್ಷಾತ್ರ ಇವೆರಡೂ ತೇಜಗಳನ್ನು ಉತ್ಕೃಷ್ಟವಾಗಿ ಉಪಯೋಗಿಸಿದ ಶ್ರೇಷ್ಠತಮ ಯೋಧನಾಗಿದ್ದಾನೆ.

ಬ್ರಹ್ಮ ವೃಂದವನ್ನು ಸರ್ವನಾಶಗೊಳಿಸುವ, ಅವರ ಆಶ್ರಮ ಮತ್ತು ಗುರುಕುಲದ ಉಜ್ವಲ ಪರಂಪರೆಯನ್ನು ಧ್ವಂಸಗೊಳಿಸುವ ಅನ್ಯಾಯದ ರಾಜ್ಯಾಧಿಕಾರಕ್ಕೆ ಎರಡೂ ತೇಜಗಳಿಂದ ಸಂಪನ್ನವಿರುವ ಪರಶುರಾಮ ತಡೆ ಹಾಕಿದನು.ಈ ರೀತಿಯಲ್ಲಿ ಕಾಲಾನುಸಾರ ಅವಶ್ಯವಿರುವ ಕ್ಷತ್ರಿಯರ ಕರ್ತವ್ಯವನ್ನು ಪರಶುರಾಮ ಪೂರ್ಣಗೊಳಿಸಿದರು.

ಇಂದು ಪರಶುರಾಮ ಜಯಂತಿ. ಪರಶುರಾಮನು ಬ್ರಹ್ಮ ತೇಜ, ಕ್ಷಾತ್ರ ತೇಜದಿಂದ ದುಷ್ಟ ಅರಸರನ್ನು ನಾಶ ಮಾಡಿದವನು.

ಪರಶುರಾಮ ದೇವರು ಮಾಡಿದ ಅನುಗ್ರಹದ ಬಗ್ಗೆ ಹೇಳುವುದಾದರೆ ಗಾಯತ್ರಿ ಮಂತ್ರದ ಮೊದಲ ಅಕ್ಷರ ತತ್. ಇದು ಪರಶುರಾಮ ದೇವರನ್ನು ಕೊಂಡಾಡುವ ಅಕ್ಷರವೆಂದು ಶ್ರೀ ಮಧ್ವಾಚಾರ್ಯರು ತಿಳಿಸಿದ್ದಾರೆ. ತೇಜೋಮಯವಾದ ಅಗ್ನಿಯಲ್ಲಿ ಅಂತರ್ಮಿಯಾದ ಹರಿಣಿಪತಿ ಪರಶುರಾಮ ದೇವರು 'ತತ್' ಎಂಬ ಅಕ್ಷರದಿಂದ ಪ್ರತಿಪಾದ್ಯರಾಗಿ ನಮ್ಮೆಲ್ಲರಿಗೆ ಅನುಗ್ರಹವನ್ನು ಮಾಡುವುದಕ್ಕೆ ಸನ್ನಿಹಿತರಾಗಿದ್ದಾರೆ ಅಂತ ನಾವು ತಿಳಿದರೆ ಗಾಯತ್ರಿ ಮಂತ್ರ ಜಪ ಸಾರ್ಥಕವಾಗುತ್ತದೆ ಎಂಬುದಾಗಿ ಉತ್ತರಾದಿ ಮಠದ ಶ್ರೀಶ್ರೀ ಸತ್ಯಾತ್ಮ ತೀರ್ಥರು ತಮ್ಮ ಆಶೀರ್ವಚನ ಸಂದರ್ಭ ಸ್ಮರಿಸಿದ ನುಡಿಗಳಿವು.

ಪರಶುರಾಮನು ಅಂದು ಕೋಪತಾಪ ಪ್ರದರ್ಶಿಸಿದ್ದು ಅನಿವಾರ್ಯವಾದ ಸಂದರ್ಭದಲ್ಲಿ ಧರ್ಮಕ್ಕೆ ಚ್ಯುತಿ ಬಂದಾಗ ಮಾತ್ರ. ಮಹಾಭಾರತ ಯುದ್ಧದಲ್ಲಿ ಚಕ್ರವನ್ನು ಹಿಡಿಯುವುದಿಲ್ಲ ಎಂದಿದ್ದ ಕೃಷ್ಣಪರಮಾತ್ಮನು, ಅನಿವಾರ್ಯವಾದ ಸಂದರ್ಭದಲ್ಲಿ ಭೀಷ್ಮಾಚಾರ್ಯರ ಮೇಲೆಯೇ ಸುದರ್ಶನ ಚಕ್ರವನ್ನು ಪ್ರಯೋಗಿಸಿರಲಿಲ್ಲವೇ? ಯುದ್ಧ ಅನಿವಾಯವಾದಾಗ, ಭಯೋತ್ಪಾದಕರ ಉಪಟಳ ಹೆಚ್ಚಾದಾಗ ನೆರೆ ರಾಷ್ಟ್ರದ ಆಕ್ರಮಣಕಾರಿ ಪ್ರವೃತ್ತಿಯನ್ನು ತಡೆಯಬೇಕಾದರೆ ಶಸ್ತ್ರಾಸ್ತ್ರಗಳ ಪ್ರಯೋಗ ಮಾಡಲಾರದೆ ಸುಮ್ಮನೆ ಕುಳಿತುಕೊಳ್ಳಲಾದೀತೇ?! ಕೇವಲ ಶಾಂತಿ ಮಂತ್ರ ಪಠಿಸಿ ಸುಮ್ಮನಾದರೆ ಹೇಡಿಗಳೆಂದು ಎಲ್ಲರೆದುರು ತಲೆ ತಗ್ಗಿಸಿ ಕುಳಿತುಕೊಳ್ಳಬೇಕಾದೀತು. ಪ್ರಧಾನಿ ನರೇಂದ್ರ ಮೋದಿಯವರು ಉಡುಪಿಗೆ ಬಂದಿದ್ದಾಗ ತಮ್ಮ ಭಾಷಣದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಪರಶುರಾಮನ ಸೃಷ್ಟಿ ಎಂದು ಸ್ಮರಿಸಿದ್ದರಲ್ಲದೆ ಈ ಪರಶುರಾಮ ಸೃಷ್ಟಿಯು ನಮಗೆ ಪ್ರಕೃತಿಯ ಪೋಷಣೆ, ಪ್ರಕೃತಿಯ ರಕ್ಷಣೆ, ಪ್ರಕೃತಿಯೊಂದಿಗೆ ಸಮತೋಲನದ ಜೀವನವನ್ನು ಕಲಿಸಿಕೊಟ್ಟಿದೆ ಎಂದು ಕೊಂಡಾಡಿದ್ದರು.

ಹೀಗೆ ಅಂದು ದುಷ್ಟ ಕ್ಷತ್ರಿಯರನ್ನು ನಾಶ ಮಾಡಿದ ಪರಶುರಾಮನು ಇಂದು ಯಾವ ವ್ಯಕ್ತಿಗಳ ನಾಶ ಮಾಡುವುದು ಬೇಡ, ಆದರೆ ಆಡಳಿತಗಾರರ ಹಾಗೂ ಸಕಲ ಸಜ್ಜನರ ಮನಸ್ಸಿನಲ್ಲಿರುವ ಕಾಮಕ್ರೋದಾಧಿ ಎಲ್ಲಾ ದೋಷಗಳೆಂಬ ದುಷ್ಟರನ್ನು ದೂರಮಾಡಿ ಶುದ್ಧವಾದ ಮನಸ್ಸು ವಾಕ್ ಶಕ್ತಿಯನ್ನು ನೀಡಿ ಸದ್ಗುಣವಾದ ಸಾಮ್ರಾಜ್ಯವನ್ನು ನಮ್ಮ ಮನಸ್ಸಿನಲ್ಲಿ ಸ್ಥಾಪನೆ ಮಾಡಲಿ.

ಕಿರುಸುದ್ದಿ

ಸ್ತ್ರೀಶಕ್ತಿಯ ರಾಜಕೀಯ ಬಲವರ್ಧನೆಗೆ ಕಾಂಗ್ರೆಸ್ ದ್ರೋಹ: ಪ್ರಭಾಕರ ಪ್ರಭು

• **ಬಂಟ್ವಾಳ:** ದೇಶದಲ್ಲಿ ಮಹಿಳಾ ಶಕ್ತಿಗೆ ಬಲ ತುಂಬುವ ಮೂಲಕ ರಾಜಕೀಯ ರಂಗದಲ್ಲಿಯೂ ನಾರೀ ಶಕ್ತಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದರೊಂದಿಗೆ ನಾಗರಿಕ ಸಮಾಜ ಬಲವರ್ದನೆಗೆ ಪೂರಕವಾಗಿ ಮಹಿಳೆಯರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಶೇ .33 ಮೀಸಲಾತಿ ನೀಡವುದರಿಂದ ಸಾಧ್ಯ . ಇದನ್ನು ಮನಗಂಡಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಾರೀ



ಶಕ್ತಿ ವಂದನಾ ಮಸೂದೆ ಜಾರಿಗೆ ಮುಂದಾಗಿದ್ದು, ಕಾಂಗ್ರೆಸ್ ಪಕ್ಷದ ಪ್ರತಿರೋಧದಿಂದಾಗಿ ಮಹಿಳಾ ಮೀಸಲಾತಿ ಮಸೂದೆಗೆ ಆದ ಸೋಲು ದೇಶದ ಮಹಿಳಾ ಸಮುದಾಯದ ರಾಜಕೀಯ ಆಶೋತ್ತರಗಳಿಗೆ ಆಗಿರುವ ಸೋಲಾಗಿದೆ ಎಂದು ಬಿಜೆಪಿ ಮುಖಂಡ ಪ್ರಭಾಕರ ಪ್ರಭು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಮಹಿಳಾ ಮತದಾರರು ಮುಂದಿನ ಚುನಾವಣೆ ಸಂದರ್ಭದಲ್ಲಿ ವಿರೋಧ ಪಕ್ಷಗಳಿಗೆ ತಕ್ಕ ಪಾಠ ಕಲಿಸಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿರುವ ಅವರು, ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರು ಈ ಹಿಂದೆ ಮಹಿಳಾ ಸಮಾನತೆಗಾಗಿ ಹಿಂದೂ ಕೋಡ್ ಬಿಲ್ ಮಂಡಿಸಲು ಪ್ರಯತ್ನಿಸಿದಾಗಲೂ ಕಾಂಗ್ರೆಸ್ ಪಕ್ಷ ಅಡ್ಡಿ ಪಡಿಸಿತು. ಇದೀಗ ಪ್ರಧಾನಿ ನರೇಂದ್ರ ಮೋದಿ, ಮಹಿಳಾ ಶಕ್ತಿಗೆ ಬಲ ತುಂಬಲು ಮಂಡಿಸಿದ ಮಸೂದೆಗೂ ಕಾಂಗ್ರೆಸ್ ಪಕ್ಷ ತಡೆ ಒಡ್ಡಿರುವುದು ಕಾಂಗ್ರೆಸ್ ಪಕ್ಷ ಮತ್ತು ಆದರ ಮಿತ್ರ ಪಕ್ಷಗಳ ನಿಜ ಬಣ್ಣ ಬಯಲಾಗಿದೆ. ಪ್ರಜಾಪ್ರಭುತ್ವ ದೇಶದಲ್ಲಿ ಕಾಂಗ್ರೆಸ್ ಮಹಿಳಾ ವಿರೋಧಿ ನೀತಿ ಮೂಲಕ ಮಹಿಳೆಯರಿಗೆ ಮಾಡಿದ ದ್ರೋಹ ಖಂಡನೀಯ ಎಂದು ಪ್ರಭು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕನ್ನಡ ಪುಸ್ತಕ ಸೊಗಸು ಬಹುಮಾನ: ಅರ್ಜಿ ಆಹ್ವಾನ

• **ಉಡುಪಿ:** ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ 2025 ರ ಜನವರಿ ಯಿಂದ ಡಿಸೆಂಬರ್ ತನಕ ಕನ್ನಡದಲ್ಲಿ ಪ್ರಕಟವಾದ ಕೃತಿಗಳಿಗೆ, ಅವುಗಳ ಮುದ್ರಣ, ಮುಖಪುಟ ವಿನ್ಯಾಸ, ಗುಣಮಟ್ಟವನ್ನು ಪರಿಗಣಿಸಿ ವಿವಿಧ 'ಕನ್ನಡ ಪುಸ್ತಕ ಸೊಗಸು ಬಹುಮಾನ ಗಳಿಗಾಗಿ ವೆಬ್ ಸೈಟ್ https://kjj.karnataka.gov.inನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.ಆಸಕ್ತ ಪ್ರಕಾಶಕರು, ಮುದ್ರಕರು ಹಾಗೂ ಕಲಾವಿದರು ಅರ್ಜಿ ಸಲ್ಲಿಸಬಹುದಾಗಿದ್ದು, ಹೆಸರು, ವಿಳಾಸ, ದೂರವಾಣಿ ಸಂಖ್ಯೆಗಳ ವಿವರಗಳೊಂದಿಗೆ ಪುಸ್ತಕದ ಎರಡು ಪ್ರತಿಗಳನ್ನು ಅರ್ಜಿ ನಮೂನೆಯೊಂದಿಗೆ ಮೇ 11 ರ ಒಳಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002 ವಿಳಾಸಕ್ಕೆ ಕಳುಹಿಸಿಕೊಡಬಹುದಾಗಿದೆ.

ಸಲ್ಲಿಸಲಾದ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶ್ರೀ ರಾಮಾಂಜನೇಯ ದೇವಸ್ಥಾನ ಹತ್ತು ಸಮಸ್ತರು, ಕೆಂಜಾರು ಏರ್‌ಪೋರ್ಟ್ ಬಳಿ.
2. ಸುಧಾಕರ ಪಿ. ಶೆಟ್ಟಿ, ಜಲಜ ಪುಟ್ಟು ಮನೆ, ಕಂಡಿಗೆ, ಚೇಳ್ಯಾರು.
3. ವಿಜಯ ಆರ್. ಭಂಡಾರಿ, ಸಹೋದರರು, ಸಹೋದರಿ, ಬೈಲು ಮೂಡುಕರೆಗುತ್ತು, ಕಂದಾವರ, ಕಿನ್ನಿಕಂಬಳ ಭಜನಾ ಮಂದಿರ ವಠಾರ.
4. ಹಿಂದೂ ಯುವಸೇನೆ, ಆಕಾಶ ಭವನ, ಕಾವೂರು.
5. ದಿ| ಕೆ. ಶೀನ ಶೆಟ್ಟಿ ಸ್ಮರಣಾರ್ಥ ಪತ್ನಿ ಸರೋಜಿನಿ ಮತ್ತು ಮಕ್ಕಳು, ಶಂಬೂರು, ಬಂಟ್ವಾಳ (ತಾ).
6. ಕುಮಾರ ಗೌಡ, 'ದೇವಿ ಕೃಪಾ', ಮರೋಳಿಪದವು, ಪಡುಪೆರಾರ.
7. ದಿ| ಕಾಮು ಮೂಲ್ಯರ ಸ್ಮರಣಾರ್ಥ ಮಕ್ಕಳು, ಚಾಪೆ ಮನೆ, ಕೊಡ್ಮಾಣ್, ಫರಂಗಿಪೇಟೆ.

ಶ್ರೀ ಧರ್ಮಸ್ಥಳ ಮೇಳ
ಯೆಡ್ತಾಡಿ ಬಾರ್ಕೂರಿನಲ್ಲಿ
ಶ್ರೀಮತಿ ವೈ. ಲೀಲಾವತಿ ರಾಜೀವ ಶೆಟ್ಟಿ, ಹೋರ್ವರ ಮನೆ, ಯೆಡ್ತಾಡಿ ಮನೆ

ಶ್ರೀ ಸಾಲಿಗ್ರಾಮ ಮೇಳ
ಬಳಗಾರ (ತೀರ್ಥಹಳ್ಳಿ) ಬಯಲಾಟ

ಶ್ರೀ ಪೆರ್ಡೂರು ಮೇಳ
ಜಡ್ಕಲ್‌ನಲ್ಲಿ-**ನಾಗವಲ್ಲಿ**

ಶ್ರೀ ಹನುಮಗಿರಿ ಮೇಳ
ಅಗರ್ತಿಮೂಲೆಯಲ್ಲಿ

ಶ್ರೀ ಪಾವಂಜೆ ಮೇಳ
ಧರ್ಮನಗರದಲ್ಲಿ



ಬೆಂಗಳೂರಿನ ಅನಂತನಗರದ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ವಸಂತೋತ್ಸವದ ಪ್ರಯುಕ್ತ ಕೋಟದ ಶ್ರೀ ಹರಿಗುರು ಸೇವಾ ಮಂಡಳಿ ಭಜನಾ ತಂಡದಿಂದ ಭಜನೆ ಜರುಗಿತು.

ಮಹಿಳಾ ಶಕ್ತಿ ಮಸೂದೆಗೆ ವಿರೋಧ ಪಕ್ಷ ತಡೆ: ಬಿಜೆಪಿ ನಾಯಕಿ ಸುಲೋಚನಾ ಭಟ್ ಖಂಡನೆ

• **ಬಂಟ್ವಾಳ:** ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡಲು ಕೇಂದ್ರ ಸರ್ಕಾರ ಐತಿಹಾಸಿಕವಾದ ಹೆಜ್ಜೆ ಇರಿಸಿದ್ದು, ಈ ಸಾಂವಿಧಾನಿಕ ತಿದ್ದುಪಡಿಗೆ ವಿರೋಧ ಪಕ್ಷಗಳು ಬೆಂಬಲಿಸದೆ 'ನಾರಿಶಕ್ತಿ ವಂದನ್' ಮಸೂದೆ ಜಾರಿಗೆ ತಡೆಯೊಡ್ಡಿರುವ ವಿರೋಧ ಪಕ್ಷಗಳ ನಿಲುವನ್ನು ಬಿಜೆಪಿ ರಾಜ್ಯ ಸಮಿತಿಯ ಮಾಜಿ ಉಪಾಧ್ಯಕ್ಷೆ ಸುಲೋಚನಾ ಜಿ. ಕೆ. ಭಟ್ ಖಂಡಿಸಿದ್ದಾರೆ.

ಮಹಿಳೆಯರಿಗೆ ಮಾಡಿರುವ ಅವಮಾನ

ಈ ಮಸೂದೆಯನ್ನು ತಿರಸ್ಕರಿಸಿ ಸಂಭ್ರಮಿಸುತ್ತಿರುವ ವಿರೋಧ ಪಕ್ಷಗಳ ಮನಸ್ಥಿತಿ ದೇಶದಲ್ಲಿ ಇರುವ ಶೇ.50 ಕ್ಕೂ ಹೆಚ್ಚು ಮಹಿಳೆಯರಿಗೆ ಮಾಡಿರುವ ಅವಮಾನವಾಗಿದೆ. ದೇಶದ ಮಹಿಳೆಯರು ಎಂದಿಗೂ ವಿರೋಧ ಪಕ್ಷಗಳ ಈ ಮನಃಸ್ಥಿತಿಯನ್ನು ಕ್ಷಮಿಸುವುದಿಲ್ಲ ಎಂದು ಅವರು ಪ್ರಕಟಣೆಯ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಾರಿ ಶಕ್ತಿ ವಂದನಾ ಕಾಯ್ದೆಗೆ ಸೋಲುಂಟಾಗಿರುವುದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಕರಾಳ ದಿನವಾಗಿದೆ ಎಂದೂ ಸುಲೋಚನಾ ಭಟ್ ಅವರು ಇದೇ ಸಂದರ್ಭ ಆತಂಕ ವ್ಯಕ್ತಪಡಿಸಿದ್ದಾರೆ.

ಅತ್ಯಂತ ಅಮಾನವೀಯ ಕೀಳು ಮನಸ್ಥಿತಿಯ ನಡೆ

ಅಂಬೇಡ್ಕರ್ ಅವರು 'ಹಿಂದು ಕೋಡ್ ಬಿಲ್' ಮೂಲಕ ಮಹಿಳೆಯರ ಸಮಾನತೆಗಾಗಿ ಹೋರಾಡಿದ್ದರು. ಅಂದು ಅಂಬೇಡ್ಕರ್ ಆಶಯಗಳಿಗೆ ಅಡ್ಡಗಾಲು ಹಾಕಿದ್ದ ಕಾಂಗ್ರೆಸ್ ಇದೀಗ ಮೋದಿ ಸರ್ಕಾರದ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡುವ ಮೂಲಕ ಶಕ್ತಿ ತುಂಬುವ ಸಂಕಲ್ಪಕ್ಕೂ ಅಡ್ಡಗಾಲು ಹಾಕುವ ರಾಹುಲ್ ಗಾಂಧಿ ನೇತೃತ್ವದ ವಿರೋಧ ಪಕ್ಷದ ನಡೆ ಅತ್ಯಂತ ಅಮಾನವೀಯ ಮತ್ತು ಕೀಳು ಮನಸ್ಥಿತಿಯ ಪರಮಾವಧಿಯಾಗಿದೆ ಎಂದು ಸುಲೋಚನಾ ಜಿ. ಕೆ. ಭಟ್ ಅವರು ತಿಳಿಸಿದ್ದಾರೆ.



ಕುಸಿದ ಆವರಣ ಗೋಡೆ | ಕಾರು,ಆಟೋ, ಬೈಕ್, ಜೆಸಿಬಿ ಜಖಂ

ಕುಂಪಲದಲ್ಲಿ ಅವಾಂತರ

• **ಉಳ್ಳಾಲ:** ನಿರ್ಮಾಣ ಹಂತದ ಲೇ ಔಟ್ ಒಂದರ ಎತ್ತರದ ಆವರಣ ಗೋಡೆ ದಿಢೀರನೆ ಕುಸಿದು ಬಿದ್ದ ಪರಿಣಾಮ ಲೇಔಟ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಜೆಸಿಬಿ ಯಂತ್ರವು ಪಕ್ಕದ ರಸ್ತೆಗೆ ಉರುಳಿ ಬಿದ್ದಿದ್ದು, ರಸ್ತೆಯಲ್ಲಿ ನಿಲ್ಲಿಸಲಾಗಿದ್ದ ಕಾರು, ಆಟೋ ರಿಕ್ಷಾ, ಬೈಕ್ ಮತ್ತು ಪಕ್ಕದ ಮನೆಗಳ ಆವರಣ ಗೋಡೆ ಮತ್ತು ಗೇಟ್‌ಗಳು ಜಖಂಗೊಂಡ ಘಟನೆ ಸೋಮೇಶ್ವರ ಪುರಸಭೆ ವ್ಯಾಪ್ತಿಯ ಕುಂಪಲ ಗುರುನಗರ ಎಂಬಲ್ಲಿ ಶನಿವಾರ ಸಂಜೆ ನಡೆದಿದೆ.

ಘಟನೆಯ ವಿವರ

ಕುಂಪಲ ಗುರುನಗರದ ಶ್ರೀ ಕೃಷ್ಣ ಮುಖ್ಯಪ್ರಾಣ ದೇವಸ್ಥಾನದ ಬಳಿ ನಿರ್ಮಾಣಗೊಳ್ಳುತ್ತಿರುವ ವಸತಿ ಬಡಾವಣೆಯ ಬೃಹತ್ ಆವರಣ ಗೋಡೆಯು ಶನಿವಾರ ಸಂಜೆ ಏಕಾಏಕಿ ಕುಸಿದು ಪಕ್ಕದ ಬಡಾವಣೆಯ ರಸ್ತೆಗೆ ಬಿದ್ದಿದೆ. ಲೇ ಔಟ್ ಆವರಣದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಜೆಸಿಬಿ ಯಂತ್ರವು ಆವರಣ ಗೋಡೆಯ ಜತೆಯಲ್ಲೇ ಪಕ್ಕದ ರಸ್ತೆಗೆ ಉರುಳಿ ಬಿದ್ದಿದ್ದು, ಚಾಲಕನು ಜೆಸಿಬಿ ಯಂತ್ರದಿಂದ ಹೊರ ಜಿಗಿದು ಸಣ್ಣ ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ಮಳೆಗಾಲದಲ್ಲಿ ನೀರಿನ ಹರಿವು ಮತ್ತು ಮಣ್ಣು ಒದ್ದೆಯಾದ ಸಂದರ್ಭ ಈ ಘಟನೆ ಸಂಭವಿಸಿರುತ್ತಿದ್ದರೆ ಘನ ಘೋರ ಅನಾಹುತವೇ ಸಂಭವಿಸುತ್ತಿತ್ತು. ಕಳಪೆ ಕಾಮಗಾರಿ ಮೂಲಕ ನಿರ್ಲಕ್ಷ್ಯ ವಹಿಸಿ ಘಟನೆಗೆ ಕಾರಣರಾದವರ ವಿರುದ್ಧ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ. ಸ್ಥಳೀಯ ನಿವಾಸಿ ಸುಶಿತ್ ರಾವ್ ಅವರ ಕಾರು ಮತ್ತು ಆಟೋ ರಿಕ್ಷ, ರಕ್ಷಿತ್ ಎಂಬವರ ಮೋಟಾರ್ ಬೈಕ್ ಜಖಂ ಗೊಂಡಿದೆ. ಗೋಡೆ ಕುಸಿದ ರಭಸಕ್ಕೆ ಪಕ್ಕದ ಬಡಾವಣೆಯ ಮನೆಗಳ ಆವರಣ ಗೋಡೆ, ಗೇಟ್‌ಗಳು ಜಖಂಗೊಂಡಿವೆ. ಕಳಪೆ ಕಾಮಗಾರಿಯಿಂದಲೇ ಆವರಣ ಗೋಡೆಯು ಕುಸಿದು ಬಿದ್ದಿದೆಯೆಂದು ಮೇಲ್ನೋಟಕ್ಕೆ ತಿಳಿದು ಬಂದಿದೆ. ಘಟನಾ ಸ್ಥಳಕ್ಕೆ ಸೋಮೇಶ್ವರ ಪುರಸಭೆಯ ಉಪಾಧ್ಯಕ್ಷ ರವಿಶಂಕರ ಸೋಮೇಶ್ವರ, ಸದಸ್ಯರಾದ ಮನೋಜ್ ಕಟ್ಟೆಮನೆ, ಮೋಹನ್ ಶೆಟ್ಟಿ ಕುಂಪಲ, ಜಯ ಪೂಜಾರಿ, ಪುರಸಭಾ ಅಧಿಕಾರಿಗಳು ಮತ್ತು ಮಂಗಳೂರು ದಕ್ಷಿಣ ಸಂಚಾರಿ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.





ಸ್ಥಳೀಯ ನಿತ್ಯ ಮಕ್ಕಳು ಆಟವಾಡುವ ಸ್ಥಳ

ಕುಸಿದು ಬಿದ್ದ ಆವರಣ ಗೋಡೆಯ ಪಕ್ಕದ ರಸ್ತೆಯಲ್ಲಿ ದಿನ ನಿತ್ಯವೂ ಸಂಜೆ ಸ್ಥಳೀಯ ಮಕ್ಕಳು ಆಟವಾಡುತ್ತಿದ್ದು ಘಟನೆಯು ಸಂಜೆ ನಾಲ್ಕು ಗಂಟೆಗೆ ಘಟಿಸಿದ್ದರಿಂದ ಆ ವೇಳೆ ರಸ್ತೆಯಲ್ಲಿ ಬಿಸಿಲು ಇದ್ದ ಕಾರಣ ಮಕ್ಕಳು ಆಟವಾಡಲು ಮನೆಗಳಿಂದ ಹೊರಬಂದಿರಲಿಲ್ಲ. ಮಕ್ಕಳು ಆಟವಾಡುತ್ತಿದ್ದ ವೇಳೆ ಘಟನೆ ನಡೆಯುತ್ತಿದ್ದರೆ ದೊಡ್ಡ ಅನಾಹುತವೇ ಸಂಭವಿಸುತ್ತಿತ್ತು.

ಮಂಜೇಶ್ವರಕ್ಕೆ ಪಾಲಕ್ಕಾಡು ರೈಲ್ವೆ ಡಿವಿಜನಲ್ ಮೆನೇಜರ್ ಭೇಟಿ

• **ಮಂಜೇಶ್ವರ:** ಪಾಲಕ್ಕಾಡು ರೈಲ್ವೆ ಡಿವಿಜನಲ್ ಮೆನೇಜರ್ ಮಧುಕರ ರಾವ್ ಅವರು ಶನಿವಾರ ಮಂಜೇಶ್ವರ ರೈಲ್ವೆ ನಿಲ್ದಾಣಕ್ಕೆ ಭೇಟಿ ನೀಡಿ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸಮಾಲೋಚಿಸಿದರು.

ಈ ಸಂದರ್ಭ ಮಂಜೇಶ್ವರ ಬ್ಲಾಕ್ ಪಂಚಾಯತ್ ಅಧ್ಯಕ್ಷ ಸೈಫುಲ್ಲ ತಂಙಳ್, ಮಂಜೇಶ್ವರ ಗ್ರಾಮ ಪಂಚಾಯತ್ ಅಧ್ಯಕ್ಷ ಬಶೀರ್ ಕನಿ, ಬಿಜೆಪಿ ಕೇರಳ ರಾಜ್ಯ ಪರಿಷತ್ ಸದಸ್ಯ ಎಂ.ಹರಿಶ್ಚಂದ್ರ ಮಂಜೇಶ್ವರ, ರೈಲ್ವೆ ಪ್ಯಾಸೆಂಜರ್ಸ್ ಅಸೋಸಿಯೇಶನ್ ಅಧ್ಯಕ್ಷ ಮಜಿದ್, ಕಾರ್ಯದರ್ಶಿ ಇಬ್ರಾಹಿಂ, ಇರ್ಫಾನ್, ರಾಮಕೃಷ್ಣ ಭಟ್, ಎಂ.ಕೆ.ಮಜೀದ್, ಅಹಮ್ಮದ್ ಬಶೀರ್, ಫಾತಿಮತ್ ಜೋರಾ, ಮುಕ್ತಾರ್ ಮಾಡ ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಅನೇಕ ರೈಲ್ವೆ ಪ್ಯಾಸೆಂಜರ್‌ಗಳನ್ನು ಒಳಗೊಂಡ ನಿಯೋಗವು ಡಿವಿಜನಲ್ ಮೆನೇಜರ್‌ರಿಗೆ ರೈಲ್ವೆ ಸ್ಟೇಷನ್ ಅಭಿವೃದ್ಧಿಯ ಬಗ್ಗೆ ಮನವಿ ಸಮರ್ಪಿಸಿತು.

ಬಿಜೆಪಿ ಮುಂದಾಳು ಎಂ.ಹರಿಶ್ಚಂದ್ರ ಮಂಜೇಶ್ವರ ಅವರು ತಮ್ಮ ಮನವಿಯಲ್ಲಿ ರೈಲ್ವೆ ಸ್ಟೇಷನ್‌ನ ಎರಡು ಫ್ಲಾಟ್ ಫಾಮ್‌ಗಳಿಗೆ ಮೇಲ್ಛಾವಣಿಯನ್ನು ಒದಗಿಸಿ ಮಳೆ ಮತ್ತು ಬಿಸಿಲಿನ ತಾಪವನ್ನು ತಪ್ಪಿಸಲು ಅನುಕೂಲಕರವಾಗುವಂತೆ ಕಾರ್ಯಗತಗೊಳಿಸಬೇಕು ಎಂಬದನ್ನು ಉಲ್ಲೇಖಿಸಿದ್ದಾರೆ. ಅದೇ ರೀತಿ ರೈಲ್ವೆ ಪ್ಯಾಸೆಂಜರ್ಸ್‌ಗೆ ಫ್ಲಾಟ್ ಫಾರ್ಮ್‌ನಲ್ಲಿ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಅಳವಡಿಸಬೇಕು, ಶುದ್ಧ ಕುಡಿಯುವ ನೀರು ಒದಗಿಸಬೇಕು, ಪ್ರಾಥಮಿಕ ಸೌಕರ್ಯಗಳಲ್ಲಿ ಒಂದಾದ ಶೌಚಾಲಯ ನಿರ್ಮಿಸಬೇಕು, ರೈಲ್ವೆ ಟಿಕೆಟ್ ಇನ್ ರಿಸರ್ವೇಶನ್ ಕೌಂಟರ್ ತೆರೆಯಬೇಕು, ರೈಲ್ವೆ ಸ್ಟೇಷನ್ ಫ್ಲಾಟ್ ಫಾಮ್‌ನಲ್ಲಿ ಕ್ಯಾಂಟೀನ್ ಸ್ಥಾಪಿಸಬೇಕು, ಬೆಂಗಳೂರು, ಮುಂಬಯಿ ಸಹಿತ ದೀರ್ಘದೂರದ ರೈಲುಗಳಿಗೆ ಮಂಜೇಶ್ವರದಲ್ಲಿ ನಿಲುಗಡೆ ನೀಡಬೇಕು ಮೊದಲಾದ ಬೇಡಿಕೆಗಳನ್ನು ಮುಂದಿರಿಸಿ ಮನವಿಯನ್ನು ಸಮರ್ಪಿಸಲಾಯಿತು. ಸಲ್ಲಿಸಿದ ಮನವಿಯ ಬಗ್ಗೆ ಸಮಗ್ರವಾಗಿ ಪರಿಶೀಲಿಸುವುದಾಗಿ ಡಿವಿಜನಲ್ ಮೆನೇಜರ್ ಮಧುಕರ ರಾವ್ ಇದೇ ವೇಳೆ ಭರವಸೆ ನೀಡಿದರು.



ಶಂಕರ ಜಯಂತಿ ಪ್ರಯುಕ್ತ ವಿವಿಧ ಸ್ಪರ್ಧೆಗಳು: ರೂ.2.5 ಲಕ್ಷಕ್ಕೂ ಅಧಿಕ ಮೊತ್ತದ ಬಹುಮಾನ

• **ಪುತ್ತೂರು:** ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠದ ವತಿಯಿಂದ ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ ಪ್ರಯುಕ್ತ ಮೇ 3ರ ಭಾನುವಾರದಂದು ಪುತ್ತೂರಿನ ಬಪ್ಪಳಿಗೆಯಲ್ಲಿನ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿನ ಶ್ರೀ ಶಂಕರಸಭಾಭವನದಲ್ಲಿ 'ಶಂಕರವಿಜಯ' ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಪುತ್ತೂರು, ಬಂಟ್ವಾಳ, ಸುಳ್ಯ, ಮಂಜೇಶ್ವರ, ಕಡಬ ಮತ್ತು ಕಾಸರಗೋಡುತಾಲೂಕುಗಳಧರ್ಮಾಭಿಮಾನಿಗಳಿಗಾಗಿ ಈ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. 10ರಿಂದ 14 ವರ್ಷದ ವಿದ್ಯಾರ್ಥಿಗಳಿಗಾಗಿ ಗಣೇಶ ಪಂಚರತ್ನ ಮತ್ತು ಗುರುಪಾದುಕಾ ಸ್ತೋತ್ರದ ಕಂಠಪಾಠ ಸ್ಪರ್ಧೆ, 15ರಿಂದ 18 ವರ್ಷ ವಯಸ್ಸಿನ ವಿದ್ಯಾರ್ಥಿಗಳಿಗೆ 'ಶ್ರೀ ಶಂಕರಾಚಾರ್ಯರಲ್ಲಿದ್ದ ಹಿರಿಯರನ್ನು ಗೌರವಿಸುವ ಮತ್ತು ಶಿಷ್ಯ ವಾತ್ಸಲ್ಯದ ಗುಣ' ಎಂಬ ವಿಷಯದ ಬಗೆಗಿನ ಭಾಷಣ ಸ್ಪರ್ಧೆ ಹಾಗೂ 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ 'ಶ್ರೀ ಶಂಕರ ಭಗವತ್ಪಾದರ ಜೀವನದಲ್ಲಿ ನಾ ಕಂಡ ಮೌಲ್ಯಗಳು' ಎಂಬ ವಿಷಯದ ಬಗೆಗಿನ ಭಾಷಣ ಸ್ಪರ್ಧೆ ನಡೆಯಲಿದೆ.

ಸಾರ್ವಜನಿಕ ವಿಭಾಗದಲ್ಲೂ ಸ್ಪರ್ಧೆ ನಡೆಯಲಿದ್ದು ಶ್ರೀಮದ್ ವಾಲ್ಮೀಕಿ ರಾಮಾಯಣ, ಶ್ರೀ ಶಂಕರ ಭಗವತ್ಪಾದರ ಜೀವನ ಮತ್ತು ಉಪದೇಶಗಳು ಎಂಬ ವಿಷಯವನ್ನಾಧರಿಸಿ ರಸಪ್ರಶ್ನೆ ಸ್ಪರ್ಧೆ ನಡೆಯಲಿದೆ. ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ವಯಸ್ಸಿನ ನಿರ್ಬಂಧಗಳಿಲ್ಲದೆ ವಿದ್ಯಾರ್ಥಿಗಳು, ಸಾರ್ವಜನಿಕರು ಭಾಗವಹಿಸಬಹುದಾಗಿದೆ. ಲ್ಯಾಪ್ ಟಾಪ್ / ಟ್ಯಾಬ್ ಮೊದಲಾದ ಬಹುಮಾನಗಳು: ಪ್ರತಿಯೊಂದು ವಿಭಾಗದಲ್ಲೂ ವಿಜೇತರಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳು ಲಭ್ಯವಿದ್ದು, ಬಹುಮಾನಗಳು ಲ್ಯಾಪ್ ಟಾಪ್, ಟ್ಯಾಬ್ ಮೊದಲಾದ ಆಕರ್ಷಕ ವಸ್ತು ವಿಶೇಷಗಳನ್ನು ಒಳಗೊಂಡಿವೆ. ಒಟ್ಟು ರೂ.2.50 ಲಕ್ಷಕ್ಕಿಂತಲೂ ಅಧಿಕ ಮೊತ್ತದ ಬಹುಮಾನಗಳು ಈ ಸ್ಪರ್ಧೆಯಲ್ಲಿ ಒಳಗೊಂಡಿವೆ. ಜತೆಗೆ ಪ್ರತಿ ಸ್ಪರ್ಧೆಯಲ್ಲೂ ಆಯ್ದ ವಿದ್ಯಾರ್ಥಿಗಳಿಗೆ ಸಮಾಧಾನಕರ ಬಹುಮಾನಗಳು ದೊರೆಯಲಿವೆ.

ಜಗದ್ಗುರುಗಳಿಂದ ಬಹುಮಾನ ವಿತರಣೆ

ಈ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಮೇ 7ರಂದು ಬಪ್ಪಳಿಗೆಯ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿನ ಶ್ರೀ ಶಂಕರ ಸಭಾಭವನದಲ್ಲಿ ಬಹುಮಾನ ವಿತರಿಸಿ ಹರಸಲಿದ್ದಾರೆ.



ನೋಂದಾವಣೆ

ಈ ಸ್ಪರ್ಧೆಗಳಿಗೆ ಹೆಸರು ನೋಂದಾಯಿಸಲು ಮೇಲೆ ಉಲ್ಲೇಖಿಸಿದ 5 ತಾಲೂಕುಗಳ ಅಥವಾ ಈ ತಾಲೂಕುಗಳಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಅವಕಾಶವಿದ್ದು, ಮೇ 1ರ ಮೊದಲಾಗಿ ನೋಂದಾವಣೆ ಮಾಡುವಂತೆ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ: 9483435696, 9483934170 ಅಥವ 9449102082 ಸಂಖ್ಯೆಗೆ ಕರೆ ಮಾಡಬಹುದು.

ನೀರಿನ ಸಮಸ್ಯೆ ಉಂಟಾಗದಂತೆ ಸೂಕ್ತ ಕ್ರಮವಹಿಸಿ: ಸೋಮಶೇಖರ್ ಸೂಚನೆ

• **ಮಡಿಕೇರಿ:** ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಸೂಕ್ತ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಈ ಬಾರಿ ಬೇಸಿಗೆಯ ಝಳ ಹೆಚ್ಚಿದ್ದು, ಸಾರ್ವಜನಿಕರಿಗೆ ಯಾವುದೇ ಸಮಸ್ಯೆಯಾಗದಂತೆ ಎಚ್ಚರ ವಹಿಸಬೇಕು. ನಗರ ಮತ್ತು ಗ್ರಾಮೀಣ ಭಾಗದಲ್ಲಿ ಯಾವುದೇ ರೀತಿಯ ದೂರುಗಳು ಬಾರದಂತೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ಅವರು ನಿರ್ದೇಶನ ನೀಡಿದರು.

ಈ ಬಗ್ಗೆ ಗ್ರಾಮೀಣ ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ನಗರ ವ್ಯಾಪ್ತಿಯಲ್ಲಿ ನಗರಸಭೆ ಆಯುಕ್ತರು, ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳು ಹೆಚ್ಚಿನ ನಿಗಾ ವಹಿಸಬೇಕು ಎಂದು ಅವರು ಸೂಚಿಸಿದರು.

ಅಗತ್ಯವಿದ್ದಲ್ಲಿ ಟ್ಯಾಂಕರ್ ಬಳಕೆ

ಕುಡಿಯುವ ನೀರು ಪೂರೈಕೆಯ ಮೂಲಗಳಲ್ಲಿನ ನೀರಿನ ಲಭ್ಯತೆಯ ಬಗ್ಗೆ ಮಾಹಿತಿ ಹೊಂದಬೇಕು. ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲು ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

40 ಪಂಚಾಯ್ತಿಗಳಲ್ಲಿ ಸಮಸ್ಯೆ

ಜಿಲ್ಲೆಯ 40 ಗ್ರಾಮ ಪಂಚಾಯಿತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಮಾಹಿತಿ ಇದ್ದು, ಸೂಕ್ತ ಮುನ್ನೆಚ್ಚರಿಕೆ ವಹಿಸುವಂತೆ ತಿಳಿಸಿದರು.

ಜಿ.ಪಂ.ಉಪ ಕಾರ್ಯದರ್ಶಿ ಚಂದ್ರಶೇಖರ್ ಅವರು ಮಾತನಾಡಿ, ಈಗಾಗಲೇ ಗ್ರಾ.ಪಂ.ಗಳೊಂದಿಗೆ ಹಲವು ಸುತ್ತಿನ ಸಭೆ ನಡೆಸಿದ್ದು, ಈವರೆಗೂ ಯಾವುದೇ ಸಮಸ್ಯೆ ತಲೆದೋರಿಲ್ಲ. ಮುಂದೆಯೂ ಸಮಸ್ಯೆಯಾಗದಂತೆ ಎಚ್ಚರ ವಹಿಸಲಾಗುವುದು ಎಂದರು.

ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ಅವರು, ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಸರ್ಕಾರ ನಡೆಸುವ ಮಹನೀಯರ ಜಯಂತಿ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಇದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಕಿವಿಮಾತು ಹೇಳಿದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಭಾಸ್ಕರ್, ತಾ.ಪಂ.ಇಒ ಶೇಖರ್, ಪರಮೇಶ್, ಅಪ್ಪಣ್ಣ ಇತರರು ಇದ್ದರು.



'ಯಕ್ಷಗಾನ ವಿಶೇಷ ಪರೀಕ್ಷೆಗೆ' ಪೂರ್ವಭಾವಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಯಕ್ಷಗಾನ ಕ್ಷೇತ್ರದ ತಜ್ಞರ ಸಭೆ

ತೆಂಕು, ಬಡಗುತಿಟ್ಟು ಹಿಮ್ಮೇಳ ಮುಮ್ಮೇಳದ ಸಮಗ್ರ ತಿಳುವಳಿಕೆ ಪಠ್ಯಕ್ರಮ

• **ಕೊಣಾಜೆ:** ಮಂಗಳೂರು ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಯಕ್ಷಗಾನ ಅಧ್ಯಯನ ಕೇಂದ್ರದ ವತಿಯಿಂದ ನಡೆಯಲಿರುವ 'ಯಕ್ಷಗಾನ ವಿಶೇಷ ಪರೀಕ್ಷೆಗೆ' ಪೂರ್ವಭಾವಿಯಾಗಿ ಯಕ್ಷಗಾನ ಕ್ಷೇತ್ರದ ತಜ್ಞರ ಸಭೆಯು ಮಂಗಳೂರು ವಿವಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆಯಿತು.

ಮಂಗಳೂರು ವಿವಿ ಕುಲಪತಿ ಪ್ರೊ. ಪಿ.ಎಲ್. ಧರ್ಮ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಯಕ್ಷಗಾನ ವಿಶೇಷ ಪರೀಕ್ಷೆಯ ಸ್ವರೂಪ,ಮಾರ್ಗಸೂಚಿಯ ಬಗ್ಗೆ ಚರ್ಚಿಸಲಾಯಿತು. ಈ ವಿಶೇಷ ಪರೀಕ್ಷೆಯನ್ನು ವಿಶ್ವವಿದ್ಯಾನಿಲಯದ ನಿಯಮಾನುಸಾರವಾಗಿ ಪ್ರಾಥಮಿಕ, ಮಾಧ್ಯಮಿಕ, ವಿದ್ವತ್ ಪೂರ್ವ ಹಾಗೂ ವಿದ್ವತ್ ಎಂಬ ಹಂತಗಳಲ್ಲಿ ನಡೆಯಲಿದ್ದು, ಇದಕ್ಕೆ ಪೂರಕವಾಗಿ ಈ ಶೈಕ್ಷಣಿಕ ಆಯಾಮವು ಯಕ್ಷಗಾನದ ಶಿಕ್ಷಣ ಕೇಂದ್ರಗಳು ಮತ್ತು ಗುರುಮುಖೇನ ಯಕ್ಷ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ನೇರವಾಗಿ ಪರೀಕ್ಷೆಯನ್ನು ಬರೆಯುವ ಅವಕಾಶವನ್ನು ಕಲ್ಪಿಸಲಾಗುವುದು. ಪಠ್ಯಕ್ರಮವು ಪ್ರಾಥಮಿಕ, ಮಾಧ್ಯಮಿಕ ಹಂತದಲ್ಲಿ ತೆಂಕುತಿಟ್ಟು, ಬಡಗುತಿಟ್ಟು ಯಕ್ಷಗಾನದ ಹಿಮ್ಮೇಳ ಮುಮ್ಮೇಳದ ಸಮಗ್ರ ತಿಳುವಳಿಕೆಯನ್ನು ನೀಡಲಿದ್ದು, ವಿದ್ವತ್ ಪೂರ್ವ ಹಾಗೂ ವಿದ್ವತ್ ನೆಲೆಯಲ್ಲಿ ಯಕ್ಷಗಾನದ ಸೂಕ್ಷ್ಮ ಅಧ್ಯಯನ, ಸಂಶೋಧನೆಗಳನ್ನು ಒಳಗೊಳ್ಳಲಿದೆ ಎಂಬ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. ಇದೇ ಸಂದರ್ಭದಲ್ಲಿ ಯಕ್ಷಗಾನ ಕೇಂದ್ರದ ಯಕ್ಷಗಾನ ಗುರುಗಳಾದ ದೀಕ್ಷಿತ್ ಕೋಟ್ಯಾನ್ ಅವರು ಯಕ್ಷಗಾನ ಪರೀಕ್ಷೆ, ಪಠ್ಯಕ್ರಮಗಳ ಸ್ವರೂಪವನ್ನು ಕುರಿತ ಕರಡು ಪ್ರತಿಯನ್ನು ಸಭೆಗೆ ಮಂಡಿಸಿದರು.ಯಕ್ಷಗಾನ ಕೇಂದ್ರದ ನಿರ್ದೇಶಕರಾದ ಡಾ.ಧನಂಜಯ ಕುಂಬ್ಳೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಯಕ್ಷಗಾನ ವಿಶೇಷ ಪರೀಕ್ಷೆಯ ರೂಪುರೇಷೆಗಳನ್ನು ವಿವರಿಸಿದರು. ಸಭೆಯಲ್ಲಿ ಚಾಮರಾಜನಗರ ವಿಶ್ವವಿದ್ಯಾ ನಿಲಯದ ಕುಲಪತಿ ಪ್ರೊ. ಗಂಗಾಧರ್, ಸಿಂಡಿಕೇಟ್ ಸದಸ್ಯರಾದ ಮಹಾದೇಶ್ ಮಂಗಳೂರು ವಿವಿ ಕುಲಸಚಿವರಾದ ಪ್ರೊ. ಗಣೇಶ್ ಸಂಜೀವ್, ಪರೀಕ್ಷಾಂಗ ಕುಲಸಚಿವ ಪ್ರೊ. ದೇವೇಂದ್ರಪ್ಪ, ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಪ್ರೊ.ನಾಗಪ್ಪ ಗೌಡ, ಯಕ್ಷಗಾನ ಕ್ಷೇತ್ರದ ಹಿರಿಯ ವಿದ್ವಾಂಸರುಗಳಾದ ಡಾ. ಎಂ. ಪ್ರಭಾಕರ ಜೋಶಿ, ಪ್ರೊ. ಎಂ.ಎಲ್. ಸಾಮಗ, ಡಾ. ಪಾದೇಕಲ್ಲು ವಿಷ್ಣು ಭಟ್, ಡಾ. ಕೆ.ರಾಘವ ನಂಬಿಯಾರ್, ಪ್ರೊ.ಶೀಪತಿ ಕಲ್ಲೂರಾಯ, ಪಟ್ಲ ಸತೀಶ್ ಶೆಟ್ಟಿ, ಡಾ.ಗಣರಾಜ ಕುಂಬ್ಳೆ, ಡಾ. ಚಂದ್ರಶೇಖರ ದಾಮ್ಲೆ, ಮುರಳಿ ಕಡೆಕಾರ್, ಪ್ರಕಾಶ್ ಮೂಡಿತ್ತಾಯ, ಡಾ. ನಾಗವೇಣಿ ಮಂಚಿ, ಸುಬ್ರಹ್ಮಣ್ಯ ಪ್ರಸಾದ್ ಮುದ್ರಾಡಿ, ರಾಧಾಕೃಷ್ಣ ಕಲ್ಚಾರ್, ಸುಜಯೀಂದ್ರ ಹಂದೆ, ಪ್ರಥ್ವಿರಾಜ್ ಕವತ್ತಾರು, ಭಾಸ್ಕರ ರೈ ಕುಕ್ಕುವಳ್ಳಿ, ಪಣಂಬೂರು ವಾಸುದೇವ ಐತಾಳ್, ಕೃಷ್ಣ ಪ್ರಕಾಶ್ ಉಳಿತ್ತಾಯ, ಡಾ. ಆರತಿ ಪಟ್ರಮೆ, ರಾಜಾರಾಂ ಹೊಳ್ಳ ಕೈರಂಗಳ ಮೊದಲಾದವರು ಉಪಸ್ಥಿತರಿದ್ದರು.

ಸಹಾಯಕ ಕುಲಸಚಿವ ಸುಚೇತ, ಕಛೇರಿ ಅಧೀಕ್ಷಕ ಸಂಧ್ಯಾ, ಯಕ್ಷಗಾನ ಕೇಂದ್ರದ ಸಂಶೋಧನಾ ಅಧಿಕಾರಿ ಡಾ. ಸತೀಶ್ ಕೊಣಾಜೆ, ಸಿಬ್ಬಂದಿಗಳಾದ ಸ್ವಾತಿರಾವ್, ಸರಿತಾ ಸಹಕರಿಸಿದರು.



ಯಕ್ಷಗಾನಕ್ಕೆ ಶೈಕ್ಷಣಿಕ ಆಯಾಮ

ಯಕ್ಷಗಾನವು ನಮ್ಮನಾಡಿನ ಹೆಮ್ಮೆಯ ಕಲೆ ಮತ್ತು ಸಂಸ್ಕೃತಿಯ ಪ್ರತೀಕವೂ ಹೌದು. ಈ ಶ್ರೇಷ್ಠ ಕಲೆಯನ್ನು ಉಳಿಸಿ ಬೆಳೆಸುವ ಜವಬ್ದಾರಿ ನಮಗೆಲ್ಲರಿಗೂ ಇದೆ. ಈ ನಿಟ್ಟಿನಲ್ಲಿ ಮಂಗಳೂರು ವಿಶ್ವವಿದ್ಯಾಲಯವು ಮಹತ್ವದ ಹೆಜ್ಜೆಯನ್ನಿಡುತ್ತಿದ್ದು ಯಕ್ಷಗಾನಕ್ಕೆ ಶೈಕ್ಷಣಿಕ ಆಯಾಮ ನೀಡುವ ಉದ್ದೇಶದೊಂದಿಗೆ 'ಯಕ್ಷಗಾನ ವಿಶೇಷ ಪರೀಕ್ಷೆ'ಯನ್ನು ನಡೆಸಲು ಯೋಜನೆ ರೂಪಿಸಿಕೊಂಡಿದೆ. ಇದರಿಂದ ಯಕ್ಷಗಾನಕ್ಕೊಂದು ಶೈಕ್ಷಣಿಕ ಸ್ಪರ್ಶ ಒದಗಿಬರಲಿದ್ದು, ಪರೀಕ್ಷೆಯ ಸ್ವರೂಪ ಹಾಗೂ ಪಠ್ಯಕ್ರಮದ ಬಗ್ಗೆ ಚರ್ಚಿಸಲು ನಡೆದ ಸಭೆಯಲ್ಲಿ ಹಿರಿಯ ತಜ್ಞರು ಸಲಹೆ ಮಾರ್ಗದರ್ಶನದೊಂದಿಗೆ ಪ್ರೋತ್ಸಾಹ ನೀಡಿದ್ದಾರೆ.

■ ಪ್ರೊ.ಪಿ.ಎಲ್.ಧರ್ಮ, ಕುಲಪತಿಗಳು ಮಂಗಳೂರು ವಿವಿ

PUBLIC NOTICE

General Public is hereby informed that I, Mr. George Frederick Pereira, S/o Mr. I Pereira, aged about 72 years, resident of Door No.7-4-476/1, Matadakani, 4th Cross, Ashok Nagar, Mangalore-575006. That I am owner of the immovable property description of the same is given herein below and hereinafter referred to as schedule property and I acquired the same as per the terms of registered Will dated 20-03-2024 as per document no. MGC-3-00551-2023-24 on the file of Sub-Registrar of Mangalore City. That initially my sister-in-law had purchased the schedule property as per the terms of sale deed dated 23-06-2012 as per document no. MGC-1-01719-2012-13 registered on the file of Sub-Registrar of Mangalore City. That aforesaid original sale deed is lost and not traceable. That I am the absolute owner of the schedule property and the schedule property is free from any encumbrances. Therefore, if any persons find the said original sale deed I hereby call upon you to hand over the same to me.

SCHEDULE PROPERTY

All the piece and parcel of the residential apartment No.402 bearing City Corporation Door No.3-E-21-1832/10 measuring super built up area of 980 Sq. Ft on the Fourth Floor and reserved Four Wheeler parking area on the basement floor of the "Talisman Apartments" situated at Kadri 'A' Village of Mangalore Taluk Kadri Ward Held on Muligeni right within Mangalore City Sub-Registration District of D.K. District and comprised:

R.S.No.	T.S. No.	Extent (A-C)
96/3	116/2A2	0-18.72

With 5% undivided right, title and interest in the said property and common areas and facilities with easementary rights appurtenant thereto.

Sd/- George Frederick Pereira
Mangalore
17-04-2026

PUBLIC NOTICE

To the General Public

This statement is issued with regards to the paper publication in the Udayavani, dated 04/03/2026, issued by one Mr Chandrakanth Sanu, Authorised Signatory of M/s Mangala Builders Pvt Ltd, Mangalore, who is making out to the General Public that he is the owner of the Schedule property,or has contracted to purchase the above said property, because of the presence of an Agreement for Sale which he has obtained through dubious means, which is not the true representation at all.. The General Public is cautioned hereby not to deal with the aforementioned company or it's representatives or the Authorised Signatory or any of his family members, by believing their representation, and if they do so, they will do so at their own risk and costs.

As regards the Paper Publication and the case filed against us at the court at Mangalore, We will do the necessary representation and get a favorable order in our favour as per the law of the land.

I, Mrs Sapna Sunil, the undersigned owner of the property, once again caution the General Public, not to fall prey to the false representations made by the So called Mangala Builders Pvt Ltd, and it's Authorised Signatory, or any of his family members.

Date : 01-04-2026 Sd/- **SAPNA SUNIL**

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿದ್ಯುತ್ ವಿಭಾಗ, ಕೆ.ಆರ್. ವೃತ್ತ, ಬೆಂಗಳೂರು.
ದೂರವಾಣಿ ಸಂಖ್ಯೆ: 080-22112809
ಸಂ.ಕಾ.ಇಂ(ವಿ)/ಲೋ.ಇ/ವಿದ್ಯುತ್/2026-27/79 ದಿನಾಂಕ: 16.04.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಯನ್ನು **KW-3 STD** ಷರತ್ತುಗೊಳಪಟ್ಟಂತೆ ಮೊದಲನೆ ಟೆಂಡರ್ ಕರೆಯನ್ನು ಕೆ.ಪಿ.ಪಿ.ಪಿ ಮೂಲಕ ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಕೆಳಕಂಡಂತಿವೆ.

Sl. No.	Work Indents	Work Value (Rs. in Lakhs)
1	Providing LAN Connection to Court building at Chikkamagalur PWD/2025-26/EL/WORK_INDENT 34712.	63.55

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **13.04.2026** ರಿಂದ **28.04.2026, 16:00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ ದಿನಾಂಕ: **28.04.2026** ರಂದೆ **16:00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು **Karnataka Public Procurement Portal** ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ).
ವಾಸಾಸಂಇ/ಉನಿ-ಸಿ.ಪಿ/260/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಾಲಯ
ಉಪ ವಿಭಾಗ ಆಸ್ಪತ್ರೆ, ಗಂಗಾವತಿ-583227 ಜಿ॥ ಕೊಪ್ಪಳ
ದೂರವಾಣಿ :08533-230102/230103, e-mail: sdh.gangavathi@gmail.com
ಸಂಖ್ಯೆ:ಉವಿಆಗಂ/ಎಮ್‌ಸಿಹೆಚ್/ಪಥ್ಯಾಹಾರ/10/2026-27 ದಿನಾಂಕ: 16/04/2026

ಇ ಪ್ರೊಕ್ಯೂರ್‌ಮೆಂಟ್ ಟೆಂಡರ್

ವಿಷಯ:- ಉಪ ವಿಭಾಗ ಆಸ್ಪತ್ರೆ ಗಂಗಾವತಿಗೆ ಪಥ್ಯಾಹಾರ ವಸ್ತುಗಳು ಪೂರೈಕೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆದಿರುವ ಬಗ್ಗೆ.
ಉಲ್ಲೇಖ:- ಮಾನ್ಯ ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ಕಡತ ಅನುಮೋದನೆ **ದಿನಾಂಕ:- 07/04/2026**

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಪ ವಿಭಾಗ ಆಸ್ಪತ್ರೆ ಗಂಗಾವತಿ ಕೊಪ್ಪಳ ಜಿಲ್ಲೆಯಲ್ಲಿ, **2026-27** ನೇ ಸಾಲಿಗಾಗಿ ಪಥ್ಯಾಹಾರ ವಸ್ತುಗಳು ಅಂದಾಜು ಮೊತ್ತ **ರೂ:-53,74,366.00** ಗಳ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿರುತ್ತದೆ.

1) ಟೆಂಡರ್ ಸಲ್ಲಿಸಲು ಪ್ರಾರಂಭ **ದಿನಾಂಕ: 18.04.2026.** 2) ಟೆಂಡರ್ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಕೊನೆಯ **ದಿನಾಂಕ: 30.04.2026** ರಂದು **ಸಂಜೆ 4.00 ಗಂಟೆಯೊಳಗೆ.** 3) ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 16.05.2026** ರಂದು **ಸಂಜೆ 4.30 ಗಂಟೆಯೊಳಗೆ.** 4) ಮಾದರಿ ಸಲ್ಲಿಸುವ **ದಿನಾಂಕ: 18.05.2026** ರಂದು ಕಚೇರಿ ಸಮಯದಲ್ಲಿ **ಸಂಜೆ 4.30** ಒಳಗೆ. 5) ಟೆಂಡರ್ ತಾಂತ್ರಿಕ ಬಿಡ್ಡು ತೆರೆಯುವ **ದಿನಾಂಕ: 19.05.2026** ರಂದು **ಸಂಜೆ 4.31** ಗಂಟೆ. 6) **https://kppp.karnataka.gov.in/: DHFWS/2026-27/IND2422.**
ಹೆಚ್ಚಿನ ಮಾಹಿತಿಗಾಗಿ ಕಚೇರಿಯ ವೇಳೆಯಲ್ಲಿ ಈ ಕೆಳಕಂಡ ಅಧಿಕಾರಿಯವರನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು
ಉಪ ವಿಭಾಗ ಆಸ್ಪತ್ರೆ ಗಂಗಾವತಿ ಜಿ॥ ಕೊಪ್ಪಳ.
ವಾ.ಸಾ.ಸಂ.ಇ/ಕೊಪ್ಪಳ/41/
ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹೊನ್ನಾಳಿ- 577217
Email:ghhonnali@gmail.com
ಸಂಖ್ಯೆ:ಸಾಆಹೊ/45/2026-27 ದಿನಾಂಕ: 18.04.2026

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಹೊನ್ನಾಳಿ ಇಲ್ಲಿಗೆ 2026-27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮಾನವ ಸಂಪನ್ಮೂಲ ಗ್ರೂಪ್ ಡಿ ಹಾಗೂ ನಾನ್ ಕ್ಲಿನಿಕಲ್ ಸೇವೆಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 17/04/2026 ರಿಂದ ದಿನಾಂಕ: 04/05/2026 ರ ಸಂಜೆ 5.00 ವರೆಗೆ ಟೆಂಡರ್ ದಾಖಲಾತಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳು www.kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ವಾಸಾಇ/ಡಿವಿಜಿ/00/
ಕೆಎಸ್‌ಎಂಸಿಎ/2026-27
ಸಹಿ/- ಆಡಳಿತ ವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ ಹೊನ್ನಾಳಿ.

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)
ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಕುಮಟಾ (ಉ.ಕ)
ದೂರವಾಣಿ: 808386-222212 ಇಮೇಲ್: adakumta@gmail.com
ಸಂ:ಸಕೃನಿ(ಕು)/ಆಡಳಿತ/ಇ-ಪೋರ್ಟಲ್/ಹೊ.ಗು.ಸಿ.ಸೇ/2026-27 ದಿನಾಂಕ: 17-04-2026

ಟೆಂಡರ್ ಪ್ರಕಟಣೆ (ಇ ಪ್ರೊಕ್ಯರ್‌ಮೆಂಟ್ ಮೂಲಕ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 2000 ರನ್ವಯ ಸರಕಾರದಿಂದ ನೋಂದಾಯಿಸಲ್ಪಟ್ಟ ಅರ್ಹ ಸಂಸ್ಥೆಯವರು 2026-27 ನೇ ಸಾಲಿಗೆ ಈ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ರೈತ ಸಂಪರ್ಕ ಕೇಂದ್ರಗಳಿಗೆ ದಾಸ್ತಾನು ನಿರ್ವಹಣಾ ಸಿಬ್ಬಂದಿ, ಈ ಕಚೇರಿಗೆ ಗ್ರೂಪ್ "ಡಿ" ಸಿಬ್ಬಂದಿಗಳನ್ನು ಒದಗಿಸಲು ಇ ಪ್ರೊಕ್ಯರ್‌ಮೆಂಟ್ ಪೋರ್ಟಲ್ www.kppp.karnataka.gov.in ವೆಬ್‌ಸೈಟ್ ಮುಖಾಂತರ ಇ ಟೆಂಡರ್‌ನಲ್ಲಿ ಭಾಗವಹಿಸಬಹುದು. ಇ ಟೆಂಡರ್ ಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು. ಹಾಗೂ ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ನಲ್ಲಿ Tender No: AD/2026-27/SE0505 ಮತ್ತು ಈ ಕಛೇರಿಯಲ್ಲಿ ಪಡೆಯಬಹುದು.

ಇ-ಪ್ರೊಕ್ಯರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿವೆ.

(1) ಟೆಂಡರ್ ಕರೆದ ವಿವರ: ಹೊರಗುತ್ತಿಗೆ ಆಧಾರದ ಮೇಲೆ ಈ ಕಾರ್ಯಾಲಯಕ್ಕೆ ಡಿ ಗ್ರೂಪ್ ಹಾಗೂ ರೈತ ಸಂಪರ್ಕ ಕೇಂದ್ರಗಳಿಗೆ ದಾಸ್ತಾನು ನಿರ್ವಹಣಾ ಸಿಬ್ಬಂದಿ, ಹುದ್ದೆಗೆ ಸೇವೆ ಪೂರೈಸುವ ಕುರಿತು, (2) EMD ಮೊತ್ತ: 31960=00 (3) ಇ-ಟೆಂಡರ್‌ನಲ್ಲಿ ಭಾಗವಹಿಸಲು ಪ್ರಾರಂಭವಾಗುವ ದಿನಾಂಕ: 17-04-2026. (4) ಇ-ಟೆಂಡರ್ ನಲ್ಲಿ ಭಾಗವಹಿಸಲು ಕೊನೆಯ ದಿನಾಂಕ ಮತ್ತು ಸಮಯ: 16-05-2026 ಸಮಯ 4.00 ಘಂಟೆ. (5) ಇ-ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 18-05-2026 ಸಮಯ 4.00 ಘಂಟೆ. (6) ಇ-ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 25-05-2026 ಸಮಯ 12.30 ಘಂಟೆ.

ಸಹಿ/-ಸಹಾಯಕ ಕೃಷಿ ನಿರ್ದೇಶಕರು,
ಕುಮಟಾ (ಉ.ಕ)
DIPR/KWR/KSMCA/61/26-27 Dt.18.04.2026

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ,
ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ. ದೂರವಾಣಿ: 08426-281027.
ಇ-ಮೇಲ್: dam_division@rediffmail.com
ಸಂ:ಕೃಭಾಜನಿನಿ/ಆವಿಆ/ಪಿಬಿ-1/2025-26/84 ದಿನಾಂಕ:16.04.2026

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Item Rate & Percentage basis from the eligible contractors for the work indents of **Two Cover** – (1) I .No. 2782– 25.01 Lakhs (2) I. No. SE0277—135.50 Lakhs ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.

1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **17.04.2026** ರಿಂದ **27.04.2026** ಸಾಯಂಕಾಲ 5.00 ಘಂಟೆಯವರೆಗೆ.
2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ **Two Cover: 29.04.2026 ಮುಂಜಾನೆ 11.00 ಘಂಟೆಗೆ.**
3. ಪೂರ್ವಭಾವಿ ಸಭೆ I.No. SE0277—135.50 Lakh **24.04.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ **Two Cover : 04.05.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ.
ವಾಸಾಸಂಇ/ವಿಜಯಪುರ/41/ಕೆಎಸ್‌ಎಂಸಿಎ/2026-27

IN THE COURT OF III ADDL. CIVIL JUDGE AND J.M.F.C. COURT, AT MANGALORE, D.K

In O.S 1744/2025

Between:
Bank of Baroda, Alake Branch ...Plaintiff
And
Rishan Rai and another ...Defendants

NOTICE

To Defendant No.1 and 2:
1. Mr. Rishan R Rai
Aged 29 years,
S/o. B.K Rathnakar Rai,
R/at: 8-2-142/75, Flat No.406,
Shivagiri Apartment,
Near Kudroli Temple,
Alake, Mangaluru,
D.K-575003.
2. Mrs. Sujatha R Rai
Aged 57 Years,
W/o B.K Rathnakar Rai
R/at: 8-2-142/75, Flat No.406,
Shivagiri Apartment,
Near Kudroli Temple, Alake,
Mangaluru, D.K-575003.

Please take notice that the plaintiff named above has filed the above suit against you. You are not available for service of suit notice so far. Hence, the Honourable court has ordered the plaintiff to cause suit notice through paper publication against you. Therefore you are hereby called upon to appear in person or through pleader before the above said Honourable Court at **11.00 A.M. on 30-06-2026.** If you fail to appear the matter will be decided in your absence according the merits of the suit treating you ex-parte by the court.

Given under my hand and the seal of the court on this 17th day of April, 2026
Sd/- Chief Ministerial Officer
Court of Prl. Civil Judge
D.K., Mangaluru
Sd/- (Ravichandra P.M)
Advocate for plaintiff
Mangalore, D.K.
Date: 15-04-2026

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರ್,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ವಿಭಾಗ ಕಾರ್ಯಲಯ, ಹಬ್ಬುವಾಡಾ-ಕಾರವಾರ, ಉತ್ತರ ಕನ್ನಡ ಜಿಲ್ಲೆ-581301.
ದೂರವಾಣಿ: 08382-228935 ಫ್ಯಾಕ್ಸ್: 229735 E-mail: eerdwsd.uk@gmail.com
ಸಂ.: ಕಾನಿಇಂ/ಗ್ರಾಕುನಿ&ನೈವಿ/ಕಾರವಾರ/PMC/ಅಲ್ಪಾವಧಿ ಟೆಂಡರ ಪ್ರಕಟಣೆ/2026-27/79 ದಿನಾಂಕ: 18/04/2026

ಅಲ್ಪಾವಧಿ ಟೆಂಡರ್ ಪ್ರಕಟಣೆ (KPP Portal ಮೂಲಕ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಛೇರಿ ಹಾಗೂ ಉಪವಿಭಾಗಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲು ತಾತ್ಕಾಲಿಕವಾಗಿ ಒಂದು ವರ್ಷದ (12 ತಿಂಗಳು) ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಅಗತ್ಯ ತಾಂತ್ರೀಕ ಸಿಬ್ಬಂದಿ ಸೇವೆಯನ್ನು **Project Manahement Consultancy (PMC)** ಮೂಲಕ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-1999 ಹಾಗೂ ನಿಯಮ-2000 ರಂತೆ ತತ್ಸಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು **KPP** ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರ್‌ಗಳನ್ನು ಆಹ್ವಾನಿಸಿದೆ. ಗ್ರಾ.ಕು.ನೀ. & ನೈ. ಇಲಾಖೆಯಡಿ ನೋಂದಾಯಿತ / ಎಂಪಾನೆಲ್ಡ್ ತಾಂತ್ರಿಕ ಸಂಸ್ಥೆ/ಏಜೆನ್ಸಿಗಳು ಅಥವಾ ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಲ್ಪಟ್ಟ ಮಾನವ ಸಂಪನ್ಮೂಲ ಸಂಸ್ಥೆ /ಏಜನ್ಸಿಗಳಿಂದ ಟೆಂಡರ್ ನಿಯಮಾವಳಿಗಳಂತೆ **https://kppp.karnataka.gov.in KPP** ಪೋರ್ಟಲ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಮತ್ತು ಇನ್ನಿತರೆ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರನಲ್ಲಿ ಭಾಗವಹಿಸುವುದು. ವಿವರ ಈ ಕೆಳಗಿನಂತಿವೆ.

ವಿವರ: **INDENT NUMBER: RWSSD/2026-27/SE0873**

(1) ಟೆಂಡರ್ ದಾಖಲಾತಿಗಳನ್ನು **KPP** ಪೋರ್ಟಲ್ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ: 19/04/2026 ರಿಂದ 28/04/2026 ರ 16.30 ಗಂಟೆಯವರೆಗೆ (2) ಟೆಂಡರುಗಳನ್ನು **KPP** ಪೋರ್ಟಲ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 28/04/2026 ರ 16.30 ಗಂಟೆಯವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ: 29/04/2026 ರಂದು 17.00 ಗಂಟೆಯ ನಂತರ. ಉಳಿದ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು
ಗ್ರಾ. ಕು. ನೀ. ಮತ್ತು ನೈ. ವಿಭಾಗ,
ಕಾರವಾರ (ಉ. ಕ. ಜಿಲ್ಲೆ)
DIPR/KWR/KSMCA/60/26-27 dt.18.04.2026

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ಬಳ್ಳಾರಿ.
ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್-4/289/2026-27 ದಿನಾಂಕ : 17-04-2026

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಅರ್ಹ ಗುತ್ತಿಗ್ತೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(ಕೆಪಿಪಿ)ರ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತಿಗೆದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಅಥವಾ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತಿಗೆದಾರರು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ **https://kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಅಥವಾ ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹೀರಾತು ಹೊರಡಿಸಲಾಗುವುದಿಲ್ಲ.

ಕ್ರ ಸಂ	ಕಾಮಗಾರಿಯ ವಿವರ	ಕಾಮಗಾರಿ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
	ಲೆಕ್ಕ ಶೀರ್ಷಿಕೆ : 3054-(ಯೋಜನೇತರ)-ರಾಜ್ಯ ಹೆದ್ದಾರಿಗಳ ನಿರ್ವಹಣೆ ;	
1)	PWD/2026-27/RD/WORK_INDENT35694	200.00
	ಲೆಕ್ಕ ಶೀರ್ಷಿಕೆ : 5054-ಕೆಆರ್‌ಡಿಸಿಎಲ್-ಬಂಡವಾಳ ವೆಚ್ಚ :	
2)	PWD/2025-26/BR/WORK_INDENT35171	100.00

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **21-04-2026 ರಂದು 12.00 ಗಂಟೆಯ ವರೆಗೆ.**
ಆ)ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **ಕ್ರಮ ಸಂಖ್ಯೆ-1 ಕಾಮಗಾರಿ – 27-04-2026 ರಂದು 16.00 ಗಂಟೆಯ ವರೆಗೆ. ಕ್ರಮ ಸಂಖ್ಯೆ-2 ಕಾಮಗಾರಿ – 02-05-2026ರಂದು 16.00 ಗಂಟೆಯ ವರೆಗೆ**
ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **ಕ್ರಮ ಸಂಖ್ಯೆ-1 ಕಾಮಗಾರಿ – 27-04-2026 ರಂದು 16.30 ಗಂಟೆಗೆ. ಕ್ರಮ ಸಂಖ್ಯೆ-2 ಕಾಮಗಾರಿ – 04-05-2026ರಂದು 11.00 ಗಂಟೆಗೆ**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/65

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಃಲೋಇ:ಪಿಬಿ- 1 2 4 5 :ವಿವಿಧ: 2026-27/201
ದಿನಾಂಕ : 17-04-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ **ಒಟ್ಟು 2195.00 ಲಕ್ಷ** ಮೊತ್ತದಲ್ಲಿ ಒಟ್ಟು 11 ಕಾಮಗಾರಿಗೆ (ಕನಿಷ್ಠ ಮೊತ್ತ **ರೂ: 100.00 ಲಕ್ಷ** ಹಾಗೂ ಗರಿಷ್ಠ ಮೊತ್ತ **ರೂ: 900.00 ಲಕ್ಷ**) ಕೆಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿ (kppp) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ-I, 3, ಹಾಗೂ 4ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http:// www. kppp. Karnataka. gov.in/** ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 : 32770, 32773-SC, 32781-Category-I, 32783-SC, 32780-Category-2A, 32763-SC, 32765-SC, 31697/call-2, 35034

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **27-04-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **29-04-2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30-04-2026.** ಆರ್ಥಿಕ ಬಿಡ್ ತೆರೆಯುವ ದಿನಾಂಕ : **02-05-2026.**

Work Indent No : Part-2 : 34882, 33917

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **02-05-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **04-05-2026** ಮಧ್ಯಾಹ್ನ 4.00 ಘಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **05-05-2026.** ಆರ್ಥಿಕ ಬಿಡ್ ತೆರೆಯುವ ದಿನಾಂಕ : **06-05-2026.**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-I ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ,
ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/31/2026-27

ಕರ್ನಾಟಕ ಸರಕಾರ
ಪಟ್ಟಣ ಪಂಚಾಯತು ಕಾರ್ಯಾಲಯ
ಬೆಳ್ತಂಗಡಿ- 574214, ದಕ್ಷಿಣ ಕನ್ನಡ ಜಿಲ್ಲೆ
Website : www.belthangaditown.gov.in E-mail : co.belthangadi@gmail.com
1 ಸಿಆರ್ ;ಜೆಇ: ಪು.ಅ/2026-27 ದಿನಾಂಕ: 13.04.2026

ಅಲ್ಪಾವಧಿ -ಟೆಂಡರು ಪ್ರಕಟಣೆ

ಬೆಳ್ತಂಗಡಿ ಪಟ್ಟಣ ಪಂಚಾಯತ್ ವ್ಯಾಪ್ತಿಯ 2026-27 ನೇ ಸಾಲಿನ ಪುರಸಭಾ ಅನುದಾನದಲ್ಲಿ ಕೈಗೊಳ್ಳುವ ವಿದ್ಯುತ್ ಕಾಮಗಾರಿಯ ಟೆಂಡರನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಲಾಗಿದೆ. ಆಸಕ್ತಿಯುಳ್ಳ ವಿದ್ಯುತ್ ಗುತ್ತಿಗೆದಾರರು ತಾವು ನಮೂದಿಸಿದ ಟೆಂಡರ್ ದರಗಳನ್ನು ಸೀಲ್ಡ್ ಮಾಡಿದ ಲಕೋಟೆಯಲ್ಲಿ ಕೆಲಸದ ಹೆಸರನ್ನು ಬರೆದು ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಬೆಳ್ತಂಗಡಿ ಇವರಿಗೆ ದಿನಾಂಕ 30.04.2026ರ ಸಾಯಂಕಾಲ 4.0 ಗಂಟೆಯೊಳಗೆ ಸಲ್ಲಿಸಬಹುದಾಗಿದೆ.

1. ಟೆಂಡರು ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ ಮತ್ತು ವೇಳೆ : 15.04.2026 ರಿಂದ 30.04.2026 ರ ಅಪರಾಹ್ನ 3.0 ಗಂಟೆವರೆಗೆ
2. ಟೆಂಡರು ಶೆಡ್ಯೂಲ್ ನೀಡುವ ದಿನಾಂಕ : 15.04.2026 ರಿಂದ 30.04.2026 ರ ಅಪರಾಹ್ನ 3.30 ರವರೆಗೆ
3. ಭರ್ತಿ ಮಾಡಿದ ಟೆಂಡರು ಸಲ್ಲಿಸುವ ಕೊನೆಯ ದಿನಾಂಕ : 30.04.2026 ಸಾಯಂಕಾಲ 4.00 ಗಂಟೆಯ ತನಕ
4. ಟೆಂಡರು ತೆರೆಯುವ ದಿನಾಂಕ ಮತ್ತು ವೇಳೆ : 30.04.2026 ಸಯಾಂಕಾಲ 4.30ಕ್ಕೆ ಪ.ಪಂ ಕಛೇರಿ ಸಭಾಂಗಣದಲ್ಲಿ

ಕ್ರ. ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ ರೂ	ಟೆಂಡರಿಗಿಟ್ಟ ಮೊತ್ತ ರೂ	ಇ.ಎಂ.ಡಿ. ರೂ. ಗಳಲ್ಲಿ	ಗುತ್ತಿಗೆದಾರರ ದರ್ಜೆ	ಅರ್ಜಿ ಫಾರಂ ಶುಲ್ಕ (ರೂ ಗಳಲ್ಲಿ)	ಕೆಲಸ ಮುಗಿಸಲು ಕಾಲಾವಧಿ
1	ಬೆಳ್ತಂಗಡಿ ಪಟ್ಟಣ ಪಂಚಾಯತ್ ವ್ಯಾಪ್ತಿಯ 1ನೇ ವಾರ್ಡ್ 8ನೇ ವಾರ್ಡ್ 10 ವಾರ್ಡ್‌ಗಳಲ್ಲಿ ಬೀದಿ ದೀಪ ಅಳವಡಿಸಲು ಕಂಬ ಹಾಕಿ ಲೈನ್ ಎಳೆಯುವುದು	3,63,001.00	3,63,001.17	7,412.00	1 ನೇ ದರ್ಜೆ (ವಿದ್ಯುತ್)	1500/-+ GST 18%=1770	1 ತಿಂಗಳು

ಶರ್ತಗಳು

1) ವಿದ್ಯುತ್ ಗುತ್ತಿಗೆದಾರರು ಖಾಲಿ ಟೆಂಡರು ಫಾರಂಗೆ ಅರ್ಜಿ ಸಲ್ಲಿಸುವಾಗ 2025-26 ನೇ ಸಾಲಿನ ನವೀಕರಿಸಲಾದ ಲೋಕೋಪಯೋಗಿ ಇಲಾಖೆಯ ವಿದ್ಯುತ್ ಲೈಸೆನ್ಸ್ ಪತ್ರಿಯನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಹಾಗೂ ಅರ್ಜಿ ಫಾರಂ ಬೆಲೆಯೊಂದಿಗೆ ಇ.ಎಂ.ಡಿ.ಯ ಮೊತ್ತವನ್ನು ಡಿ.ಡಿ. ಅಥವಾ ನಗದು ರೂಪದಲ್ಲಿ ಪಾವತಿಸಬೇಕು ಇಲ್ಲವಾದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಗುತ್ತಿಗೆದಾರರು ನವೀಕರಿಸಿದ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ತಿರುವಳಿ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸಬೇಕು.
2) 2025-26 ನೇ ಸಾಲಿನ ಆದಾಯ ತೆರಿಗೆ ಮತ್ತು ಮಾರಟ ತೆರಿಗೆ ಪಾವತಿಯ Clearance certificate ಇರಬೇಕು ಹಾಗೂ ಟಿನ್ ನಂ, ಪಾನ್ ನಂ ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಪೃಥ್ವಿಸಾನಿಕಂ
ಆಡಳಿತಾಧಿಕಾರಿ
ಪಟ್ಟಣ ಪಂಚಾಯತ್ ಬೆಳ್ತಂಗಡಿ

ಸಹಿ/- ರಾಜೇಶ್ .ಕೆ
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ್ ಬೆಳ್ತಂಗಡಿ

DIPR/DK/MPL/110/26-27 ಸದ್ರಿ ಪ್ರಕಟಣೆಯನ್ನು ನೋಟಿಸು ಬೋರ್ಡಿನಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ಸರ್ಕಾರ
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್.
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವಾವಿದ್ಯಾಲಯ, ಕರ್ನಾಟಕ ಬೆಂಗಳೂರು ರವರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ ನವದೆಹಲಿ ರವರಿಂದ ಅಂಗೀಕೃತಗೊಂಡಿರುತ್ತದೆ.
ದೂರವಾಣಿ ಸಂಖ್ಯೆ : 08482-228366 & ಫ್ಯಾಕ್ಸ್ : 08482-240322
Website : www.bimsbidar.karnataka.gov.in & E-mail Id : directorbrimsbidar2007@gmail.com
ಸಂಖ್ಯೆ : ಬೀವೈವಿಸಂ/ಟೆಂಡರ್/ವಾರ್ತಾ ಪತ್ರಿಕೆ/ಸಿಆರ್- /2026-27 ದಿನಾಂಕ : 18-04-2026

ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ್ ಆಸ್ಪತ್ರೆ ಬೀದರ್ 2026-27 ನೇ ಸಾಲಿಗೆ ಬೇಕಾಗಿರುವ Supply of Tablets, Injections, Disposables and Liquid ointments and powders, IV Fluids & Sutures and Chemicals & Reagents to Brims Bidar ಗಳ ಸರಬರಾಜುವಿಗಾಗಿ ಇ-ಟೆಂಡರ್ ಕರೆಯಲಾಗಿದೆ. ಇಚ್ಛೆಯುಳ್ಳ ಏಜೇನ್ಸಿಯವರು ದಿನಾಂಕ: 15-05-2026 ರ ವರೆಗೆ ಇ-ಟೆಂಡರ್ ನಲ್ಲಿ ನಮೂದಿಸಿದ ಸಮಯದ ಅನುಗುಣವಾಗಿ ಟೆಂಡರ್ ಭರಿಸಲು ಅವಕಾಶವಿರುತ್ತದೆ. ಹಾಗೂ ಇ-ಸಂಗ್ರಹಣೆಯ ಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವಿಕ್ಷೀಸಬಹುದು/ಡೌನಲೋಡ್ ಮಾಡಿಕೊಂಡು ಇ-ಪ್ರೋಕ್ಯೂಮೇರ್ಂಟ್ ಮೂಲಕ ಸಲ್ಲಿಸಬಹುದು www.kppp.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಸಂಸ್ಥೆಯ ಅಂತರ್ಜಾಲತಾಣವಾದ www.bimsbidar.karnataka.gov.in ನಲ್ಲಿ ಸಹ ನೋಡಬಹುದಾಗಿದೆ.

1) ಟೆಂಡರ್ ವಿವರ: SUPPLY OF TABLETS TO BRIMS BIDAR FOR THE YEAR 2026-27, ಇಂಡೆಂಟ್ ಸಂಖ್ಯೆ: DME/2026-27/IND2249, ಇ.ಎಂ.ಡಿ: 2,00,000.00, 2) ಟೆಂಡರ್ ವಿವರ: SUPPLY OF INJECTIONS TO BRIMS BIDAR FOR THE YEAR 2026-27, ಇಂಡೆಂಟ್ ಸಂಖ್ಯೆ: DME/2026-27/IND2252, ಇ.ಎಂ.ಡಿ: 2,00,000.00, 3)ಟೆಂಡರ್ ವಿವರ: SUPPLY OF DISPOSABLES TO BRIMS BIDAR FOR THE YEAR 2026-27,ಇಂಡೆಂಟ್ ಸಂಖ್ಯೆ: DME/2026-27/IND2254, ಇ.ಎಂ.ಡಿ: 2,00,000.00, 4)ಟೆಂಡರ್ ವಿವರ: SUPPLY OF LIQUID OINTMENTS & POWDERS TO BRIMS BIDAR FOR THE YEAR 2026-27,ಇಂಡೆಂಟ್ ಸಂಖ್ಯೆ: DME/2026-27/IND2259, ಇ.ಎಂ.ಡಿ: 2,00,000.00, 5)ಟೆಂಡರ್ ವಿವರ: SUPPLY OF IV FLUIDS & SUTURES TO BRIMS BIDAR FOR THE YEAR 2026-27,ಇಂಡೆಂಟ್ ಸಂಖ್ಯೆ: DME/2026-27/IND2264,ಇ.ಎಂ.ಡಿ: 2,00,000.00, 6)ಟೆಂಡರ್ ವಿವರ:SUPPLY OF CHEMICALS & REAGENTS TO BRIMS BIDAR FOR THE YEAR 2026-27,ಇಂಡೆಂಟ್ ಸಂಖ್ಯೆ: DME/2026-27/IND2260,ಇ.ಎಂ.ಡಿ:2,00,000.00

ಗಮನಿಸಿ:- 1) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸ : ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್, 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ www.kppp.karnataka.gov. ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ನಿರ್ದೇಶಕರು
ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಬೀದರ್
ವಾ.ಸಾ.ಸಂ.ಇ/ಬೀದರ/15/ಕೆ.ಎಸ್.ಎಂ.ಸಿ.&ಎ/2026-27

ಮಂಗಳೂರು ಮಹಾನಗರಪಾಲಿಕೆ

ಮನಪಾ/ನಯೋವಿ/ಟಿ.ಡಿ.ಆರ್/ಸಿಆರ್-120/2025-26 ದಿನಾಂಕ: 05.02.2026
ಫಾರಂ - 1 (ಕೆಟಿಸಿಪಿ ಕಾಯ್ದೆಯ ಸೆಕ್ಷನ್ 14 ಬಿ ಪ್ರಕಾರ ಎಂಸಿಸಿ ಅಳವಡಿಸಿಕೊಂಡ ಕಾರ್ಯವಿಧಾನ)

ಅಧಿಸೂಚನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-ಬಿ ಅವಕಾಶಗಳನ್ವಯ ಈ ಕೆಳಗಿನ ಅನುಸೂಚಿಯಲ್ಲಿರುವ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಮಂಗಳೂರು ಮಹಾನಗರಪಾಲಿಕೆಗೆ ಸ್ಥಳೀಯ ಸಂಸ್ಥೆಯ ಪ್ರಸ್ತಾವನೆಯನ್ವಯ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮಾಲೆಮಾರ್ ರಸ್ತೆಯಿಂದ ಪರಪಾದೆವರೆಗೆ ರಸ್ತೆ ಅಭಿವೃದ್ಧಿಪಡಿಸಲು ಅವಶ್ಯವಿರುವ ಜಮೀನನ್ನು KTCP ಕಾಯ್ದೆಯಂತೆ ಸ್ವಾಧೀನಪಡಿಸಲು ಆವಶ್ಯಕವಾಗಿರುತ್ತದೆ. ಸದರಿ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿಯನ್ನು ಬಿಟ್ಟುಕೊಡುವ ಭೂಮಾಲಿಕರುಗಳು ಮತ್ತು ಹಿತಾಸಕ್ತಿದಾರರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಯೋಜನೆಯ ವ್ಯಾಪ್ತಿಯಲ್ಲಿನ ಜಮೀನಿಗೆ ಸಂಬಂಧಪಟ್ಟವರು ಸಂಬಂಧಿಸಿದ ದಾಖಲಾತಿಗಳಾದ (1) ಶೀರ್ಷಿಕೆಯ ಪತ್ರ/ ಋಣಭಾರ ಪತ್ರ (2) ಇತ್ತೀಚಿನ ಪಹಣಿ ಪತ್ರ/ಖಾತಾ ಪತ್ರ (3) ಮ್ಯುಟೇಶನ್ ಪ್ರತಿ (4) ತೆರಿಗೆ ಪಾವತಿಸಿದ ರಶೀದಿಗಳು (5) ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿದ ಆದೇಶ ಪ್ರತಿ (6) ರೆವೆನ್ಯೂ ನಕ್ಷೆ ಪ್ರತಿ (7) ಆಕಾರ್ ಬಂದ್ ಇತ್ಯಾದಿಗಳೊಂದಿಗೆ, ತಾವು ಖುದ್ದಾಗಿ ಹಾಜರಾಗಿ ಅಭಿವೃದ್ಧಿ ಹಕ್ಕುಗಳಿಗೆ ಭೂಮಿಯನ್ನು ಬಿಟ್ಟುಕೊಡುವ ಸಂಬಂಧ ತಮ್ಮ ಹಿತಾಸಕ್ತಿ/ ಆಕ್ಷೇಪಣೆ/ ಸಲಹೆಯನ್ನು, ನಗರಯೋಜನೆ/ಟಿ.ಡಿ.ಆರ್. ವಿಭಾಗ, ಮಂಗಳೂರು ಮಹಾನಗರ ಪಾಲಿಕೆಗೆ ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದಾಗಿರುತ್ತದೆ.

ಭೂಮಾಲಿಕರು ಹಣಕಾಸು ಪರಿಹಾರ ರಹಿತವಾಗಿ ಬಿಟ್ಟುಕೊಟ್ಟ ಭೂಪ್ರದೇಶದ ವಿಸ್ತೀರ್ಣಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿಯನ್ನು) ಪಡೆಯುತ್ತಾರೆ ಮತ್ತು ಬಿಟ್ಟುಕೊಟ್ಟ ಕಟ್ಟಡ ಪ್ರದೇಶದ ಮೌಲ್ಯಕ್ಕೆ ಆ ಕಟ್ಟಡ ಇರುವ ಭೂಮಿಯ ಮಾರುಕಟ್ಟೆ ಮೌಲ್ಯದಿಂದ ಭಾಗಿಸಿ, ಬಿಟ್ಟುಕೊಟ್ಟ ಕಟ್ಟಡಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿ) ಪಡೆಯಲು ಅವರು ಅರ್ಹರು. ಬಿಟ್ಟುಕೊಟ್ಟ ಜಮೀನಿನ ಮೌಲ್ಯಕ್ಕೆ, ಬಳಸುವ ನಿವೇಶನದ ಮೌಲ್ಯದಿಂದ ಭಾಗಿಸಿಕೊಂಡು, ಅಪವರ್ತನಗೊಳಿಸಿ ಕಾಲ್ಪನಿಕ ಭೂಮಿಯನ್ನು ಉಪಯೋಗಿಸ ಬಹುದಾಗಿದೆ. ಕಾಲ್ಪನಿಕ ಭೂಮಿಯು ಎಫ್.ಎ.ಆರ್.ಗೆ ಅರ್ಹವಾಗಿರುತ್ತದೆ. ಮತ್ತು ಅದನ್ನು ಪಡೆಯುವ ನಿವೇಶನದಲ್ಲಿ ನಿಯಮಗಳಡಿಯಲ್ಲಿ ಸೂಚಿಸಲಾದ ನಿಬಂಧನೆಗಳು ಹಾಗೂ ಶರತ್ತುಗಳ ಅಡಿಯಲ್ಲಿ ಹೆಚ್ಚುವರಿ ನಿರ್ಮಾಣಕ್ಕೆ ಬಳಸಬಹುದು.

ಅನುಸೂಚಿ

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮಾಲೆಮಾರ್ ರಸ್ತೆಯಿಂದ ಪರಪಾದೆವರೆಗೆ ರಸ್ತೆ ಅಭಿವೃದ್ಧಿಪಡಿಸಲು ಅವಶ್ಯವಾಗಿರುವ ಜಮೀನನ್ನು ಸ್ವಾಧೀನಪಡಿಸಲು ಆವಶ್ಯಕವಾಗಿರುವ ಜಮೀನನ್ನು ಭೂಸ್ವಾಧೀನ/ಟಿ.ಡಿ.ಆರ್. ಪಡಿಸಿಕೊಳ್ಳಲು ಮಂಗಳೂರು ಮಹಾನಗರಪಾಲಿಕೆ ಪರಿಷತ್ ಠರಾವು ಸಂಖ್ಯೆ:30/2009-2010 ದಿನಾಂಕ: 02.06.2009ರಂತೆ ನಿರ್ಣಯಿಸಲ್ಪಟ್ಟಿದೆ.

ಕ್ರ. ಸಂ.	ಸ.ನಂ/ಟಿ.ಎಸ್ ನಂಬ್ರ	ಜಮೀನಿನ ಮಾದರಿ	ಜಮೀನಿನ ಸ್ವಭಾವ	ಅಗತ್ಯವಿರುವ ಭೂಮಿಯ ವಿಸ್ತೀರ್ಣ ಚ.ಮೀಗಳಲ್ಲಿ	ಭೂಮಾಲಿಕರ/ಹಿತಾಸಕ್ತಿದಾರರ ಹೆಸರು ಮತ್ತು ವಿಳಾಸ
ಮಾಲೆಮಾರ್ ರಸ್ತೆಯಿಂದ ಪರಪಾದೆವರೆಗೆ ರಸ್ತೆ					ಗ್ರಾಮ: ದೇರೆಬೈಲು
1	ಸರ್ವೆ ನಂಬ್ರ: 128-1(ಪಿ)	ಪರಿವರ್ತಿತ	ಖಾಸಗಿ	91.35 ಚ.ಮೀ.	1. ಶ್ರೀಮತಿ ಸಿಸಿಲಿಯಾ ಫೆರ್ನಾಂಡಿಸ್ ಕೋಂ. ದಿ। ಅಲ್ಫೋನ್ಸ್ ಆಲ್ಬರ್ಟ್ ಫೆರ್ನಾಂಡಿಸ್ 2. ಸೆಲಿನ್ ಫೆರ್ನಾಂಡಿಸ್ ಯಾನೆ ಸೆಲಿನ್ ಸೆರಾವೋ ಕೋಂ. ಗ್ರೆಗೋರಿ ಸೆರಾವೋ 3. ರಿಚಾರ್ಡ್ ಫೆರ್ನಾಂಡಿಸ್ ಬಿನ್. ದಿ। ಅಲ್ಫೋನ್ಸ್ ಫೆರ್ನಾಂಡಿಸ್ 4. ಶಾಂತಿ ಫೆರ್ನಾಂಡಿಸ್ ಯಾನೆ ಒಫಿಲಿಯಾ ಜೆ. ಎಸ್. ಸೆರಾವೋ ಕೋಂ. ರಿಚಾರ್ಡ್ ಲೂಯಿಸ್ ಸೆರಾವೋ 5. ಶೆಲ್ಬನ್ ಆರನ್ ಸೆರಾವೋ 6. ಕ್ರೇಗ್ ನಿಜಿಲ್ ಫೆರ್ನಾಂಡಿಸ್ 7. ಕ್ರೇವನ್ ನೇಲ್ ಫೆರ್ನಾಂಡಿಸ್ 8. ಮೆಲಿನ ಸಿಮ್ರಾನ್ ಸೆರಾವೋ 4-87, ಜೊಸ್ಲಿನ್ ವಿಲ್ಲಾ, ದೇರೆಬೈಲು, ಕೊಂಚಾಡಿ, ಮಂಗಳೂರು - 575006.
2	ಸರ್ವೆ ನಂಬ್ರ: 128-1(ಪಿ)	ಪರಿವರ್ತಿತ	ಖಾಸಗಿ	82.50 ಚ.ಮೀ	1. ಶ್ರೀಮತಿ ಮಾರ್ಸೆಲಿನ್ ಜೆ. ಜೆ. ಫೆರ್ನಾಂಡಿಸ್ ಕೋಂ. ದಿ। ರೊನಾಲ್ಡ್ ಎ. ಫೆರ್ನಾಂಡಿಸ್, 2. ಲೆಸ್ಟರ್ ಶೇನ್ ಫೆರ್ನಾಂಡಿಸ್ ಬಿನ್. ದಿ। ರೊನಾಲ್ಡ್ ಎ. ಫೆರ್ನಾಂಡಿಸ್, 3. ಲೇರನ್ ಸ್ಟೀವ್ ಫೆರ್ನಾಂಡಿಸ್ ಬಿನ್. ದಿ। ರೊನಾಲ್ಡ್ ಎ. ಫೆರ್ನಾಂಡಿಸ್, 4-87, ಜೊಸ್ಲಿನ್ ವಿಲ್ಲಾ, ದೇರೆಬೈಲು, ಕೊಂಚಾಡಿ, ಮಂಗಳೂರು - 575006.

ಸಹಿ/- ಆಯುಕ್ತರ ಪರವಾಗಿ
ಮಹಾನಗರಪಾಲಿಕೆ, ಮಂಗಳೂರು
DIPR/DK/MPL/98/26-27

ಮಳೆಗಾಲ ಪೂರ್ವ ಸಿದ್ಧತೆ ಸಭೆ | ಅಧಿಕಾರಿಗಳಿಗೆ ಶಾಸಕ ಯಶ್‌ಪಾಲ್ ಸೂಚನೆ

ಜಲಕ್ಷಾಮ ತಡೆಗೆ ಸೂಕ್ತ ಕ್ರಮ

ಉಡುಪಿ: ಮಳೆಗಾಲದ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಚರಂಡಿಗಳ ಹೂಳು ಸಮರ್ಪಕವಾಗಿ ತೆರವುಗೊಳಿಸಬೇಕು. ಅಪಾಯಕಾರಿ ಮರಗಳ ರೆಂಬೆಗಳನ್ನು ಅರಣ್ಯ ಇಲಾಖೆಯ ಅನುಮತಿಯೊಂದಿಗೆ ಕತ್ತರಿಸಬೇಕು ಹಾಗೂ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನಿಗಾ ವಹಿಸಬೇಕು ಎಂದು ಶಾಸಕ ಯಶ್‌ಪಾಲ್ ಸುವರ್ಣ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ಮಳೆಗಾಲ ಪೂರ್ವ ಸಿದ್ಧತೆ ಹಾಗೂ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತಾಲೂಕು ಪಂಚಾಯತ್ ವ್ಯಾಪ್ತಿಯ ಕೆಮ್ಮಣ್ಣು, ತೆಂಕನಿಡಿಯೂರು, ಬಡನಿಡಿಯೂರು, ಕಲ್ಯಾಣಪುರ, ಅಂಬಲಪಾಡಿ ಹಾಗೂ ಕಡೆಕಾರು ಪಂಚಾಯತ್‌ಗಳಲ್ಲಿ ಕೈಗೊಳ್ಳಲಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಆಡಳಿತಾಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕರು, ಅಗತ್ಯ ಪೂರಕ ಕ್ರಮಗಳಿಗೆ ನಿರ್ದೇಶಿಸಿದರು.

ತಾತ್ಕಾಲಿಕ ಪೈಪ್ ಲೈನ್ ಅಳವಡಿಸಿ

ಕಡೆಕಾರು ಪಂಚಾಯತ್‌ನ ಕಿನ್ನಿಮೂಲ್ಕಿ ಸ್ವಾಗತ ಗೋಪುರದ ಬಳಿ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ತುರ್ತಾಗಿ ತಾತ್ಕಾಲಿಕ ಪೈಪ್ ಲೈನ್ ಅಳವಡಿಸುವಂತೆ ತಿಳಿಸಿದರು. ಬಂದರು ಇಲಾಖೆಯ ಚರಂಡಿ ಕಾಮಗಾರಿ ಮುಗಿದಿದ್ದು, ಬಾಕಿ ಇರುವ ಪ್ರವೇಶ ದ್ವಾರ ಹಾಗೂ ಸೇತುವೆ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಶಾಸಕರು ಆದೇಶಿಸಿದರು.

ಆರೋಗ್ಯ ಕೇಂದ್ರ ಸೇವೆ ಆರಂಭಿಸಿ

ಇದೇ ವೇಳೆ, ನಿಡಂಬಳ್ಳಿಯ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಸಿದ್ಧಗೊಂಡು ಮೂರು ತಿಂಗಳಾದರೂ ಉದ್ಘಾಟನೆಯಾಗಿಲ್ಲ ಎಂಬ ವಿಷಯಕ್ಕೆ ಪ್ರತಿಕ್ರಿಯಿಸಿದ ಶಾಸಕರು ಯಾವುದೇ ಜನಪ್ರತಿನಿಧಿಗಳ ಕಾರ್ಯಕ್ರಮಕ್ಕೆ ಕಾಯದೆ ತಕ್ಷಣವೇ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸಿ ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ವಾರಾಹಿ ಎಂಜಿನಿಯರ್‌ಗಳು ಮಾಹಿತಿ ನೀಡಿ, ಹಾವಂಜೆ, ಉಪ್ಪೂರು ಮತ್ತು ಪರಾರಿಯಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ಸಿಆರ್‌ಝೆಡ್ ನಿಯಮಾವಳಿಗಳ ಅಡ್ಡಿಯಿಂದಾಗಿ ಕಾಮಗಾರಿ ವಿಳಂಬವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ರಂಗಮಂದಿರದ ಕಾಮಗಾರಿ ಶೀಘ್ರ ಮಾಡಿ

ಉಡುಪಿಯಲ್ಲಿ ರಂಗ ಮಂದಿರದ ಕಾಮಗಾರಿ ಹಲವು ವರ್ಷಗಳಿಂದ ಕುಂಟುತ್ತಾ ಸಾಗಿದೆ ಆದರ ಕಾಮಗಾರಿಯನ್ನು ಆದಷ್ಟು ಶೀಘ್ರ ಪೂರ್ಣಗೊಳಿಸುವಂತೆ ನಿರ್ಮಿತಿ ಕೇಂದ್ರದ ಅಧಿಕಾರಿಗಳಿಗೆ ಸೂಚಿಸಿದರು.

ಮೇ ಎರಡನೇ ವಾರದಿಂದ ಬಿತ್ತನೆ ಬೀಜ ವಿತರಣೆ

ಉಡುಪಿ ಸಹಾಯಕ ಕೃಷಿ ನಿರ್ದೇಶಕ ಕಲ್ಲೇಶ್ ಪ್ರಸಾದ್ ಮಾತನಾಡಿ, ಉಡುಪಿ ತಾಲ್ಲೂಕಿನಲ್ಲಿ 300 ಕ್ವಿಂಟಲ್ ಬಿತ್ತನೆ ಬೀಜದ ಬೇಡಿಕೆ ಇದ್ದು, ಮೇ ಎರಡನೇ ವಾರದಿಂದ ಬಿತ್ತನೆ ಬೀಜದ ವಿತರಣೆ ನಡೆಯಲಿದೆ ಎಂದು ಹೇಳಿದರು.

ಮಲ್ಪೆ ಬಂದರು ವ್ಯಾಪ್ತಿಯಲ್ಲಿ ಚರಂಡಿಗಳನ್ನು ಸ್ವಚ್ಛಗೊಳಿಸಲಾಗಿದೆ. ಬಂದರಿನ ಪ್ರವೇಶ ದ್ವಾರದ ಬಳಿಯ ಕಾಮಗಾರಿ ಇನ್ನೂ ಆಗಿಲ್ಲ ಎಂದು ಬಂದರು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸಭೆಯಲ್ಲಿ ತಾಲೂಕು ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿಜಯಾ ನಾಯ್ಕ್ ಉಪಸ್ಥಿತರಿದ್ದರು.



ಅಪಾಯಕಾರಿ ರೆಂಬೆ ತೆಗೆಯಿರಿ

ಮಳೆಗಾಲದಲ್ಲಿ ಮರ ಬಿದ್ದು, ವಿದ್ಯುತ್ ತಂತಿಗಳು ತುಂಡಾಗಿ ಬಿದ್ದರೆ ಮೆಸ್ಕಾಂನವರು ತುರ್ತಾಗಿ ಸ್ಪಂದಿಸಬೇಕು. ಅಪಾಯಕಾರಿ ಮರದ ಕೊಂಬೆಗಳನ್ನು ಕತ್ತರಿಸಲು ಅರಣ್ಯ ಇಲಾಖೆಯವರು ಮುತುವರ್ಜಿವಹಿಸಬೇಕು ಎಂದು ಹೇಳಿದರು. ಮಣಿಪಾಲದ ಸಿಂಡಿಕೇಟ್ ಸರ್ಕಲ್‌ನಿಂದ ಜಿಲ್ಲಾಧಿಕಾರಿ ಕಚೇರಿ ಕಡೆಗೆ ಹೋಗುವ ರಸ್ತೆಯ ಒಂದು ಭಾಗದ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ವಾರಾಹಿ ಯೋಜನೆಯ ಪೈಪ್‌ಲೈನ್ ಮತ್ತು ಅದಾನಿ ಸಂಸ್ಥೆಯ ಗ್ಯಾಸ್ ಪೈಪ್ ಲೈನ್ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಿ ರಸ್ತೆ ದುರಸ್ತಿಗೆ ಅನುಕೂಲ ಮಾಡಿಕೊಡಬೇಕು ಎಂದು ಶಾಸಕರು ಸೂಚಿಸಿದರು.

ನಿಂದನೆ: ತಿಮರೋಡಿ ವಿರುದ್ಧ ಆರೋಪ

ಮಂಗಳೂರು: ಸ್ಥಳೀಯ ವಾಹಿನಿಯೊಂದರಲ್ಲಿ ಪ್ರಸಾರವಾದ ಯಕ್ಷ ತೆಲಿಕೆ ಕಾರ್ಯಕ್ರಮ ಸರಣಿಯಲ್ಲಿ ಪ್ರಸಾರವಾದ ಬುರುಡೆ ಗ್ಯಾಂಗ್ ಎಂಬ ಯಕ್ಷ ಪ್ರಹಸನಕ್ಕೆ ಸಂಬಂಧಿಸಿ ಮಹೇಶ್ ಶೆಟ್ಟಿ ತಿಮರೋಡಿ ಎಂಬವರು ಕರೆ ಮಾಡಿ ಅವಾಚ್ಯವಾಗಿ ನಿಂದಿಸಿದ್ದಾರೆ ಎಂದು ಯಕ್ಷಗಾನ ಕಲಾವಿದರಾದ ಸುಂದರ ರೈ ಮಂದಾರ, ಪ್ರಜ್ವಲ್ ಕುಮಾರ್ ಮತ್ತು ದಿನೇಶ್ ಕೊಡಪದವು ಆರೋಪಿಸಿದ್ದಾರೆ. ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಂದನೆಯ ವಿರುದ್ಧ ಪುತ್ತೂರು ಗ್ರಾಮಾಂತರ ಠಾಣೆಗೆ ಮತ್ತು ಮಹಿಳಾ ಠಾಣೆಗೆ ದೂರು ನೀಡಲಾಗಿದೆ ಎಂದವರು ಹೇಳಿದರು.

ಸುಂದರ ರೈ ಮಂದಾರ ಮಾತನಾಡಿ, ಈ ಕಾರ್ಯಕ್ರಮ ಕಳೆದ ವರ್ಷದ ನವೆಂಬರ್ ತಿಂಗಳಲ್ಲಿ ಪ್ರಸಾರವಾಗಿತ್ತು. ಏ.11ರಂದು ಮಹೇಶ್ ಶೆಟ್ಟಿ ತಿಮರೋಡಿ ಎಂಬವರು ಪ್ರಜ್ವಲ್ ಕುಮಾರ್‌ಗೆ ಕರೆ ಮಾಡಿ ಅವಾಚ್ಯವಾಗಿ ನಿಂದಿಸಿದ್ದಾರೆ. ಹೀಗಾಗಿ ಅವರು ಮಹಿಳಾ ಠಾಣೆಗೆ ದೂರು ನೀಡಿದ್ದಾರೆ. ನನ್ನ ಬಗ್ಗೆಯೂ ಇಲ್ಲ ಸಲ್ಲದ ಆರೋಪಗಳನ್ನು ಮಾಡಿದ್ದು ಅದರ ವಿರುದ್ಧ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದೇನೆ ಎಂದರು. ಭಾಗವತ ಧೀರಜ್ ರೈ ಸಂಪಾಜೆ, ಯಕ್ಷಗಾನ ಕಲಾವಿದ ಪ್ರಜ್ವಲ್ ಕುಮಾರ್ ಉಪಸ್ಥಿತರಿದ್ದರು.

ಅದಾನಿ ನೇತೃತ್ವದಲ್ಲಿ ಅಗ್ನಿ ಸುರಕ್ಷತಾ ಪ್ರಾತ್ಯಕ್ಷಿಕೆ



ಪಡುಬಿದ್ರಿ: ಅದಾನಿ ಪವರ್ ಲಿಮಿಟೆಡ್ ವತಿಯಿಂದ ನಡೆಯುತ್ತಿರುವ ಅಗ್ನಿ ಸುರಕ್ಷತಾ ಸಪ್ತಾಹದ ಅಂಗವಾಗಿ ಸ್ಥಳೀಯ ವಿವಿಧ ಶಾಲಾ -ಕಾಲೇಜು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಸಾರ್ವಜನಿಕರಿಗೆ ನಡೆಸುತ್ತಿರುವ ಅಗ್ನಿ ಸುರಕ್ಷತಾ ಪ್ರಾತ್ಯಕ್ಷಿಕೆಯನ್ನು ಮುಲ್ಕಿಯ ಪ್ರತಿಷ್ಠಿತ ವಿಜಯ ಕಾಲೇಜು ಹಾಗೂ ಮಹಾಲಕ್ಷ್ಮೀ ಆಂಗ್ಲ ಮಾಧ್ಯಮ ಶಾಲೆ ಉಚ್ಚಿಲದಲ್ಲಿ ನಡೆಸಲಾಯಿತು.

ಅದಾನಿ ಪವರ್ ಲಿಮಿಟೆಡ್ ನ ಅಗ್ನಿ ಮತ್ತು ಸುರಕ್ಷತಾ ವಿಭಾಗದ ಮುಖ್ಯಸ್ಥರಾದ ತೇಜೇಶ್ವರ ಬೆಟಗೇರಿ ಯವರ ಮಾರ್ಗದರ್ಶನ ದಲ್ಲಿ ಅಗ್ನಿ ಸುರಕ್ಷತಾ ವಿಭಾಗದ ಅಸೋಸಿಯೇಟ್ ಮ್ಯಾನೇಜರ್ ಕಾರ್ತಿಕ್ ಎಮ್ ಐ, ಅಸಿಸ್ಟೆಂಟ್ ಮ್ಯಾನೇಜರ್ ಗಳಾದ ಅಜಿತ್ ಕುಮಾರ್ ಸಿಂಗ್, ಅಶ್ವನಿ ಕುಮಾರ್ ಸಿಂಗ್ ಹಾಗೂ ಸಹ ಫೈರ್ ಅಧಿಕಾರಿ ಶರಣ್ ಕುಮಾರ್ ಮಟ್ಟು ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಮುಲ್ಕಿ ವಿಜಯ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ವೆಂಕಟೇಶ ಭಟ್, ಉಚ್ಚಿಲ ಮಹಾಲಕ್ಷ್ಮೀ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯೋಪಾಧ್ಯಾಯಿನಿ ನವ್ಯ ಉಪಸ್ಥಿತರಿದ್ದರು.

ಶಾಲಾ ಕಾಲೇಜಿನ ನೂರಾರು ವಿದ್ಯಾರ್ಥಿಗಳು ಈ ಪ್ರಾತ್ಯಕ್ಷಿಕೆಯ ಪ್ರಯೋಜನವನ್ನು ಪಡೆದರು

ಲಕ್ಕಿಡಿಪ್ ಫಲಿತಾಂಶ

ಶ್ರೀ ಮಹಮ್ಮಾಯಿ ಮತ್ತು ಪರಿವಾರ ದೈವಗಳ ಸಾನ್ನಿಧ್ಯ ಪಳನೀರುಗುಡ್ಡೆ, ಕಲ್ಲಡ್ಕ ಇದರ ವಾರ್ಷಿಕ ಮಹೋತ್ಸವ ಹಾಗೂ ಕೋಲೋತ್ಸವದ ಪ್ರಯುಕ್ತ ನಡೆದ ಲಕ್ಕಿಡಿಪ್ ಡ್ರಾ ಫಲಿತಾಂಶ
ಪ್ರಥಮ : 3066, ದ್ವಿತೀಯ : 3836, ತೃತೀಯ : 3707

ವೆನ್‌ಲಾಕ್‌ನಲ್ಲಿ ಮೃತದೇಹ



ಮಂಗಳೂರು: ಜಿಲ್ಲಾಸ್ಪತ್ರೆ ವೆನ್ ಲಾಕ್‌ನ ಶವಾಗಾರದಲ್ಲಿ ಮೃತದೇಹವೊಂದಿದ್ದು, ಸಂಬಂಧಪಟ್ಟವರು ಯಾರಾದರೂ ಇದ್ದಲ್ಲಿ ಗುರುತು ಚೀಟಿ ತೋರಿಸಿ ಪಡೆದುಕೊಳ್ಳಬಹುದಾಗಿದೆ. ಯಾರೂ ಬಾರದಿದ್ದಲ್ಲಿ ಸೂಕ್ತ ರೀತಿಯಲ್ಲಿ ಶವವನ್ನು ವಿಲೇವಾರಿ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಕಾರುಣ್ಯ (ನಂ.KR-750) ಡ್ರಾ ಏಪ್ರಿಲ್ 18ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
KD 636784 (ALAPPUZHA)

Consolation Prize Rs.5,000/-
KA 636784 KB 636784 KC 636784 KE 636784
KF 636784 KG 636784 KH 636784 KJ 636784
KK 636784 KL 636784 KM 636784

2nd Prize Rs.25,00,000/- [25 Lakhs]
KC 377203 (MALAPPURAM)

3rd Prize Rs.10,00,000/- [10 Lakhs]
KK 812679 (THIRUR)

FOR THE TICKETS ENDING WITH THE FOLLOWING NUMBERS

4th Prize Rs.5,000/-
0298 0338 0722 2076 2317 3051 3965 4294 6131 6380
6805 6932 7594 8109 8592 8654 8907 9331 9393

5th Prize Rs.2,000/-
2248 3931 4500 4954 6852 7769

6th Prize Rs.1,000/-
0149 0763 1196 1286 2683 3238 3395 3487 3529 3670
4466 5607 6047 6205 6731 6873 7365 7796 7904 8232
8759 9011 9070 9346 9811

7th Prize Rs.500/-
0052 0079 0265 0442 0461 0543 0825 0970 1075 1230 1251
1667 1736 1806 1925 1934 2003 2048 2051 2323 2515 2540
2557 2623 3063 3133 3420 3470 3589 3649 3937 4168 4188
4306 4316 4330 4578 4742 4912 5013 5127 5187 5297 5533
5593 5849 6177 6773 6803 6856 6917 6958 7044 7228 7556
7659 7778 8004 8006 8164 8246 8390 8407 8437 8522 8552
8628 8652 9100 9195 9246 9265 9340 9387 9818 9895

8th Prize Rs.200/-
0043 0212 0225 0408 0694 0781 0824 0971 1181 1206 1449
1475 1510 1617 1967 1972 2231 2351 2456 2463 2543 2676
2812 2815 2849 3002 3198 3353 3445 3641 3727 3763 3768
3804 3934 4055 4142 4397 4423 4464 4910 5054 5124 5209
5350 5379 5465 5522 5764 5800 5817 5899 6000 6060 6142
6263 6488 6735 6988 7234 7305 7335 7368 7515 7604 7624
7719 7989 8090 8143 8169 8264 8367 8388 8436 8507 8521
8657 8682 8693 8733 8839 8841 8883 8898 8994 9230 9410
9658 9762 9833 9854

9th Prize Rs.100/-
0122 0132 0177 0205 0266 0485 0489 0509 0730 0755 0756
0767 0805 0817 0845 0869 0889 0907 0968 1214 1297 1407
1421 1470 1504 1848 1900 1945 2152 2173 2272 2277 2285
2289 2293 2298 2333 2334 2544 2638 2682 2697 2782 2808
2819 2832 3003 3013 3127 3182 3218 3348 3431 3525 3569
3600 3680 3739 3913 3950 4099 4369 4410 4643 4717 4756
4793 4818 4867 4868 4939 4958 5051 5084 5117 5139 5146
5162 5190 5222 5230 5298 5498 5548 5579 5788 5861 5973
5985 6071 6079 6091 6140 6211 6417 6426 6450 6458 6487
6497 6506 6582 6708 6755 6922 6946 6996 7187 7198 7231
7296 7300 7350 7400 7404 7449 7471 7555 7779 7838 8013
8115 8155 8156 8160 8358 8381 8446 8563 8697 8777 8779
8795 9001 9017 9018 9076 9085 9105 9154 9174 9710 9789
9953

ನಿಧನ ಸುದ್ದಿ

ಖ್ಯಾತ ವೈದ್ಯ ಡಾ.ಶಂಕರರಾಜ್ ಆಲಂಪಾಡಿ ವಿಧಿವಶ

ಕಾಸರಗೋಡು: ಕಾಸರಗೋಡು ನಗರದ ಎಸ್‌ವಿಟಿ ರಸ್ತೆ ಪರಿಸರದ ವೆಂಕಟೇಶ ನಿವಾಸದ ಖ್ಯಾತ ಹಾಗೂ ಜನಪ್ರಿಯ ಆಯುರ್ವೇದ ವೈದ್ಯರಾಗಿದ್ದ ಡಾ.ಶಂಕರರಾಜ್ ಆಲಂಪಾಡಿ (66) ಶುಕ್ರವಾರ ನಿಧನ ಹೊಂದಿದರು. ಅತ್ಯಂತ ಸರಳ ಸ್ವಭಾವದ ಅವರು ವೈದ್ಯಕೀಯ ವೃತ್ತಿಯನ್ನು ಸೇವೆ ಎಂಬ ನೆಲೆಯಲ್ಲಿ ನಿರ್ವಹಿಸುತ್ತಿದ್ದು ಅಪಾರ ಜನಪ್ರೀತಿಗೆ ಪಾತ್ರರಾಗಿದ್ದರು. ಪ್ರಸಿದ್ಧ ಆಲಂಪಾಡಿ ಮನೆತನಕ್ಕೆ ಸೇರಿದ ದಿ.ವೆಂಕಟೇಶ ಶ್ಯಾನುಭೋಗ್ ಮತ್ತು ಜಲಜಮ್ಮ ದಂಪತಿಯ ಪುತ್ರನಾಗಿರುವ ಡಾ.ಶಂಕರರಾಜ್ ಅವರು ಮೃದಂಗ ವಿದ್ವಾನ್ ಕೂಡಾ ಆಗಿದ್ದರು. ಹಲವು ಸಂಗೀತ ಕಛೇರಿಗಳಲ್ಲಿ ಅವರು ಮೃದಂಗ ವಾದಕರಾಗಿ ಸಹಕರಿಸಿದ್ದರು. ಅಲ್ಲದೆ ಅನೇಕ ಮಂದಿ ಮೃದಂಗ ಶಿಷ್ಯವೃಂದವನ್ನು ಹೊಂದಿದ್ದ ಅವರು ಅಪ್ರತಿಮ ಕಲಾಸಕ್ತರಾಗಿದ್ದರು. 1983ರಿಂದ ನಾಯನ್ಮಾರಮೂಲೆಯಲ್ಲಿ ಸುಪ್ರಭಾತ ಕ್ಲಿನಿಕ್ ಆರಂಭಿಸಿ 2018ರ ತನಕ ಅಲ್ಲಿ ಆಯುರ್ವೇದ ವೈದ್ಯಕೀಯ ಚಿಕಿತ್ಸೆ ನೀಡುತ್ತಿದ್ದರು. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಯೋಜನೆ ಆರಂಭಗೊಂಡ ನಂತರ ಅವರು ಕ್ಲಿನಿಕ್‌ನ್ನು 2019ರಲ್ಲಿ ಎಸ್‌ವಿಟಿ ರಸ್ತೆ ಬಳಿಯ ತಮ್ಮ ಸ್ವಂತ ಮನೆಗೆ ಬದಲಿಸಿ ಸೇವೆ ಮುಂದುವರಿಸಿದ್ದರು. ಮೃತರು ಪತ್ನಿ ನಯನಕುಮಾರಿ (ಪ್ರಾಧ್ಯಾಪಿಕೆ), ಮಕ್ಕಳಾದ ಡಾ.ಇಂಚರ, ಡಾ.ವೈಶಾಖ, ಅಳಿಯ ಡಾ.ಭಾರ್ಗವ ಚಕ್ರವರ್ತಿ ಹಾಸನ ಅವರನ್ನು ಅಗಲಿದ್ದಾರೆ. ಡಾ.ಶಂಕರರಾಜ್ ಆಲಂಪಾಡಿಯವರ ಆಕಸ್ಮಿಕ ನಿಧನದ ಸುದ್ದಿ ತಿಳಿದು ನೂರಾರು ಮಂದಿ ಅವರ ಮನೆಗೆ ಆಗಮಿಸಿ ಅಂತಿಮ ನಮನ ಸಲ್ಲಿಸಿದರು.



ಸುನಿಲ್ ದೇವಾಡಿಗ

ಪಡುಬಿದ್ರಿ: ಇಲ್ಲಿನ ಕಾಡಿಪಟ್ಣದ ಕೆ.ಭೋಜ ದೇವಾಡಿಗರ ಪುತ್ರ ಸುನಿಲ್ ಕೆ.(55) ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ತಂದೆ, ಸಹೋದರಿಯನ್ನು ಅಗಲಿದ್ದಾರೆ. 25 ವರ್ಷಗಳಿಂದ ಪಡುಬಿದ್ರಿ ಅಶ್ವತ್ಥಕಟ್ಟೆ ಶನಿಪೂಜಾ ಸೇವಾ ಸಮಿತಿಯ ಪ್ರಧಾನ ಕಾರ್ಯದಶಿಯಾಗಿ, ದೇವಾಡಿಗ ಸಮಾಜ ಸೇವಾ ಸಂಘದ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಪಡುಬಿದ್ರಿ ಬೋರ್ಡ್ ಶಾಲಾ ಹಳೇ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ತರುಣ ಕಲಾವೃಂದದ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿ ಸಂಘಟನಾ ಚತುರರಾಗಿ ಗುರುತಿಸಿಕೊಂಡಿದ್ದರು. ಸರಳ ಸಜ್ಜನಿಕೆ ಹಾಗೂ ಸದಾ ಕಾರ್ಯಶೀಲ ಪ್ರವರ್ತಿಯಿಂದ ಜನಾನುರಾಗಿರಾಗಿದ್ದರು



ರಾಧಾಶೇಖರ್

ಮುಲ್ಕಿ: ಇಲ್ಲಿಗೆ ಸಮೀಪದ ಶಿಮಂತೂರು ಮಜಲಗುತ್ತು ನಿವಾಸಿ ರಾಧಾಶೇಖರ್ ಶೆಟ್ಟಿ (80) ಶುಕ್ರವಾರ ನಿಧನರಾದರು. ಅವರು ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಹಿರಿಯ ಕೃಷಿಕೆಯಾಗಿ ಪರೋಪಕಾರದಿಂದ ಜನಾನುರಾಗಿಯಾಗಿದ್ದರು



ಅಪ್ಪಯ್ಯ ಸೂಂತೋಡು

ಸುಳ್ಯ: ಉಬರಡ್ಕ ಮಿತ್ತೂರು ಗ್ರಾಮದ ಸೂಂತೋಡು ನಿವಾಸಿ ಅಪ್ಪಯ್ಯ ಸೂಂತೋಡು(55) ಅಸೌಖ್ಯದಿಂದ ಮಂಗಳೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಬಿಜೆಪಿಯ ಸಕ್ರಿಯ ಕಾರ್ಯಕರ್ತರಾಗಿದ್ದು ಊರಿನ ಸಂಘ ಸಂಸ್ಥೆಯಲ್ಲಿ ತೊಡಗಿಸಿಕೊಂಡಿದ್ದರಲ್ಲದೇ ಮಾಧ್ಯಮ ಕ್ಷೇತ್ರದಲ್ಲಿಯು ಗುರುತಿಸಿಕೊಂಡಿದ್ದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಮತ್ತು ಬಂಧು ಬಳಗವನ್ನು ಅಗಲಿದ್ದಾರೆ.



ಬಾಬಣ್ಣ ಶಿಬರಾಯ


ಕಟೀಲು : ಇಲ್ಲಿನ ಅಜಾರು ನಿವಾಸಿ ಬಾಬಣ್ಣ ಶಿಬರಾಯ (90) ಶುಕ್ರವಾರ ನಿಧನರಾದರು. ಅವರು ಶಿಬರೂರಿನ ಶಿಬರಾಯ ಮನೆತನದವರಾಗಿದ್ದು, ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೂರೂವರೆ ದಶಕಗಳ ಕಾಲ ಶಿಕ್ಷಕರಾಗಿ ಸೇವೆಸಲ್ಲಿಸಿ ನಿವೃತ್ತರಾಗಿದ್ದರು.



ಉಡುಪಿ: ಕೆಲಸದ ವೇಳೆ ಅಸ್ವಸ್ಥಗೊಂಡು ವಾಟರ್ ಏಜೆನ್ಸಿ ಉದ್ಯೋಗಿ ಸಾವು

ಉಡುಪಿ: ಕೆಲಸದ ಸ್ಥಳದಲ್ಲಿ ತಲೆಸುತ್ತು ಬಂದು ಕುಸಿದು ಬಿದ್ದ ವ್ಯಕ್ತಿಯೊಬ್ಬರು ಆಸ್ಪತ್ರೆಗೆ ಸಾಗಿಸುವ ಹಾದಿಯಲ್ಲಿ ಮೃತಪಟ್ಟ ಘಟನೆ ಬ್ರಹ್ಮಾವರದಲ್ಲಿ ಸಂಭವಿಸಿದೆ. ಮೃತರನ್ನು ಗದಗ ಮೂಲದ, ಸದ್ಯ ಬ್ರಹ್ಮಾವರದ ಉಪ್ಪಿನಕೋಟೆಯಲ್ಲಿ ನೆಲೆಸಿದ್ದ ನವಾಬ್ ಸಾಬ್ ಮೌಲಾ ಸಾಬ್ ನದಾಫ್ (47) ಎಂದು ಗುರುತಿಸಲಾಗಿದೆ. ಇವರು ಸ್ಥಳೀಯ ವಾಟರ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದರು. ಏಪ್ರಿಲ್ 17ರಂದು ಬೆಳಿಗ್ಗೆ ತಮ್ಮ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದಾಗ ಹಠಾತ್ ಅಸ್ವಸ್ಥಗೊಂಡಿದ್ದರು. ಕೂಡಲೇ ಅವರನ್ನು ಸಹೋದ್ಯೋಗಿ ಗಳು ಆಸ್ಪತ್ರೆಗೆ ಕರೆದೊಯ್ದರಾದರೂ, ಪರೀಕ್ಷಿಸಿದ ವೈದ್ಯರು ಅವರು ಮೃತಪಟ್ಟಿರುವುದಾಗಿ ಘೋಷಿಸಿದರು. ಈ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿತ್ರ: ಕೃಷ್ಣಾ ಸ್ಟುಡಿಯೋ



ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಶುಕ್ರವಾರ ತಡರಾತ್ರಿ ಶ್ರೀ ದೇವರ ವೈಭವದ ಬ್ರಹ್ಮರಥೋತ್ಸವ ನಡೆಯಿತು. ಲಕ್ಷಾಂತರ ಮಂದಿ ಭಕ್ತರು ಹಾಗೂ ವಿದ್ಯುತ್ ದೀಪಾಲಂಕಾರ, ಪುತ್ತೂರು ಬೆಡಿಯ ಹಿನ್ನೆಲೆಯಲ್ಲಿ ಕಂಡು ಬಂದ ಪುತ್ತೂರು ಬ್ರಹ್ಮರಥೋತ್ಸವದ ವಿಹಂಗಮ ನೋಟ.

ನಾರೀಶಕ್ತಿ ಅಧಿನಿಯಮಕ್ಕೆ ತಡೆ: ಕಾಂಗ್ರೆಸ್ ಪಕ್ಷಕ್ಕೆ ಸಿಗಲಿದೆ ಮಹಿಳೆಯರಿಂದ ತಕ್ಕ ಪಾಠ

◆ಮಂಗಳೂರು: ನಾರೀಶಕ್ತಿ ಅಧಿನಿಯಮ ಜಾರಿಗೊಳ್ಳದಂತೆ ತಡೆಯುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದ್ದು, ಮುಂದಿನ ದಿನಗಳಲ್ಲಿ ಮಹಿಳೆಯರು ಇದಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ಮಹಿಳಾ ಮೋರ್ಚಾ ದ.ಕ. ಜಿಲ್ಲಾಧ್ಯಕ್ಷೆ ಮಂಜುಳಾ ರಾವ್ ಹೇಳಿದರು.

ಮಸೂದೆಯನ್ನು ಪಾಸ್ ಮಾಡದಂತೆ ತಡೆಯುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದ್ದು, ಇದು ಕಾಂಗ್ರೆಸ್ ನ ಮಹಿಳಾ ವಿರೋಧಿ ಧೋರಣೆಗೆ ಸ್ಪಷ್ಟ ನಿದರ್ಶನ. ಮಸೂದೆಗೆ ಬೆಂಬಲ ಸಿಕ್ಕಿದ್ದರೆ ಸುವರ್ಣ ಅಕ್ಷರದಲ್ಲಿ ಬರೆದಿಡುವ ದಿನವಾಗಿರುತಿತ್ತು. ಆದರೆ ಕಾಂಗ್ರೆಸ್ ನಿಂದಾಗಿ ಪ್ರಜಾಪ್ರಭುತ್ವದ ಕರಾಳ ದಿನವಾಗುವಂತಾಗಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.



ಕಾಂಗ್ರೆಸ್ ಮತ್ತು ಅದರ ಒಕ್ಕೂಟ ಪಕ್ಷಗಳು ಮಹಿಳೆಯರ ಬಗ್ಗೆ ಮಾತನಾಡುವ ನೈತಿಕತೆಯನ್ನು ಕಳೆದುಕೊಂಡಿದೆ. ಇದು ವಿರೋಧ ಪಕ್ಷಗಳಲ್ಲಿರುವ ಮಹಿಳಾ ಕಾರ್ಯಕರ್ತೆಯರಿಗೂ ಮಾಡಿದ ಅನ್ಯಾಯ. ಮಹಿಳೆಯರನ್ನು ಕೇವಲ ಮತದಾರರನ್ನಾಗಿ ಮಾತ್ರ ನೋಡಿ, ಮಹಿಳೆಯರು ಹಕ್ಕನ್ನು ಕಸಿದು ಕೊಳ್ಳುವ ಕೆಲಸ ಮಾಡಿದೆ. ಕಾಂಗ್ರೆಸ್ ಗೆ ಮಸೂದೆ ಪಾಸ್ ಆಗಲೇ ಬಾರದು ಎಂದಿತ್ತು. ಅದನ್ನು ಸಾಧಿಸುವಲ್ಲಿ ಯಶಸ್ವಿಯಾಗಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮಹಿಳಾ ಸಬಲೀಕರಣದ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದರು. ಲೋಕಸಭೆ- ರಾಜ್ಯಸಭೆಯಲ್ಲಿ ಮಹಿಳಾ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಎನ್ನುವ ಉದ್ದೇಶ ಹೊಂದಿದ್ದರು. ಆದರೆ ಕಾಂಗ್ರೆಸ್ ನಿಂದಾಗಿ ಅದು ಸಾಧ್ಯವಾಗಿಲ್ಲ. ಕಾಂಗ್ರೆಸ್ ಮಹಿಳಾ ಪರ ಪಕ್ಷವಾಗಿ ಉಳಿದಿಲ್ಲ ಎಂದರು.

ಮಹಿಳಾ ಮೋರ್ಚಾ ರಾಜ್ಯ ಕಾರ್ಯದರ್ಶಿ ಶ್ವೇತಾ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷೆ ಪೂಜಾ ಪೈ, ಪ್ರಮುಖರಾದ ಪೂರ್ಣಿಮಾ, ಸಂಧ್ಯಾ ವೆಂಕಟೇಶ್ ಉಪಸ್ಥಿತರಿದ್ದರು.

ಕೇಂದ್ರ ಸರಕಾರದ ಮಹತ್ವಾಕಾಂಕ್ಷಿ ನಾರೀಶಕ್ತಿ ಅಧಿನಿಯಮ ಮಸೂದೆಗೆ ಲೋಕಸಭೆಯಲ್ಲಿ ಸೋಲಾಗುವಂತೆ ಮಾಡುವ ಮೂಲಕ ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟ ಮಹಿಳೆಯರಿಗೆ ಅನ್ಯಾಯ ಮಾಡಿದೆ. ಮಹಿಳೆಯರಿಗೆ ಸಮಾನ ರಾಜಕೀಯ ಪ್ರಾತಿನಿಧ್ಯ ಸಿಗುವ ಆಸೆಗೆ ತಣ್ಣೀರು ಎರಚಿದೆ ಎಂದು ಮಂಜುಳಾ ರಾವ್ ಆಪಾದಿಸಿದರು.

ಕೆಡಿಪಿ ತ್ರೈಮಾಸಿಕ ಸಭೆಯಲ್ಲಿ ಮುನ್ನೆಲೆಗೆ ಬಂದಿತು ಗುರುವಾಯನಕೆರೆ ಮಲಿನಗೊಂಡ ಸಮಸ್ಯೆ

ತಕ್ಷಣ ವರದಿ ಸಲ್ಲಿಸಲು ಸಚಿವರ ಸೂಚನೆ

◆ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕುವೆಟ್ಟು ವ್ಯಾಪ್ತಿಯ ಗುರುವಾಯನ ಕೆರೆಯಲ್ಲಿರುವ ಬೃಹತ್ ಕೆರೆ ಸಂಪೂರ್ಣ ಮಲಿನಗೊಂಡಿದ್ದು, ಈ ಕುರಿತು ಸೂಕ್ತ ಕ್ರಮ ಕೈಗೊಂಡು ಸಮಗ್ರ ವರದಿಯನ್ನು ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಶನಿವಾರ ನಡೆದ ಕೆಡಿಪಿ ತ್ರೈಮಾಸಿಕ ಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಬೆಳ್ತಂಗಡಿ ಶಾಸಕ ಹರೀಶ್ ಪೂಂಜ, ಜಿಲ್ಲೆಯ ಅತಿದೊಡ್ಡ ಕೆರೆಯೆಂದೇ ಗುರುವಾಯನ ಕೆರೆ ಗುರುತಿಸಿಕೊಂಡಿದೆ. ಆದರೆ ಅದೀಗ ಸಂಪೂರ್ಣ ಮಲಿನಗೊಂಡಿದ್ದು, ಮೀನುಗಳು ಸತ್ತು ಬೀಳುತ್ತಿವೆ. ಅದ್ಯಕ್ಕೆ ಎಲ್ಲಾ ಕಡೆಯಿಂದಲೂ ಡ್ರೈನೇಜ್ ಸೇರಿದಂತೆ ತ್ಯಾಜ್ಯ ತುಂಬುತ್ತಿದೆ. ಅಧಿಕಾರಿಗಳು ಮೌನವಹಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಸಚಿವರು, ಮಾಲಿನ್ಯ ಇಲಾಖೆಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಸಭೆಯಲ್ಲಿ ಮಾಹಿತಿ ನೀಡಿದ ಕೆಎಸ್‌ಪಿಸಿಬಿ ಮಂಗಳೂರು ಉಪ ಪರಿಸರ ಅಧಿಕಾರಿ ಮಹೇಶ್ವರಿ ಕುಮಾರಿ ಸಿಂಗ್ ಅವರು, ದೂರು ಬಂದ ಹಿನ್ನೆಲೆ ಕೆರೆಯನ್ನು ಪರಿಶೀಲಿಸಿದಾಗ ಖಾಸಗಿ ಸಂಸ್ಥೆಯೊಂದು ಶುದ್ಧೀಕರಣವಾಗದ ಮಲಿನ ನೀರನ್ನು ನೇರವಾಗಿ ಕೆರೆಗೆ ಹರಿಸುತ್ತಿರುವುದು ಪತ್ತೆಯಾಗಿದೆ ಎಂದು ಹೇಳಿದರು.

ನಿರಂತರವಾಗಿ ಕೊಳಚೆ ನೀರು ಕೆರೆ ಸೇರುತ್ತಿರುವುದರಿಂದ ಕೆರೆಯ ಮೀನುಗಳು ಸತ್ತಿರುವುದು ದೃಢಪಟ್ಟಿದೆ. ಈ ಬಗ್ಗೆ ಈಗಾಗಲೇ ಪರಿಸರ ಮಾಲಿನ್ಯ ಇಲಾಖೆಯಿಂದ ಪರಿಶೀಲನೆ ನಡೆಸಿದಾಗ ಅಲ್ಲಿ ಕೊಳಚೆ ನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ನಿರ್ಮಾಣ ಆಗದಿರುವ ಬಗ್ಗೆ ಗಮನಕ್ಕೆ ಬಂದಿದ್ದು ಈ ಬಗ್ಗೆ ವರದಿಯನ್ನು ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಲಾಗಿದೆ. ಅಲ್ಲದೆ, ಈಗಾಗಲೇ ಆಗಿರುವ ಮಾಲಿನ್ಯಕ್ಕೆ ಸಂಸ್ಥೆಗೆ 1.09 ಕೋಟಿ ರೂ. ಪರಿಹಾರ ನೀಡುವಂತೆ ಹಾಗೂ ಕ್ರಿಮಿನಲ್ ಪ್ರಕರಣ ದಾಖಲಿಸುವ ಕುರಿತಂತೆ ರಾಜ್ಯ ಮಂಡಳಿಗೆ ವರದಿಯಲ್ಲಿ ಶಿಫಾರಸು ಮಾಡಲಾಗಿದೆ. ಸಂಸ್ಥೆಯಲ್ಲಿ 3500 ಮಂದಿ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು, ಅದಕ್ಕೆ ಪೂರಕವಾಗಿ ಎಸ್‌ಟಿಪಿ ನಿರ್ಮಾಣ ಮಾಡದೆ ಇರುವುದು ಇದಕ್ಕೆ ಕಾರಣವಾಗಿದೆ ಎಂದು ಪರಿಸರ ಮಾಲಿನ್ಯ ನಿಯಂತ್ರಣಾಧಿಕಾರಿ ಸಭೆಯಲ್ಲಿ ತಿಳಿಸಿದರು.

ಇದು ಗಂಭೀರ ವಿಚಾರವಾಗಿದ್ದು ಜಲಮೂಲಗಳಿಗೆ ಕೊಳಚೆ ನೀರು ಹರಿಯದಂತೆ ಕ್ರಮವನ್ನು ವಹಿಸದೆ ಇರುವುದು ತಪ್ಪು. ಸಂಸ್ಥೆಗೆ ಪರಿಹಾರವಾಗಿ ನೀಡಲು ಆದೇಶಿಸಿರುವ ಮೊತ್ತವನ್ನು ಭರಿಸಿಕೊಂಡು ರಾಜ್ಯ ಮಂಡಳಿಯ ನಿರ್ದೇಶನದಂತೆ ಮುಂದಿನ ಕ್ರಮ ವಹಿಸಲು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದರು.

ಸಭೆಯಲ್ಲಿ ವಿಧಾನಪರಿಷತ್ ಸದಸ್ಯರಾದ ಡಾ.ಧನಂಜಯ ಸರ್ಜಿ, ವಿಧಾನಪರಿಷತ್ ಸದಸ್ಯರಾದ ಪ್ರತಾಪಸಿಂಹ ನಾಯಕ್, ಕಿಶೋರ್ ಕುಮಾರ್ ವಿವಿಧ ವಿಷಯಗಳ ಕುರಿತು ಮಾತನಾಡಿದರು. ಸಭೆಯಲ್ಲಿ ಹಣಕಾಸು ಸಚಿವಾಲಯದ ಜಂಟಿಕಾರ್ಯದರ್ಶಿ ಸಮೀರ್ ಶುಕ್ಲಾ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಜಿ.ಪಂ. ಸಿಇಒ ನರ್ವಾಡೆ ವಿನಾಯಕ ಕಾರ್ಬಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್, ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ, ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕುಮಾರ್ ಉಪಸ್ಥಿತರಿದ್ದರು.



94ಸಿಯಡಿ 419 ಅರ್ಜಿಗಳು ಬಾಕಿ!

ದ.ಕ. ಜಿಲ್ಲೆಯ ಮೂಡುಬಿದಿರೆ, ಕಡಬ ಹೊರತುಪಡಿಸಿ ಉಳಿದೆಲ್ಲಾ ತಾಲೂಕುಗಳಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಶೂನ್ಯ. 94 ಸಿ (ಗ್ರಾಮಾಂತರ) ಪ್ರದೇಶಗಳಲ್ಲಿ ಬೆಳ್ತಂಗಡಿಯಲ್ಲಿ 419 ಅರ್ಜಿಗಳು ವಿಲೇಗಾಗಿ ಬಾಕಿ ಉಳಿದಿವೆ. ಬೆಳ್ತಂಗಡಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಾಕಿ ಇರುವ ಅರ್ಜಿಗಳು ಯಾವಾಗ ಇತ್ಯರ್ಥವಾಗುವುದು ಎಂದು ಶಾಸಕ ಹರೀಶ್ ಪೂಂಜಾ ಸಭೆಯಲ್ಲಿ ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. 2025ರ ಅಕ್ಟೋಬರ್ ಅಂತ್ಯಕ್ಕೆ ದ.ಕ. ಜಿಲ್ಲೆಯಲ್ಲಿ 2041 ಅರ್ಜಿಗಳು 94 ಸಿಯಡಿ ವಿಲೇಗೆ ಬಾಕಿ ಇದ್ದು, ಭಾಗಶಃ ಅರಣ್ಯ ಇರುವ ಅರ್ಜಿಗಳನ್ನು ಹೊರತುಪಡಿಸಿ ಎಲ್ಲಾ ಅರ್ಜಿಗಳನ್ನು ಡಿಸೆಂಬರ್ ಒಳಗೆ ವಿಲೇಪಡಿಸಲು ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗಿತ್ತು. ಅದರಂತೆ ಮೂಡಬಿದ್ರೆಯಲ್ಲಿ 43, ಕಡಬದಲ್ಲಿ 20 ಹಾಗೂ ಬೆಳ್ತಂಗಡಿಯಲ್ಲಿ 419 ಅರ್ಜಿಗಳು ವಿಲೇಗೆ ಬಾಕಿ ಇವೆ. ಬಾಕಿರುವ ಪ್ರಕರಣಗಳಲ್ಲಿ 480 ಅರಣ್ಯ ಅಭಿಪ್ರಾಯದಿಂದ ಬಾಕಿಯಾಗಿದ್ದು, ಬೆಳ್ತಂಗಡಿಯ 2 ಅರ್ಜಿಗಳು ತಕರಾರು ಆಕ್ಷೇಪದಿಂದ ಬಾಕಿಯಾಗಿವೆ ಎಂದರು. ಮಂದಿನ ಕೆಡಿಪಿ ಸಭೆಯೊಳಗೆ ಎಲ್ಲಾ ಅರ್ಜಿಗಳನ್ನು ವಿಲೇ ಮಾಡಿ ಶೂನ್ಯ ಬಾಕಿ ಆಗುವಂತೆ ಕ್ರಮ ವಹಿಸಿ ಎಂದು ಉಸ್ತುವಾರಿ ಸಚಿವರು ನಿರ್ದೇಶನ ನೀಡಿದರು.

ವಿಬಿ-ಜಿ ರಾಮ್‌ಜಿಗೆ ಅನುಮೋದನೆ ದೊರಕಿಲ್ಲ

ವಿಬಿ- ಜಿ ರಾಮ್ ಜಿ (ವಿಕಾಸ್ ಭಾರತ್- ಜಿ ರಾಮ್ ಜಿ)ಯಾಗಿ ಪುನರ್ ನಾಮಕರಣಗೊಂಡಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂ ನರೇಗಾ)ದಡಿ ಹೊಸ ಕಾಮಗಾರಿಗಳಿಗೆ ಇನ್ನೂ ಅನುಮೋದನೆ ಇನ್ನೂ ದೊರಕಿಲ್ಲ. ಹಾಗಾಗಿ ಕಳೆದ ವರ್ಷದಲ್ಲಿ ಅನುಮೋದನೆಗೊಂಡಿರುವ ಕೆಲಸ ಕಾರ್ಯಗಳು ಮುಂದಿನ ಆರು ತಿಂಗಳವರೆಗೆ ಮುಂದುವರಿಸಲು ಅವಕಾಶ ನೀಡಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಈ ಯೋಜನೆಯಡಿ ಹೊಸ ಸಾಲಿನ ಕ್ರಿಯಾ ಯೋಜನೆಯನ್ನು ಹಿಂದಿನ ವರ್ಷದ ಅಕ್ಟೋಬರ್ 2ರಿಂದಲೇ ತಯಾರಿಸಲಾಗುತ್ತದೆ. ಜಿಲ್ಲೆಯ ಕ್ರಿಯಾ ಯೋಜನೆಯೂ ತಯಾರಿಸಲಾಗಿದೆ. ಆದರೆ ಪುನರ್ ನಾಮಕರಗೊಂಡಿರುವ ಯೋಜನೆಯು ಇನ್ನಷ್ಟೇ ಅಧಿಸೂಚನೆಗೊಂಡು ಹೊಸ ಕಾಮಗಾರಿಗಳಿಗೆ ಕಾರ್ಯಾದೇಶ ದೊರೆಯಬೇಕಿದೆ. ಅಲ್ಲಿಯವರೆಗೆ ಹಿಂದಿನ ವರ್ಷದಲ್ಲಿ ಅನುಮೋದನೆಗೊಂಡ ಯೋಜನೆಗಳು ಮುಂದಿನ ಆರು ತಿಂಗಳವರೆಗೆ ಮುಂದುವರಿಯಲಿವೆ. 2025-26ನೆ ಸಾಲಿನಲ್ಲಿ ಈ ಯೋಜನೆಯಡಿ ದ.ಕ. ಜಿಲ್ಲೆಯಲ್ಲಿ ಶೇ. 90ರಷ್ಟು ಸಾಧನೆಯಾಗಿದೆ ಎಂದು ಜಿಲ್ಲಾಧಿಕಾರಿ ದರ್ಶನ್ ವಿವರಿಸಿದರು.

ಆಳ್ವಾಸ್ ಶಿಕ್ಷಣ ಸಂಸ್ಥೆಯಿಂದ ಮತ್ತೊಂದು ಶೈಕ್ಷಣಿಕ ಸಾಧನೆ

ನ್ಯಾಚುರೋಪಥಿ: 12 ರ್‍ಯಾಂಕ್

◆ಮೂಡುಬಿದಿರೆ: ಆಳ್ವಾಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಈ ವರ್ಷದ ವಿಶ್ವವಿದ್ಯಾನಿಲಯ ಮಟ್ಟದ ಅಂತಿಮ ಪರೀಕ್ಷೆಗಳಲ್ಲಿ ಗಮನಾರ್ಹ ಸಾಧನೆ ಮೆರೆದಿದ್ದು ಪದವಿ ವಿಭಾಗದಲ್ಲಿ 3 ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ 9 ರ್‍ಯಾಂಕ್‌ಗಳೊಂದಿಗೆ ಒಟ್ಟು 12 ರ್‍ಯಾಂಕ್‌ಗಳನ್ನು ಗಳಿಸಿದ್ದಾರೆ.

ಜುಲೈ 2024ರಲ್ಲಿ ನಡೆದ ಪದವಿ ಅಂತಿಮ ವರ್ಷದ ಪರೀಕ್ಷೆಯಲ್ಲಿ ರೋಡ್ರಿಗಸ್ ಪ್ರಣೀಲ್ ಮೆಲ್ವಿನ್ ಪ್ರಥಮ ರ್‍ಯಾಂಕ್ ಪಡೆದು ವಿಶ್ವವಿದ್ಯಾನಿಲಯ ಟಾಪರ್ ಆಗಿ ಹೊರಹೊಮ್ಮಿದ್ದು, ಪ್ರತಿಷ್ಠಿತ ಸೀತಾರಾಮ ಜಿಂದಾಲ್ ಗೋಲ್ಡ್ ಮೆಡಲ್‌ಗೆ ಭಾಜನರಾಗಿದ್ದಾರೆ. ಜೊತೆಗೆ ಅಕ್ಷತಾ ಪಿ. 7ನೇ ರ್‍ಯಾಂಕ್ ಮತ್ತು ದೀಕ್ಷಾ ಬಿ 10ನೇ ರ್‍ಯಾಂಕ್‌ಗಳಿಸಿ ಉತ್ತಮ ಸಾಧನೆ ಮಾಡಿದ್ದಾರೆ.

ಪದವಿ ವಿಭಾಗದಲ್ಲಿ 3 ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ 9 ರ್‍ಯಾಂಕ್

ಸ್ನಾತಕೋತ್ತರ ವಿಭಾಗದ ಎಂ.ಡಿ. ಇನ್ ಕ್ಲಿನಿಕಲ್ ನ್ಯಾಚುರೋಪಥಿಯಲ್ಲಿ ಡಾ. ಶಾಲಿನಿ ಪಿ.ವೈ ಪ್ರಥಮ ರ್‍ಯಾಂಕ್ ಪಡೆದಿದ್ದು, ಡಾ. ಗ್ರೀಷ್ಮಾ ವಿವೇಕ್ ಆಳ್ವ ದ್ವಿತೀಯ ರ್‍ಯಾಂಕ್ ಹಾಗೂ ಡಾ. ಶ್ರದ್ಧಾ ಎಂ.ಕೆ. 9ನೇ ರ್‍ಯಾಂಕ್ ಗಳಿಸಿದ್ದಾರೆ.

ಎಂ.ಡಿ. ಇನ್ ಕ್ಲಿನಿಕಲ್ ಯೋಗ ವಿಭಾಗದಲ್ಲಿ ಡಾ. ವಿನಯ್ ಕುಮಾರ್ ಟಿ. ದ್ವಿತೀಯ ರ್‍ಯಾಂಕ್ ಪಡೆದಿದ್ದು, ಡಾ. ಭೂಮಿಕಾ ಬಿ.ಆರ್ 5ನೇ ರ್‍ಯಾಂಕ್ ಗಳಿಸಿದ್ದಾರೆ. ಡಾ. ಹೋಬಿಜಾಮ್ ಕೇಕೆಸಾನಾ ದೇವಿ ಮತ್ತು ಡಾ. ಮಾರ್ಗರೆಟ್ ಸಲಾಂ ತಲಾ 6ನೇ ರ್‍ಯಾಂಕ್ ಗಳಿಸಿದ್ದು, ಡಾ. ಕಂಚನ್ ಮೈ ಬಾಮ್ 8ನೇ ರ್‍ಯಾಂಕ್ ಹಾಗೂ ಡಾ.ಕೃಷ್ಣೇಂದು ಪಿ ವಿನಯ್ 10ನೇ ರ್‍ಯಾಂಕ್ ಪಡೆದು ಕಾಲೇಜಿನ ಹೆಗ್ಗಳಿಕೆಯನ್ನು ಹೆಚ್ಚಿಸಿದ್ದಾರೆ.



ವಿದ್ಯಾರ್ಥಿಗಳ ಸಾಧನೆಯನ್ನು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ ಎಂ ಮೋಹನ ಆಳ್ವ, ಟ್ರಸ್ಟಿ ವಿವೇಕ ಆಳ್ವ, ಪ್ರಾಂಶುಪಾಲರು ಹಾಗೂ ಬೋಧಕ ವೃಂದದವರು ಅಭಿನಂದಿಸಿದ್ದಾರೆ.

ಪುತ್ತೂರು ಮೆಡ್‌ಲ್ಯಾಂಡ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸಾಗಿದೆ ಅತ್ಯಾಧುನಿಕ ಚಿಕಿತ್ಸೆ

◆ಪುತ್ತೂರು: ಪುತ್ತೂರಿನ ಮೆಡ್ ಲ್ಯಾಂಡ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಇದೀಗ ನುರಿತ ತಜ್ಞ ವೈದ್ಯರಿಂದ ಅತ್ಯಾಧುನಿಕ ತಂತ್ರಜ್ಞಾನ ಬಳಸಿ ವಿವಿಧ ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಿ ನಡೆಯುತ್ತಿವೆ.

ಆಸ್ಪತ್ರೆಯಲ್ಲಿ ಲ್ಯಾಪ್ರೊಸ್ಕೋಪಿ ವಿಧಾನದಲ್ಲಿ ಕಡಿಮೆ ನೋವು ಮತ್ತು ವೇಗವಾದ ಚೇತರಿಕೆಗೆ ಸಹಾಯಕವಾಗುವ ಶಸ್ತ್ರಚಿಕಿತ್ಸೆಗಳು ಲಭ್ಯವಿದ್ದು, ಮಹಿಳೆಯರ ಗರ್ಭಕೋಶ ಸಂಬಂಧಿತ ಸಮಸ್ಯೆಗಳಿಗೆ ಉನ್ನತ ಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ. ಗರ್ಭಕೋಶದ ಶಸ್ತ್ರಚಿಕಿತ್ಸೆಗಳು (ಹಿಸ್ಟೋರೆಕ್ಟಮಿ) ಅನುಭವ ಸಂಪನ್ನ ವೈದ್ಯರ ಮೇಲ್ವಿಚಾರಣೆಯಲ್ಲಿ ಸುರಕ್ಷಿತವಾಗಿ ನೆರವೇರಿಸಲಾಗುತ್ತಿದೆ.

ಇದಲ್ಲದೆ, ಎಲುಬು ಮತ್ತು ಕೀಲು ತಜ್ಞರಿಂದ ಅನೇಕ ಎಸಿ ಎಲ್ ಪುನರ್ ನಿರ್ಮಾಣ ಶಸ್ತ್ರಚಿಕಿತ್ಸೆ ಹಾಗೂ ಮೊಣಕಾಲಿನ ಸಂಪೂರ್ಣ ಬದಲಾವಣೆ (ಟಿಕೆಆರ್) ಚಿಕಿತ್ಸೆಗಳು ಕೂಡ ಯಶಸ್ವಿಯಾಗಿ ನಡೆಸಲಾಗುತ್ತಿವೆ.

ಆಸ್ಪತ್ರೆಯು ಅತ್ಯಾಧುನಿಕ ಉಪಕರಣಗಳು, ಅನುಭವಿಗಳಾದ ವೈದ್ಯರು ಮತ್ತು ರೋಗಿ ಕೇಂದ್ರಿತ ಸೇವೆಗಳ ಮೂಲಕ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ ಎಂದು ಆಸ್ಪತ್ರೆ ಆಡಳಿತ ಮಂಡಳಿ ತಿಳಿಸಿದೆ.



ಡಾ.ಆಸಿಯ ಅಫ್ರಾ ಇಸ್ಮಾಯಿಲ್ ನೇತೃತ್ವದಲ್ಲಿ ಪ್ರಸೂತಿ ಮತ್ತು ಹೆರಿಗೆ ತಜ್ಞ ವೈದ್ಯರ ಸಂಪೂರ್ಣ ತಂಡವೊಂದು ಇಲ್ಲಿ ಕಾರ್ಯಚರಿಸುತ್ತಿದ್ದು ಅದೇ ರೀತಿ ನುರಿತ ಎಲುಬು ತಜ್ಞರಾಗಿರುವ ಡಾ.ನಂದಕಿಶೋರ್ ಭಟ್ ನೇತೃತ್ವದಲ್ಲಿ ಎಲುಬು ಮತ್ತು ಕೀಲು ತಜ್ಞರ ತಂಡವು ವಿವಿಧ ಶಸ್ತ್ರಚಿಕಿತ್ಸೆಗಳು ಬಹಳ ಯಶಸ್ವಿಯಾಗಿ ನಡೆಯುತ್ತಿದೆ. ಜನರಲ್ ಮೆಡಿಸಿನ್ ವಿಭಾಗದಲ್ಲಿ ಅತ್ಯಾಧುನಿಕ ಐಸಿಯು ಚಿಕಿತ್ಸೆ ಸಹಿತ ಸಾಮಾನ್ಯ ವೈದ್ಯಕೀಯ ಸೇವೆಯನ್ನು ಡಾ. ವಿಶಾಲ್ ಯು.ಪಿ. ಹಾಗೂ ಖ್ಯಾತ ಮಧುಮೇಹ ತಜ್ಞ ವೈದ್ಯೆ ಡಾ.ಸ್ವಾತಿ ಪಿ. ನೀಡುತ್ತಿದ್ದಾರೆ.

ದಿನದ 24 ಘಂಟೆಗಳಲ್ಲೂ ಕಾರ್ಯಾಚರಿಸುತ್ತಿರುವ ಅತ್ಯಾಧುನಿಕ ಲ್ಯಾಬ್, ಡಿಜಿಟಲ್ ಎಕ್ಸರೇ, ಫಾರ್ಮಸಿ ಜೊತೆಗೆ ಎಮರ್ಜೆನ್ಸಿ ವಿಭಾಗ ಹಾಗೂ ರಾತ್ರಿಯ ಸಮಯದಲ್ಲಿ ಮುಂಜಾನೆಯ ವರೆಗೆ ಮಕ್ಕಳ ಪರಿಣಿತ ವೈದ್ಯರಾದ ಡಾ.ಚೇತನ್ ಎಸ್. ತಾಂಡೇಲ್ ಕೂಡ ಸೇವೆಗೆ ಲಭ್ಯರಿರುತ್ತಾರೆ ಎಂದು ಆಸ್ಪತ್ರೆಯ ಪ್ರಕಟನೆ ತಿಳಿಸಿದೆ.

ಅಂತಿಮ ಹಂತದಲ್ಲಿ ಕರಾವಳಿ ಸೊಗಡಿನ 'ವಾದಿರಾಜ ವಾಲಗ ಮಂಡಳಿ' ಚಿತ್ರೀಕರಣ

ಕರ್ನಾಟಕದ ಕರಾವಳಿ ಭಾಗದ ಭಾಷೆ, ಸಂಸ್ಕೃತಿ ಮತ್ತು ನೈಸರ್ಗಿಕ ಸೊಗಡನ್ನು ಹೊತ್ತ ಹೊಸ ಕನ್ನಡ ಸಿನಿಮಾ 'ವಾದಿರಾಜ ವಾಲಗ ಮಂಡಳಿ' ಇದೀಗ ಚಿತ್ರೀಕರಣದ ಅಂತಿಮ ಹಂತಕ್ಕೆ ಕಾಲಿಟ್ಟಿದೆ. ಎಂ.ಎನ್.ಆರ್. ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರವನ್ನು ಸಹಕಾರ ರತ್ನ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಭರ್ಜರಿಯಾಗಿ ನಿರ್ಮಿಸುತ್ತಿದ್ದಾರೆ. ಕರಾವಳಿ ಕನ್ನಡದ ಅಪ್ಪಟ ಶೈಲಿ, ಹೊಸತನದ ಕಥಾವಸ್ತು ಮತ್ತು ವಿಭಿನ್ನ ನಿರೂಪಣೆಯ ಮೂಲಕ ಪ್ರೇಕ್ಷಕರಿಗೆ ಹೊಸ ಅನುಭವ ನೀಡುವ ಭರವಸೆಯನ್ನು ಚಿತ್ರತಂಡ ವ್ಯಕ್ತಪಡಿಸಿದೆ.



ಈಗಾಗಲೇ ಬ್ರಹ್ಮಾವರದ ತೆಂಕು ಮನೆಯಲ್ಲಿ ಬಹುತೇಕ ಚಿತ್ರೀಕರಣ ಮುಗಿಸಿರುವ ಈ ಚಿತ್ರ ತಂಡ ಅಂತಿಮ ಹಂತದ ಚಿತ್ರೀಕರಣ ಏಪ್ರಿಲ್ 18ರಿಂದ ಆರಂಭಗೊಂಡು ಏಪ್ರಿಲ್ 30ರೊಳಗೆ ಮುಕ್ತಾಯಗೊಳ್ಳಲಿದೆ.





ನಂತರ ಮೇ ಮತ್ತು ಜೂನ್ ತಿಂಗಳಲ್ಲಿ ಪೋಸ್ಟ್-ಪ್ರೊಡಕ್ಷನ್ ಕಾರ್ಯಗಳು ವೇಗ ಪಡೆಯಲಿದ್ದು, ಆಗಸ್ಟ್ ತಿಂಗಳಲ್ಲಿ ಚಿತ್ರವನ್ನು ಅದ್ದೂರಿಯಾಗಿ ಬಿಡುಗಡೆ ಮಾಡುವ ಯೋಜನೆಯನ್ನು ನಿರ್ಮಾಪಕರಾದ ಡಾ.ಎಂ.ಎನ್.ರಾಜೇಂದ್ರಕುಮಾರ್ ರೂಪಿಸಿದ್ದಾರೆ.

ಕಥೆಯೇ ಚಿತ್ರದ ಬಲ :

ಕಾಂತಾರ ಚಿತ್ರದ 'ವರಾಹ ರೂಪಂ ದೈವ ವರಿಷ್ಠಂ' ಹಾಡಿನ ಸಾಹಿತ್ಯಕರ್ತ ಶಶಿರಾಜ್ ರಾವ್ ಕಾವೂರು ಈ ಚಿತ್ರದ ಕಥೆಯನ್ನು ರಚಿಸಿ, ಆ ಮೂಲಕ ನಿರ್ದೇಶಕರಾಗಿ ಸಿನಿಪ್ರಿಯರ ಗಮನ ಸೆಳೆಯುತ್ತಿದ್ದಾರೆ. ಈ ಚಿತ್ರದ ಕಥಾವಸ್ತುವೇ ಪ್ರಮುಖ ಆಕರ್ಷಣೆ ಎಂದು ಹೇಳಲಾಗುತ್ತಿದೆ. ವಿಭಿನ್ನ ಕಥಾ ಹಂದರ ಹೊಂದಿರುವ ಈ ಸಿನಿಮಾ ಸಂಪೂರ್ಣ ಹಾಸ್ಯಮಯವಾಗಿ ಸಮಾಜಕ್ಕೆ ಒಂದು ಉತ್ತಮ ಸಂದೇಶವನ್ನು ನೀಡಲಿದೆ. ಈ 'ಕಥೆಯನ್ನು ಕೇಳುತ್ತಿದ್ದಂತೆಯೇ ನಿರ್ಮಾಪಕರು ಚಿತ್ರ ನಿರ್ಮಾಣಕ್ಕೆ ಒಪ್ಪಿಗೆ ನೀಡಿದ್ದಾರೆ. ಅಷ್ಟರ ಮಟ್ಟಿಗೆ ಕಥೆಯಲ್ಲೇ ವಿಶೇಷತೆ ಇದೆ' ಎಂದು ನಿರ್ದೇಶಕ ಶಶಿರಾಜ್ ರಾವ್ ಕಾವೂರು ಹೇಳುತ್ತಾರೆ.

ಕರಾವಳಿಯ ಕಲಾವಿದರ ಸಮ್ಮಿಲನ :

'ವಾದಿರಾಜ ವಾಲಗ ಮಂಡಳಿ' ಚಿತ್ರದಲ್ಲಿ ಕರಾವಳಿ ಭಾಗದ ಪ್ರತಿಭಾವಂತ ಕಲಾವಿದರ ದೊಡ್ಡ ಬಳಗವೇ ಒಂದಾಗಿದೆ. ಹಾಸ್ಯ ನಟ ನವೀನ್ ಡಿ. ಪಡೀಲ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.


ಇನ್ನೂ ಗೋಪಿನಾಥ್ ಭಟ್, ಪ್ರಕಾಶ್ ತೂಮಿನಾಡು, ದೀಪಕ್ ರೈ ಪಾಣಾಜೆ, ಮೈಮ್ ರಾಮದಾಸ್, ಹಾಗೂ ಪುಷ್ಪರಾಜ್ ಬೊಳ್ಳೂರು ವಿಭಿನ್ನ ಪಾತ್ರಗಳ ಮೂಲಕ ಚಿತ್ರದ ಬಣ್ಣ ಹೆಚ್ಚಿಸಿದ್ದಾರೆ. ಯುವ ನಟರಾದ ಅರ್ಜುನ್ ವೇದಾಂತ್ ಮತ್ತು ಅಥರ್ವ ಪ್ರಕಾಶ್ ನಾಯಕ ಪಾತ್ರಗಳಲ್ಲಿ ಅಭಿನಯಿಸಿದ್ದು, ವೇನ್ಯ ರೈ ಮತ್ತು ತನ್ವಿ ರಾವ್ ನಾಯಕಿಯರಾಗಿ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ.

ಕುಟುಂಬ ಸಮೇತ ನೋಡಬಹುದಾದ ಸಿನಿಮಾ

ಚಿತ್ರದ ಬಗ್ಗೆ ನಿರ್ಮಾಪಕ ಡಾ. ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡುತ್ತಾ, ಕುಟುಂಬ ಸಮೇತ ಕುಳಿತು ನೋಡಬಹುದಾದ, ಸಂಪೂರ್ಣ ಮನರಂಜನೆ ನೀಡುವ ಹಾಗೂ ಸದಭಿರುಚಿಯ ಸಿನಿಮಾ ಕೊಡಬೇಕು ಎಂಬುದು ನನ್ನ ಹಲವು ವರ್ಷಗಳ ಕನಸು. ಆ ಕನಸು 'ವಾದಿರಾಜ ವಾಲಗ ಮಂಡಳಿ' ಮೂಲಕ ನನಸಾಗುತ್ತಿದೆ, ಎನ್ನುತ್ತಾರೆ. ಈ ಚಿತ್ರ ನಿರ್ಮಾಣದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ಸಿನಿಮಾಗೆ ಬೇಕಾದ ಅತ್ಯುತ್ತಮ ತಂತ್ರಜ್ಞರನ್ನು ಸೇರಿಸಿಕೊಂಡಿದ್ದೇವೆ. ಕೆಲ ಸನ್ನಿವೇಶಗಳು ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುತ್ತವೆ ಎಂಬ ವಿಶ್ವಾಸವಿದೆ. ಇದು ಎಲ್ಲ ವರ್ಗದ ಪ್ರೇಕ್ಷಕರಿಗೂ ಇಷ್ಟವಾಗುವ ಸಿನಿಮಾ, ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸಹ ನಿರ್ಮಾಪಕರಾಗಿ ಜಯಪ್ರಕಾಶ್ ತುಂಬೆ ಸಹಕರಿಸಿದ್ದಾರೆ.

ಅಂತೂ ಕರಾವಳಿ ಕನ್ನಡದ ಸೊಗಡು, ಹೊಸ ಕಥಾಹಂದರ ಮತ್ತು ಬಲಿಷ್ಠ ತಾರಾಗಣದೊಂದಿಗೆ 'ವಾದಿರಾಜ ವಾಲಗ ಮಂಡಳಿ' ಈಗಾಗಲೇ ಸಿನಿಪ್ರಿಯರ ಗಮನ ಸೆಳೆಯುತ್ತಿದೆ. ಆಗಸ್ಟ್‌ನಲ್ಲಿ ಬಿಡುಗಡೆಯಾಗಲಿರುವ ಈ ಚಿತ್ರ, ಕನ್ನಡ ಚಿತ್ರರಂಗಕ್ಕೆ ಮತ್ತೊಂದು ವಿಭಿನ್ನ ಅನುಭವ ನೀಡುವ ಸಾಧ್ಯತೆಯಿದೆ.

■ ಎಸ್.ಜಗದೀಶ್ಚಂದ್ರ ಅಂಚನ್ ಸೂಟರ್‌ಪೇಟೆ



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	5	4	0	1	9	+1.067
ಆರ್‌ಸಿಬಿ	6	4	2	0	8	+1.171
ರಾಜಸ್ಥಾನ	5	4	1	0	8	+0.889
ದಿಲ್ಲಿ	5	3	2	0	6	+0.310
ಗುಜರಾತ್	5	3	2	0	6	+0.018
ಹೈದರಾಬಾದ್	5	2	3	0	4	+0.576
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	5	1	4	0	2	-1.076
ಕೆಕೆಆರ್	6	0	5	1	1	-1.149

ಕಿರುಸುದ್ದಿ

10ಕೆಗೆ ಬೆಂಗಳೂರು ಸಿದ್ಧ



ಬೆಂಗಳೂರು: ಪ್ರೊಕ್ಯಾಮ್ ಇಂಟರ್ ನ್ಯಾಷನಲ್ ನಿಂದ ಪ್ರಚಾರ ಪಡೆದ ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರಿನ 18ನೇ ಆವೃತ್ತಿಯು 2026 ರ ಏಪ್ರಿಲ್ 26, ಭಾನುವಾರದಂದು ಆನ್-ಗ್ರೌಂಡ್ ಮತ್ತು ವರ್ಚುವಲ್ ರೇಸ್ ಗಳಲ್ಲಿ ದಾಖಲೆಯ 35,000ಕ್ಕೂ ಹೆಚ್ಚು ಸ್ಪರ್ಧಿಗಳನ್ನು ಸ್ವಾಗತಿಸಲು ಸಜ್ಜಾಗಿದೆ. ಒಟ್ಟು 210,000 ಡಾಲರ್ ಬಹುಮಾನದೊಂದಿಗೆ, ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೇಸ್ ನಲ್ಲಿ ಉಗಾಂಡಾದ ಹಾರ್ಬರ್ಟ್ ಕಿಬೆಟ್ ಮತ್ತು ಹಾಲಿ ಚಾಂಪಿಯನ್ ಸಾರಾ ಚೆಲಂಗಟ್, ಹಾಲಿ ಚಾಂಪಿಯನ್ ಮತ್ತು ಕೂಟದ ದಾಖಲೆ ಹೋಲ್ಡರ್ ಭಾರತದ ಅಭಿಷೇಕ್ ಪಾಲ್ ಮತ್ತು ಸಂಜೀವಿನಿ ಜಾಧವ್ ಸೇರಿದಂತೆ ಪ್ರಮುಖ ಅಥ್ಲೀಟ್ ಗಳು ಓಟಕ್ಕೆ ಸಜ್ಜಾಗುತ್ತಿದ್ದಾರೆ. ಕಬ್ಬನ್ ರಸ್ತೆಯಲ್ಲಿ ನಡೆಯುವ ಫ್ಲ್ಯಾಗ್ ಆಫ್ ನಲ್ಲಿ ವಿಶ್ವ ಚಾಂಪಿಯನ್ ಮತ್ತು ಒಲಿಂಪಿಕ್ ಪದಕ ವಿಜೇತೆ ಬ್ಲಾಂಕಾ ವ್ಲಾಸಿಕ್ ಅವರು ಅಂತಾರಾಷ್ಟ್ರೀಯ ಕೂಟದ ರಾಯಭಾರಿಯಾಗಿ ಅವರೊಂದಿಗೆ ಸೇರಿಕೊಳ್ಳಲಿದ್ದಾರೆ.

ಸ್ಕ್ವ್ಯಾಷ್: ಚೋಟ್ರಾನಿಗೆ ಸೋಲು

ಹೊಸದಿಲ್ಲಿ: ಭಾರತದ ಭರವಸೆಯ ಸ್ಕ್ವ್ಯಾಷ್ ಆಟಗಾರ ವೀರ್ ಚೋಟ್ರಾನಿ ಫ್ರೆಂಚ್‌ನ ಬಾಪ್ಟಿಸ್ಟ್ ಅವರೊಂದಿಗೆ ಸೋತ ನಂತರ ಹ್ಯಾಂಬರ್ಗ್ ಓಪನ್ ಸ್ಕ್ವ್ಯಾಷ್ ಪಂದ್ಯಾವಳಿಯಿಂದ ಹೊರಬಿದ್ದರು. ಇದರೊಂದಿಗೆ ನಿರೀಕ್ಷಿತ ಟೂರ್ನಿಯಲ್ಲಿ ಭಾರತದ ಅಭಿಯಾನ ಅಂತ್ಯಗೊಂಡಿದೆ. ನಾಕೌಟ್ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಅವರು, ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕಿತ ಬಾಪಿಸ್ಟ್ ಮಾಸೊಟ್ಟಿ ಅವರನ್ನು ಎದುರಿಸಿದ್ದರು. ಶನಿವಾರದ ಪಂದ್ಯದಲ್ಲಿ 12-10, 9-11, 14-12, 9-11, 11-6 ರಿಂದ ಸೋತರು. ಪಿಎಸ್‌ಎ ಕೂಟದ ಕಂಚು ಪದಕ ಮಟ್ಟಿನ ಪಂದ್ಯಾವಳಿ ಇದಾಗಿದೆ. ಇಲ್ಲಿ ಗೆದ್ದವರು ಹೆಚ್ಚಿನ ಶ್ರೇಯಾಂಕ ಪಡೆಯಲಿದ್ದಾರೆ. ನಾಕೌಟ್ ಮಾದರಿಯಲ್ಲಿ ನಡೆಯುವ ಈ ಕೂಟದಲ್ಲಿ ಅದೆಲ್ಲಾ ಚೋಟ್ರಾನಿ ಉತ್ತಮ ಪ್ರದರ್ಶನವೇ ನೀಡಿದ್ದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲೂ ನಿರೀಕ್ಷಿತ ಪೈಪೋಟಿಯನ್ನು ನೀಡಿದ್ದಾರೆ. ಪಂದ್ಯದ ಸೆಟ್‌ಗಳಲ್ಲಿ ಹಲವು ಬಾರಿ ಅವರು ಕಂಬ್ಯಾಕ್ ಮಾಡಿದರು. ಆದಾಗ್ಯೂ ಪಂದ್ಯ ಗೆಲ್ಲಲಾಗಲಿಲ್ಲ. ಪಂದ್ಯಾವಳಿಯಲ್ಲಿ ಭಾಗವಹಿಸಿದ್ದ ಅಭಯ್ ಸಿಂಗ್, ರಮೀತ್ ಟಂಡನ್, ಜೋಶ್ನಾ ಚಿನ್ನಪ್ಪಾ ಈ ಮೊದಲೇ ಹೊರಬಿದ್ದಿದ್ದಾರೆ.

ಜೂಡೋ ಚಾಂಪಿಯನ್‌ಶಿಪ್: ಇನುಂಗಾನ್ಬಿಗೆ ಕಂಚು

ಹೊಸದಿಲ್ಲಿ: ಚೀನಾದ ಒರ್ಡೋಸ್ ನಗರದಲ್ಲಿ ನಡೆದ ಏಷ್ಯನ್ ಜೂಡೋ ಚಾಂಪಿಯನ್ಶಿಪ್ 2026ರಲ್ಲಿ ಭಾರತದ ತಖೆಲ್ಲಾಂಬಮ್ ಇನುಂಗಾನ್ಬಿ ಮಹಿಳೆಯರ ಮೈನಸ್ 70 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. 27 ವರ್ಷದ ಇನುಂಗಾನ್ಬಿಯ ಈ ಸಾಧನೆಯಿಂದ ಭಾರತಕ್ಕೆ ಈ ಸ್ಪರ್ಧೆಯಲ್ಲಿ 13 ವರ್ಷಗಳ ಬಳಿಕ ಪದಕ ಸಿಕ್ಕಿದೆ. ಕಂಚಿನ ಪದಕ ಪಂದ್ಯದಲ್ಲಿ ಅವರು ಮಂಗೋಲಿಯಾದ ಲ್ಖಾಗ್ವದುಲಮ್ ಸರಾಂತ್ಸೆತ್ಸೆಗ್ ಅವರನ್ನು 'ಇಪ್ಪೋನ್' ಮೂಲಕ ಸೋಲಿಸಿ ಜಯ ಸಾಧಿಸಿದರು. ಇದಕ್ಕೂ ಮೊದಲು 2013ರಲ್ಲಿ ಬ್ಯಾಂಕಾಕ್ನಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಅಂಗೋಮ್ ಅನಿತಾ ಚಾನು ಮಹಿಳೆಯರ ಮೈನಸ್ 52 ಕೆಜಿ ವಿಭಾಗದಲ್ಲಿ ಕಂಚು ಗೆದ್ದಿದ್ದರು. ಇನ್ನೂ ಕಾಮನ್ವೆಲ್ತ್ ಕ್ರೀಡಾಕೂಟದ ಕಂಚಿನ ಪದಕ ವಿಜೇತೆ ತುಲಿಕಾ ಮಾನ್ ಮಹಿಳೆಯರ ಪ್ಲಸ್ 78 ಕೆಜಿ ವಿಭಾಗದಲ್ಲಿ ಅಂತಿಮ ದಿನದ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ.

ಬೆಂಗಳೂರು ಗೆಲುವಿನೋಟಕ್ಕೆ ದಿಲ್ಲಿ ಬ್ರೇಕ್ | ರಾಹುಲ್, ಸ್ಟಬ್ಸ್ ಅರ್ಧಶತಕ | ಮಿಲ್ಲರ್ ಮಿಂಚಿನಾಟ

ಬೆಂಗಳೂರಲ್ಲಿ ಕ್ಯಾಪಿಟಲ್ಸ್ ಕಮಾಲ್

ಪೃಥ್ವಿರಾಜ್ ಕುಲಕರ್ಣಿ

ಬೆಂಗಳೂರು: ವಾರಾಂತ್ಯದ ಮಜೆ ಸವಿಯಲು ಬಂದ ಸಮಸ್ತ ಬೆಂಗಳೂರು ಅಭಿಮಾನಿಗಳಿಗೆ ಕೊನೆ ಓವರ್ ಥ್ರಿಲ್ ಸಿಕ್ಕರೂ ಗೆಲುವಿನ ಸಂತಸ ಸಿಗಲಿಲ್ಲ. ಕೆ.ಎಲ್. ರಾಹುಲ್ ಮತ್ತು ಟ್ರಿಸ್ಟನ್ ಸ್ಟಬ್ಸ್ ಕಟ್ಟಿದ ಇನ್ನಿಂಗ್ಸ್‌ಗೆ ಡೆವಿಡ್ ಮಿಲ್ಲರ್ ಕಳಶ ಇಟ್ಟ ನಂತರ ದಿಲ್ಲಿ ಕ್ಯಾಪಿಟಲ್ಸ್ ಆರ್‌ಸಿಬಿಯನ್ನು 6 ವಿಕೆಟ್‌ಗಳಿಂದ ಸೋಲಿಸಿತು.

ಐತಿಹಾಸಿಕ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 100 ಪಂದ್ಯವಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬ್ಯಾಟಿಂಗ್ ಆಹ್ವಾನ ಪಡೆಯಿತು. ಫಿಲ್ ಸಾಲ್ಟ್ (63, 38ಎ, 4ಬೌ, 3ಸಿ) ಹಾಗೂ ಟೀಮ್ ಡೆವಿಡ್(26, 18ಎ, 3ಬೌ, 1ಸಿ) ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 175 ರನ್ ಗಳಿಸಿತು. ದಿಲ್ಲಿ ಕ್ಯಾಪಿಟಲ್ಸ್ ಪರ ಸ್ಪಿನ್ನರ್ ಅಕ್ಷರ್ ಪಟೇಲ್(3-0-18-2), ಕುಲ್ದೀಪ್ ಯಾದವ್ (4-0-32-2) ಮಿಂಚಿದರು. ಗುರಿ ಬೆನ್ನತ್ತಿದ ದಿಲ್ಲಿ ರಾಹುಲ್ (57, 34ಎ, 6ಬೌ, 2ಸಿ) ಹಾಗೂ ಟ್ರಿಸ್ಟನ್ ಸ್ಟಬ್ಸ್★(60, 47ಎ, 4ಬೌ, 1ಸಿ) ಅವರ ಆಸರೆ ಪಡೆದು ಕೊನೆಯ ಓವರ್‌ನ ಥ್ರಿಲ್ಲಿಂಗ್‌ನಲ್ಲಿ ಡೆವಿಡ್(22, 10ಎ, 1ಬೌ, 2ಸಿ) ಅವರ ಅಬ್ಬರದರೊಂದಿಗೆ 19.5 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 179 ರನ್‌ಗಳಿಸಿ ಪಂದ್ಯ ಗೆದ್ದಿತು. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ (4-0-26-3) ಹೋರಾಟ ನಡೆಸಿದರು.

ಬರ್ತ್‌ಡೇ ಬಾಯ್ ಕೆಎಲ್ ರಾಹುಲ್ ದಿಲ್ಲಿ ಪಾಲಿನ ಹೀರೋ. ಸ್ಟಬ್ಸ್ ಪಂದ್ಯದ ವಿನ್ನರ್ ಅನ್ನಿಸಿಕೊಂಡರು. ಆರ್‌ಸಿಬಿ ಪರ ಸಾಲ್ಟ್ ಮಿಂಚಿನಾಟ ಪ್ರದರ್ಶಿಸಿದರೆ, ಭುವನೇಶ್ವರ್ ಕುಮಾರ್ ಹೋಪ್ ಉಳಿಸಿದ ಆಪತ್ಬಾಂಧವ ಅನ್ನಿಸಿಕೊಂಡರು. ಈ ಗೆಲುವಿನೊಂದಿಗೆ ಆರ್‌ಸಿಬಿ ಐಪಿಎಲ್ ನಲ್ಲಿ 2ನೇ, ತವರಲ್ಲಿ ಮೊದಲನೇ ಸೋಲು ಎದುರಿಸಿತು.

ಆರ್‌ಸಿಬಿಗೆ ಉತ್ತಮ ಆರಂಭ: ಕೊಹ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ್ದಾದರೂ 18 ರನ್ ಗಳಿಸಿದ್ದಾಗ, ಎನ್‌ಗಿಡಿಗೆ ಕ್ಯಾಚ್ ಆದರು. ಅತ್ತ ಇನ್ನೊಂದು ಬದಿಯಲ್ಲಿ ಸಾಲ್ಟ್ ಬೌಂಡರಿ ಸಿಕ್ಸರ್‌ಗಳೊಂದಿಗೆ ಮಿಂಚಿದರು. ಪಡಿಕ್ಕಲ್ ಸಿಂಗಲ್‌ಗಳ ಮೂಲಕ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 59 ರನ್ ಗಳಿಸಿತು. ಮಧ್ಯಮ ಓವರ್ ಆರಂಭದಲ್ಲಿ ಸಾಲ್ಟ್ ಬಿರುಸಿನ ಬ್ಯಾಟಿಂಗ್ ಮಾಡಿದರು. ಆದರೆ ಅರ್ಧಶತಕ ಮುಗಿಸುತ್ತಲೇ ಕುಲ್ದೀಪ್‌ಗೆ ಕ್ಯಾಚ್ ಆದರು. ಟೀಮ್ ಡೆವಿಡ್ 26 ರನ್‌ಗೆ, ಶೇಫರ್ಡ್ 1 ರನ್‌ಗೆ ವಿಕೆಟ್ ಒಪ್ಪಿಸಿದರು. ಜಿತೇಶ್ ಶರ್ಮ ಸೆಟ್ ಆಗುವತ್ತ ಸಾಗಿದರು. ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು ಆರ್‌ಸಿಬಿ 84 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು. ಡೆತ್ ಓವರ್‌ನಲ್ಲಿ ಜಿತೇಶ್ ಹೆಚ್ಚಿನ ಬಾಲ್ ಎದುರಿಸಿದರೂ ಸ್ಕೋರ್ ಹಿಗ್ಗಿಸುವ ರನ್ ಮಾಡಲಿಲ್ಲ. ಪರಿಣಾಮ ಆರ್‌ಸಿಬಿ ಡೆತ್ ಓವರ್‌ನಲ್ಲಿ 27 ರನ್ ಮಾತ್ರ ಗಳಿಸಿತು. ಒಟ್ಟು ಇನ್ನಿಂಗ್ಸ್‌ನಲ್ಲಿ ಸಾಲ್ಟ್ ಅವರದ್ದೆ ಹೆಚ್ಚಿನ ಕೊಡುಗೆಯಿತ್ತು.

ರಾಹುಲ್ ಕಮಾಲ್: ಇತ್ತ ದಿಲ್ಲಿಗೆ ಆರಂಭದಲ್ಲೇ ಭಾರೀ ಆಘಾತ ಎದುರಾಯಿತು. ಭುವನೇಶ್ವರ್ ಕುಮಾರ್ ಕರಾರುವಾಕ್ ದಾಳಿ ಸಂಘಟಿಸಿ ನಿಸ್ಸಂಕಾ, ರಿಜ್ವಿ ಹಾಗೂ ಕರುಣ್ ನಾಯರ್ ವಿಕೆಟ್ ಕಿತ್ತರು. ಆದರೆ ಒಂದು ಬದಿಯಲ್ಲಿ ರಾಹುಲ್ ನಿಂತುಕೊಂಡರು. ತಮ್ಮ ಕ್ಲಾಸಿಕಲ್ ಆಟದೊಂದಿಗೆ ದಿಲ್ಲಿಗೆ ಆಸರೆಯಾದರು. ಅವರಿಗೆ ಸ್ಟಬ್ಸ್ ಸಾಥ್ ಸಿಕ್ಕಿತು. ಅಲ್ಲಿಗೆ ಪವರ್ ಪ್ಲೇ ಮುಕ್ತಾಯ. ದಿಲ್ಲಿ 50/3. ಮಧ್ಯಮ ಓವರ್‌ಗಳಲ್ಲಿ ರಾಹುಲ್ ಇನ್ನಷ್ಟು ಮಿಂಚಿನಾಟ ಪ್ರದರ್ಶಿಸಿ 30 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಹುಟ್ಟುಹಬ್ಬದಂದು ತವರಲ್ಲಿ ಅರ್ಧಶತಕ ಬಾರಿಸಿದ ಕನ್ನಡಿಗ ರಾಹುಲ್ ಆಟಕ್ಕೆ ಮೈದಾನವೇ ಸಂಭ್ರಮಿಸಿತು.

ಸ್ಟಬ್ಸ್ ಕೂಡಾ ಪಿಚ್‌ಗೆ ಹೊಂದಿಕೊಂಡಿದ್ದರು. ಇನ್ನೇನು ಪಂದ್ಯ ಮುಗಿಯಿತು, ದಿಲ್ಲಿಯತ್ತ ಸಾಗಿತು ಅನ್ನುವಷ್ಟರಲ್ಲಿ ದಾಳಿಗಿಳಿದ ಕೃಣಾಲ್ ಪಾಂಡ್ಯ ಆರ್‌ಸಿಬಿಗೆ ಮತ್ತೊಮ್ಮೆ ಆಪತ್ಬಾಂಧವರಾಗಿ ಕಾಣಿಸಿಕೊಂಡರು. 57 ರನ್‌ಗಳಿಸಿ ಆಕ್ರಮಣಕಾರಿಯಾಗಿ ಕಾಣಿಸಿಕೊಳ್ಳುತ್ತಿದ್ದ ರಾಹುಲ್ ಕೊಹ್ಲಿಗೆ ಕ್ಯಾಚ್ ಆದರು.

ಅಕ್ಷರ್ ಬರುತ್ತಲೇ ಸೆಟ್ ಆಗುವ ಔಪಚಾರಿಕತೆಗೆ ಬಿದ್ದರು. ಪಂದ್ಯ ನಿಧಾನಗತಿ ಪಡೆದುಕೊಂಡಿತು. ಕೊನೆಯ 3 ಓವರ್‌ಗಳಲ್ಲಿ ದಿಲ್ಲಿಗೆ 37 ರನ್ ಬೇಕಿದ್ದವು. ಅಲ್ಲಿಗೆ ಬಂದ ಹ್ಯಾಜೆಲ್ವುಡ್ 4 ರನ್ ಮಾತ್ರ ಬಿಟ್ಟುಕೊಟ್ಟರು. ಮುಂದಿನ ಓವರ್‌ನಲ್ಲಿ ಭುವನೇಶ್ವರ್ ಕುಮಾರ್ 12 ರನ್ ಬಿಟ್ಟುಕೊಟ್ಟರು. 2 ಓವರ್‌ಗಳಲ್ಲಿ 25 ರನ್ ಬೇಕಿದ್ದಾಗ ರಸಿಖ್ 10 ರನ್ ಬಿಟ್ಟುಕೊಟ್ಟರು.

ಚಿತ್ರ: ಮೋಹನ್ ಕುಮಾರ್ ಬಿ.ಎಸ್.



ಸಂಕ್ಷಿಪ್ತ ಸ್ಕೋರ್

ಆರ್‌ಸಿಬಿ 20 ಓವರ್‌ಗಳಲ್ಲಿ 175/8: ಸಾಲ್ಟ್ 63, ಡೆವಿಡ್ 26; ಅಕ್ಷರ್ 18/2
ದಿಲ್ಲಿ 19.5 ಓವರ್‌ಗಳಲ್ಲಿ 179/4: ಸ್ಟಬ್ಸ್ 60★, ರಾಹುಲ್ 57; ಭುವನೇಶ್ವರ್ 26/3

ಡೆತ್ ಓವರ್‌ನಲ್ಲಿ ಆರ್‌ಸಿಬಿಗೆ ನಷ್ಟ

ಪವರ್‌ಪ್ಲೇನಲ್ಲಿ ಆರ್‌ಸಿಬಿ 1 ವಿಕೆಟ್ ಮಾತ್ರಕ್ಕೆ 59 ಗಳಿಸಿತು. ದಿಲ್ಲಿ 3 ವಿಕೆಟ್‌ಗೆ 50 ರನ್ ಮಾತ್ರ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಸಾಲ್ಟ್ ಆಸರೆಯೊಂದಿಗೆ ಆರ್‌ಸಿಬಿ 4 ವಿಕೆಟ್‌ಗೆ 89 ರನ್ ಗಳಿಸಿದರೆ, ದಿಲ್ಲಿ 1 ವಿಕೆಟ್‌ಗೆ 85 ರನ್ ಗಳಿಸಿತು. ಇನ್ನು ಡೆತ್ ಓವರ್‌ನಲ್ಲಿ ಭಾರೀ ಆಘಾತ ಎದುರಿಸಿ 27 ರನ್ ಮಾತ್ರ ಗಳಿಸಿ 3 ವಿಕೆಟ್ ಕಳೆದುಕೊಂಡಿತು. ಅತ್ತ ದಿಲ್ಲಿ ಅದೇ ಓವರ್ ಗಳಲ್ಲಿ ಯಾವುದೇ ವಿಕೆಟ್ ಇಲ್ಲದೆ 44 ರನ್‌ಗಳಿಸಿತು. ಬ್ಯಾಟಿಂಗ್ ವೇಳೆ ವಿಕೆಟ್‌ಗಳನ್ನು ಕಳೆದುಕೊಂಡ ಆರ್‌ಸಿಬಿ ಬೌಲಿಂಗ್ ಸಮಯದಲ್ಲಿ ಹೆಚ್ಚಿನ ರನ್ ಬಿಟ್ಟುಕೊಟ್ಟು ಡೆತ್ ಓವರ್‌ನಲ್ಲೇ ಸೋಲನುಭವಿಸಿತು.

ಗೆಲ್ಲಿಸಿದ ಮಿಲ್ಲರ್

ದಿಲ್ಲಿಗೆ ಕೊನೆಯ ಓವರ್‌ನಲ್ಲಿ 15 ರನ್ ಬೇಕು. ಕೊನೆಯ ಓವರ್ ಮಾಡಲು ಶೇಫರ್ಡ್ ಬಂದರು. ಅವರಿಗದು ಮೊದಲನೇ ಓವರ್. ಮೊದಲೆರಡು ಬಾಲ್‌ಗಳಲ್ಲಿ 2 ರನ್ ಮಾತ್ರ ಬಂದವು. ಪಂದ್ಯ ತೀರಾ ರೋಚಕ ಹಂತಕ್ಕೆ ಹೊಯಿತು. ಮಿಲ್ಲರ್ ಮುಂದಿನ ಮೂರು ಬಾಲ್‌ಗಳಲ್ಲಿ 2 ಸಿಕ್ಸರ್ ಹಾಗೂ 1 ಬೌಂಡರಿ ಬಾರಿಸಿ ಗೆಲ್ಲಿಸಿದರು.

ಚಿನ್ನಸ್ವಾಮಿಯಲ್ಲಿ ಆರ್‌ಸಿಬಿಗೆ 100ನೇ ಪಂದ್ಯ

ಅಂದು ಏಪ್ರಿಲ್ 18, 2008. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣವನ್ನು ತವರು ಮೈದಾನವಾಗಿ ಆರಿಸಿಕೊಂಡಿದ್ದ ಆರ್‌ಸಿಬಿ, ತನ್ನ ಮೊದಲ ಪಂದ್ಯವನ್ನು ಕೆಕೆಆರ್ ವಿರುದ್ಧಬ ಆಡಿತ್ತು. ವಿಶೇಷ ಕಾಕತಾಳಿಯೊಂದರಲ್ಲಿ ಶನಿವಾರದಂದು ಅದೇ ದಿನಾಂಕದಂದೇ ಆರ್‌ಸಿಬಿ ತನ್ನ ನೂರನೇ ತವರು ಪಂದ್ಯವಾಡಿದೆ. ಶನಿವಾರ ದಿಲ್ಲಿ ವಿರುದ್ಧ ನಡೆದಿದ್ದ ಪಂದ್ಯದ ವೇಳೆ ಆರ್‌ಸಿಬಿ ಚಿನ್ನಸ್ವಾಮಿಯಲ್ಲಿ ನೂರು ಪಂದ್ಯವಾಡುವ ಮೂಲಕ ತವರಲ್ಲಿ ಹೆಚ್ಚು ಪಂದ್ಯವಾಡಿದ ತಂಡ ಅನ್ನಿಸಿಕೊಂಡಿತು. ಇದರೊಂದಿಗೆ ತವರು ಮೈದಾನ ದಲ್ಲಿ ಅತಿ ಹೆಚ್ಚು ಪಂದ್ಯವನ್ನಾಡಿದ ದಾಖಲೆ ಮಾಡಿತು.

ಹೆಚ್ಚು ತವರು ಪಂದ್ಯವಾಡಿದ ತಂಡಗಳು

ತಂಡ	ಕ್ರೀಡಾಂಗಣ	ಪಂದ್ಯ
ಬೆಂಗಳೂರು	ಚಿನ್ನಸ್ವಾಮಿ	100*
ಕೆಕೆಆರ್	ಈಡನ್ ಗಾರ್ಡನ್ಸ್	98*
ಮುಂಬೈ	ವಾಂಖೆಡೆ	95*

ರಾಜಸ್ಥಾನ ರಾಯಲ್ಸ್‌ಗೆ ಆತ್ಮವಿಶ್ವಾಸ | 2ನೇ ಪಂದ್ಯ: ಪಂಜಾಬ್-ಲಖನೌ

ಇಂದಾದರೂ ಗೆಲ್ಲುತ್ತಾ ಕೆಕೆಆರ್?

ಕೋಲ್ಕತ್ತಾ: ಸತತ ಸೋಲುಗಳಿಂದ ಪಂದ್ಯಾವಳಿಯಲ್ಲಿ ಈಗಾಗಲೇ ಭಾರೀ ಹಿನ್ನಡೆ ಅನುಭವಿಸಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಹಾಗೂ ಕಳೆದ ಪಂದ್ಯದಲ್ಲಿ ಸೋತು ಅಗ್ರಸ್ಥಾನದಿಂದ ಕೆಳಗಿಳಿದಿರುವ ರಾಜಸ್ಥಾನ ರಾಯಲ್ಸ್ ತಂಡಗಳು ಭಾನುವಾರದ ಸೂಪರ್ ವೀಕೆಂಡ್ನ ಮೊದಲ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಶುಕ್ರವಾರವಷ್ಟೇ ತಮ್ಮ ನಾಲ್ಕನೇ ಪಂದ್ಯ ಸೋತಿರುವ ಕೋಲ್ಕತ್ತಾ ಪಡೆ ಇನ್ನೂ ಗೆಲುವಿನ ಖಾತೆ ತೆರದಿಲ್ಲ. ಪಂಜಾಬ್ ವಿರುದ್ಧ ನಡೆಯಬೇಕಿದ್ದ ಪಂದ್ಯ ರದ್ದಾದ ಬೆನ್ನಲ್ಲೇ ಒಂದು ಅಂಕ ಮಾತ್ರ ಪಡೆದಿರುವ ರಹಾನೆ ಪಡೆ ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ. ಇತ್ತರ ರಾಜಸ್ಥಾನ ಪಂದ್ಯಾವಳಿಯ ಆರಂಭಿಕ ಪಂದ್ಯಗಳನ್ನು ಭರ್ಜರಿ ಗೆಲುವು ಸಾಧಿಸಿತ್ತು. ಆದರೆ ಕಳೆದ ಪಂದ್ಯದಲ್ಲಿ ಸೋಲನುಭವಿಸಿದ್ದು, ಪುಟಿದೇಳುವ ತವಕದಲ್ಲಿದೆ. ಈಡನ್ ಗಾರ್ಡನ್ಸ್‌ನಲ್ಲಿ ಪಂದ್ಯ ನಡೆಯಲಿದೆ.

ಇತ್ತ ಎರಡನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಹಾಗೂ ಲಖನೌ ಸೂಪರ್ ಜೇಂಟ್ಸ್ ತಂಡಗಳು ಎದುರಾಗಲಿವೆ. ಗೆಲುವಿನ ನಾಗಾಲೋಟ ಮುಂದುವರಿಸಿರುವ ಪಂಜಾಬ್ ಕಿಂಗ್ಸ್ ಆಡಿರುವ ಎಲ್ಲಾ ಪಂದ್ಯ ಗಳಲ್ಲಿ ಗೆದ್ದಿದೆ. ಇತ್ತ ಲಖನೌ ಸೂಪರ್ ಜೇಂಟ್ಸ್ 3 ಪಂದ್ಯಗಳಲ್ಲಿ ಸೋತಿದ್ದು, ಭಾರೀ ನಿರಾಸೆ ಮೂಡಿಸಿದೆ. ಅಗ್ರಸ್ಥಾನದಲ್ಲಿ ಮುಂದುವರಿಯುವ ವಿಶ್ವಾಸದಲ್ಲಿ ಪಂಜಾಬ್ ಕಾಣಿಸಿಕೊಂಡರೆ, ಇತ್ತ ಲಖನೌ ಗೆಲುವಿನ ಹಳಿಗೆ ಮರಳಲು ಯತ್ನಿಸಲಿದೆ. ಈ ಪಂದ್ಯವು ಚಂಡೀಗಢದಲ್ಲಿ ನಡೆಯಲಿದೆ.

ಪಂದ್ಯದ ವಿವರ

ಆರ್‌ಆರ್-ಕೋಲ್ಕತ್ತಾ
ಎಲ್ಲಿ: ಕೋಲ್ಕತ್ತಾ
ಯಾವಾಗ: ಭಾನುವಾರ
ಸಮಯ: ಮಧ್ಯಾಹ್ನ 3:30

ಪಂಜಾಬ್-ಲಖನೌ
ಎಲ್ಲಿ: ಚಂಡೀಗಢ
ಯಾವಾಗ: ಭಾನುವಾರ
ಸಮಯ: ಸಂಜೆ 7:30



ಆರ್‌ಆರ್ VS ಕೋಲ್ಕತ್ತಾ

ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಭಾನುವಾರ ಎದುರಾಗುತ್ತಿರುವ ತಂಡಗಳ ಪೈಕಿ ಒಂದು ತಂಡ ಗೆಲುವಿನ ಲಯದಲ್ಲಿದೆ. ಅಗ್ರಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದೆ. ಇನ್ನು ಎರಡನೇ ತಂಡಕ್ಕೆ ಈವರೆಗೂ ಗೆಲುವಿಲ್ಲ. ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಕೆಕೆಆರ್ ಬೌಲಿಂಗ್‌ನಲ್ಲಿಅನುಭವದ ಕೊರತೆ ಎದುರಿಸುತ್ತಿದೆ. ತಂಡದಲ್ಲಿ ಫಿನ್, ಸೈಫರ್ಟ್, ರಹಾನೆ, ರಿಂಕು, ಗ್ರಿನ್ ಅಂಥವರಿದ್ದರೂ ಯಾರೊಬ್ಬರೂ ಲಯದಲ್ಲಿಲ್ಲ. ಕಳೆದ ಪಂದ್ಯದಲ್ಲಿ ಗ್ರೀನ್ ಉತ್ತಮ ಬ್ಯಾಟಿಂಗ್ ಮಾಡಿದ್ದಾದರೂ ಡೆತ್ ಓವರ್‌ನಲ್ಲಿ ರನ್ ಮಾಡಲಾಗಿಲ್ಲ. ಬೌಲಿಂಗ್ ವಿಭಾಗದಲ್ಲಿ ನರೈನ್, ವರುಣ್, ವೈಭವ್ ಹಾಗೂ ವರುಣ್ ಅಂಥವರಿದ್ದರೂ ಲಯದಲ್ಲಿಲ್ಲ. ಇತ್ತ ರಜಸ್ಥಾನ ಪರ ಪ್ರತಿಯೊಬ್ಬರೂ ಅಬ್ಬರಿಸಿದ್ದಾರೆ. ಕಳೆದ ಪಂದ್ಯಗಳಲ್ಲಿ ವೈಭವ್ ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್ ನೊಂದಿಗೆ ವಿಶ್ವದ ಗಮನ ಸೆಳೆದಿದ್ದಾರೆ, ಇತ್ತ ಜೈಸ್ವಾಲ್ ಕೂಡ ಅದೇ ಲಯದಲ್ಲಿದ್ದು ವಿಶ್ವಾಸ ಹೆಚ್ಚಿಸಿದೆ. ಮಧ್ಯಮ ಕ್ರಮಾಂಕದಲ್ಲಿ ಪರಾಗ್ ಮಿಂಚಬೇಕಿದೆ. ಇತ್ತ ಹೇಟ್ಮೀರ್ ಕಡೆಯಿಂದ ಹೆಚ್ಚಿನ ರನ್‌ಗಳು ಬಂದಿಲ್ಲ. ಫೆರಾರಿಯಾ ಕಳೆದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ್ದಾರೆ. ಜಡೇಜಾ ಕೂಡ ಉತ್ತಮ ಬ್ಯಾಟಿಂಗ್ ಮಾಡಿರುವುದು ಬಲ ಹೆಚ್ಚಿಸಿದೆ. ಬೌಲಿಂಗ್ ವಿಭಾಗದಲ್ಲಿಆರ್ಚರ್ ತಮ್ಮ ಅಸಲು ಬೌಲಿಂಗ್ ಪ್ರದರ್ಶನ್ ನೀಡುತ್ತಿದ್ದಾರೆ. ಬರ್ಗರ್ ಕೂಡ ಅಷ್ಟೇ ಅಚ್ಚುಕಟ್ಟಾದ ಬೌಲಿಂಗ್ ಮಾಡಿದ್ದಾರೆ. ಸ್ಪಿನ್ನರ್ ರವಿ ಬಿಷ್ಣೋಯ್ ಗೆಲುವಿನಾಟವಾಡಿದ್ದಾರೆ.



ಪಂಜಾಬ್-ಲಖನೌ ಪಂದ್ಯ

ಎರಡನೇ ಪಂದ್ಯವೂ ಸ್ಟಾರ್ ವಾರ್‌ಗೆ ಸಾಕ್ಷಿಯಾಗಲಿದೆ. ರಿಷಭ್ ಪಂತ್ ನೇತೃತ್ವದ ಲಖನೌ ಸೂಪರ್ ಜೇಂಟ್ಸ್ ಅಯ್ಯರ್ ನೇತೃತ್ವದ ಪಂಜಾಬ್ ತಂಡವನ್ನು ಎದುರಿಸಲಿದೆ. ಹಿಂದಿನ ಪಂದ್ಯಗಳಲ್ಲಿ ಪಂಜಾಬ್ ಗೆಲುವಿನ ನಗಾರಿ ಬಾರಿಸುತ್ತಾ ಬಂದಿದೆ. ಆಡಿರುವ ಎಲ್ಲಾ ಪಂದ್ಯಗಳಲ್ಲಿ ಶ್ರೇಯಸ್ ಪಡೆ ಗೆಲುವಿನ ಆಟವಾಡಿದೆ. ಇತ್ತ ಲಖನೌ ಸೋಲುಗಳಿಂದ ಕಂಗೆಟ್ಟಿದೆ. ಪಂಜಾಬ್ ಪಡೆಯಲ್ಲಿ ದೊಡ್ಡ ಹಿಟ್ಟರ್ ಗಳಿದ್ದಾರೆ. ಪ್ರಭಸಿಮ್ರನ್, ಪ್ರಿಯಾಂಶ್, ಶ್ರೇಯಸ್ ಸೇರಿದಂತೆ ಪ್ರಮುಖ ಬ್ಯಾಟರ್‌ಗಳಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಶಶಾಂಕ್, ಸ್ಟೋನಿಸ್ ಕೂಡ ಉತ್ತಮ ಲಯದಲ್ಲಿದ್ದಾರೆ. ಇತ್ತ ಬೌಲಿಂಗ್‌ನಲ್ಲಿ ಅರ್ಶದೀಪ್ ಸಿಂಗ್, ಬಾರ್ಟಲೆಟ್, ಯಾನ್ಸನ್ ಉತ್ತಮ ಬೌಲಿಂಗ್ ಮಾಡಿದ್ದಾರೆ. ಗೆಲುವಿನ ಹಳಿಯಲ್ಲೇ ಉಳಿಯಲು ಪಂಜಾಬ್ ಅದೇ ಆಟ ಮುಂದುವರಿಸಬೇಕಿದೆ. ಇತ್ತ ಲಖನೌ ಪರ ಇಬ್ಬರೂ ಆರಂಭಿಕರು ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಿಲ್ಲ. ನಾಯಕ ರಿಷಭ್ ಪಂತ್ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಲಯಕದ ಹುಡುಕಾಟದಲ್ಲಿದ್ದಾರೆ. ಪೂರಣ್ ಪ್ರತಿ ಪಂದ್ಯದಲ್ಲೂ ಹಿನ್ನಡೆ ಅನುಭವಿಸಿ ದ್ದಾರೆ. ಇನ್ನು ಬೌಲಿಂಗ್‌ನಲ್ಲಿ ಶಮಿ, ಪ್ರಿನ್ಸ್ ಬಿಟ್ಟು ಇನ್ನುಳಿದವರು ಹಿನ್ನಡೆ ಅನುಭವಿಸಿದ್ದಾರೆ. ಲಖನೌ ಪುಟಿದೇಳಬೇಕಾದರೆ ಬ್ಯಾಟಿಂಗ್ ಬಲ ಹೆಚ್ಚಿಸಿಕೊಳ್ಳಬೇಕಿದೆ.

ಚೆನ್ನೈಗೆ ಕಠಿಣ ಗುರಿ



ಹೈದರಾಬಾದ್: ಅಭಿಷೇಕ್ ಶರ್ಮ ಮತ್ತು ಹೆನ್ರಿಚ್ ಕ್ಲಾಸೆನ್ ಅವರ ಅದ್ಭುತ ಬ್ಯಾಟಿಂಗ್ ನೆರವಿನಿಂದಾಗಿ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಹೈದರಾಬಾದ್ ಸ್ಪರ್ಧಾತ್ಮಕ ಗುರಿ ನೀಡಿದೆ. ಒಂದು ಹಂತದಲ್ಲಿ 10ಕ್ಕೂ ಅಧಿಕ ರನ್‌ರೇಟ್ ಉಳಿಸಿಕೊಂಡಿದ್ದ ಹೈದರಾಬಾದ್ ಕೊನೆಯಲ್ಲಿ ಅಲ್ಪ ಎಡವಿತು. ಆದಾಗ್ಯೂ ಮೊದಲು ಬ್ಯಾಟಿಂಗ್ ಆಹ್ವಾನ ಪಡೆದ ನಂತರ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 194 ರನ್ ಗಳಿಸಿದೆ.

ಪವರ್‌ಪ್ಲೇನ ಕೊನೆ ಎರಡು ಬಾಲ್‌ಗಳಲ್ಲಿ ಎರಡು ವಿಕೆಟ್ ಬೀಳುವ ಮುನ್ನ ಚೆನ್ನೈ ತಂಡವನ್ನು ಹೈದರಾಬಾದ್ ದಂಡಿಸಿತು. ಅಭಿಷೇಕ್ ಶರ್ಮ ಸಿಕ್ಸರ್‌ಗಳ ಸುರಿಮಳೆಗೈದರೆ ಟ್ರಾವಿಸ್ ಹೆಡ್ ಚೆನ್ನೈನ ಹಡೆಮುರಿ ಕಟ್ಟಿದರು. ಶುರುವಿನಿಂದಲೇ ರನ್‌ರೇಟ್ ಹೆಚ್ಚಿಸಿದ ಈ ಜೋಡಿ ಚೆನ್ನೈ ಮೇಲೆ ಒತ್ತಡ ಹೇರಿತು. 4 ಸಿಕ್ಸರ್, 5 ಬೌಂಡರಿ ಬಾರಿಸಿದ ಅಭಿಷೇಕ್ ಶರ್ಮ 15 ಬಾಲ್ ಗಳಲ್ಲಿ ಅರ್ಧಶತಕ ಬಾರಿಸಿದುರು. ಇತ್ತ ಹೆಡ್ ಕೂಡ 20 ರನ್ ದಾಟಿದರು. 5.4 ಓವರ್‌ಗಳಲ್ಲಿ ಹೈದರಾಬಾದ್ 75 ರನ್ ಗಳಿಸಿತ್ತು. ಮುಖೇಷ್ ಚೌಧರಿ ಪವರ್‌ಪ್ಲೇನ ಕೊನೆಯ ಓವರ್ ಮಾಡಲು ಬಂದರು. ಮೊದಲಿನ ನಾಲ್ಕು ಬಾಲ್‌ಗಳಲ್ಲಿ ದಂಡಿಸಿಕೊಂಡ ಅವರು, ಸರಸರನೇ ಹೆಡ್ ಹಾಗೂ ಕಿಶನ್ ವಿಕೆಟ್ ಪಡೆದರು. ಪವರ್‌ಪ್ಲೇ 75/2ಕ್ಕೆ ಮುಕ್ತಾಯಗೊಂಡಿತು.

ಮಧ್ಯಮ ಓವರ್‌ಗಳಲ್ಲಿ ಅಭಿಷೇಕ್ ಆರ್ಭಟ ನಿಂತಿತು. ಓವರ್ ಟನ್ ಅವರಿಗೆ ಖೆಡ್ಡಾ ತೋಡಿದರು. ಕ್ಲಾಸೆನ್ ನಿಂತು ಆಡುವ ಜವಾಬ್ದಾರಿ ಹೊತ್ತಿಕೊಂಡರು. ಸೆಟ್ ಆಗುತ್ತಲೇ ದಂಡಿಸಲಾರಂಭಿಸಿದ ಅವರು 32 ಬಾಲ್ ಗಳಲ್ಲಿ ಅರ್ಧಶಕತ ಪೂರೈಸಿದರು. 14.3 ಓವರ್‌ಗಳಲ್ಲಿ ಹೈದರಾಬಾದ್ 150 ರನ್ ದಾಟಿತ್ತು. ದೊಡ್ಡ ಸ್ಕೋರ್‌ನತ್ತ ಸಾಗಿತ್ತು. ಆದರೆ ಈ ಹಂತದಲ್ಲಿ ಪುಟಿದೆದ್ದ ಚೆನ್ನೈ ಬೌಲರ್‌ಗಳು ಹೈದರಾಬಾದ್‌ನ ಮಧ್ಯಮ ಕ್ರಮಾಂಕವನ್ನು ಪೆವಿಲಿಯನ್‌ಗಟ್ಟಿತು. ಅನಿಕೇತ್ 2, ರೆಡ್ಡಿ 12, ಆರೋರಾ 13 ರನ್‌ಗೆ ವಿಕೆಟ್ ಕೊಟ್ಟರು. ರನ್‌ರೇಟ್ ಇಳಿಯಿತು. ಮಧ್ಯಮ ಓವರ್‌ಗಳಲ್ಲಿ ಹೈದರಾಬಾದ್ 88 ರನ್‌ಗಳಿಸಿತು.

ಇನ್ನು ಡೆತ್ ಓವರ್‌ನಲ್ಲಿ ತೀರಾ ಹಿನ್ನಡೆ ಅನುಭವಿಸಿದ ಹೈದರಾಬಾದ್ 4 ವಿಕೆಟ್ ಕಳೆದುಕೊಂಡಿತು. ಯಾರೊಬ್ಬರೂ ನಿಲ್ಲಲಿಲ್ಲ. ಕ್ಲಾಸೆನ್ 59 ರನ್ ಗೆ ವಿಕೆಟ್ ಒಪ್ಪಿಸಿದರು. ಶಿವಾಂಗ್ ಕುಮಾರ್ 12 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದ್ದಾದರೂ 200 ರನ್ ಮುಟ್ಟಲಾಗಲಿಲ್ಲ.

ಸಾಯಿರಾಧ ಟೌನ್‌ಶಿಪ್‌ನಲ್ಲಿ ಅದ್ದೂರಿಯ ಅಷ್ಟಪವಿತ್ರ ಶ್ರೀಮನ್ ನಾಗಮಂಡಲೋತ್ಸವ

ಉಡುಪಿ: ಪೆರಂಪಳ್ಳಿ-ಮಣಿಪಾಲ ರಸ್ತೆಯ ಸಾಯಿರಾಧಾ ಟೌನ್‌ಶಿಪ್‌ನ 'ನಾಗವನ' ಶ್ರೀ ನಾಗದೇವರ ಸನ್ನಿಧಿಯಲ್ಲಿ ಶನಿವಾರದಂದು ಅಷ್ಟಪವಿತ್ರ ಶ್ರೀಮನ್ ನಾಗಮಂಡಲೋತ್ಸವ ಅತ್ಯಂತ ಭಕ್ತಿ-ಶ್ರದ್ಧೆಯಿಂದ ನೆರವೇರಿತು.

ಸಾಯಿರಾಧಾ ಸಮೂಹ ಸಂಸ್ಥೆಗಳ ಮನೋಹರ್ ಎಸ್. ಶೆಟ್ಟಿ ಮತ್ತು ರವಿ ಎಸ್. ಶೆಟ್ಟಿ ಹಾಗೂ ಕುಟುಂಬಸ್ಥರ ನೇತೃತ್ವದಲ್ಲಿ ನಡೆದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಬೆಳಿಗ್ಗೆಯಿಂದಲೇ ವಿವಿಧ ವೈದಿಕ ವಿಧಿ-ವಿಧಾನಗಳು ಜರುಗಿದವು. ಬೆಳಿಗ್ಗೆ ದೇವತಾ ಪ್ರಾರ್ಥನೆ, ಗೋಪೂಜೆ, ಪ್ರಧಾನ ಪ್ರಾಯಶ್ಚಿತ್ತಾದಿ ಹೋಮಗಳು ಹಾಗೂ ಕಲಶಾಭಿಷೇಕ ಸಂಪನ್ನಗೊಂಡವು.

ಮಧ್ಯಾಹ್ನ 11.30ಕ್ಕೆ ಮಹಾಪೂಜೆ, ಬ್ರಾಹ್ಮಣ, ಸುವಾಸಿನಿ ಆರಾಧನೆ ಹಾಗೂ ನಾಗದರ್ಶನ ನಡೆಯಿತು. ಬಳಿಕ ಸಾರ್ವಜನಿಕ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು. ಮಧ್ಯಾಹ್ನ ಮಧೂರು ನಾರಾಯಣ ಶರಳಾಯ ಅವರಿಂದ 'ದಾಸ ವಾಣಿ' ಹಾಗೂ ಸಂಜೆ ಅಕ್ಷತಾ ದೇವಾಡಿಗ ಅವರಿಂದ ಸ್ಯಾಕ್ಸೋಫೋನ್ ವಾದನ ನೆರೆದಿದ್ದ ಭಕ್ತರನ್ನು ಮಂತ್ರಮುಗ್ಧಗೊಳಿಸಿತು.

ರಾತ್ರಿ ನಾಗಪಾತ್ರಿ ವೇದಮೂರ್ತಿ ಕಕ್ಕುಂಜೆ ನಾಗಾನಂದ ವಾಸುದೇವ ಆಚಾರ್ಯ ಹಾಗೂ ಕೃಷ್ಣ ಪ್ರಸಾದ್ ವೈದ್ಯ ಮುದ್ರಾಡಿ ಮತ್ತು ಬಳಗದವರಿಂದ ನಾಗಮಂಡಲೋತ್ಸವ ಸೇವೆ ಅದ್ದೂರಿಯಾಗಿ ನಡೆಯಿತು. ನೂರಾರು ಭಕ್ತಾದಿಗಳು ಈ ಅಪರೂಪದ ಧಾರ್ಮಿಕ ಕ್ಷಣಕ್ಕೆ ಸಾಕ್ಷಿಯಾದರು.




ಇಂದು ನೇಮ

ಏ.19ರಂದು ಸಂಜೆ ಶ್ರೀ ಪಂಜುರ್ಲಿ ಸನ್ನಿಧಿಯಲ್ಲಿ ಭಂಡಾರ ಇಳಿಯುವುದು ಹಾಗೂ ರಾತ್ರಿ ನೇಮೋತ್ಸವ ಜರುಗಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ

5958



ಎಡದಿಂದ ಬಲಕ್ಕೆ
2.ಕೃಪೆ ಮಾಡಿ ಕೊಡು-ಕರುಣೆಯಿಂದ ನೀಡು (5)
5. ವಾಯುದೇವತೆ, ಗಾಳಿ (3)
6. ಬರೆಹ ರೂಪದಲ್ಲಿರುವಂಥಹದ್ದು (3)
7. ನಿಗದಿತ ದಿನದಂದು ಹೊರಟದ್ದು ಈ ಹೊಳೆಯೆಡೆಗೆ (2)
9. ಈತ ಸಾತ್ವಿಕ ಸ್ವಭಾವದ ವ್ಯಕ್ತಿ (2)
11. ವ್ಯತ್ಯಾಸ ತಿಳಿಸಲು ಆನೆಯೊಂದಿಗೆ ಬಂದ ಪ್ರಾಣಿ (2)
12. ಸೈನ್ಯ-ಗುಂಪಿನ ಒಂದು ಭಾಗ (2)
15. ನರನಿಗೆ ವಾರ ಕೇಳಿದ ಕಪಿ (3)
16. ತುಂಬಾ ಶಿಥಿಲಗೊಂಡದ್ದು (3)
17. ಆತುರ ಪಡು, ಗಡಿಬಿಡಿ ಮಾಡು (5)

ಮೇಲಿನಿಂದ ಕೆಳಕ್ಕೆ
1.ತಾಳೆಯ ಮರದ ಎಲೆಯಿದು (4)
2. ರಾವಣನ ಒಂದು ಹೆಸರು (4)
3. ಸುಲಭ ಎಂಬರ್ಥದ ಸುಂದರವಾದದ್ದು (4)
4. ನ್ಯಾಯಬೆಲೆ ಅಂಗಡಿಯಲ್ಲಿ ಸಿಗುವ ದಿನಸಿ (4)
8. ವಿಜಯ ಪಡೆದ ದೇವತೆ (3)
9. ಸಾದೃಶ್ಯವಾದ ಸಂಭಾಷಣೆ (3)
10. ಚಿಕಿತ್ಸಾಲಯವಿದು (4)
11. ಹೂವಿನ ರಾಜ,ಈ ಕಮಲ (4)
13. ಆನಂದ ಭಾಷ್ಪವಿಲ್ಲಿ ತಲೆಕೆಳಗಾಗಿದೆ (4)
14. ಬಾಗಿಲಿಗೆ ಆಸರೆಯಾದ ಚೌಕಟ್ಟು (4)

5957 ಉತ್ತರ

ಎಡದಿಂದ ಬಲಕ್ಕೆ:
2.ಕೊಡುಗೈ
5.ರತ್ನಾಕರ 6.ರಹದಾರಿ
7.ಮದೀನ 9.ಆಧಾರ
10.ತೇಲಿಸು 11.ಮಶಕ
15.ಮಾತುಮೀರು
16.ವಕ್ರತುಂಡ 17.ಹಗಲು

ಮೇಲಿನಿಂದ ಕೆಳಕ್ಕೆ :
1.ಸುರರಿಮ 2.ಕೊರಡು
3.ಗೈರತ್ತು 4.ಹರಿಹರ
8.ನನಸು 9.ಆಯಾಮ
10.ತೇಲುಮಾತು
12.ಕನ್ನಡಕ 13.ಹರುಷ
14.ಕವಲು

ಕಿರುಸುದ್ದಿ

ಮನಪಾ ಚುನಾವಣೆಗೆ ಸರಕಾರ ಬದ್ಧ: ಸಚಿವ ಬೈರತಿ ಸುರೇಶ್

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆ ಚುನಾವಣೆ ನಡೆಸಲು ಇರುವ ಅಡೆತಡೆ ನಿವಾರಿಸಿ, ಚುನಾವಣೆ ನಡೆಸಲು ಸರಕಾರ ಬದ್ಧವಾಗಿದೆ ಎಂದು ನಗರಾಭಿವೃದ್ಧಿ ಇಲಾಖೆ ಸಚಿವ ಬೈರತಿ ಸುರೇಶ್ ಹೇಳಿದರು.



ನಗರದಲ್ಲಿ ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದ ಆರು ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ಮೀಸಲಾತಿ ಪ್ರಕ್ರಿಯೆ ಈಗಾಗಲೇ ನಡೆಯುತ್ತಿದ್ದು, ಆ ಬಳಿಕ ಹೈಕೋರ್ಟ್ ಅನುಮತಿ ಪಡೆದು ಚುನಾವಣೆ ನಡೆಸಲಾಗುವುದು. ಬೆಂಗಳೂರು ಕಾರ್ಪೊರೇಷನ್ ಸಂಬಂಧಿಸಿದ ವಿಷಯವನ್ನು ಮಾತ್ರ ಹೈಕೋರ್ಟ್‌ನಲ್ಲಿ ಕೇಳಲಾಗಿದೆ. ಉಳಿದ ಕಾರ್ಪೊರೇಷನ್‌ಗಳ ಚುನಾವಣೆಗಳನ್ನು ಕೂಡ ನಡೆಸಬೇಕಿದ್ದು, ಎಲ್ಲಾ ಪ್ರಕ್ರಿಯೆಗಳು ಕಾನೂನುಬದ್ಧವಾಗಿ ಪೂರ್ಣಗೊಳಿಸಿ ಚುನಾವಣೆ ನಡೆಸಲಾಗುತ್ತದೆ ಎಂದು ಹೇಳಿದರು.

ಮಹಿಳಾ ಮೀಸಲಾತಿಗೆ ಹಿನ್ನಡೆ, ಕಾಂಗ್ರೆಸ್ ಮತ್ತು ವಿಪಕ್ಷಗಳ ಮಹಿಳಾ ವಿರೋಧಿ ಮನಃಸ್ಥಿತಿ ಬಯಲು: ಸತೀಶ್ ಕುಂಪಲ

ಮಂಗಳೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಬಹಳ ಮಹತ್ವಾಕಾಂಕ್ಷೆಯ ಮತ್ತು ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಮಹಿಳಾ ಮೀಸಲಾತಿಯನ್ನು ಜಾರಿಗೊಳಿಸಲು ಲೋಕಸಭೆಯಲ್ಲಿ ಹಿನ್ನಡೆಯಾಗಿರುವುದು ಕಾಂಗ್ರೆಸ್ ಮತ್ತು ಇತರ ವಿಪಕ್ಷಗಳ ಮಹಿಳಾ ವಿರೋಧಿ ಧೋರಣೆಯಾಗಿದೆ ಎಂದು ಭಾರತೀಯ ಜನತಾ ಪಾರ್ಟಿಯ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಆರೋಪಿಸಿದ್ದಾರೆ. ಮಹಿಳಾ ಮೀಸಲಾತಿಯಿಂದ ರಾಜಕೀಯದಲ್ಲಿ ಸ್ತ್ರೀಯರಿಗೆ ಮರೀಚಿಕೆಯಾಗಿದ್ದ ಸೂಕ್ತ ಪ್ರಾತಿನಿಧ್ಯ ಮತ್ತು ಕ್ಷೇತ್ರ ಮರುವಿಂಗಡಣೆಯಿಂದ ಅಭಿವೃದ್ಧಿಗೆ ಅನುಕೂಲವಾದ ವಾತಾವರಣವನ್ನು ವಿಪಕ್ಷಗಳು ತಮ್ಮ ಸ್ವಹಿತಕ್ಕಾಗಿ ವಿಫಲಗೊಳಿಸಿರುವುದನ್ನು ದೇಶದ ಜನತೆ ಸಹಿಸುವುದಿಲ್ಲ. ಮಹಿಳೆಯರಿಗೆ ದೊರೆಯ ಬಹುದಾಗಿದ್ದ ನ್ಯಾಯವನ್ನು ಕಸಿದ ಕಾಂಗ್ರೆಸ್‌ಗೆ ಮಹಿಳೆಯರೇ ಭವಿಷ್ಯದಲ್ಲಿ ಪಾಠ ಕಲಿಸಲಿದ್ದಾರೆ ಎಂದು ಕುಂಪಲ ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.



ಮಾಜಿ ಸೈನಿಕನಿಗೆ ಜೀವ ಬೆದರಿಕೆ

ಬಂಟ್ವಾಳ: ಮಾಜಿ ಸೈನಿಕನೋರ್ವನ ಮನೆಯಂಗಳಕ್ಕೆ ನಾಲ್ವರು ವ್ಯಕ್ತಿಗಳು ಅಕ್ರಮ ಪ್ರವೇಶಗೈದು ಕೊಲೆ ಬೆದರಿಕೆ ಒಡ್ಡಿರುವ ಘಟನೆ ಬಂಟ್ವಾಳ ತಾಲೂಕಿನ ನಾವೂರ ಗ್ರಾಮದಲ್ಲಿ ನಡೆದಿದೆ. ಬಂಟ್ವಾಳ ತಾಲೂಕಿನ ನಾವೂರ ಗ್ರಾಮದ ಸಜಂಕಬೆಟ್ಟು ನಿವಾಸಿ ಮಾಜಿ ಸೈನಿಕ ಎಸ್. ಪುಷ್ಪರಾಜ್ ಅವರಿಗೆ ಕೊಲೆ ಬೆದರಿಕೆ ಒಡ್ಡೊರುವ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಾವೂರ ನಿವಾಸಿಗಳಾದ ವಿಜಯ್, ಸಿರಿಲ್ ಹಾಗೂ ಇಬ್ಬರು ಅಪರಿಚಿತರು ಇನ್ನೋವಾ ಕಾರಿನಲ್ಲಿ ಆಗಮಿಸಿ ಮಾಜಿ ಸೈನಿಕನಿಗೆ ಅವ್ಯಾಚ್ಯ ಶಬ್ದಗಳಿಂದ ಬೈದು, ತಲವಾರು ತೋರಿಸಿ ಕೊಲೆ ಬೆದರಿಕೆ ಒಡ್ಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ವೈಯಕ್ತಿಕ ವಿಚಾರಕ್ಕೆ ಸಂಬಂಧಿಸಿ ಆರೋಪಿಗಳ ಜೀವ ಬೆದರಿಕೆ ಒಡ್ಡಿದ್ದಾರೆಂದು ಹೇಳಲಾಗಿದೆ. ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೈಕ್‌ಗಳ ನಡುವೆ ಅಪಘಾತ: ಓರ್ವ ಮೃತ್ಯು

ಪುತ್ತೂರು: ಪುತ್ತೂರು–ಉಪ್ಪಿನಂಗಡಿ ರಸ್ತೆಯ ಪಡೀಲು ಬಳಿ ಎರಡು ಬೈಕ್‌ಗಳ ನಡುವೆ ಶನಿವಾರ ಬೆಳಗ್ಗೆ ನಡೆದ ಭೀಕರ ಅಪಘಾತದಲ್ಲಿ ಒಂದು ಬೈಕ್‌ನ ಸವಾರ ಸ್ಥಳದಲ್ಲೇ ಮೃತಪಟ್ಟ ದಾರುಣ ಘಟನೆ ಸಂಭವಿಸಿದೆ.



ಬೆಳ್ಳಿಪ್ಪಾಡಿ ಕೊಡಿಮರ ನಿವಾಸಿ ವಿಶ್ವನಾಥ ಪೂಜಾರಿ ಅವರ ಪುತ್ರ ಧನರಾಜ್ (21) ಮೃತಪಟ್ಟ ಯುವಕ. ಉಪ್ಪಿನಂಗಡಿಗೆ ತೆರಳುತ್ತಿದ್ದ ಬೈಕ್ ನಿಯಂತ್ರಣ ತಪ್ಪಿ ಪಕ್ಕದಲ್ಲಿದ್ದ ಡಿವೈಡರ್‌ಗೆ ಡಿಕ್ಕಿ ಹೊಡೆದು ಇನ್ನೊಂದು ಭಾಗದಲ್ಲಿ ಪುತ್ತೂರಿನ ಕಡೆಗೆ ಸಾಗುತ್ತಿದ್ದ ಬೈಕ್‌ಗೆ ಡಿಕ್ಕಿಯಾಗಿ ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಬಡಿದ ಪರಿಣಾಮ ಬೈಕ್ ಸವಾರನ ತಲೆಗೆ ತೀವ್ರತರದ ಗಾಯವಾಗಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇನ್ನೊಂದು ಬೈಕ್‌ನಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರಿಗೆ ಗಾಯಗಳಾಗಿದ್ದು, ತಕ್ಷಣ ಅವರನ್ನು ಸ್ಥಳೀಯರ ಸಹಕಾರದೊಂದಿಗೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಪುತ್ತೂರು ಸಂಚಾರ ಠಾಣಾ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ದೂರು ದಾಖಲಿಸಿದ್ದಾರೆ.

ಮನಪಾ ವ್ಯಾಪ್ತಿಯಲ್ಲಿ 165 ಕೋ.ರೂ. ವೆಚ್ಚದ ಕಾಮಗಾರಿಗಳಿಗೆ ಶಿಲಾನ್ಯಾಸ | ಸಚಿವ ಬೈರತಿ ಭರವಸೆ

ಮಂಗಳೂರು ಅಭಿವೃದ್ಧಿಗೆ ಸರ್ವ ಪ್ರಯತ್ನ

ಮಂಗಳೂರು: ಮಂಗಳೂರು ನಗರದ ಸಮಗ್ರ ಒಳಚರಂಡಿ ಯೋಜನೆಗೆ 1200 ಕೋಟಿ ರೂ. ಒದಗಿಸಬೇಕು ಎಂಬ ಬೇಡಿಕೆ ಬಗ್ಗೆ ಮುಖ್ಯಮಂತ್ರಿ ಅವರ ಜತೆ ಚರ್ಚಿಸಿ ಅತಿ ಶೀಘ್ರದಲ್ಲಿ ಅನುದಾನ ನೀಡಲು ಪ್ರಯತ್ನಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ 2 ಅಡಿಯಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 165 ಕೋಟಿ ರೂ. ವೆಚ್ಚದ 25 ವಿವಿಧ ಕಾಮಗಾರಿಗಳಿಗೆ ಶನಿವಾರ ಶಿಲಾನ್ಯಾಸ ನಡೆದ ಬಳಿಕ ನಗರದ ಉರ್ವಸ್ಟೋರ್ ಅಂಬೇಡ್ಕರ್ ಭವನದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಯಡಿ ರಾಜ್ಯದ ಎಲ್ಲ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ 2600 ಕೋಟಿ ರೂ. ನೀಡಲಾಗಿದೆ. ಈ ಪೈಕಿ ಮಂಗಳೂರಿಗೆ 200 ಕೋಟಿ ರೂ. ಒದಗಿಸಲಾಗಿದೆ. ನಗರಾಭಿವೃದ್ಧಿ ಇಲಾಖೆ ವತಿಯಿಂದ ಕುಡಿಯುವ ನೀರು, ಒಳಚರಂಡಿ, ಕಟ್ಟಡ ನಿರ್ಮಾಣ, ರಸ್ತೆ ಸಹಿತ 24000 ಕೋಟಿ ರೂ. ವೆಚ್ಚದ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದರು.

ಎನ್‌ಜಿಟಿ ಪರಿಹಾರ ನಿಧಿ 40 ಕೋಟಿ ರೂ. ಅನುದಾನದಲ್ಲಿ ಮಂಗಳೂರಿನ ಮುಳಿಹಿತ್ಲುವಿನಲ್ಲಿ ಒಣಕಸ ವಿಂಗಡನೆ, ಸಂಸ್ಕರಣೆ ಘಟಕ ಆರಂಭಿಸಲಾಗುತ್ತಿದೆ. ರಾಜ್ಯ ಸರಕಾರ ಜಾತ್ಯಾತೀತ, ಪಕ್ಷಾತೀತವಾಗಿ ಕಾರ್ಯನಿರ್ವಹಿಸುತ್ತಿದ್ದು, ಮಂಗಳೂರಿಗೆ ಸಂಬಂಧಿಸಿದ ಎಲ್ಲ ಬೇಡಿಕೆಗಳು ಈಡೇರಿಸಲು ಬದ್ಧ ಎಂದರು.



ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಇಂದು ಶಿಲಾನ್ಯಾಸ ನಡೆಸಿದ ಕಾಮಗಾರಿಗಳನ್ನು ಗುಣಮಟ್ಟದಿಂದ ವೈಜ್ಞಾನಿಕವಾಗಿ ನಡೆಸಲಾಗುವುದು. 11 ತಿಂಗಳಿನಲ್ಲಿ ಎಲ್ಲ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ. ಕಿಯೋನಿಕ್ಸ್ ವತಿಯಿಂದ 100 ಕೋಟಿ ರೂ. ವೆಚ್ಚದಲ್ಲಿ ಮಂಗಳೂರಿನಲ್ಲಿ ಶೀಘ್ರದಲ್ಲಿ ಐಟಿ ಪಾರ್ಕ್ ನಿರ್ಮಾಣವಾಗಲಿದೆ. ಮಂಗಳೂರಿನ ಮಾಸ್ಟರ್‌ಪ್ಲ್ಯಾನ್ ವರದಿಯಲ್ಲಿ ಶೀಘ್ರದಲ್ಲಿ ಸರಕಾರಕ್ಕೆ ಸಲ್ಲಿಸಲಾಗುವುದು. ನದಿ ಅತಿಕ್ರಮಣ ತೆರವಿಗೆ ಸರ್ವೆ ನಡೆಸಲು ಒಂದು ಕೋಟಿ ರೂ. ನೀಡಲಾಗುತ್ತಿದೆ. ಮಂಗಳೂರಿನ ಸಮಗ್ರ ಒಳಚರಂಡಿ ಯೋಜನೆಗೆ 1250 ಕೋಟಿ ರೂ. ನೀಡುವಂತೆ ಸರಕಾರಕ್ಕೆ ಒತ್ತಾಯಿಸಲಾಗುವುದು ಎಂದರು.

ವೆನ್ಲಾಕ್ ಆಸ್ಪತ್ರೆಯನ್ನು ಪ್ರಾದೇಶಿಕ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ. ವೆನ್ಲಾಕ್‌ನಲ್ಲಿ ಕೆಎಂಸಿ ವತಿಯಿಂದ 1ಲಕ್ಷ ಚದರ ಅಡಿ ಕಟ್ಟಡ ನಿರ್ಮಾಣವಾಗಲಿದೆ.ಎಲ್ಲ ವಾರ್ಡ್‌ಗಳ ಸುಂದರೀಕರಣವನ್ನೂ ನಡೆಸಲಾಗುವುದು ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಐವನ್ ಡಿಸೋಜ ಮಾತನಾಡಿ, ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ 1 ಎಲ್ಲ ಕಾಮಗಾರಿಗಳು ಇನ್ನೂ ಅನುಷ್ಠಾನ ಆಗಿಲ್ಲ. 2ನೇ ಯೋಜನೆಯ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಮುಗಿಸಬೇಕಿದೆ. ಜಲಸಿರಿ ಯೋಜನೆಯನ್ನೂ ತ್ವರಿತವಾಗಿ ಅನುಷ್ಠಾನಗೊಳಿಸಬೇಕು. ಒಳಚರಂಡಿ ಯೋಜನೆ, ಅಂಬೇಡ್ಕರ್ ವೃತ್ತ ನಿರ್ಮಾಣ, ಕುದ್ಮುಲ್ ರಂಗರಾವ್ ಸಮಾಧಿ ಅಭಿವೃದ್ಧಿ ನಡೆಸಬೇಕು ಎಂದರು.

ಶಾಸಕ ವೇದವ್ಯಾಸ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ವಿವಿಧ ನಿಗಮ, ಮಂಡಳಿಗಳ ಅಧ್ಯಕ್ಷರಾದ ಹರೀಶ್‌ಕುಮಾರ್, ಭರತ್ ಮುಂಡೋಡಿ, ಮಮತಾ ಗಟ್ಟಿ, ಎಂ.ಎ. ಗಫೂರ್, ಸದಾಶಿವ ಉಳ್ಳಾಲ್, ಶಾಲೆಟ್ ಪಿಂಟೊ, ಸ್ಟ್ಯಾನಿ ಅಲ್ವಾರಿಸ್, ಲಾವಣ್ಯ ಬಳ್ಳಾಲ್, ವಿಶ್ವಾಸ್‌ಕುಮಾರ್ ದಾಸ್, ಪ್ರಮುಖರಾದ ಜೆ.ಆರ್. ಲೋಬೊ, ಶಶಿಧರ ಹೆಗ್ಡೆ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಮನಪಾ ಮಾಜಿ ಸದಸ್ಯರು ಉಪಸ್ಥಿತರಿದ್ದರು.

ಮನಪಾ ಆಯುಕ್ತ ರವಿಚಂದ್ರ ನಾಯಕ್ ಸ್ವಾಗತಿಸಿದರು. ಮಂಜುಳಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ನಗರದ ಏರ್‌ಪೋರ್ಟ್ ರಸ್ತೆ, ವೆಲೆನ್ಸಿಯಾ ರಸ್ತೆ, ಚಿಲಿಂಬಿಗುಡ್ಡೆ, ಉರ್ವಸ್ಟೋರ್ ಸುಂಕದಕಟ್ಟೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು. ಮನಪಾ ವತಿಯಿಂದ ಅರ್ಹ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಲಾಯಿತು.

ಅಂಬೇಡ್ಕರ್ ವೃತ್ತದ ಕಾಮಗಾರಿ ಶೀಘ್ರ ನಡೆಸಬೇಕು

ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ಮಂಗಳೂರು ನಗರದ ಸಮಗ್ರ ಒಳಚರಂಡಿ ಯೋಜನೆಗೆ ಸರಕಾರ 1250 ಕೋಟಿ ರೂ. ಒದಗಿಸಬೇಕು, ರಾಜಕಾಲುವೆಗಳ ನಿರ್ವಹಣೆಗೆ ಸಮಗ್ರ ಯೋಜನೆ ರೂಪಿಸಿ 20 ಕೋಟಿ ರೂ. ನೀಡಬೇಕು, ಕುದ್ಮುಲ್ ರಂಗರಾವ್ ಸಮಾಧಿ ಅಭಿವೃದ್ಧಿಗೆ ರಾಜ್ಯ ಸರಕಾರ ತಡೆ ನೀಡಿದ್ದು, ಅದಕ್ಕೆ ಮತ್ತೆ ಅನುಮತಿ ನೀಡಿ, ಹಣ ಒದಗಿಸಬೇಕು, ಅಂಬೇಡ್ಕರ್ ವೃತ್ತದ ಕಾಮಗಾರಿ ಶೀಘ್ರ ನಡೆಸಬೇಕು ಎಂದು ನಗರಾಭಿವೃದ್ಧಿ ಸಚಿವರನ್ನು ಒತ್ತಾಯಿಸಿದರು.

ಬೆಳ್ಳಿ ರಥೋತ್ಸವ



ಕಟೀಲು ಶ್ರೀದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರೆ ನಡೆಯುತ್ತಿದ್ದು, ಶನಿವಾರ ಉತ್ಸವಾಂಗ ಬೆಳ್ಳಿ ರಥೋತ್ಸವ ನಡೆಯಿತು. ಅಪಾರ ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

ಪುತ್ತಿಗೆ ಶ್ರೀಮಠದಲ್ಲಿ ಮೇ 14ರಿಂದ ವಿಶೇಷ ‘ಮೊಬೈಲ್ ವರ್ಜನ ಶಿಬಿರ’

ಉಡುಪಿ: ಇಂದಿನ ದಿನಗಳಲ್ಲಿ ಸಣ್ಣ ವಯಸ್ಸಿನ ಮಕ್ಕಳು ಮೊಬೈಲ್ ಫೋನ್‌ಗಳಿಗೆ ಅತಿಯಾಗಿ ದಾಸರಾಗುತ್ತಿದ್ದು, ಅವರ ನೈಸರ್ಗಿಕ ಬೆಳವಣಿಗೆ ಕುಂಠಿತವಾಗುತ್ತಿದೆ. ಈ ಗಂಭೀರ ಸಮಸ್ಯೆಯನ್ನು ಮನಗಂಡು, ಮಕ್ಕಳನ್ನು ಮೊಬೈಲ್ ಚಟದಿಂದ ಮುಕ್ತಗೊಳಿಸಲು ಪುತ್ತಿಗೆ ಮಠದ ವತಿಯಿಂದ ಮೇ ತಿಂಗಳಿನಲ್ಲಿ ವಿಶೇಷ ‘ಮೊಬೈಲ್ ವರ್ಜನ ಶಿಬಿರ’ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಪುತ್ತಿಗೆ ಮಠದ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ತಿಳಿಸಿದ್ದಾರೆ.



ಉಡುಪಿಯ ಗೀತಾಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಕ್ಕಳು ಮೊಬೈಲ್ ಇಲ್ಲದಿದ್ದರೆ ಬದುಕೇ ಇಲ್ಲ ಎಂಬ ಹಂತಕ್ಕೆ ತಲುಪುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ 6 ರಿಂದ 12 ವರ್ಷದ ಒಳಗಿನ ಮಕ್ಕಳಿಗಾಗಿ ಪುತ್ತಿಗೆ ಮಠದ ಪರಿಸರದಲ್ಲಿ ವಾಸದೊಂದಿಗೆ ನಾಲ್ಕು ದಿನಗಳ ಶಿಬಿರ ನಡೆಯಲಿದೆ.

ಸದುಪಯೋಗ ಪಡೆದುಕೊಳ್ಳಿ

ಈ ವಿಶೇಷ ಶಿಬಿರದಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಮಕ್ಕಳ ಪೋಷಕರು ಮೇ 10ರ ಒಳಗಾಗಿ ತಮ್ಮ ಅರ್ಜಿಯನ್ನು ಉಡುಪಿಯ ಗೀತಾಮಂದಿರದ ಕಾರ್ಯಾಲಯದಲ್ಲಿ ಸಲ್ಲಿಸಬೇಕು. ಅರ್ಜಿಗಳನ್ನು ಸ್ವೀಕರಿಸಲು ಗೀತಾಮಂದಿರದಲ್ಲಿ ಉಮಾಪ್ರಸಾದ್ ಅಥವಾ ರಮಣ್ ಅವರನ್ನು ನೇಮಕ ಮಾಡಲಾಗಿದೆ.

ಮೇ 14ರಂದು ಬೆಳಗ್ಗೆ 10 ಗಂಟೆಗೆ ಶಿಬಿರದ ಉದ್ಘಾಟನೆ ನಡೆಯಲಿದ್ದು, ಪೋಷಕರು ತಮ್ಮ ಮಕ್ಕಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕೆಂದು ಶ್ರೀಗಳು ಕರೆ ನೀಡಿದ್ದಾರೆ.

ಪುತ್ತಿಗೆ ಮೂಲಮಠದ ಆವರಣದಲ್ಲಿ

ಮೇ 14 ರಿಂದ ಮೇ 18 ರವರೆಗೆ ಶಿಬಿರ ಜರುಗಲಿದೆ.ಶಿಬಿರದಲ್ಲಿ ಮಕ್ಕಳಿಗೆ ಮೊಬೈಲ್ ಬಳಸದಂತೆ ನಿರ್ಬಂಧ ವಿಧಿಸಿ, ಅದರ ಬದಲಾಗಿ ದೇಸೀ ಕ್ರೀಡೆಗಳು, ಸಾಂಪ್ರದಾಯಿಕ ಆಟಗಳು ಮತ್ತು ಆಧ್ಯಾತ್ಮಿಕ-ಧಾರ್ಮಿಕ ಚಿಂತನೆಗಳಲ್ಲಿ ತೊಡಗಿಸಲಾಗುತ್ತದೆ. ಮೊಬೈಲ್ ಇಲ್ಲದೆಯೂ ಸಂತೋಷದಿಂದ ಇರಲು ಸಾಧ್ಯವಿದೆ ಎಂಬ ವಾಸ್ತವವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡುವುದು ಈ ಶಿಬಿರದ ಮೂಲ ಉದ್ದೇಶವಾಗಿದೆ ಎಂದರು.

ಆಳ್ವಾಸ್‌ನಲ್ಲಿ ಕೃಷಿ ವಿಚಾರ ಸಂಕಿರಣ ಉದ್ಘಾಟಿಸಿ ಡಾ. ಮೋಹನ ಆಳ್ವ

ಕೃಷಿಗೆ ರಾಸಾಯನಿಕವೇ ಆಪತ್ತು

ಮೂಡುಬಿದಿರೆ: ಹೆಚ್ಚಿನ ಲಾಭಕ್ಕಾಗಿ ರಾಸಾಯನಿಕ ಪದಾರ್ಥಗಳ ಅತಿಯಾದ ಬಳಕೆ ರೈತರನ್ನು ಸ್ವಾವಲಂಬನೆಯಿಂದ ದೂರ ಮಾಡಿ ಪರಾವಲಂಬಿತೆಯತ್ತ ಕೊಂಡೊಯ್ಯುತ್ತಿದ್ದು, ಇದರಿಂದ ಮಾನವ ಆರೋಗ್ಯ ಮತ್ತು ಪರಿಸರದ ಮೇಲೆ ಗಂಭೀರ ಹಾನಿ ಉಂಟಾಗುತ್ತಿದೆ ಕೃಷಿ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯಬೇಕು ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಹೇಳಿದ್ದಾರೆ.



ಮಿಜಾರಿನಲ್ಲಿರುವ ಆಳ್ವಾಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಆಳ್ವಾಸ್ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಎಸ್‌ಕೆಡಿಆರ್‌ಡಿಪಿ ಹಾಗೂ ಇತರೆ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ‘ಸುಸ್ಥಿರ ಕೃಷಿಗಾಗಿ ಸಮಗ್ರ ಕೃಷಿ ಪದ್ಧತಿ’ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಕಾಸರಗೋಡು ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಸಂಸ್ಥೆಯ ನಿರ್ದೇಶಕ ಬಾಲಚಂದ್ರ ಹೆಬ್ಬಾರ್ ಮುಖ್ಯ ಅತಿಥಿಯಾಗಿ ಮಾತನಾಡಿ, ತೆಂಗು ಮತ್ತು ಅಡಿಕೆ ಮರಗಳ ಗರಿಗಳಿಂದ ತಯಾರಿಸುವ ಸಾವಯವ ಗೊಬ್ಬರ ಬಳಸುವುದರಿಂದ ಉತ್ತಮ ಇಳುವರಿ ಪಡೆಯಬಹುದು. ಇದರಿಂದ ಮಣ್ಣಿನ ಪೋಷಕಾಂಶ ಹೆಚ್ಚುವುದರ ಜೊತೆಗೆ ಪರಿಸರ ಮಾಲಿನ್ಯವೂ ಕಡಿಮೆಯಾಗುತ್ತದೆ. ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ತಗ್ಗಿಸಲು ಇದು ಪರಿಣಾಮಕಾರಿ ಮಾರ್ಗ ಎಂದರು.

ಆಳ್ವಾಸ್ ಕಾಲೇಜಿನ ವ್ಯವಸ್ಥಾಪನ ಟ್ರಸ್ಟಿ ವಿವೇಕ್ ಆಳ್ವ, ಎಸ್‌ಕೆಡಿಆರ್‌ಡಿಪಿ ಬಿಸಿ ಟ್ರಸ್ಟ್‌ನ ಸಿಇಒ ಅನಿಲ್ ಕುಮಾರ್ ಎಸ್. ಎಸ್., ಮಂಗಳೂರು ಕೃಷಿ ಉತ್ಪಾದಕರ ಕಂಪೆನಿಯ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ಸೋನ್ಸ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಪ್ರವೀಣ್ ಕುಮಾರ್, ಕೃಷಿ ವಿಚಾರ ವಿನಿಮಯ ಕೇಂದ್ರದ ಅಧ್ಯಕ್ಷ ಅಭಯ ಕುಮಾರ್, ರೈತ ಮುಖಂಡ ಲಿಯೋ ವಾಲ್ಟರ್ ನಝರೆತ್ ಮತ್ತಿತರರಿದ್ದರು.

ಆಳ್ವಾಸ್ ಕೃಷಿ ವಿಜ್ಞಾನ ಕಾಲೇಜಿನ ಡೀನ್ ಎಸ್. ಎನ್. ವಾಸುದೇವ ಸ್ವಾಗತಿಸಿದರು.

ಎನ್‌ಎಂಪಿಎಗೆ ಬಂತು ‘ಸೆವೆನ್ ಸೀಸ್ ಮರಿನರ್’

ಮಂಗಳೂರು: ಇಲ್ಲಿನ ನವ ಮಂಗಳೂರು ಬಂದರಿಗೆ ಮತ್ತೊಂದು ಪ್ರವಾಸಿ ಹಡಗು ಬಂದಿದೆ. ‘ಸೆವೆನ್ ಸೀಸ್ ಮರಿನರ್’ ಹೆಸರಿನ ಐಷಾರಾಮಿ ಕ್ರೂಸ್ ಶನಿವಾರ ಬಂದರಿಗೆ ಆಗಮಿಸಿದೆ. ಇದು ಭಾರತದ ಪಶ್ಚಿಮ ಕರಾವಳಿಯಲ್ಲಿ ಕ್ರೂಸ್ ಪ್ರವಾಸೋದ್ಯಮವನ್ನು ಉತ್ತೇಜಿಸುವ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಈ ಹಡಗಿನಲ್ಲಿ ಒಟ್ಟು 607 ಪ್ರಯಾಣಿಕರು ಮತ್ತು 460 ಸಿಬ್ಬಂದಿ ಸದಸ್ಯರು ಆಗಮಿಸಿದ್ದು ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ್ದಾರೆ. ತಿಂಗಳ ಹಿಂದೆ ಎರಡು ಪ್ರವಾಸಿ ಹಡಗುಗಳು ಇಲ್ಲಿಗೆ ಆಗಮಿಸಿದ್ದವು. ಪ್ರತಿವರ್ಷ ಕನಿಷ್ಠವೆಂದರೂ ನಾಲ್ಕೈದು ವಿದೇಶಿ ಹಡಗುಗಳು ಮಂಗಳೂರು ಬಂದರಿಗೆ ಆಗಮಿಸುವುದು ಸಾಮಾನ್ಯವಾಗಿದೆ.



ಶನಿವಾರ ಸೆವೆನ್ ಸೀಸ್ ಮರಿನರ್ ಹಡಗು ಬಂದರಿಗೆ ಆಗಮಿಸುತ್ತಿದ್ದಂತೆ ಅದರಲ್ಲಿದ್ದ ಪ್ರವಾಸಿಗರನ್ನು ನವ ಮಂಗಳೂರು ಬಂದರು ಪ್ರಾಧಿಕಾರದ ಅಧಿಕಾರಿಗಳು ಆತ್ಮೀಯವಾಗಿ ಬರಮಾಡಿಕೊಂಡರು. ಕೇರಳ ಚೆಂಡೆಯೊಂದಿಗೆ ಇಲ್ಲಿನ ಸಾಂಸ್ಕೃತಿಕ ಶೈಲಿಯ ಸ್ವಾಗತ ವಿದೇಶಿ ಮಂದಿಗೆ ದೊರೆಯಿತು. ಬಹಾಮಾಸ್ ಧ್ವಜ ಹೊಂದಿರುವ ಈ ಹಡಗು ಕೊಚ್ಚಿಯಿಂದ ಆಗಮಿಸಿ, ಬರ್ಥ್ ನಂ. 4ರಲ್ಲಿ ನಿಲುಗಡೆಗೊಂಡಿತು. ಈ ಹಡಗು ಮರ್ಮುಗೋವ್ ಕಡೆಗೆ ಮುಂದಿನ ಪ್ರಯಾಣವನ್ನು ಮುಂದುವರಿಸಲಿದೆ.

ಭೇಟಿ ನೀಡಿದ ಪ್ರವಾಸಿಗರು ಕಾರ್ಕಳ, ಮೂಡುಬಿದಿರೆ ಪಿಲಿಕುಳ ಹಾಗೂ ಮಂಗಳೂರು ನಗರದ ಪ್ರಮುಖ ಪ್ರವಾಸಿ ತಾಣಗಳಿಗೆ ವಿಶೇಷ ಪ್ರವಾಸ ವ್ಯವಸ್ಥೆ ಮಾಡಲಾಗಿತ್ತು. ಈ ಯಶಸ್ವಿ ಕಾರ್ಯಾಚರಣೆ ನವ ಮಂಗಳೂರು ಬಂದರನ್ನು ಅಂತರಾಷ್ಟ್ರೀಯ ಕ್ರೂಸ್ ಪ್ರವಾಸೋದ್ಯಮದ ಪ್ರಮುಖ ತಾಣವಾಗಿ ರೂಪಿಸುವಲ್ಲಿ ಮತ್ತಷ್ಟು ಬಲ ತುಂಬಿದೆ.

ಸಂಘನಿಕೇತನದಲ್ಲಿ ವಿಹಿಂಪ ಯುವ ವಿಭಾಗ ದಕ್ಷಿಣ ಪ್ರಾಂತದ ‘ಪ್ರಾಂತ ಸಂಯೋಜಕ ಸಮಾವೇಶ’ಕ್ಕೆ ಚಾಲನೆ

ಹಿಂದುತ್ವಕ್ಕಾಗಿ ದಿನದ 24 ತಾಸು ಮೀಸಲು: ಪ್ರಜಾಪತ್

ಮಂಗಳೂರು: ಗೋಮಾತೆಯ ರಕ್ಷಣೆ, ಹಿಂದೂ ಹೆಣ್ಣು ಮಕ್ಕಳ ರಕ್ಷಣೆ, ಮಾದಕ ವ್ಯಸನ ಮುಕ್ತ ಭಾರತ ನಿರ್ಮಾಣ ಮಾಡುವ ಉದ್ದೇಶದೊಂದಿಗೆ ಬಜರಂಗದಳ ಕಾರ್ಯ ನಿರ್ವಹಿಸುತ್ತಿದೆ. ಸಮಾಜವನ್ನು ಒಟ್ಟುಗೂಡಿಸುವ ನಿಟ್ಟಿನಲ್ಲಿಯೂ ಸಂಘಟನೆ ಕಾರ್ಯ ನಿರ್ವಹಿಸಲಿದೆ ಬಜರಂಗದಳ ರಾಷ್ಟ್ರೀಯ ಸಂಯೋಜಕ್ ಕಿಶನ್ ಪ್ರಜಾಪತ್ ತಿಳಿಸಿದರು.

ನಗರದಮಣ್ಣಗುಡ್ಡೆಯಸಂಘನಿಕೇತನದಲ್ಲಿ ಎರಡು ದಿನಗಳ ಕಾಲ ನಡೆಯಲಿರುವ ವಿಶ್ವಹಿಂದೂ ಪರಿಷತ್ ಯುವ ವಿಭಾಗ ಬಜರಂಗದಳದ ದಕ್ಷಿಣ ಪ್ರಾಂತದ ‘ಪ್ರಾಂತ ಸಂಯೋಜಕ ಸಮಾವೇಶ’ವನ್ನು ಉದ್ಘಾಟಿಸಿ ಶನಿವಾರ ಅವರು ಮಾತನಾಡಿದರು.

ದೇಶದಲ್ಲಿ ಸನಾತನ ಹಿಂದೂ ಧರ್ಮದ ರಕ್ಷಣೆಯ ವಿಚಾರವಾಗಿ ಬಜರಂಗದಳ ಹಲವು ರೀತಿಯ ಹೋರಾಟಗಳನ್ನು ಸಂಘಟಿಸಿ ಅದರಲ್ಲಿ ಯಶಸ್ವಿಯಾಗಿದೆ. ಅಯೋಧ್ಯೆಯಲ್ಲಿ ಶ್ರೀರಾಮನ ಭವ್ಯ ಮಂದಿರದ ನಿರ್ಮಾಣದ ವಿಚಾರವಾಗಿ ನಡೆದ ಎಲ್ಲ ಹೋರಾಟಗಳಲ್ಲೂ ಮುಂಚೂಣಿಯಲ್ಲಿ ಗುರುತಿಸುವಂತದ್ದು. ರಾಮ ಮಂದಿರ ನಿರ್ಮಾಣದೊಂದಿಗೆ, ರಾಮ ರಾಜ್ಯವೂ ನಿರ್ಮಾಣವಾಗಬೇಕು ಎನ್ನುವ ಮಹತ್ತರ ಉದ್ದೇಶದೊಂದಿಗೆ ಸಂಘರ್ಷದಿಂದ ಹುಟ್ಟಿ ಸಂಘರ್ಷದ ಮೂಲಕ ಕೆಲಸ ಮಾಡುತ್ತಿರುವ ಸಂಘಟನೆಯೇ ಬಜರಂಗದಳ. ಸೇವೆ, ಸುರಕ್ಷತೆ ಮತ್ತು ಸಂಸ್ಕಾರವನ್ನು ತನ್ನ ಧ್ಯೇಯವಾಗಿಸಿದೆ. ಮಂದಿರ ನಿರ್ಮಾಣದೊಂದಿಗೆ ಒಂದು ಹಂತದ ಉದ್ದೇಶ ಈಡೇರಿದೆ ಎಂದು ಹೇಳಿದರು.



ವಿಶ್ವ ಹಿಂದೂ ಪರಿಷತ್ ಗೌರವ ಸಲಹೆಗಾರ ಡಾ. ಎಂ.ಬಿ.ಪುರಾಣಿಕ್ ಮಾತನಾಡಿ, ವಿಶ್ವಾದ್ಯಂತ ಇರುವ ಹಿಂದೂಗಳನ್ನು ಒಗ್ಗೂಡಿಸಿ, ಅವರ ಎದುರಿಸುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಒಂದು ವೇದಿಕೆಯಾಗಿ ವಿಶ್ವಹಿಂದೂ ಪರಿಷತ್ ಆರಂಭವಾಯಿತು. ಅದರ ಯುವ ವಿಭಾಗವೇ ಬಜರಂಗದಳವಾಗಿದ್ದು, ಧರ್ಮ ಸಂಸ್ಕೃತಿಯ ರಕ್ಷಣೆಯ ಕೆಲಸ ಮಾಡುತ್ತಿದೆ. ಗೋಹತ್ಯೆ, ಲವ್ ಜಿಹಾದ್, ಮತಾಂತರ ಮೊದಲಾದವುಗಳ ವಿರುದ್ಧ ಹೋರಾಟದ ಜತೆಗೆ ಯುವ ಪೀಳಿಗೆಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ. ಒಗ್ಗಟ್ಟಿನ ಕೊರತೆ ಸಮಾಜದ ಪ್ರಮುಖ ದೌರ್ಬಲ್ಯ. ಇದನ್ನು ದುರ್ಬಳಕೆ ಮಾಡಿಕೊಂಡು ಸಮಾಜ ಒಡೆಯುವ ಕೆಲಸ ಆಗುತ್ತಿದೆ ಎಂದರು.

> **‘ಬಜರಂಗದಳ ಕಾರ್ಯಕರ್ತ’ ಎಂದರೆ ಕೇವಲ ಒಂದು ಗುರುತು ಅಲ್ಲ, ಸಮಾಜ ನಮ್ಮಿಂದ ಬಹಳಷ್ಟು ಅಪೇಕ್ಷೆ ಮಾಡುತ್ತಿದೆ ಎಂದು ಅರ್ಥ. ಹಿಂದೂ ಸಮಾಜದಲ್ಲಿ ಬಜರಂಗದಳ ಒಂದು ಸಶಕ್ತ ಸಂಘಟನೆಯಾಗಿದ್ದು, ದಿನದ 24 ಗಂಟೆಯೂ ಹಿಂದೂಗಳಿಗಾಗಿ ಕೆಲಸ ಮಾಡುತ್ತಿದೆ. ಹಾಗಾಗಿ ಸಮಾಜವೂ ಸಂಘಟನೆಗೆ ತನ್ನಿಂದಾಗುವ ಸಹಕಾರ ನೀಡುತ್ತಿದೆ.**
> ■ **ಕಿಶನ್ ಪ್ರಜಾಪತ್**

ವಿಹಿಂಪ ಕೇಂದ್ರೀಯ ಜಂಟಿ ಪ್ರಧಾನ ಕಾರ್ಯದರ್ಶಿ ಸ್ಥಾಣು ಮಾಲಯನ್ ಧ್ವಜಾರೋಹಣ ನೆರವೇರಿಸುವ ಮೂಲಕ ಸಮಾವೇಶಕ್ಕೆ ಚಾಲನೆ ನೀಡಿದರು.

ಪ್ರಾಂತ ಕಾರ್ಯದರ್ಶಿ ಸುರೇಶ್ ಬಿ.ಈ, ವಿಹಿಂಪ ಮಂಗಳೂರು ಜಿಲ್ಲಾಧ್ಯಕ್ಷ ಎಚ್. ಕೆ. ಪುರುಷೋತ್ತಮ್ ಉಪಸ್ಥಿತರಿದ್ದರು. ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್, ಹಿರಿಯ ಸ್ವಯಂ ಸೇವಕ ದಿನೇಶ್ ಪೈ, ಬಜರಂಗದಳ ಕ್ಷೇತ್ರೀಯ ಸಂಯೋಜಕ ಕುಮಾರ ಸ್ವಾಮಿ, ಗೋರಕ್ಷಾ ಪ್ರಮುಖ್ ಶಶಾಂತ್ ಮೊದಲಾದವರು ಭಾಗವಹಿಸಿದ್ದರು.

ಬಜರಂಗದಳ ಪ್ರಾಂತ ಸಂಯೋಜಕ್ ಪ್ರಭಂಜನ್ ಸೂರ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 26° | ಉಡುಪಿ 33° 26°

ಹೊಸ ದಿಗಂತ ಸಂಗಮ

ರಾಷ್ಟ್ರ ಜಾಗೃತಿಯ ದೈನಿಕ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಭಾನುವಾರ 19, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಪೂಜೆ ಪುರಸ್ಕಾರ ಪಡೆದು ಸಾಗಿತು ಮಹಾದೇವನ ಜಳಕದ ಸವಾರಿ



ಪುಟ 5

ಕನಸಾಗಿಯೇ ಉಳಿದ ಅಡತ್ತೊಟ್ಟಿ ಕಿರು ಅಣೆಕಟ್ಟು ನಿರ್ಮಾಣ ಯೋಜನೆ!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುತ್ತಮುತ್ತ

ಕಟೀಲು ವಿದ್ಯಾಲಯಗಳ ಹಳೆ ವಿದ್ಯಾರ್ಥಿಗಳ ಸಮಾವೇಶ ಇಂದು

ಕಟೀಲು: ಶ್ರೀ ದುರ್ಗಾಪರಮೇಶ್ವರೀ ದೇವಳ ಸಮೂಹ ಶಿಕ್ಷಣ ಸಂಸ್ಥೆಗಳ ಹಳೆ ವಿದ್ಯಾರ್ಥಿಗಳ ಸಮಾವೇಶ ಏ. 19ರಂದು ಮಧ್ಯಾಹ್ನ 3.30ರಿಂದ ಕಟೀಲು ಪ್ರೌಢಶಾಲಾ ಸಭಾಂಗಣದಲ್ಲಿ ನಡೆಯಲಿದೆ. ಹಿರಿಯ ಪ್ರಾಥಮಿಕ ಶಾಲೆಯಿಂದ ತೊಡಗಿ ಸಂಸ್ಕೃತ ಎಂಎ ಸ್ನಾತಕೋತ್ತರ ಅಧ್ಯಯನ ಕೇಂದ್ರದ ವರೆದಿನ ಶಿಕ್ಷಣ ಸಂಸ್ಥೆಗಳಲ್ಲಿ ಕಲಿತ ಹಳೆ ವಿದ್ಯಾರ್ಥಿಗಳ ಸಮಾವೇಶ ಇದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಏ.22: ವಿದ್ಯುತ್ ವ್ಯತ್ಯಯ

ಸುರತ್ಕಲ್: ಮೆಸ್ಕಾಂ ಸುರತ್ಕಲ್ ಉಪವಿಭಾಗ ಕಛೇರಿಯಲ್ಲಿ ಏ. 22ರಂದು ಸಮಯ ಬೆಳಿಗ್ಗೆ 11 ರಿಂದ 12 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ, ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ, ದೂರವಾಣಿ ಕರೆಯ ಮುಖಾಂತರವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 0824-2478379.

ಮೇ 10ರಂದು ಕಟೀಲಿನಲ್ಲಿ ಭಜನಾ ಸ್ಪರ್ಧೆ

ಕಟೀಲು: ಶ್ರೀ ಕಟೀಲು ಪ್ರತಿಷ್ಠಾನದ ಕಟೀಲು ಕಲಾ ಉತ್ಸವದ ಅಂಗವಾಗಿ ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಮುಂಭಾಗದಲ್ಲಿ ಮೇ 10ರಂದು ದ.ಕ ಉಡುಪಿ ಉಭಯ ಜಿಲ್ಲಾ ಮಟ್ಟದ ಆಹ್ವಾನಿತ ತಂಡಗಳ ಭಜನಾ ಸ್ಪರ್ಧೆ ನಡೆಯಲಿದೆ ಎಂದು ಪ್ರತಿಷ್ಠಾನ ಅಧ್ಯಕ್ಷ ಅನಂತಪದ್ಮನಾಭ ಆಸ್ರಣ್ಣ ತಿಳಿಸಿದ್ದಾರೆ, ಕುಟುಂಬ ಭಜನೆ ಸ್ಪರ್ಧೆ, 16 ವರ್ಷದ ಮೇಲಿನವರಿಗೆ ಹಾಗೂ 16 ವರ್ಷದ ಕೆಳಗಿನವರಿಗೆ ಹೀಗೆ ಮೂರು ವಿಭಾಗಗಳಲ್ಲಿ ಸ್ಪರ್ಧೆ ಆಯೋಜಿಸಲಾಗಿದ್ದು, ವಿಜೇತರಿಗೆ ನಗದು ಬಹುಮಾನಗಳನ್ನು ನೀಡಲಾಗುವುದು. ಕುಟುಂಬ ಭಜನೆ ಸ್ಪರ್ಧೆ ವಿಭಾಗದಲ್ಲಿ ಒಂದು ತಂಡದಲ್ಲಿ ಕನಿಷ್ಠ 3 ಗರಿಷ್ಠ 6 ಸದಸ್ಯರು ಭಾಗವಹಿಸಬಹುದು. ಒಂದು ತಂಡದಲ್ಲಿ ಒಂದೇ ಮನೆಯ ತಂದೆ-ತಾಯಿಯ-ಮಕ್ಕಳು-ಅಜ್ಜ-ಅಜ್ಜಿ ಯಂದಿರು ಮಾತ್ರವೇ ಭಾಗವಹಿಸಬಹುದು. 16 ವರ್ಷಕ್ಕಿಂತ ಮೇಲಿನವರು ಹಾಗೂ ಕೆಳಗಿನವರು ವಿಭಾಗದಲ್ಲಿ ಒಂದು ತಂಡದಲ್ಲಿ ಕನಿಷ್ಠ 5 ಗರಿಷ್ಠ 10 ಮಂದಿ (ಹಿಮ್ಮೇಳದವರು ಹೊರತು ಪಡಿಸಿ) ಭಾಗವಹಿಸಬಹುದು. ತಬಲ, ಹಾರ್ಮೋನಿಯಂ, ಟಮ್ಕಿ, ಗೆಜ್ಜೆ ಹೊರತು ಪಡಿಸಿ ಬೇರೆ ಸಂಗೀತ ಪರಿಕರಗಳನ್ನು ಉಪಯೋಗಿಸುವಂತಿಲ್ಲ, ದಾಸರ ಪದಗಳಿಗೆ ಮಾತ್ರವೇ ಅವಕಾಶ ಇದ್ದು ಸ್ಪರ್ಧಾಸಕ್ತರು ಎಪ್ರಿಲ್ 26ರ ಒಳಗಾಗಿ ದೂರವಾಣಿ ಸಂಖ್ಯೆ 9036111350 ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಪ್ರಕಟನೆ ತಿಳಿಸಿದೆ.

ಏ.28: ಖಾಸಗಿ ಆಸ್ಪತ್ರೆಗಳ ಜೊತೆ ಕರಾರು ಒಪ್ಪಂದ ರದ್ದತಿಗಾಗಿ ಪ್ರಭಟನೆ

ಮಂಗಳೂರು: ಸರ್ಕಾರಿ ಆಸ್ಪತ್ರೆಗಳನ್ನು ಖಾಸಗೀ ಆಸ್ಪತ್ರೆಗಳೊಂದಿಗೆ ಮಾಡಿರುವ ಕರಾರು ಒಪ್ಪಂದ ರದ್ದುಗೊಳಿಸಬೇಕು, ಮಂಗಳೂರಿನಲ್ಲಿ ಕಿದ್ವಾಯಿ ಕ್ಯಾನ್ಸರ್ ಮತ್ತು ಜಯದೇವ ಹೃದ್ರೋಗ ಆಸ್ಪತ್ರೆ ಸ್ಥಾಪಿಸಿ ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸಲು ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿವೈಎಫ್ಐ) ವತಿಯಿಂದ ಏ.28ರಂದು ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿ ಚಲೋ ಪಾದಯಾತ್ರೆ ಆಯೋಜಿಸಲಾಗಿದೆ.
ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಡಿವೈಎಫ್ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಏ.28ರಂದು ಪೂರ್ವಾಹ್ನ 10 ಗಂಟೆಗೆ ಜಿಲ್ಲಾ ಸರ್ಕಾರಿ ವೆನ್ಲಾಕ್ ಆಸ್ಪತ್ರೆ ಬಳಿಯಿಂದ ಪಡೀಲ್ ಜಿಲ್ಲಾಧಿಕಾರಿ ಕಚೇರಿ ಕಟ್ಟಡದಲ್ಲಿರುವ ಉಸ್ತುವಾರಿ ಸಚಿವರ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಲಿದೆ. ಜನತೆ ಈ ಹೋರಾಟಕ್ಕೆ ಬಂಬಲ ನೀಡಬೇಕು ಎಂದರು. ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಬೆಳ್ತಂಗಡಿ ತಾಲೂಕು ಆಸ್ಪತ್ರೆ, ಮೂಡುಬಿದಿರೆ ಆರೋಗ್ಯ ಕೇಂದ್ರ, ಬಂಟ್ವಾಳ ತಾಲೂಕು ಆಸ್ಪತ್ರೆ, ವಿಟ್ಲ ಸಮುದಾಯ ಆಸ್ಪತ್ರೆಗಳನ್ನು ಖಾಸಗಿ ಸಂಸ್ಥೆಗಳೊಂದಿಗೆ ಕರಾರು ಒಪ್ಪಂದಕ್ಕೆ ಅನುಮೋದನೆ ನೀಡಿರುವ ಸುತ್ತೋಲೆ ಹೊರಡಿಸಿದೆ. ಖಾಸಗಿ ಮೆಡಿಕಲ್ ಕಾಲೇಜುಗಳ ಲಾಬಿಗೆ ಮಣಿದು ಈ ರೀತಿ ಮಾಡಲಾಗುತ್ತಿದ್ದು, ಸರ್ಕಾರಿ ಆಸ್ಪತ್ರೆಗಳನ್ನು ಕಡೆಗಣಿಸಲಾಗುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಡಿವೈಎಫ್ಐ ಕಾರ್ಯದರ್ಶಿ ಸಂತೋಷ್ ಬಜಾಲ್, ಮಾತನಾಡಿ, ಜಿಲೆಯಲ್ಲಿ ಕ್ಯಾನ್ಸರ್ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ತುತ್ತಾಗುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಕಳೆದ ಒಂದು ವರ್ಷದಲ್ಲಿ ಜಿಲ್ಲೆಯ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಬಾಯಿ ಕ್ಯಾನ್ಸರ್, ಸ್ತನ, ಗರ್ಭಾಶಯ ಮತ್ತು ಇತರ ಕ್ಯಾನ್ಸರ್ ರೋಗಕ್ಕೆ ಒಳಗಾಗಿ ಚಿಕಿತ್ಸೆ ಪಡೆಯಲು 13,322 ಮಂದಿ ದಾಖಲಾಗಿದ್ದರು. ಇದು ಅಪಾಯಕಾರಿ ಬೆಳವಣಿಗೆಯಾಗಿದೆ ಎಂದರು.
ಜಿಲ್ಲೆಯ ಬಹುತೇಕ ಖಾಸಗೀ ಆಸ್ಪತ್ರೆಗಳು ಖಾಯಿಲೆಗೆ ತುತ್ತಾದವರನ್ನು ತಮಗೆ ಮನಬಂದಂತೆ ಅಗತ್ಯ ಪರೀಕ್ಷೆ ನಡೆಸುವ, ದುಬಾರಿ ಚಿಕಿತ್ಸೆಗಳಿಗೆ ಒಳಪಡಿಸುವುದರಿಂದ ಜನಸಾಮಾನ್ಯರು ತಮ್ಮ ಮನೆ ಮಠ ಮಾರುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಿ ಆಸ್ಪತ್ರೆಗಳನ್ನು ಬಲಪಡಿಸುವ ಮತ್ತು ಶ್ರೀ ಜಯದೇವ ಹೃದ್ರೋಗ, ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆ, ನಿಮಾನ್ಸ್ ಆಸ್ಪತ್ರೆಗಳನ್ನು ಸ್ಥಾಪಿಸಲು ಮುಂದಾಗಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮನೋಜ್ ವಾಮಂಜೂರು, ನಿತಿನ್ ಕುತ್ತಾರ್, ಚರಣ್ ಶೆಟ್ಟಿ ಪಂಜಿಮೊಗರು, ರಿಜ್ವಾನ್ ಹರೇಕಳ ಉಪಸ್ಥಿತರಿದ್ದರು.





ಪುತ್ತೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ವಾರ್ಷಿಕ ಜಾತ್ರೆ

ಪೂಜೆ ಪುನಸ್ಕಾರ ಪಡೆದು ಸಾಗಿತು ಮಹಾದೇವನ ಜಳಕದ ಸವಾರಿ

ಪುತ್ತೂರು: ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಾಲಯದ ವಾರ್ಷಿಕ ಜಾತ್ರೆಯ ಅಂಗವಾಗಿ ಶನಿವಾರ ಸಂಜೆ ಶ್ರೀ ದೇವರ ಅವಭೃತ ಸವಾರಿಯು ಸುಮಾರು 13 ಕಿ.ಮೀ. ದೂರವಿರುವ ವೀರಮಂಗಲ ಕುಮಾರಧಾರಾ ನದಿ ತಟಕ್ಕೆ ನಗರದ ಮೂಲಕ ವಿವಿಧ ಕಟ್ಟೆ ಪೂಜೆಗಳನ್ನು ಸ್ವೀಕರಿಸುತ್ತಾ ತೆರಳಿತು.
ದಾರಿಯುದ್ದಕ್ಕೂ ಶ್ರೀ ದೇವರು ಭಕ್ತರಿಂದ ಆರತಿ, ಹಣ್ಣುಕಾಯಿ ಮತ್ತು ಕಟ್ಟೆ ಪೂಜೆಗಳನ್ನು ಸ್ವೀಕರಿಸುತ್ತಾ ಏ.19ರಂದು ಮುಂಜಾನೆ ವೀರಮಂಗಲ ನದಿ ತಟಕ್ಕೆ ತಲುಪುತ್ತಾರೆ. ಅಲ್ಲಿ ಅವಭೃತ ಮುಗಿಸಿ ಬೆಳಗ್ಗೆ 10 ಗಂಟೆಗೆ ಶ್ರೀ ದೇವರು ದೇವಾಲಯಕ್ಕೆ ಮರಳಿ ಧ್ವಜಾವರೋಹಣ ನಡೆಯುತ್ತದೆ.

ದೈವಗಳ ಬೀಳ್ಕೊಡುಗೆ

ಏ.17 ರಂದು ರಾತ್ರಿ ಶ್ರೀ ದೇವರ ರಥೋತ್ಸವ ನಡೆದ ಬಳಿಕ ಶ್ರೀ ದೇವರ ಬಂಗಾರ್ ಕಾಯರ್‌ಕಟ್ಟೆ ಸವಾರಿ



ನಡೆದು ಶ್ರೀ ಉಳ್ಳಾಲ್ತಿ ದೈವಗಳನ್ನು ಬೀಳ್ಕೊಡುವ ಕಾರ್ಯ ಪೂರ್ವಶಿಷ್ಟ ಸಂಪ್ರದಾಯದಂತೆ ನಡೆದು ಅನಂತರ ಭೂತ ಬಲಿ ನಡೆದು ಶ್ರೀ ದೇವರ ಶಯನ ನಡೆಯಿತು.

ದೈವ ಭೇಟಿ

ಏ.18ರಂದು ದೇವಾಲಯದಲ್ಲಿ ಬೆಳಗ್ಗೆ ತುಲಾಭಾರ ಸೇವೆ, ಸಾರ್ವಜನಿಕ ಅನ್ನ ಸಂತರ್ಪಣೆ ಜರಗಿತು. ಅಪರಾಹ್ನ ದೇವಾಲಯದ ದೈವಗಳಾದ ಹುಲಿಭೂತ, ಕಾಜುಕುಜುಂಬ ಅಂಜಣತ್ತಾಯ ದೈವಗಳ ಪ್ರತಿನಿಧಿ ದೈವವಾಗಿ ದೇವರೊಂದಿಗೆ ಹೋಗುವ ರಕ್ತೇಶ್ವರಿ ದೈವವು ದೇವರನ್ನು ರಥದ ಗದ್ದೆಯಲ್ಲಿ ಭೂತದ ಕಲ್ಲಿನ ಬಳಿಯಿಂದ ಬೀಳ್ಕೊಡುವ ಪದ್ಧತಿ ನಡೆಯಿತು.

> **ದೇವಾಲಯದಲ್ಲಿ ಇಂದು**
> ಶ್ರೀ ದೇವರು ಮುಂಜಾನೆ ವೀರಮಂಗಲ ಕುಮಾರಧಾರ ನದಿಯಲ್ಲಿ ಸ್ನಾನ ಮುಗಿಸಿದ ಬಳಿಕ ಪೂರ್ವಾಹ್ನ 10 ಗಂಟೆಗೆ ದೇವಾಲಯಕ್ಕೆ ಮರಳಿ ತಲುಪುತ್ತಾರೆ. ಅನಂತರ ದೇವಾಲಯದಲ್ಲಿ ಧ್ವಜಾವರೋಹಣ ನಡೆಯಲಿದೆ. ರಾತ್ರಿ ಚೂರ್ಣೋತ್ಸವ, ವಸಂತ ಪೂಜೆ ನಡೆದು ಹುಲಿಭೂತ, ರಕ್ತೇಶ್ವರಿ ನೇಮ ಜರಗಲಿದೆ.

ಬಳಿಕ ಶ್ರೀ ದೇವರು ನಗರದ ರಾಜ ರಸ್ತೆಯ ಮೂಲಕ ವೀರಮಂಗಲ ಕುಮಾರಧಾರ ನದಿತಟಕ್ಕೆ ಅವಭೃತ ಸ್ನಾನಕ್ಕೆ ತೆರಳಿದರು. ಸುಮಾರು 50ಕ್ಕೂ ಮಿಕ್ಕಿದ ಕಟ್ಟೆಗಳಲ್ಲಿ ಪೂಜೆಯ ಜತೆಗೆ ನಗರದಲ್ಲಿ ಹಾಗೂ ವೀರಮಂಗಲ ನದಿ ತೀರಕ್ಕೆ ತಲುಪುವ ಮೊದಲು ವಿವಿಧ ಕಡೆಗಳಲ್ಲಿ ಭಕ್ತರು ಭಕ್ತಿಯಿಂದ ಶ್ರೀ ದೇವರಿಗೆ ಸಲ್ಲಿಸುವ ಆರತಿ, ಹಣ್ಣುಕಾಯಿ ಸ್ವೀಕರಿಸಿದರು.

ಅಲ್ಲಲ್ಲಿ ಕಾರ್ಯಕ್ರಮ

ಶ್ರೀ ದೇವರು ಅವಭೃತಕ್ಕೆ ಹೋಗುವ ದಾರಿಯುದ್ದಕ್ಕೂ ತಳಿರು ತೋರಣ, ವಿದ್ಯುತ್ ದೀಪಗಳ ಅಲಂಕಾರ, ಹಣತೆಗಳ ಶೃಂಗಾರ, ಕಟ್ಟೆಗಳ ಶೃಂಗಾರ ಗಮನ ಸೆಳೆಯಿತು. ವಿವಿಧ ಕಟ್ಟೆಗಳಲ್ಲಿ ಶ್ರೀ ದೇವರಿಗೆ ಪೂಜೆ ವೇಳೆ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಯಕ್ಷಗಾನ, ತಾಳಮದ್ದಳೆ, ನಾಟಕ, ಸಂಗೀತ ಕಾರ್ಯಕ್ರಮ, ಸಿಡಿಮದ್ದು ಪ್ರದರ್ಶನ ನಡೆಯಿತು.

ದೇರಳಕಟ್ಟೆಯಲ್ಲಿ ಎನ್ನೆಸೆಸ್ ಮ್ಯಾರಥಾನ್‌ಗೆ ಚಾಲನೆ | ಡಾ.ಬಿ.ದಿನೇಶ್ ಸಲಹೆ

ಮ್ಯಾರಥಾನ್ ದೈಹಿಕ ಸಾಮರ್ಥ್ಯ, ಮಾನಸಿಕ ಕ್ಷಮತೆ ವೃದ್ಧಿ

ಉಳ್ಳಾಲ: ಇಂದಿನ ಒತ್ತಡಮಯ ಜೀವನದಲ್ಲಿ ದೈಹಿಕ ಚಟುವಟಿಕೆಗಳು ಅತ್ಯಗತ್ಯವಾಗಿದೆ. ಮ್ಯಾರಥಾನ್‌ನಂತಹ ಕ್ರೀಡೆಗಳು ಕೇವಲ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವುದು ಮಾತ್ರವಲ್ಲದೆ, ಮಾನಸಿಕ ಕ್ಷಮತೆಯನ್ನೂ ಬೆಳೆಸುತ್ತದೆ. ಎನ್ನೆಸ್ಸೆಸ್ ಘಟಕವು ಇಂತಹ ಒಂದು ಅದ್ಭುತ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯವೆಂದು ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ.ಬಿ.ದಿನೇಶ್ ಹೇಳಿದ್ದಾರೆ.
ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್‌ನ ಎನ್ನೆಸ್ಸೆಸ್ ಘಟಕ, ಕರ್ನಾಟಕ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯದ ಸಹಯೋಗದೊಂದಿಗೆ ದೇರಳಕಟ್ಟೆಯ ಕೆ.ಎಸ್.ಹೆಗ್ಡೆ ಆಡಿಟೋರಿಯಮ್ ಮುಂಭಾಗದಲ್ಲಿ ಶನಿವಾರ ಮುಂಜಾನೆ '5ಕೆ ಮತ್ತು 10ಕೆ ಎನ್‌ಎಸ್‌ಎಸ್ ಮ್ಯಾರಥಾನ್'ಗೆ ಚಾಲನೆ ನೀಡಿ ಅವರು ಮಾತನಾಡಿದರು.



> **ಮೆಚ್ಚುಗೆಗೆ ಪಾತ್ರ**
> ಮ್ಯಾರಥಾನ್‌ನಲ್ಲಿ ದೇಶದ 150ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳ ಸಮಾರು 1700 ವಿದ್ಯಾರ್ಥಿಗಳು, ಎನ್ನೆಸ್ಸೆಸ್ ಸ್ವಯಂ ಸೇವಕರು, ಅಧ್ಯಾಪಕರು, ಸಿಬ್ಬಂದಿ ಹಾಗೂ ಗೋವಾ ಮೂಲದ ಅಂಗವೈಕಲ್ಯ ಹೊಂದಿರುವ ವಿವೇಕ್ ಸಿಂಗ್ ಭಾಗವಹಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ನಿಟ್ಟೆ ಪರಿಗಣಿತ ವಿವಿಯ ಸಹ ಕುಲಾಧಿಪತಿ ಡಾ.ಎಂ. ಶಾಂತಾರಾಮ ಶೆಟ್ಟಿ ಮಾತನಾಡಿ, ನಿಟ್ಟೆ ಸಂಸ್ಥೆಯು ಯಾವಾಗಲೂ ಶೈಕ್ಷಣಿಕ ಅಭಿವೃದ್ಧಿಯ ಜೊತೆಗೆ ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಒತ್ತು ನೀಡುತ್ತಿದೆ. ಇಂದಿನ ಈ ಮ್ಯಾರಥಾನ್ ನಮ್ಮ ಸಮುದಾಯದ ಸ್ವಾಸ್ಥ್ಯ ಮತ್ತು ಸಂಘಟಿತ ಪ್ರಯತ್ನಕ್ಕೆ ಸಾಕ್ಷಿಯಾಗಿದೆಯೆಂದರು.
ನಿಟ್ಟೆ ಪರಿಗಣಿತ ವಿವಿಯ ಕುಲಾಧಿಪತಿ ವಿಶಾಲ್ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಗಿರಿಧರ್ ಉಪಾಧ್ಯಾಯ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ ಮುಖ್ಯ ಅತಿಥಿಗಳಾಗಿದ್ದರು. ಎನ್ನೆಸ್ಸೆಸ್ ಸಂಯೋಜಕ ಶಶಿಕುಮಾರ್ ಶೆಟ್ಟಿ ಡೀನ್ ಪ್ರೊ.ಡಾ.ಜಯಪ್ರಕಾಶ್ ಶೆಟ್ಟಿ, ಕಾರ್ಯಕ್ರಮ ಸಂಯೋಜಕರಾದ ಪ್ರತಿಮಾ ರೈ,ಅಂಶ್ಯಾ ರೈ ಹಾಗೂ ಡಾ.ವರ್ಷಾ ಶೆಟ್ಟಿ ಉಪಸ್ಥಿತರಿದರು.

ಮಹಿಳಾ ಮೀಸಲಾತಿ ಮಸೂದೆಗೆ ವಿರೋಧ | ಸುರತ್ಕಲ್‌ನಲ್ಲಿ ಬಿಜೆಪಿ ಪ್ರತಿಭಟನೆ

ಇಂಡಿಕೂಟ ನಡೆ ಮಹಿಳೆಯರ ಪಾಲಿಗೆ ಕರಾಳ ದಿನ

ಸುರತ್ಕಲ್: ದೇಶದಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ನೀಡುವ ಕೇಂದ್ರದ ಬಿಜೆಪಿ ಎನ್‌ಡಿಎ ಸರಕಾರದ ಮಸೂದೆಯನ್ನು ವಿರೋಧಿಸಿ ಮತದಾನವನ್ನು ಮಾಡಿ ಕಾಂಗ್ರೆಸ್ ಪಕ್ಷ ಹಾಗೂ ಅದರ ಇಂಡಿ ಕೂಟ ಮಹಿಳೆಯರ ಪಾಲಿಗೆ ಕರಾಳ ದಿನವನ್ನಾಗಿ ಮಾಡಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಅಧ್ಯಕ್ಷೆ ಡಾ. ಮಂಜುಳಾ ಅವರು ಆರೋಪಿಸಿದರು.
ಸುರತ್ಕಲ್‌ನಲ್ಲಿ ಬಿಜೆಪಿ ಉತ್ತರಮಂಡಲದ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ನೀಡಿ, ನೀವು ಮತದಾನ ಮಾತ್ರ ಮಾಡಬೇಕು. ಚುನಾವಣೆಯಲ್ಲಿ ಸ್ಪರ್ಧಿಸಿ ಸಮನಾಂತರವಾಗಿ ನಿಲ್ಲಬಾರದು ಎಂದು ಪರೋಕ್ಷವಾಗಿ ಮಹಿಳೆಯರನ್ನು ಹಿಂದಕ್ಕೆ ತಳ್ಳಿದೆ ಎಂದು ಆರೋಪಿಸಿದರು.
ರಾಜ್ಯ ಮಹಿಳಾ ಮೋರ್ಚಾ ಕಾರ್ಯದರ್ಶಿ ಶ್ವೇತಾ ಪೂಜಾರಿ ಮಾತನಾಡಿ, ಕಾಂಗ್ರೆಸ್ ಪಕ್ಷ ಇಟಲಿ ಸಂಸ್ಕೃತಿಯನ್ನು ಅಳವಡಿಸಿಕೊಂಡಿದ್ದರಿಂದ ಅವರಿಗೆ ಭಾರತೀಯ ಸಂಸ್ಕೃತಿಯ ಅರಿವಿಲ್ಲ, ಮಹಿಳೆಯರನ್ನು ಪೂಜನೀಯ ಸ್ಥಾನದಲ್ಲಿ ಕಂಡು ಎಲ್ಲಾ ಗೌರವ ಸಮಾನ ಹಕ್ಕು ಅವಕಾಶ ನೀಡುವ ಬಿಜೆಪಿ ಪ್ರಯತ್ನಕ್ಕೆ ಕಾಂಗ್ರೆಸ್ ಹಾಗೂ ಅದರ ಮಿತ್ರ ಕೂಟಗಳು ಮಹಿಳೆಯರಿಗೆ ದ್ರೋಹ ಎಸಗಿದ್ದು ದೇಶದ ಜನತೆ ಎಂದಿಗೂ ಮರೆಯಲಾರರು ಎಂದರು.



- ಕಾಂಗ್ರೆಸ್ ಪಕ್ಷ ಇಟಲಿ ಸಂಸ್ಕೃತಿಯನ್ನು ಅಳವಡಿಸಿಕೊಂಡಿದೆ
- ಕಾಂಗ್ರೆಸ್ ಹಾಗೂ ಅದರ ಮಿತ್ರ ಕೂಟಗಳಿಗೆ ಮಹಿಳೆಯರಿಗೆ ದ್ರೋಹ ಎಸಗಿದ್ದು ದೇಶದ ಜನತೆ ಎಂದಿಗೂ ಮರೆಯಲಾರರು

ಉಪಾಧ್ಯಕ್ಷೆ ಪೂಜಾ ಪೈ, ತಿಲಕ್ ರಾಜ್ ಕೃಷ್ಣಾಪುರ ಅವರು, ಮಸೂದೆಯನ್ನು ವಿರೋಧಿಸಿದ ಕಾಂಗ್ರೆಸ್ ಹಾಗೂ ಇಂಡಿಕೂಟವನ್ನು ಮುಂದಿನ ದಿನಗಳಲ್ಲಿ ಜನತೆ ಧೂಳಿಪಟ ಮಾಡಲಿದ್ದಾರೆ ಎಂದರು.
ಪ್ರತಿಭಟನೆಯಲ್ಲಿ ಬಿಜೆಪಿಯ ಪ್ರಮುಖ ಪದಾಧಿಕಾರಿಗಳಾದ ಸಂಧ್ಯಾ ವೆಂಕಟೇಶ್ ಲಕ್ಷ್ಮಿ ಚಂದ್ರಶೇಖರ್, ವಜ್ರಾಕ್ಷಿ ಶೆಟ್ಟಿ, ವಿಠಲ ಸಾಲಿಯನ್, ಭರತ್ ರಾಜ್ ಕೃಷ್ಣಾಪುರ, ಬಿಜೆಪಿ ಮಹಾನಗರ ಪಾಲಿಕೆಯ ನಿಕಟಪೂರ್ವ ಸದಸ್ಯರು, ಮಂಡಲದ ಪ್ರಮುಖ, ಮಹಿಳಾ ಘಟಕಗಳ ಪದಾಧಿ ಕಾರಿಗಳು ಉಪಸ್ಥಿತರಿದ್ದರು.

ಕಲ್ಲಡ್ಕ ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿದ್ಯಾ ವಿಕಾಸ, ಶಿಶು ಶಿಕ್ಷಣ ಶಿಬಿರ



ಬಂಟ್ವಾಳ: ಕಲ್ಲಡ್ಕ ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯ ಶಂಕರಾಚಾರ್ಯ ಸಭಾಂಗಣದಲ್ಲಿ ವಿದ್ಯಾ ವಿಕಾಸ ಮತ್ತು ಶಿಶು ಶಿಕ್ಷಣ ಶಿಬಿರದ ಉದ್ಘಾಟನೆಯನ್ನು ಶ್ರೀರಾಮ ವಿದ್ಯಾ ಕೇಂದ್ರದ ಸಂಸ್ಥಾಪಕ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಅವರು ದೀಪ ಪ್ರಜ್ವಲನೆಯ ಮೂಲಕ ಚಾಲನೆ ನೀಡಿದರು.
ವೇದಿಕೆಯಲ್ಲಿ ಶ್ರೀರಾಮ ವಿದ್ಯಾ ಕೇಂದ್ರದ ಅಧ್ಯಕ್ಷ ನಾರಾಯಣ ಸೋಮಯಾಜಿ, ವಿದ್ಯಾಭಾರತಿ ಕರ್ನಾಟಕ ಪ್ರಾಂತ ಉಪಾಧ್ಯಕ್ಷ ವಸಂತ ಮಾಧವ ಶ್ರೀಮಾನ್, ಕ್ಷೇತ್ರಿಯ ಶಿಶು ಶಿಕ್ಷಣ ಸಹ ಪ್ರಮುಖರಾದ ತಾರಾ, ಶ್ರೀರಾಮ ವಿದ್ಯಾ ಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಇದ್ದರು. ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲರಾದ ತಿರುಮಲೇಶ್ವರ್ ಪ್ರಶಾಂತ್ ಸ್ವಾಗತಿಸಿದರು. ಶ್ವೇತ ಮಾತಾಜಿ ವಂದಿಸಿದರು.ಸಹಶಿಕ್ಷಕ ನಿತಿನ್ ಕಾರ್ಯಕ್ರಮ ನಿರೂಪಿಸಿದರು. ಶ್ರೀರಾಮ ವಿದ್ಯಾ ಕೇಂದ್ರದ ಆಡಳಿತ ಮಂಡಳಿ ಸದಸ್ಯರು ಹಾಜರಿದ್ದರು.

ಮಹಾತ್ಮಾ ಗಾಂಧಿ ನಗರಾಭಿವೃದ್ಧಿ ಯೋಜನೆ: ವಿವಿಧೆಡೆ ಶಿಲಾನ್ಯಾಸ



ಮಂಗಳೂರು: ಮಹಾತ್ಮಾ ಗಾಂಧಿ ನಗರಾಭಿವೃದ್ಧಿಯೋಜನೆ(ಹಂತ-2)ಮತ್ತು ಎನ್ ಜಿಟಿ ಪರಿಹಾರ ನಿಧಿ ಕಾಮಗಾರಿಗಳ ಶಂಕು ಸ್ಥಾಪನೆ ಸಮಾರಂಭದ ಅಂಗವಾಗಿ ದ.ಕ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದರು.
ಮರವೂರು -ಮರಕಡ ಚತುಷ್ಪಥ ಕಾಂಕ್ರೀಟ್ ರಸ್ತೆ, ಚರಂಡಿ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. ವೆಲೆನ್ಸಿಯಾ -ನಾಗನಕಟ್ಟೆ ರಸ್ತೆ ಕಾಂಕ್ರೀಟ್, ಸೇರಿದಂತೆ 3.47 ಕೋಟಿ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ ಶನಿವಾರ ನಡೆಯಿತು. ವೆಲೆನ್ಸಿಯಾ ಚರ್ಚ್ ಸಹಾಯಕ ಧರ್ಮಗುರು ವಂ.ಪ್ರದೀಪ್ ಶಂಕುಸ್ಥಾಪನೆ ಧಾರ್ಮಿಕ ವಿಧಿ ನೆರವೇರಿಸಿದರು. ಚಿಲಿಂಬಿಗುಡ್ಡೆ ಆದರ್ಶನಗರದಲ್ಲಿ 1.42 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಶಿಲಾನ್ಯಾಸ ನೆರವೇರಿಸಲಾಯಿತು.

ಕೊಡಂಗಲ್ಲು ಮಾರಿಪೂಜಾ ಉತ್ಸವ



ಮೂಡುಬಿದಿರೆ: ಕೊಡಂಗಲ್ಲು ಉಚ್ಚಂಗಿಮಾರಿಯಮ್ಮದೇವಸ್ಥಾನದಲ್ಲಿ ವರ್ಷಾವಧಿ ಮಾರಿಪೂಜೆ ನಡೆಯಿತು. ಜ್ಯೋತಿನಗರದಲ್ಲಿರುವ ಉಚ್ಚಂಗಿ ಕಟ್ಟೆಯಲ್ಲಿ ಬೊಂಬೆಯನ್ನು ಪ್ರತಿಷ್ಠಾಪಿಸಿ ಪೂಜೆ ನಡೆಯಿತು. ರಾತ್ರಿ ಸಕಲ ಬಿರುದಾವಳಿಗಳೊಂದಿಗೆ ಮೆರವಣಿಗೆ ಮೂಲಕ ಬೊಂಬೆಯನ್ನು ಕ್ಷೇತ್ರಕ್ಕೆ ಬರಮಾಡಿಕೊಳ್ಳಲಾಯಿತು. ವಿಶೇಷ ಪೂಜೆ, ದರ್ಶನ ಹಾಗೂ ಪಂಜುರ್ಲಿ ಕಲ್ಲುಡ್ತ-ಕಲ್ಲುರ್ಟಿ ದೈವಗಳ ಕೋಲ ನಡೆಯಿತು. ಬುಧವಾರ ಸಂಜೆ ಬೊಂಬೆಯನ್ನು ಸ್ಥಳೀಯ ಕಾಡಿನಲ್ಲಿ ವಿಸರ್ಜಿಸಲಾಯಿತು. ಇದೇ ಸಂದರ್ಭದಲ್ಲಿ ಬ್ರಹ್ಮಕಲಶೋತ್ಸವದ ಉಳಿಕೆ ಹಣದಿಂದ ನಿರ್ಮಿಸಿದ ವೇದಿಕೆಯನ್ನು ಕ್ಷೇತ್ರದ ಅಸ್ರಣ್ಣ ಅನಂತಪದ್ಮನಾಭ ಅಸ್ರಣ್ಣ ಉದ್ಘಾಟಿಸಿದರು. ಆಡಳಿತ ಮಂಡಳಿ ಅಧ್ಯಕ್ಷ ದೇಜು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಸುರೇಶ್ ಕೋಟ್ಯಾನ್ ಹಾಗೂ ಪದಾಧಿಕಾರಿಗಳನ್ನು ಗೌರವಿಸಲಾಯಿತು. ಉತ್ಸವದ ಅಂಗವಾಗಿ ಬೆನಕ ಆರ್ಟ್ಸ್ ತಂಡದಿಂದ ಪೊಲಿಪುದಪ್ಪೆ ಜಲದುರ್ಗಾ ನಾಟಕ ನಡೆಯಿತು.

ರೋಟರಿಯಿಂದ ವೆನ್ಲಾಕ್ ಆಸ್ಪತ್ರೆಗೆ ರೂ. 10 ಲಕ್ಷದ ವೈದ್ಯಕೀಯ ಯಂತ್ರೋಪಕರಣ ಕೊಡುಗೆ ಹಸ್ತಾಂತರ | ಡಾ. ಶಿವಪ್ರಕಾಶ್ ಶ್ಲಾಘನೆ

ಆರೋಗ್ಯ ಸೇವೆ ಕ್ಷೇತ್ರದಲ್ಲಿ ರೋಟರಿ ಸಂಸ್ಥೆಯ ಕೊಡುಗೆ ಅಪಾರ, ಅಮೂಲ್ಯ

ಮಂಗಳೂರು: ಆರ್ಥಿಕವಾಗಿ ಹಿಂದುಳಿದ ರೋಗಿಗಳಿಗೆ ಉನ್ನತ ಮಟ್ಟದ ವೈದ್ಯಕೀಯ ಸೇವೆ ನೀಡುವ ನಿಟ್ಟಿನಲ್ಲಿ ರೋಟರಿ ಮಂಗಳೂರು ಡೌನ್ ಟೌನ್ ಮತ್ತು ರೋಟರಿ ಮಂಗಳೂರು ಹಿಲ್ ಸೈಡ್ ಸಂಸ್ಥೆಯು ಆಧುನಿಕ ಶೈಲಿಯ ಅಲ್ಟ್ರಾ ಸೌಂಡ್ ವೈದ್ಯಕೀಯ ಯಂತ್ರೋಪಕರಣ ದಾನದ ರೂಪದಲ್ಲಿ ನೀಡಿದೆ ಎಂದು ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಶಿವಪ್ರಕಾಶ್ ಹೇಳಿದರು.
ನಗರದ ವೆನ್ಲಾಕ್ ಆಸ್ಪತ್ರೆಯ ಅತ್ಯಾಧುನಿಕ ಮಕ್ಕಳ ಚಿಕಿತ್ಸಾ ಕೇಂದ್ರದ ಸಭಾಂಗಣದಲ್ಲಿ ರೋಟರಿ ಸಂಸ್ಥೆಯ ಯಂತ್ರೋಪಕರಣ ಹಸ್ತಾಂತರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶನಿವಾರ ಅವರು ಮಾತನಾಡಿದರು.
ಆರೋಗ್ಯ ಸೇವೆ ಕ್ಷೇತ್ರಕ್ಕೆ ರೋಟರಿ ಸಂಸ್ಥೆಯ ಕೊಡುಗೆ ಅಪಾರ ಮತ್ತು ಅಮೂಲ್ಯ ಎಂದು ನುಡಿದರು.



ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ತಿಮ್ಮಯ್ಯ ಎಚ್.ಆರ್. ಮಾತನಾಡಿ, ಸಮಾಜದ ಆರೋಗ್ಯ ಕ್ಷೇತ್ರಕ್ಕೆ ರೋಟರಿ ಸಂಸ್ಥೆಯು ನೀಡುವ ಕಾರ್ಯ ಅಮೂಲ್ಯ ಮತ್ತು ಶ್ಲಾಘನೀಯ. ಈ ಕೊಡುಗೆ ಬಡವರಿಗೆ ಉತ್ತಮ ಮತ್ತು ಅತ್ಯಾಧುನಿಕ ಆರೋಗ್ಯ ಸೇವೆಯನ್ನು ಒದಗಿಸುವಲ್ಲಿ ಮಹತ್ವದ ಹೆಜ್ಜೆಯಾಗಿ ಪರಿಣಮಿಸಲಿದೆ ಎಂದು ರೋಟರಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

- ಆಸ್ಪತ್ರೆಗೆ ನೀಡಿರುವ ಕೊಡುಗೆ ಬಡವರಿಗೆ ಉತ್ತಮ ಮತ್ತು ಅತ್ಯಾಧುನಿಕ ಆರೋಗ್ಯ ಸೇವೆ ಒದಗಿಸುವಲ್ಲಿ ಮಹತ್ವದ ಹೆಜ್ಜೆಯಾಗಿ ಪರಿಣಮಿಸಲಿದೆ

ದಾಖಲೆ ಪತ್ರ ಹಸ್ತಾಂತರ

ರಿಸ್ಕನೆಕ್ಟ್ ಸಂಸ್ಥೆಯ ನಿರ್ದೇಶಕಿ ಶುಭ ಮಾತನಾಡಿ, ಈ ಯಂತ್ರೋಪಕರಣವನ್ನು ನಮ್ಮ ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ಅಂಗವಾಗಿ ಪ್ರಾಯೋಜಿಸಲಾಗಿದೆ ಎಂದರು. ದಾಖಲೆ ಪತ್ರಗಳನ್ನು ವೈದ್ಯಾಧಿಕಾರಿಗೆ ಹಸ್ತಾಂತರಿಸಿದರು.
ವೆನ್ಲಾಕ್ ಆಸ್ಪತ್ರೆಯ ಅರಿವಳಿಕೆ ತಜ್ಞ ಡಾ. ರಂಜನ್ ರಾವ್, ರೂ. 10 ಲಕ್ಷ ಮೌಲ್ಯದ ಯಂತ್ರೋಪಕರಣದ ಕಾರ್ಯನಿರ್ವಹಣೆ, ಚಿಕಿತ್ಸೆಯ ವಿಧಾನದ ಬಗ್ಗೆ ಮಾಹಿತಿ ನೀಡಿದರು.
ರೋಟರಿ ಮಂಗಳೂರು ಡೌನ್ ಟೌನ್ ಸಂಸ್ಥೆಯ ಅಧ್ಯಕ್ಷ ಸತ್ಯಜೀತ್ ರಾವ್ ಅಧ್ಯಕ್ಷತೆ ವಹಿಸಿದ್ದರು. ರೋಟರಿ ಮಂಗಳೂರು ಹಿಲ್‌ಸೈಡ್ ಸಂಸ್ಥೆಯ ಅಧ್ಯಕ್ಷ ಪೀಟರ್ ಅಂತೋನಿ ಪಿಂಟೊ ಸ್ವಾಗತಿಸಿದರು. ವೆನ್ಲಾಕ್ ಆಸ್ಪತ್ರೆಯ ಡಾ. ಸುರೇಶ್ ಭಟ್ ವಂದಿಸಿದರು. ವೆನ್ಲಾಕ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಸುಧಾಕರ್, ರೋಟರಿ ಸಂಸ್ಥೆಯ ಪದಾಧಿಕಾರಿಗಳಾದ ಡಾ. ಶಿವಪ್ರಸಾದ್, ರಂಗನಾಥ್ ಭಟ್, ಉಮೇಶ್ ಕಿಣಿ, ವಾಸುದೇವ್ ಶೆಟ್ಟಿಗಾರ್, ಏಕನಾಥ್ ದಂಡಕೇರಿ, ಸೂರಜ್ ಹೆಬ್ಬಾರ್ ಉಪಸ್ಥಿತರಿದ್ದರು.

ಶ್ರೀ ಬೊಬ್ಬರ್ಯ ದೈವಸ್ಥಾನ ಜೀರ್ಣೋದ್ಧಾರ ಸಮಿತಿ, ಪರಾರಿ

ಉಳ್ಳೂರು ಗ್ರಾಮ, ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ



ಪರಾರಿ ಬೊಬ್ಬರ್ಯ ಪ್ರತಿಷ್ಠಾ ಬ್ರಹ್ಮಕಲಶ



ಎಪ್ರಿಲ್ 18ರಿಂದ ಎಪ್ರಿಲ್ 20ರ ವರೆಗೆ

ಸ್ವಸ್ತಿ ಶ್ರೀ ಪರಾಭವ ನಾಮ ಸಂವತ್ಸರದ ಮೇಷ ಮಾಸ ದಿನ 6 ಸಲುವ ವೈಶಾಖ ಶುಕ್ಲ ಪಕ್ಷ 03 ಯು ದಿನಾಂಕ 20-04-2026 ಸೋಮವಾರ ದಿವಾ ಘಂಟೆ 5:45 (ಉದಯಾತ್ಪೂರ್ವ) ಒದಗುವ ಮೀನ ಲಗ್ನ ಸುಮಹೂರ್ತದಲ್ಲಿ ಪರಾರಿ ಬೊಬ್ಬರ್ಯ ಪ್ರತಿಷ್ಠಾ ಬ್ರಹ್ಮಕಲಶ, ಬೊಬ್ಬರ್ಯ ನಂದಿಕೋಣ ನೀಚ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಹಾಗೂ ದೈವಗಳ ನೇಮೋತ್ಸವವನ್ನು ಊರ ಹತ್ತು ಸಮಸ್ತರು ಹಾಗೂ ಗುರು ಹಿರಿಯರಿದ್ದು ನಿಶ್ಚಯಿಸಿರುತ್ತೇವೆ, ಈ ಪುಣ್ಯ ಕಾರ್ಯದಲ್ಲಿ ತಾವೆಲ್ಲರೂ ಬಂದು ಭಾಗವಹಿಸಿ, ಶ್ರೀ ದೈವದ ಪ್ರಸಾದ ಸ್ವೀಕರಿಸಬೇಕಾಗಿ ಅಪೇಕ್ಷಿಸುವ,

ತಮ್ಮ ಆಗಮನಾಭಿಲಾಷಿಗಳು

ಗೌರವಾಧ್ಯಕ್ಷರು, ಅಧ್ಯಕ್ಷರು ಹಾಗೂ ಸಮಸ್ತ ಗ್ರಾಮಸ್ಥರು



ಶ್ರೀ ಗುರುರಾಜ್ ಭಟ್ಕೊಳಲಗಿರಿ
ಅಧ್ಯಕ್ಷರು, ಶ್ರೀ ಬೊಬ್ಬರ್ಯ ಜೀರ್ಣೋದ್ಧಾರ ಸಮಿತಿ, ಪರಾರಿ, ಉಪ್ಪೂರು ಗ್ರಾಮ



ಶ್ರೀ ಸತೀಶ್ ಪೂಜಾರಿ ಕೀಳಂಜೆ
ಗೌರವಾಧ್ಯಕ್ಷರು, ಶ್ರೀ ಬೊಬ್ಬರ್ಯ ಜೀರ್ಣೋದ್ಧಾರ ಸಮಿತಿ, ಪರಾರಿ, ಉಪ್ಪೂರು ಗ್ರಾಮ



ಶ್ರೀ ಲಕ್ಷ್ಮೀಶ ಭಟ್
ಪ್ರಧಾನ ಅರ್ಚಕರು, ಶ್ರೀ ಬೊಬ್ಬರ್ಯ ದೈವಸ್ಥಾನ, ಪರಾರಿ, ಉಪ್ಪೂರು ಗ್ರಾಮ

ಕಾರ್ಯಕ್ರಮಗಳು

ತಾ. 19-04-2026ನೇ ಆದಿತ್ಯವಾರ ಬೆಳಿಗ್ಗೆ 10.30ಕ್ಕೆ **ದ್ವಾದಶ ನಾಳಿಕೇರಗಣ ಯಾಗ,** ಸಂಜೆ 6:00ಕ್ಕೆ ಬಿಂಬ ಸಂಕೋಚ, ಸಪ್ತಾದಿವಾಸ ಪೂಜೆ, ಪ್ರತಿಷ್ಠಾದಿವಾಸ ಹೋಮ, ಶಿಖರಾಧಿವಾಸ, ಶಯ್ಯಾಕಲ್ಪ.

ತಾ. 20-04-2026ನೇ ಸೋಮವಾರ ಬೆಳಿಗ್ಗೆ 5:45ಕ್ಕೆ ಮೀನ ಲಗ್ನ ಸುಮಹೂರ್ತದಲ್ಲಿ **ನಂದಿಕೋಣ, ನೀಚ, ಸಹಿತ ಬೊಬ್ಬರ್ಯ ದೈವದ ಬಿಂಬ ಪ್ರತಿಷ್ಠೆ ಬ್ರಹ್ಮಕಲಶ ಸ್ಥಾಪನ ಸ್ನಪನಾಧಿವಾಸ ಹೋಮ, ಬ್ರಹ್ಮ ಕಲಶಾಭಿಷೇಕ, ಪ್ರಸನ್ನ ಪೂಜೆ, ಪಲ್ಲಪೂಜೆ ಹಾಗೂ "ಮಹಾ ಅನ್ನಸಂತರ್ಪಣೆ"** "ರಾತ್ರಿ 9:30ರಿಂದ **ನಂದಿಕೋಣ, ನೀಚ ಸಹಿತ ಬೊಬ್ಬರ್ಯ ದೈವದ ಸಿರಿ ಸಿಂಗಾರದ ಕೋಲ** ಹೆಬ್ರಿ ಉದಯಕುಮಾರ್ ಶೆಟ್ಟಿ ನೇತೃತ್ವದ ಚಾಣಕ್ಯ ಮೆಲೋಡಿಸ್ ಹೆಬ್ರಿ ತಂಡದಿಂದ ಬೆಳಿಗ್ಗೆ : 11.30ರಿಂದ **"ಭಕ್ತಿ ರಸಮಂಜರಿ"**

ಸಮಯ :ಸಂಜೆ 6:30ಕ್ಕೆ **ಧಾರ್ಮಿಕ ಸಭಾ ಕಾರ್ಯಕ್ರಮ-** ಗುಲಾಬಿ ಮೋನಪ್ಪ ಶೆಟ್ಟಿ ಸಭಾ ವೇದಿಕೆ, ಪರಾರಿ' ಉಳ್ಳೂರು ಗ್ರಾಮ, ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ

ಅಧ್ಯಕ್ಷತೆ : **ಶ್ರೀ ಗುರುರಾಜ್ ಭಟ್ ಕೊಳಲಗಿರಿ** (ಅಧ್ಯಕ್ಷರು, ಶ್ರೀ ಬೊಬ್ಬರ್ಯ ದೈವಸ್ಥಾನದ ಜೀರ್ಣೋದ್ಧಾರಸಮಿತಿ ಪರಾರಿ, ಉಟ್ಟೂರು)

ಘನ ಉಪಸ್ಥಿತಿ : **ಶ್ರೀ ಸತೀಶ್ ಪೂಜಾರಿ ಕೀಳಂಜೆ** (ಗೌರವಾಧ್ಯಕ್ಷರು, ಶ್ರೀ ಬೊಬ್ಬರ್ಯ ದೈವಸ್ಥಾನದ ಜೀರ್ಣೋದ್ಧಾರ ಸಮಿತಿ ಪರಾರಿ, ಉಳ್ಳೂರು)

ಶ್ರೀ ಯಶ್‌ಪಾಲ್ ಎ. ಸುವರ್ಣ (ಶಾಸಕರು, ಉಡುಪಿ ವಿಧಾನ ಸಭಾ ಕ್ಷೇತ್ರ)

ಶ್ರೀ ಪ್ರಮೋದ್ ಮಧ್ವರಾಜ್ (ಮಾಜಿ ಸಚಿವರು, ಕರ್ನಾಟಕ ಸರ್ಕಾರ)

ಶ್ರೀ ರಾಘವೇಂದ್ರ ಎಸ್ ಭಟ್ (ಆಡಳಿತ ನಿರ್ದೇಶಕರು ಮತ್ತು ಅಇಔ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಮಂಗಳೂರು)

ಶ್ರೀ ಪ್ರಸಾದ್‌ರಾಜ್ ಕಾಂಚನ್ (ಕಾಂಗ್ರೆಸ್ ಮುಖಂಡರು, ಉಡುಪಿ ವಿಧಾನ ಸಭಾ ಕ್ಷೇತ್ರ)

ಶ್ರೀಪ್ರವೀಣ್ ಎಂ. ಪೂಜಾರಿ, ಖ್ಯಾತ ವಕೀಲರು (ಜಿಲ್ಲಾಧ್ಯಕ್ಷರು, ಯುವ ಬಿಲ್ಲವ ಉಡುಪಿ ಜಿಲ್ಲೆ)

ಶ್ರೀ ಹರೀಶ್ ಪೂಜಾರಿ ಮಲ್ಪೆ ಉದ್ಯಮಿ ಉಡುಪಿ (ಸಾಯಿ ಶ್ಯಾಮ್ ಬೋಟ್, ಮಲ್ಪೆ)

ಶ್ರೀ ಪ್ರಕಾಶ್ಚಂದ್ರ ಶೆಟ್ಟಿ (ಚೇರ್ಮನ್ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಜಿ.ಎಂ. ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ಬ್ರಹ್ಮಾವರ)

ಶ್ರೀ ಉದಯ್ ಕುಮಾರ್ ಶೆಟ್ಟಿ ಮುನಿಯಾಲು (ಅಧ್ಯಕ್ಷರು, ಶ್ರೀಕೃಷ್ಣ ಚಾರಿಟೇಬಲ್ ಟ್ರಸ್ಟ್ ಮುನಿಯಾಲು)

ಶ್ರೀ ರಘುಪತಿ ಭಟ್ (ಮಾಜಿ ಶಾಸಕರು, ಉಡುಪಿ ವಿಧಾನ ಸಭಾ ಕ್ಷೇತ್ರ)

ಶ್ರೀ ಮಟಪಾಡಿ ಕುಮಾರಸ್ವಾಮಿ (ಸೀನಿಯರ್ ಅಸಿಸ್ಟೆಂಟ್ ಎಡಿಟರ್ ಉದಯವಾಣಿ ಮಣಿಪಾಲ)

ಶ್ರೀಸುರೇಶ್ ಬಿ. ಶೆಟ್ಟಿ ಇರ್ಮಾಡಿ ಶೆಟ್ಟಿಬೆಟ್ಟು (ಉದ್ಯಮಿ, ಹಾವಂಜೆ, ಉಡುಪಿ)

ಶ್ರೀ ಎನ್. ರಮೇಶ್ ಶೆಟ್ಟಿ (ಅಧ್ಯಕ್ಷರು, ಉಪ್ಪೂರು ವ್ಯವಸಾಯ ಸಹಕಾರಿ ಸಂಘ)

ಶ್ರೀ ಮಾಧವ ಪಾಣ (ಮಾಲೀಕರು, ಪಿ.ಎಂ ಇಲೆಕ್ಟ್ರಿಕಲ್ಸ್ ಅಮ್ಮುಂಜೆ)

ಶ್ರೀ ರಾಜು ಪೂಜಾರಿ ಉಳ್ಳೂರು (ಅಧ್ಯಕ್ಷರು, ಬಿಲ್ಲವ ಸೇವಾ ಸಂಘ ಉಳ್ಳೂರು)

ಶ್ರೀ ಫ್ರಾಂಕಿ ಡಿಸೋಜ ಕೊಳಲಗಿರಿ (ಜಿಲ್ಲಾಧ್ಯಕ್ಷರು, ತುಳುನಾಡ ರಕ್ಷಣಾ ವೇದಿಕೆ ಉಡುಪಿ)

ಶ್ರೀ ನವೀನ ಪೆರ್ಡೂರು, ಉದ್ಯಮಿ (Mouna Infra And Developers)

ಶ್ರೀ ವಿಕ್ರಾಂತ್ ಶೆಟ್ಟಿ ಕೀಳಂಜೆ (ಮಾಲೀಕರು, ಜಿ.ಕೆ ಇಲೆಕ್ಟ್ರಿಕಲ್ಸ್ ಉಡುಪಿ)

ಶ್ರೀ ಆತ್ಮರಾಮ್ ಪಾಟೀಲ್ (ಉದ್ಯಮಿ ಪರಾರಿ, ಹಾವಂಜೆ) 12

ಶ್ರೀ ಸತೀಶ್ ಪೂಜಾರಿ ಅಮ್ಮುಂಜೆ (ಮಾಜಿ ಉಪಾಧ್ಯಕ್ಷರು, ಉಳ್ಳೂರು ಗ್ರಾಮ ಪಂಚಾಯತ್)

ಶ್ರೀ ಅಶ್ವಿನ್ ರೋಚ್ (ಮಾಜಿ ಗ್ರಾಮ ಪಂಚಾಯತ್ ಸದಸ್ಯರು, ಉಳ್ಳೂರು ಗ್ರಾಮ ಪಂಚಾಯತ್)

ಶ್ರೀ ಕೆ.ಸಿ. ಅಮೀನ್, ಉದ್ಯಮಿ (ಗೌರವಾಧ್ಯಕ್ಷರು, ಮೊಗವೀರ ಸಂಘಟನೆ ಉಪ್ಪೂರು ಘಟಕ)

ಶ್ರೀ ಗುರುಪ್ರಸಾದ್ ಶೆಟ್ಟಿ (ಮಾಲೀಕರು, ಶ್ರೀ ಗಣೇಶ್ ಟ್ರಾನ್ಸ್‌ಪೋರ್ಟ್ ಮತ್ತು ಕನ್‌ಸ್ಟ್ರಕ್ಷನ್, ಅಜೆಕಾರು ಕಾರ್ಕಳ)

ಪರಾರಿ ಬೊಬ್ಬರ್ಯ ಪ್ರತಿಷ್ಠಾ ಬ್ರಹ್ಮಕಲಶಕ್ಕೆ ಶುಭ ಕೋರುವ



ಶ್ರೀ ವಿಜೇಂದ್ರ ಮೇಲಂಟ
ಜಾತಬೆಟ್ಟು ಉಪ್ಪೂರು



ಶ್ರೀ ಮಧುಕರ್ ನಾಯ್ಕ
ಮಾಲೀಕರು, ಶ್ರೀ ದುರ್ಗಾ ಎಂಜಿನಿಯರಿಂಗ್ ವರ್ಕ್, ಹಾವಂಜೆ, ಕೊಳಲಗಿರಿ 9731090807



ಶ್ರೀ ರಕ್ಷಿತ್ ಡಿ. ಪಾಲನ್
ಉದ್ಯಮಿಗಳು, ಶ್ರೀ ಬ್ರಹ್ಮಲಿಂಗೇಶ್ವರ ಇಂಟರ್ ಲೋಕ್ ಮತು ಸಿಮೆಂಟ್ ಪ್ರಾಡಕ್, ಇನ್ನಂಜೆ, ಉಡುಪಿ 9448724025



ಸೌಮ್ಯ ಗೋಪಾಲ್, ಹೇರೂರು
ಉದ್ಯಮಿಗಳು
ತನಿಷ್ಕಾ ಗ್ಲಾಸ್ ಹೌಸ್ , ತೆಂಕಬೆಟ್ಟು, ಉಪ್ಪೂರು. 9901331839



ಶ್ರೀ ಪ್ರಶಾಂತ್ ಶೆಟ್ಟಿ ಹಾವಂಜೆ
ಅಧ್ಯಾಪಕರು ಹಾಗೂ ಖ್ಯಾತ ನಿರೂಪಕರು, ಉಡುಪಿ 9480485034



ಶ್ರೀ ಗುರುಪ್ರಸಾದ್ ಶೆಟ್ಟಿ
ಉದ್ಯಮಿಗಳು, ಶ್ರೀ ಗಣೇಶ್ ಟ್ರಾನ್ಸ್ಪೋರ್ಟ್ ಮತ್ತು ಎಂಜಿನಿರಿಂಗ್ ಜಾರ್ಕಳೆ 900815347



ಶ್ರೀ ಸಂತೋಷ್ ನಾಯ್ಕ್
ಶ್ರೀ ದುರ್ಗಾ ಡಿಜಿಟಲ್ ಸೇವಾ ಕೇಂದ್ರ (ಗ್ರಾಮ ಒನ್) ಕೊಳಲಗಿರಿ – 8495927624



ಶ್ರೀ ಆತ್ಮಾರಾಮ ಪಾಟೀಲ್, ಪರಾರಿ
ಉದ್ಯಮಿಗಳು



ಶ್ರೀ ಗಣಪತಿ ಪ್ರಭು
ಉದ್ಯಮಿಗಳು, ಶ್ರೀ ಸಿದ್ದಿವಿನಾಯಕ ಸರ್ವಿಸಸ್, ಕೆ.ಜಿ. ರೋಡ್, ಉಪ್ಪೂರು 9242407972



ಶ್ರೀ ಮಂಜಪ್ಪ ಸನಿಲ್ ಗೊಣಕಟ್ಟ, ಕೀಳಂಜೆ
ಮಾಜಿ ಅಧ್ಯಕ್ಷರು, ಕರಿಮಣಿ ಗ್ರಾಮ ಪಂಚಾಯತ್, ಸಾಗರ



ಶ್ರೀ ಕಿಶೋರ್ ಸಾಲ್ಮರ
ಮಾಲೀಕರು, ಶ್ರೀ ಸಿದ್ಧಿವಿನಾಯಕ ಟೂ ವೀಲರ್ ಆಟೋ ಸರ್ವಿಸ್. 872237939



ಶ್ರೀಮತಿ ಅಖಿಲ ಶೆಟ್ಟಿ & ಫ್ಯಾಮಿಲಿ
ಸೀತಾಸದನ, ಸಾಲ್ಮರ



ಶ್ರೀ ಗಣೇಶ್ ಮೇಸ್ತ
ಪಂಚಮಿ ಎಂಟರ್ಪ್ರೈಸಸ್ ನಿಯರ್ ಖುಷಿ ಹೋಟೆಲ್ ಸಂತೆಕಟ್ಟೆ ಉಡುಪಿ 9880848117

ಶ್ರೀ ಕೃಷ್ಣರಾಜ್ ಭಟ್ ಪರಾರಿ
ಕಾರ್ಯದರ್ಶಿಗಳು
ಶ್ರೀ ಬೊಬ್ಬರ್ಯ ಜೀರ್ಣೋದ್ಧಾರ ಸಮಿತಿ, ಪರಾರಿ

ಶ್ರೀ ಜ್ಯೋತಿ ಪಾಟೀಲ್
ಉಪಾಧ್ಯಕ್ಷರು
ಶ್ರೀ ಬೊಬ್ಬರ್ಯ ಜೀರ್ಣೋದ್ಧಾರ ಸಮಿತಿ, ಪರಾರಿ

ಶ್ರೀ ಹೆಬ್ರಿ ಉದಯಕುಮಾರ್ ಶೆಟ್ಟಿ
ಚಾಣಕ್ಯ ಮೆಲೋಡಿಸ್, ಹೆಬ್ರಿ

ಶ್ರೀ ರಮೇಶ್ ಪೂಜಾರಿ
ಮಾಲಕರು
ಶ್ರೀ ಸಿದ್ದಿವಿನಾಯಕ ಹೋಟೆಲ್
ಉಪ್ಪೂರು, ಸಾಲ್ಮರ – 9844711652

ಶ್ರೀ ಅಜಿತ್ ಕುಮಾರ್ ಶೆಟ್ಟಿ
ಉದ್ಯಮಿಗಳು
ಶ್ರೀ ಗಣೇಶ್ ರೈಸ್ ಮಿಲ್, ನರ್ನಾಡು

ಶ್ರೀ ರಮೇಶ್ ಆಚಾರ್ಯ ಕೀಳಂಜೆ
ಶ್ರೀ ನಿಧಿ ನಿಲಯ, ಹಾವಂಜೆ

ಶ್ರೀ ರಮೇಶ್ ಯು. ಕಲ್ಕೂರ್
ಪ್ರೇಮ ಕ್ಲಿನಿಕ್,
ತೆಂಕಬೆಟ್ಟು, ಉಪ್ಪೂರು

ಶ್ರೀ ಅಜಿತ್ ಶೆಟ್ಟಿ
ಉಪ್ಪೂರು, ದೊಡ್ಡಮನೆ

ಶ್ರೀ ಪ್ರಮೋದ್ ಶೆಟ್ಟಿ ಬಾಣಬೆಟ್ಟು
ಪ್ರಮೋದ್ ಆಟೋಮೊಬೈಲ್ಸ್
ಕರಾವಳಿ ಬೈಪಾಸ್, ಉಡುಪಿ
9964071102

ವಿನ್ಸೆಂಟ್ ಡಿಸೋಜ, ತೆರೆಜಾ ಡಿಸೋಜ, ವಿನಾ ಡಿಸೋಜ ವಿಶ್ವಾಸ ಡಿಸೋಜ
ಪರಾರಿ, ಉಪ್ಪೂರು ಗ್ರಾಮ

ಶ್ರೀ ಸುರೇಶ್ ಆಚಾರ್ಯ ಮುಂಬೈ
ಲಕ್ಷ್ಮೀನಗರ

ಅಂಬಾ ಭವಾನಿ ಹತ್ತರಕಟ್ಟೆ ಪರಾರಿ
ಹತ್ತು ಸಮಸ್ತರು, ಮರಾಠಿ ಸಂಘ,
ಪರಾರಿ, ಉಪ್ಪೂರು ಗ್ರಾಮ

ತ್ರಿವರ್ಣ ವಿಶ್ವವೇದಿಕೆ (ರಿ.)
ಕೀಳಂಜೆ, ಹಾವಂಜೆ
ಅಧ್ಯಕ್ಷರು ಮತ್ತು ಸರ್ವ ಸದಸ್ಯರು

ತುಳುನಾಡ ರಕ್ಷಣಾ ವೇದಿಕೆ
ಉಡುಪಿ ಜಿಲ್ಲೆ
ಅಧ್ಯಕ್ಷರು ಮತ್ತು ಸರ್ವ ಸದಸ್ಯರು

ಶ್ರೀ ಮಾಧವ ಪಾಣ
ಮಾಲೀಕರು
ಪಿ. ಎಂ. ಎಲೆಕ್ಟ್ರಿಕಲ್, ಅಮ್ಮುಂಜೆ
9481971045

ಶ್ರೀ ವಿಕ್ರಾಂತ್ ಶೆಟ್ಟಿ
ಮಾಲೀಕರು
ಜಿ.ಕೆ. ಎಲೆಕ್ಟ್ರಿಕಲ್, ಉಡುಪಿ
97419667982

ಶ್ರೀ ಸತ್ಯ ಕುಲಾಲ್
ಹೆಬ್ಬಾರಬೆಟ್ಟು, ಕುಕ್ಕೆಹಳ್ಳಿ

ಶ್ರೀ ರಾಜು ಪೂಜಾರಿ, ಉಪ್ಪೂರು
ಅಧ್ಯಕ್ಷರು
ಬಿಲ್ಲವ ಸೇವಾ ಸಂಘ, ಉಪ್ಪೂರು

ಶ್ರೀ ನಾಗರಾಜ್ ಐತಾಳ್ ಪೆರಂಪಳ್ಳಿ

ವಿನ್ಸೆಂಟ್ ಡಿಸೋಜ
ಡಿಸೋಜ ಸೌಂಡ್ಸ್ & ಲೈಟ್ಸ್,
ಕೊಳಲಗಿರಿ
9845120440

ಅಧ್ಯಕ್ಷರು ಪದಾಧಿಕಾರಿಗಳು ತುಳುನಾಡ ರಕ್ಷಣಾ ವೇದಿಕೆ ರಿ.
ಉಪ್ಪೂರು

ಶಶಿಧರ್ ಮೊಗವೀರ
ಶ್ರೀ ದುರ್ಗಾ ಫ್ಲವರ್ ಸ್ಟೋರ್
ಸಂತೆಕಟ್ಟೆ

ಹೊಸ ದಿಗಂತ
4 ಸಂಗಮ
ನಿಮ್ಮೂರಿನ ಸುದ್ದಿ

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಭಾನುವಾರ 19, ಏಪ್ರಿಲ್ 2026

ಸುತ್ತಮುತ್ತ

ಇಂದು ವಿಟ್ಲದಲ್ಲಿ ಅಂಬೇಡ್ಕರ್ ದಿನಾಚರಣೆ

ವಿಟ್ಲ: ದಲಿತ್ ಸೇವಾ ಸಮಿತಿ ಆಶ್ರಯದಲ್ಲಿ ಜಿಲ್ಲಾ ಮಟ್ಟದ 19ನೇ ವರ್ಷದ ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ, ಸಭಾ ಕಾರ್ಯಕ್ರಮ, ಸಾಧಕರಿಗೆ ಸನ್ಮಾನ, ಬಹುಮಾನ ವಿತರಣೆ ಮಾದರಿ ಶಾಲೆಯಲ್ಲಿ ಏ.19ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ದಲಿತ್ ಸೇವಾ ಸಮಿತಿ ಸ್ಥಾಪಕಾಧ್ಯಕ್ಷ ಬಿ.ಕೆ. ಸೇಸಪ್ಪ ಬೆದ್ರಕಾಡು ಹೇಳಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಸಂಸದ ಬ್ರಿಜೇಶ್ ಚೌಟ ನಡೆಸಲಿದ್ದು, ಶಾಸಕ ಅಶೋಕ್ ಕುಮಾರ್ ರೈ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನಡೆಸಲಿದ್ದಾರೆ. ವಿವಿಧ ವಿಭಾಗದ ಪ್ರಮುಖರು ಭಾಗವಹಿಸಲಿದ್ದಾರೆ. ಸಂಘದ ವತಿಯಿಂದ ನಡೆದ ಸುಮಾರು 200 ಮಕ್ಕಳಿಗೆ ದಾನಿಗಳ ಸಹಕಾರದಲ್ಲಿ ಪುಸ್ತಕ ವಿತರಣೆ, ವಿವಿಧ ಆಟೋಟ ಸ್ಪರ್ಧೆಯ ಬಹುಮಾನ ವಿತರಣೆ, ಮೆಸ್ಕಾಂನಲ್ಲಿ ಕೆಲಸ ನಿರ್ವಹಿಸುವ 42 ಮಂದಿ ಲೈನ್ ಮ್ಯಾನ್‌ಗಳಿಗೆ ಅಭಿನಂದನೆ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದವರಿಗೆ ಅಭಿನಂದನೆ ಈ ಸಂದರ್ಭ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಜಿಲ್ಲಾಧ್ಯಕ್ಷ ಗೋಪಾಲ್ ಕೆ. ನೇರಳಕಟ್ಟೆ, ಕಾರ್ಯಾಧ್ಯಕ್ಷ ಚಂದ್ರಶೇಖರ್ ಯು. ವಿಟ್ಲ, ಪ್ರಮುಖರಾದ ವಿದ್ಯಾ ಬೆದ್ರಕಾಡು, ಕುಶಲಾಕ್ಷಿ ಕೆದಿಲ ಉಪಸ್ಥಿತರಿದ್ದರು.

ಇಂದು ಸಹನಾ ಶೆಟ್ಟಿ ಭರತನಾಟ್ಯ ರಂಗಪ್ರವೇಶ

ಬಂಟ್ವಾಳ: ವಿದುಷಿ ಸ್ವಾತಿ ಜಯರಾಮ್ ಮತ್ತು



ವಿದುಷಿ ಪ್ರಥ್ವಿ ಸತೀಶ್ ಇವರ ಶಿಷ್ಯೆ ಕುಮಾರಿ ಸಹನಾ ಎಂ. ಶೆಟ್ಟಿ ನರ್ವಲ್ದಡ್ಕ ಅವರ ಭರತನಾಟ್ಯ ರಂಗಪ್ರವೇಶವು ಏ.19 ರಂದು ಸಂಜೆ 6 ಗಂಟೆಗೆ ಬ್ರಹ್ಮರಕೊಟ್ಲುವಿನಲ್ಲಿರುವ ಬಂಟವಾಳ ಬಂಟರ ಭವನದಲ್ಲಿ ನಡೆಯಲಿದೆ. ಮೋಹನ್ ಶೆಟ್ಟಿ ನರ್ವಲ್ದಡ್ಕ – ಹರಿಣಾಕ್ಷಿ ಶೆಟ್ಟಿ ದಂಪತಿಯ ಪುತ್ರಿಯಾಗಿರುವ ಸಹನ ಎಂ.ಶೆಟ್ಟಿ ಅಪ್ರತಿಮ ಭರತನಾಟ್ಯ ಕಲಾವಿದೆಯಾಗಿದ್ದಾಳೆ. ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ಮಡೆಸುವ ಜೂನಿಯರ್, ಸೀನಿಯರ್ ವಿದ್ವತ್ ಪೂರ್ವ ಹಾಗೂ ವಿದ್ವತ್ ಅಂತಿಮ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯೊಂದಿಗೆ ವಿದುಷಿ ಪದವಿ ಪಡೆದಿದ್ದಾರೆ.ಕಳೆದ 15 ವರ್ಷಗಳಿಂದ ವಿದುಷಿ ಸ್ವಾತಿ ಜಯರಾಮ್ ಮತ್ತು ವಿದುಷಿ ಪೃಥ್ವಿ ಸತೀಶ್ ಇವರ ಬಳಿ ನೃತ್ಯಾಭ್ಯಾಸ ನಡೆಸುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಕರ್ನಾಟಕ ಕಲಾಶ್ರೀ ವಿದುಷಿ ನಯನ ವಿ.ರೈ ಕಾರ್ಯಕ್ರಮ ಉದ್ಘಾಟಿಸಲಿದ್ದು,ಉಡುಪಿ ಸೋದೆ ಮಠದ ಶ್ರೀ ವಿಶ್ವವಲಭತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಬಂಟ್ವಾಳ ಬಂಟರ ಸಂಘದ ಅಧ್ಯಕ್ಷ ಜಗನ್ನಾಥ ಚೌಟ ಅಧ್ಯಕ್ಷತೆ ವಹಿಸಲಿದ್ದು, ಖ್ಯಾತ ಭಾಗವತರಾದ ಪಟ್ಲ ಸತೀಶ್ ಶೆಟ್ಟಿ,ಉದ್ಯಮಿ ಚಮನದ್ರಹಾಸ ಶೆಟ್ಟಿ ರಂಗೋಲಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಕಾಸರಗೋಡು: ಕೇಂದ್ರ ಸರ್ಕಾರದ ಉಪಕ್ರಮ ವಾದ ಬಿಐಎಸ್ ತರಬೇತಿ ವಿಭಾಗವು ನಡೆಸುವ ಒಂದು ವರ್ಷದ ಪಿಜಿ ಡಿಪ್ಲೊಮಾ ಇನ್ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ (ಅರ್ಹತಾ ಪದವಿ), ವೃತ್ತಿಪರ ಡಿಪ್ಲೊಮಾ ಇನ್ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ (ಪ್ಲಸ್ ಟು ಅರ್ಹತೆ) ಮತ್ತು ಆರು ತಿಂಗಳ ಡಿಪ್ಲೊಮಾ ಇನ್ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ (ಎಸ್ಸೆಸ್ಸೆಲ್ಸಿ ಅರ್ಹತೆ) ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೋರ್ಸ್‌ಗಳನ್ನು ಆನ್‌ಲೈನ್, ನಿಯಮಿತ ಮತ್ತು ಅರೆಕಾಲಿಕ ಬ್ಯಾಚ್‌ಗಳಲ್ಲಿ ನೀಡಲಾಗುತ್ತದೆ. ಮಾಹಿತಿಗೆ 7994449314 ಕರೆ ಮಾಡಬಹುದು.

ಸೂರಿಗಾಗಿ ಒತ್ತಾಯಿಸಿ ನಿವೇಶನ ರಹಿತರ ಪ್ರತಿಭಟನೆ

ಮಡಿಕೇರಿ: ನಿವೇಶನ ರಹಿತರಿಗೆ ಸೂರು ಕಲ್ಪಿಸಿ ಕೊಡುವಂತೆ ಒತ್ತಾಯಿಸಿ ಮಾಲ್ದಾರೆ ಗ್ರಾ.ಪಂ. ಕಚೇರಿ ಮುಂಭಾಗದಲ್ಲಿ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯುನಿಯನ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ಸಂದರ್ಭ ಮಾತನಾಡಿದ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಮಹೇದೇವ್, ತಲೆ ತಲೆಮಾರುಗಳಿಂದ ತೋಟದಲೈನ್ ಮನೆಗಳಲ್ಲಿ ಬಾಡಿಗೆ ಮನೆಗಳಲ್ಲಿ ವಾಸಿಸುವ ಬಡ ಕೂಲಿ ಕಾರ್ಮಿಕರಿಗೆ ಸ್ವಂತ ಸೂರು ಕಲ್ಪಿಸಿಕೊಡುವಲ್ಲಿ ಸರಕಾರ ವಿಫಲವಾಗಿದೆ. ಸರಕಾರ , ಜನಪ್ರತಿನಿಧಿಗಳಿಗೆ ಎಚ್ಚರಿಕೆ ಹೋರಾಟ ಇದಾಗಿದೆ. ಬಡವರಿಗೆ ಸೈಟ್ ಹಂಚಿಕೆಗೆ ಮುಂದಾಗದಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ನಿರಂತರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು. ಕಂದಾಯ ಪರಿವೀಕ್ಷಕ ಅನಿಲ್ ಮಾತನಾಡಿ, ಕೆಲಸ ನಿರ್ವಹಿಸಲು ಕಾಲಾವಕಾಶ ಕೋರಿದರು. ಸ್ಥಳಕ್ಕಾಗಮಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಮೋದ್, ಮಾಲ್ದಾರೆ ಗ್ರಾಮದಲ್ಲಿ ಸುಮಾರು 500ಜನ ನಿವೇಶನ ರಹಿತರು ಈಗಾಗಲೇ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು, ಪಂ. ವ್ಯಾಪ್ತಿಯಲ್ಲಿರುವ ಪೈಸಾರಿ ಜಾಗ ಶೀಘ್ರದಲ್ಲಿ ನೀಡುವ ಭರವಸೆ ನೀಡಿದರು.

ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನಕ್ಕೆ ಒಡ್ದೂರು ಫಾರ್ಮ್ಸ್‌ನಲ್ಲಿ ಚಾಲನೆ

ಪಕ್ಷ ಸಂಘಟನೆ, ಗೊಂದಲ ನಿವಾರಣೆಗೆ ಪ್ರಶಿಕ್ಷಣ ಸಹಕಾರಿ



ಬಂಟ್ವಾಳ: ಭಾರತೀಯ ಜನತಾ ಪಾರ್ಟಿ ಬಂಟ್ವಾಳ ಮಂಡಲದ ವತಿಯಿಂದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನಕ್ಕೆ ಗಂಜಿಮಠ ಒಡ್ದೂರು ಫಾರ್ಮ್ಸ್‌ನಲ್ಲಿ ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ ಶನಿವಾರ ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ಅವರು, ಪಕ್ಷದ ಸಿದ್ಧಾಂತ, ಕಾರ್ಯಕ್ರಮಗಳು ಏನೆಂಬುದು ಕಾರ್ಯಕರ್ತರಿಗೆ ಸ್ಪಷ್ಟವಾಗಿ ತಿಳಿದಾಗ ಅವರು ಮತದಾರರನ್ನು ಮನವೊಲಿಸಲು ಸುಲಭ ಸಾಧ್ಯವಾಗಲಿದೆ. ಮುಂದಿನ ಚುನಾವಣೆಯನ್ನು ಹೇಗೆ ಎದುರಿಸಬೇಕು, ಪಕ್ಷ ಸಂಘಟನೆಯನ್ನು ಯಾವರೀತಿ ಮಾಡಬೇಕು, ನಮ್ಮೊಳಗಿನ ಗೊಂದಲ ಸರಿಪಡಿಸಲು ಪ್ರಶಿಕ್ಷಣದಿಂದ ಸಾಧ್ಯವಿದೆ ಎಂದರು.

ಕೇಂದ್ರ ಸರ್ಕಾರದ ನಾರೀ ಶಕ್ತಿ ವಂದನಾ ಮಸೂದೆ ಜಾರಿಗೆ ಅಡ್ಡಿಪಡಿಸಿ ಸೋಲುಂಟು ಮಾಡಿದ ವಿಪಕ್ಷಗಳಿಗೆ ಮಹಿಳೆಯರ ಬಗ್ಗೆ ಎಷ್ಟು ಗೌರವ, ಸ್ಥಾನಮಾನ ನೀಡುತ್ತದೆ ಎಂಬುದೀಗ ದೇಶಕ್ಕೆ ಗೊತ್ತಾಗಿದೆ ಎಂದ ಅವರು, ಪ್ರಧಾನಿ ನರೇಂದ್ರ ಮೋದಿಯವರು ಮುಂದಿನ ದಿನಗಳಲ್ಲಿ ಯಾವುದೇ ರೀತಿಯಲ್ಲಾದರೂ ಈ ಮಸೂದೆಯನ್ನು ಜಾರಿಗೊಳಿಸುವುದು ಶತ ಸಿದ್ದ ಎಂದು ಶಾಸಕ ರಾಜೇಶ್ ನಾಯ್ಕ್ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಬಂಟ್ವಾಳ ಮಂಡಲದ ಅಧ್ಯಕ್ಷ ಚೆನ್ನಪ್ಪ ಕೋಟ್ಯಾನ್ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ, ಬಂಟ್ವಾಳ ಮಂಡಲದ ಪ್ರಭಾರಿ ರಾಕೇಶ್ ರೈ ಕಡೆಂಜಿ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮಹಾಭಿಯಾನದ ರಾಜ್ಯ ಸಹ ಸಂಚಾಲಕರಾದ ವಿಕಾಸ್ ಪುತ್ತೂರು,ಮಂಗಳೂರು ಉತ್ತರ ಶಾಸಕ ಡಾ.ವೈ.ಭರತ್ ಶೆಟ್ಟಿ ಎರಡು ಪ್ರತ್ಯೇಕ ಗೋಷ್ಠಿಯಲ್ಲಿ ವಿವಿಧ ವಿಚಾರ ಮಂಡಿಸಿದರು.

ಮಂಡಲದ ಸಹಸಂಚಾಲಕ ಲಖಿತ ಆರ್. ಶೆಟ್ಟಿ ಬಿಜೆಪಿ ಬಂಟ್ವಾಳ ಮಂಡಲದ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ಏಗಳಾದ ದೇವಪ್ಪ ಪೂಜಾರಿ ದಿನೇಶ್ ಅಮ್ಟೂರು, ವಿವಿಧ ಮಹಾಶಕ್ತಿ ಕೇಂದ್ರ ವ್ಯಾಪ್ತಿಯ ಸಂಚಾಲಕರಾದ ವಸಂತ ಕುಮಾರ ಅಣ್ಣಳಿಕೆ, ಪುರುಷೋತ್ತಮ ಸಾಲಿಯಾನ್ ರವೀಶ್ ಶೆಟ್ಟಿ ಕರ್ಕಳ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬಿಜೆಪಿ ಬಂಟ್ವಾಳ ಮಂಡಲದ ಪ್ರಧಾನ ಕಾರ್ಯದರ್ಶಿಸುದರ್ಶನ್ ಬಜ ಸ್ವಾಗತಿಸಿದರು. ಹರೀಶ್ ಶೆಟ್ಟಿ ಪಡು ನಿರೂಪಿಸಿದರು. ಮಹಿಳಾ ಮೋರ್ಚಾ ಕಾರ್ಯದರ್ಶಿ ಜಯಶ್ರೀಗೋಳ್ತಮಜಲು ವಂದೆ ಮಾತರಂ ಗೀತೆ , ಪ್ರಣಾಮ್ ಅಜ್ಜಿಬೆಟ್ಟು ವೈಯಕ್ತಿಕ ಗೀತೆ ಹಾಡಿದರು.

ಪ್ರೇರಣೆಯಾಗಿದೆ

ಪಂಡಿತ್ ದೀನ್ ದಯಾಳ್ ಉಪಾಧ್ಯಾಯರು ಆ ಕಾಲದಲ್ಲಿ, 17 ವರ್ಷಗಳ ಕಾಲ ಜನಸಂಘದ ಕಾರ್ಯದರ್ಶಿಯಾಗಿ ಪಕ್ಷ ಸಂಘಟನೆ ಮಾಡಿರುವುದು ನಮಗೆಲ್ಲರಿಗೂ ಪ್ರೇರಣೆಯಾಗಿದೆ. ಈ ನಿಟ್ಟಿನಲ್ಲಿ ಮಹಾಭಿಯಾನದ ಮೂಲಕ ತಳಮಟ್ಟದಲ್ಲಿ ಪಕ್ಷ ಸಂಘಟನೆಯಾಗಲಿ.

● ರಾಜೇಶ್ ನ್ಯಾಕ್, ಶಾಸಕರು

7 ಗೋಷ್ಠಿಗಳು

ಏ.19ರಂದು ಸಂಜೆಯವರೆಗೆ ಮಹಾಭಿಯಾನ ನಡೆಯಲಿದ್ದು, ಒಟ್ಟು 7 ಗೋಷ್ಠಿಗಳು ನಡೆಯಲಿವೆ. ಸಂಜೆ ಸಮಾರೋಪ ಸಮಾರಂಭದಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ಸಮಾರೋಪ ಭಾಷಣ ಮಾಡಲಿದ್ದಾರೆ. ಬಳಿಕ ಬಿಜೆಪಿ ಮಂಗಳೂರು ಉತ್ತರ ಮಂಡಲದ ಮಹಾಭಿಯಾನ ಆರಂಭವಾಗಲಿದೆ.

ಮಕ್ಕಳಲ್ಲಿ ಸಂಸ್ಕಾರ ಬೆಳವಣಿಗೆಗೆ ಶಿಬಿರ ಸಹಕಾರಿ: ಗುಂಡ್ಮಿ ರಾಮಚಂದ್ರ ಐತಾಳ



ಕೋಟ: ಕಳೆದ ಹದಿಮೂರು ವರ್ಷಗಳಿಂದ ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ – ಐರೋಡಿ ಇವರು ಆಯೋಜಿಸುತ್ತಿರುವ ಯಕ್ಷಗಾನ ನೃತ್ಯ ಮತ್ತು ಅಭಿನಯ ಶಿಬಿರ 'ನಲಿಕುಣಿ' ಪರಿಸರದ ಮಕ್ಕಳಲ್ಲಿ ಸಂಸ್ಕಾರದ ಬೆಳವಣಿಗೆಗೆ ಸಹಕಾರಿಯಾಗುತ್ತಿದೆ. ಈ ಸಂಸ್ಥೆಯಲ್ಲಿ ನೀಡಲಾಗುವ ಶಿಸ್ತುಬದ್ಧ ಶಿಕ್ಷಣ ಮಕ್ಕಳ ಜೀವನದಲ್ಲಿ ನಶಿಸದಂತ ಸಂಸ್ಕೃತಿ ಯನ್ನು ಕಲಿಸುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಬ್ರಹ್ಮಾವರ ಘಟಕದ ಅಧ್ಯಕ್ಷ ಗುಂಡ್ಮಿ ರಾಮಚಂದ್ರ ಐತಾಳ ನುಡಿದರು.

ಅವರು ಗುಂಡ್ಮಿ ಹಂಗಾರಕಟ್ಟೆ ಯಕ್ಷಗಾನ ಕಲಾಕೇಂದ್ರದವರು ಆಯೋಜಿಸಿರುವ ಇಪ್ಪತ್ತು ದಿನಗಳ 'ನಲಿ ಕುಣಿ' ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕಲಾಕೇಂದ್ರದ ಶ್ರಮ ಶ್ಲಾಘನೀಯ

ಪ್ರಾಚಾರ್ಯ ಸದಾನಂದ ಐತಾಳರು ಮಾತನಾಡಿ, ಉತ್ತಮ ಯಕ್ಷ ಶಿಕ್ಷಣವನ್ನು ನೀಡುತ್ತಿರುವ ಕಲಾಕೇಂದ್ರದ ಶ್ರಮ ಶ್ಲಾಘನೀಯ ಎಂದರು.

ವೇದಿಕೆಯಲ್ಲಿ ಯಕ್ಷ ಗುರುಗಳಾದ ಕೇಶವ ಆಚಾರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಜಯೇಂದ್ರ ಅಡಿಗ, ರಾಘವೇಂದ್ರ ಮಟಪಾಡಿ ಉಪಸ್ಥಿತರಿದ್ದರು. ಕಾರ್ಯದರ್ಶಿ ಐರೋಡಿ ರಾಜಶೇಖರ ಹೆಬ್ಬಾರ್ ಸ್ವಾಗತಿಸಿ, ವಂದಿಸಿದರು.

ಎಸೆಸೆಲ್ಸಿಯಲ್ಲಿ ಅಮೃತ ಭಾರತಿ ವಿದ್ಯಾ ಕೇಂದ್ರಕ್ಕೆ ಉತ್ತಮ ಫಲಿತಾಂಶ: ಸನ್ಮಾನ



ಹೆಬ್ರಿ: ಪಾಂಡುರಂಗ ರಾಮನ ನಾಯಕ ಅಮೃತ ಭಾರತಿ ವಿದ್ಯಾ ಕೇಂದ್ರ (ಸಿಬಿಎಸ್‌ಇ) ಯಲ್ಲಿ 10ನೇ ತರಗತಿ ವಿದ್ಯಾರ್ಥಿಗಳ ಉತ್ತಮ ಫಲಿತಾಂಶದ ಅಂಗವಾಗಿ ಸನ್ಮಾನ ಸಮಾರಂಭವನ್ನು ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಶೇಕಡ 95 ಅಂಕಗಳನ್ನು ಗಳಿಸಿದ ಧನ್ವಿ ಹೆಬ್ಬಾರ್ ಹಾಗೂ ಅವನೀಶ್ ಆರ್ ರಾವ್ ಪ್ರಥಮ ಸ್ಥಾನ ಪಡೆದಿದ್ದು ಶೇಕಡ 93 ಅಂಕಗಳನ್ನು ಪಡೆದ ವಂದನಾ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಅಮೃತ ಭಾರತಿ ಟ್ರಸ್ಟ್ ರಿಜಿಸ್ಟರ್ ಅಧ್ಯಕ್ಷರಾದ ಸಿಎ ಎಂ. ರವಿ ರಾವ್, ಕಾರ್ಯದರ್ಶಿಯಾದ ಶ್ರೀ ಗುರುದಾಸ್ ಶೆಣೈ ಹಾಗೂ ಟ್ರಸ್ಟಿಗಳಾದ ಬಾಲಕೃಷ್ಣಮಲ್ಯ, ವಿಷ್ಣುಮೂರ್ತಿ ನಾಯಕ್, ಹಾಸ್ಟೆಲ್ ಸಮಿತಿ ಸದಸ್ಯರಾದ ರಾಮಕೃಷ್ಣ ಆಚಾರ್ಯ , ಡಾ ಭಾರ್ಗವಿ ಐತಾಳ್ ಪ್ರಾಂಶುಪಾಲ ಅರುಣ್ ಹೆಚ್ ವೈ ಮುಖ್ಯೋಪಾಧ್ಯಾಯಿನಿ ಅನಿತಾ , ಅಪರ್ಣಾ ಆಚಾರ್ ಉಪಸ್ಥಿತರಿದ್ದರು.

ಆಡಳಿತ ಮಂಡಳಿಯ ಅಧ್ಯಕ್ಷರಾದ ಗುರುದಾಸ್ ಶೆಣೈ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ , ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಂಸ್ಥೆಯ ಮೇಲ್ವಿಚಾರಕರಾದ ಶ್ರೀ ವಿಜಯ ಕುಮಾರ್ ಶೆಟ್ಟಿ ಅವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು.

ಫೋಟೊ ಇದೆ. 18 ಅಮೃತ ಭಾರತಿ

ಪರಿಶ್ರಮ, ಸಹಕಾರ ಕಾರಣ

ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಮತ್ತು ಪೋಷಕರ ಸಹಕಾರವೇ ಈ ಸಾಧನೆಗೆ ಕಾರಣ.

● ಗುರುದಾಸ್ ಶೆಣೈ

ಪ್ರೋತ್ಸಾಹ ಲಭಿಸಿದಾಗ ಕಲಾವಿದರು ಪ್ರಸಿದ್ಧಿ ಪಡೆಯುತ್ತಾರೆ: ಆದಿರಾ ಲಕ್ಷ್ಮಣ್



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಮೊದಲ ದಿನವಾದ ಶುಕ್ರವಾರ ಸಂಜೆ ನಟರಾಜ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಜರಗಿತು.

ಶ್ಲಾಘನೀಯ

ಧಾರಾವಾಹಿ ನಟಿ ಆದಿರಾ ಲಕ್ಷ್ಮಣ್ ಉದ್ಘಾಟಿಸಿ ಮಾತನಾಡಿ, ಕಲಾವಿದರಿಗೆ ನಿರಂತರ ಪ್ರೋತ್ಸಾಹ ನೀಡಿದಾಗ ಮಾತ್ರ ಪ್ರಬುದ್ಧ ಕಲಾವಿದರಾಗಿ ಪ್ರಸಿದ್ಧಿ ಹೊಂದಲು ಸಾಧ್ಯ. ಅನೇಕ ಧಾರ್ಮಿಕ ಕೇಂದ್ರಗಳು ಕಲೆಗೆ ಬೆಂಬಲ ನೀಡುತ್ತಿರುವುದು ಶ್ಲಾಘನೀಯ ಎಂದರು.

ಬ್ರಹ್ಮಕಲಶ ಸಮಿತಿ ರಕ್ಷಾಧಿಕಾರಿ ಗೋಪಾಲಕೃಷ್ಣ ಪೈ ಬದಿಯಡ್ಕ ಅಧ್ಯಕ್ಷತೆ ವಹಿಸಿದ್ದರು. ವಾಸ್ತುಶಿಲ್ಪಿ ಕೃಷ್ಣ ಪ್ರಸಾದ ಮುನಿಯಂಗಳ ಗೌರವ ಉಪಸ್ಥಿತರಿದ್ದರು. ಪೆರಡಾಲ ನವ ಜೀವನ ಶಾಲಾ ಅಧ್ಯಾಪಕ ಉಳಿಯತ್ತಾಯ ನಾರಾಯಣ ಅಸ್ರ ಉಳಿಯ, ಆಡಳಿತ ಮೊಕ್ತೇಸರ, ವಕೀಲ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಉದ್ಯಮಿ ಅರವಿಂದ ಪೈ ಬಳ್ಳಂಬೆಟ್ಟು, ಉದ್ಯಮಿ ಹರಿಪ್ರಸಾದ ರೈ ಪುತ್ರಕಳ, ಕಲರ್ಸ್ ಕನ್ನಡ ಕೋಗಿಲೆ ಗಾಯಕಿ ಅವೇಕ್ಷಾ ಪೈ ಬಳ್ಳಂಬೆಟ್ಟು, ಬ್ರಹ್ಮಕಲಶ ಸಮಿತಿ ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು, ವಿಷ್ಣುಶರ್ಮ ನೂಜಿಲ, ಗಣೇಶ ಪ್ರಸಾದ ಕಡಪ್ಪು ವೇದಿಕೆಯಲ್ಲಿದ್ದರು.

ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ ಸ್ವಾಗತಿಸಿ, ಸಾಂಸ್ಕೃತಿಕ ಸಮಿತಿ ಪ್ರಧಾನ ಸಂಚಾಲಕ ರಾಜೇಶ್ ಮಾಸ್ತರ್ ಅಗಲ್ಪಾಡಿ ವಂದಿಸಿದರು. ಕಾರ್ಯ ನಿರ್ವಹಣಾ ಸಮಿತಿ ಅಧ್ಯಕ್ಷ ಉದಯ ಶಂಕರ ಪಟ್ಟಾಜೆ ನಿರೂಪಿಸಿದರು.

ಬಳಿಕ ಬದಿಯಡ್ಕ ರಂಗಸಿರಿ ಸಾಂಸ್ಕೃತಿಕ ವೇದಿಕೆ ವತಿಯಿಂದ ಯಕ್ಷಗಾನ ಬಯಲಾಟ, ನೃತ್ಯಗುರು ಸೌರಮ್ಯ ಶೈಜು ಮಧೂರು ತಂಡದವರಿಂದ ನೃತ್ಯಾರ್ಚನೆ ನಡೆಯಿತು.

ಸಾಂಸ್ಕೃತಿಕ ಕಾರ್ಯಕ್ರಮಗಳು

ಬ್ರಹ್ಮಕಲಶದ ಅಂಗವಾಗಿ ಶ್ರೀ ಕ್ಷೇತ್ರದ ನಟರಾಜ ವೇದಿಕೆ , ಕೈಲಾಸ ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರಗುತ್ತಿವೆ. ಅಲ್ಲದೆ ನಾಡಿನ ವಿವಿಧ ಭಜನಾ ತಂಡಗಳಿಂದ ಏಕಾಹ ಭಜನೆ ಶ್ರೀ ಮಹಾದೇವ ಭಜನಾ ವೇದಿಕೆಯಲ್ಲಿ ನೆರವೇರುತ್ತಿದೆ. ದಿನಂಪ್ರತಿ ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯ ತನಕ ಭಜನಾ ತಂಡಗಳು ತಮ್ಮ ಸೇವೆ ನೀಡುತ್ತಿವೆ.

ಸೀನಿಯರ್ ಛೇಂಬರ್ ಇಂಟರ್‌ನ್ಯಾಶನಲ್: ನೂತನ ಪದಾಧಿಕಾರಿಗಳಿಗೆ ಪದಸ್ವೀಕಾರ



ಮಂಗಳೂರು: ಸೀನಿಯರ್ ಛೇಂಬರ್ ಇಂಟರ್‌ನ್ಯಾಶನಲ್ ಮಂಗಳೂರುಲೀಜನ್‌ನ ನೂತನ ಪದಾಧಿಕಾರಿಗಳ ಪದಸ್ವೀಕಾರ ಸಮಾರಂಭ ನಗರದ ಲಾಲ್‌ಭಾಗ್ ಹ್ಯಾಟ್ ಹಿಲ್ ಆಫೀಸರ್ಸ್ ಕ್ಲಬ್‌ನಲ್ಲಿ ನಡೆಯಿತು. ಪದಸ್ವೀಕಾರ ಅಧಿಕಾರಿಯಾಗಿದ್ದ ಎಸ್‌ಸಿಐ ವಲಯ–ಸಿ ರಾಷ್ಟ್ರೀಯ ಉಪಾಧ್ಯಕ್ಷ ಕುಮಾರ್ ಕೂರ್ಸೆ ಮಾತನಾಡಿ, ಹೊಸ ಘಟಕಗಳ ವಿಸ್ತರಣೆ ಯಾಗಬೇಕು, ಘಟಕಗಳ ಸದಸ್ಯರ ಸಂಖ್ಯೆ ವೃದ್ಧಿಸಬೇಕು, ಸಮಯದಲ್ಲಿ ಶುಲ್ಕ ಪಾವತಿಸಬೇಕು, ವಿದೇಶಗಳಲ್ಲಿ ಘಟಕಗಳ ವಿಸ್ತರಣೆ, ಘಟಕ, ಸದಸ್ಯರ ತರಬೇತಿ ನಡೆಸಬೇಕೆಂದರು.

ಮೂರು ನೂತನ ಸದಸ್ಯರನ್ನು ಘಟಕಕ್ಕೆ ಸೇರ್ಪಡೆಗೊಳಿಸಲಾಗಿದ್ದು, ಅವರಿಗೆ ಪ್ರಮಾಣವಚನ ಬೋಧಿಸಿದರು.

ರಾಷ್ಟ್ರೀಯ ಉಪಾಧ್ಯಕ್ಷ ಕುಮಾರ್ ಕೂರ್ಸೆ, ನಿ.ಪೂ.ಅಧ್ಯಕ್ಷ ವಿಕಾಶ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಅತಿಥಿಯಾಗಿದ್ದ ಎಸ್‌ಸಿಐನ ಪೂರ್ವ ರಾಷ್ಟ್ರೀಯ ಅಧ್ಯಕ್ಷ ಡಾ. ಕೇದಿಗೆ ಅರವಿಂದ್ ರಾವ್ ಮಾತನಾಡಿ, ಕಳೆದ 5 ವರ್ಷಗಳಲ್ಲಿ 300ಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಸಂಸ್ಥೆಯಿಂದ ನೀಡಲಾಗಿದೆ. ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿ ವೇತನ ನೀಡಲು ಸದಸ್ಯರು ಹೆಚ್ಚಿನ ಧನ ಸಹಾಯ ನೀಡುವುದರ ಮೂಲಕ ಫೌಂಡೇಶನ್‌ನ್ನು ಹೆಚ್ಚು ಗಟ್ಟಿಗೊಳಿಸಬೇಕೆಂದು ತಿಳಿಸಿದರು.

2026–27ನೇ ಸಾಲಿನ ನೂತನ ಅಧ್ಯಕ್ಷರಾಗಿ ಹರೀಶ್ ಎ., ಕಾರ್ಯದರ್ಶಿಯಾಗಿ, ಸುಭಾಷ್ ರೈ, ಖಜಾಂಚಿಯಾಗಿ ರಾಜೇಶ್ ಆಚಾರ್ಯ, ಉಪಾಧ್ಯಕ್ಷರಾಗಿ ಹೀರಾಚಂದ್, ಅರುಣ್ ಪೀಟರ್ ಪಿಂಟೊ, ಜೊತೆ ಕಾರ್ಯದರ್ಶಿಯಾಗಿ ಶಿವರಾಮ ಎ., ಜೊತೆ ಖಜಾಂಚಿಯಾಗಿ ಡಾ. ನಾಗೇಶ್ವರಿ, ಗಾಯತ್ರಿ ಅರವಿಂದ ರಾವ್ ಅಧಿಕಾರ ಸ್ವೀಕರಿಸಿದರು. ನಿರ್ದೇಶಕರಾಗಿ ಸುನಂದಾ ಶಿವರಾಮ, ಹರೀಶ್ ಆರ್., ಡಾ. ಶರತ್ ಶೆಟ್ಟಿ, ಸುಜಾತ ಸುವರ್ಣ, ಕೇದಾರನಾಥ, ಧೀರಜ್ ಉದ್ಯಾವರ್, ಧೀರಜ್ ಶೆಟ್ಟಿ, ಶಿವರಾಮ ಎಂ., ನಿರ್ಮಲಾ ಪ್ರಮೋದ್,ವಜ್ರಾಕ್ಷಿಭಾಸ್ಕರ್,ನಂದಕುಮಾರ್, ಸುಬ್ರಹ್ಮಣ್ಯ ನೇಮಕಗೊಂಡರು.

ನೂತನ ಅಧ್ಯಕ್ಷ ಹರೀಶ್ ಎ. ಅವರ ವತಿಯಿಂದ ಉಸ್ಮಾನ್ ಮಂಜೇಶ್ವರ ಅವರಿಗೆ ಕೃತಕ ಬಲಗಾಲನ್ನು ನೀಡಲಾಯಿತು, ಫೀಟ್ ವೆಲ್ ಆರ್ಟಿಫಿಷಿಯಲ್ ಲಿಂಬ್ ಸೆಂಟರ್ ಮಾಲಕ ಕಿಶೋರ್ ಅವರು ಈ ಕೃತಕ ಕಾಲನ್ನು ತಯಾರಿಸಿ ಜೋಡಿಸಿದರು.

ಪೂರ್ವ ರಾಷ್ಟ್ರೀಯ ಉಪಾಧ್ಯಕ್ಷ ಕಿಶೋರ್ ಫೆರ್ನಾಂಡಿಸ್, ಪೂರ್ವ ಅಧ್ಯಕ್ಷ ದತ್ತಾತ್ರೆಯ ಬಾಳ ಉಪಸ್ಥಿತರಿದ್ದರು. ಸುಜಾತ ಸುವರ್ಣಾ ಅತಿಥಿ ಪರಿಚಯ ಮಾಡಿದರು. ವಿಕಾಶ್ ಶೆಟ್ಟಿ ಸ್ವಾಗತಿಸಿ, ಚೇತನಾ ದತ್ತಾತ್ರೆಯ ಬಾಳಾ ಪ್ರಸ್ತಾವನೆಗೈದರು. ಸುಭಾಷ್ ರೈ ವಂದಿಸಿದರು.

ಸಸಿಹಿತ್ಲು ಶ್ರೀ ಭಗವತೀ ಫ್ರೆಂಡ್ಸ್‌ನ ವಾರ್ಷಿಕೋತ್ಸವ, ಸಾಧಕರಿಗೆ ಗೌರವ



ಮೂಲ್ಕಿ: ಸಸಿಹಿತ್ಲು ಶ್ರೀ ಭಗವತೀ ಫ್ರೆಂಡ್ಸ್‌ನ ವಾರ್ಷಿಕೋತ್ಸವ ಹಾಗೂ ಸಾಧಕರಿಗೆ ಗೌರವ ಮತ್ತು ಅಸಹಾಯಕರಿಗೆ ಸಹಾಯ ಹಸ್ತ ಕಾರ್ಯಕ್ರಮ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಬಳಿಯ ಬೃಹತ್ ವೇದಿಕೆಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ದೇವಸ್ಥಾನದ ಆನುವಂಶಿಕ ಮೊಕ್ತೇಸರ ಹಾಗೂ ಅರ್ಚಕ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ ಮಾತನಾಡಿ, ಸೇವಾ ಸಂಸ್ಥೆಗಳು ಮನವಿಯ ಮೌಲ್ಯತೆಗಳನ್ನು ಬೆಳೆಸಿಕೊಂಡು ಸಂಘಟಿತರಾಗಿ ಊರಿನ ಅಭಿವೃದ್ಧಿಗೆ ಶ್ರಮಿಸುವುದರ ಜೊತೆಗೆ ಸಹಾಯ ಹಸ್ತ ಕಾರ್ಯಕ್ರಮ ಅಭಿನಂದನೀಯ ಎಂದರು.

ಅತಿಥಿಗಳಾಗಿ ದೇವಸ್ಥಾನದ ಆಡಳಿತ ಸಮಿತಿಯ ಅಧ್ಯಕ್ಷ ವಾಮನ್ ಇಡ್ಯಾ , ಸಸಿಹಿತ್ಲು ಪಟೇಲ ಮನೆತನದ ಲೀಲಾದರ ಬಂಗೇರ, ಶ್ರೀ ಸಾರಂತಾಯ ಗರೋಡಿ ಅಧ್ಯಕ್ಷ ಜಗನ್ನಾಥ ಕೋಟ್ಯಾನ್ , ಶ್ರೀ ಭಗವತೀ ಫ್ರೆಂಡ್ಸ್ ನ ಗೌರವಾಧ್ಯಕ್ಷ ಅನಿಲ್ ಪೂಜಾರಿ, ಅಧ್ಯಕ್ಷ ಸಚಿನ್ ಕೋಟ್ಯಾನ್ ಮತ್ತಿತರರಿದ್ದರು ಶ್ರೀ ಭಗವತಿ ಫ್ರೆಂಡ್ಸ್‌ನ ಪ್ರದೀಪ್ ಎಸ್. ಆರ್. ಸ್ವಾಗತಿಸಿ, ಮನಿಷಾ ವಂದಿಸಿದರು, ರಾಜೇಂದ್ರ ಪ್ರಸಾದ್ ಎಕ್ಕಾರು ನಿರೂಪಿಸಿದರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸನ್ಮಾನ

ಸಾಧಕರ ನೆಲೆಯಲ್ಲಿ ಹಳೆಯಂಗಡಿ ಪ್ರಿಯದರ್ಶಿನಿ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ವಸಂತ್ ಬೆರ್ನಾಡ್, ಸಹಕಾರಿ ಧುರೀಣ ಮಾಧವ ತಿಂಗಳಾಯ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಜಯಕೃಷ್ಣ ಕೋಟ್ಯಾನ್, ಆಳ್ವಾಸ್ ಕಾಲೇಜಿನ ಉಪನ್ಯಾಸಕ ಎಸ್. ಆರ್ ಪ್ರಭಾತ್ ಅವರನ್ನು ಗೌರವಿಸಿ ಸನಾನಿಸಲಾಯಿತು. ಅನಾರೋಗ್ಯ ಪೀಡಿತ ಹಾಗೂ ವಿಕಲಚೇತನರಿಗೆ ವೀಲ್ ಚೇರ್ ವಿತರಿಸಲಾಯಿತು.

ಜನಗಣತಿಗೆ ವೀರಕಂಭ ಗ್ರಾಮ ಸರ್ಕಲ್ ನಂಬರ್ 073 ರಲ್ಲಿ ಚಾಲನೆ



ಬಂಟ್ವಾಳ: ಭಾರತ ಜನಗಣತಿ 2027 ರ ಹಂತ 1 ರ ಜನಗಣತಿಗೆ ವೀರಕಂಭ ಗ್ರಾಮ ಸರ್ಕಲ್ ನಂಬರ್ 073 ರಲ್ಲಿ ಗುರುವಾರ ಚಾಲನೆ ನೀಡಲಾಯಿತು.

ದೇಶದ ಭವಿಷ್ಯದ ನೀತಿ ನಿರೂಪ ಣೆಗೆ – ಸಮಗ್ರ ಅಭಿವೃದ್ಧಿಗೆ ಜನಗಣತಿ ಅಂಕಿ ಅಂಶಗಳು ನಿರ್ಣಾಯಕರಾಗಿರುವುದರಿಂದ ಜನಗಣತಿಯ ಪ್ರಾಮುಖ್ಯತೆ – ಗಣತಿದಾರರ ಕರ್ತವ್ಯ, ಜವಾಬ್ದಾರಿಗಳ ಬಗ್ಗೆ ಗಣತಿ ಮೇಲ್ವಿಚಾರಕರಾದ ವೀರಕಂಭ ಗ್ರಾಮ ಪಂಚಾಯತ್ ಪಿ.ಡಿ.ಒ ಶಂಭು ಕುಮಾರ ಶರ್ಮಾ ಅವರು ಗಣತಿದಾರರಿಗೆ ತಿಳಿಸಿ ಹೇಳಿದರು.

ಸರ್ಕಲ್ 073 ರ ಆರು ಬ್ಲಾಕ್ ಗಳ ಎಲ್ಲಾ 6 ಮಂದಿ ಗಣತಿದಾರರು ಈ ಸಂದರ್ಭ ಉಪಸ್ಥಿತರಿದ್ದರು.

ವೀರಕಂಭ ಗ್ರಾಮದಲ್ಲಿ ಒಟ್ಟು 10 ಬ್ಲಾಕ್ ಗಳಿದ್ದು,ಸುಮಾರು 200 ಮನೆಗಳಿಗೆ ಒಂದು ಬ್ಲಾಕ್‌ನಂತೆ ವಿಂಗಡಿಸಿ ಜಿಯೋ ಫೆನ್ಸಿಂಗ್ ಮುಖಾಂತರ ಬ್ಲಾಕ್ ಗಳ ರಚಿಸಲಾಗಿದ್ದು, ಪ್ರತಿ ಬ್ಲಾಕ್‌ಗೆ ಒಬ್ಬರಂತೆ ಗಣತಿ ಕರ್ತವ್ಯಕ್ಕೆ ನೇಮಿಸಲಾಗಿರುತ್ತದೆ. ಸುಮಾರು 1 ತಿಂಗಳು ಹಂತ ಒಂದರ ಗಣತಿ ಪ್ರಕ್ರಿಯೆ ನಡೆಯಲಿದೆ.

ಮೂಡುಬಿದಿರೆ ಶ್ರೀ ಮಹಾವೀರ ಕಾಲೇಜಿನ ವಜ್ರಮಹೋತ್ಸವದ ಸಂಸ್ಥಾಪಕರ ದಿನಾಚರಣೆ ಉದ್ಘಾಟನೆ

ನನ್ನ ಅಭಿವೃದ್ಧಿಗೆ ಮೂಲ ಕಾರಣ ಈ ಶಿಕ್ಷಣ ಸಂಸ್ಥೆ: ಅಬ್ದುಲ್ ನಜೀರ್



ಮೂಡುಬಿದಿರೆ: ನಾನಿಂದು ಈ ಎತ್ತರಕ್ಕೇರಲು, ಈ ನೆಲೆಯಲ್ಲಿ ನಿಂತು ಮಾತನಾಡಲು ನನಗೆ ಅವಕಾಶ ಕಲ್ಪಿಸಿದ್ದೇ ಶ್ರೀ ಮಹಾವೀರ ಕಾಲೇಜು. ಇಲ್ಲಿಯ ವಿದ್ಯಾರ್ಥಿಯಾಗಿ ವಿದ್ಯಾಭ್ಯಾಸ ಪಡೆದು ನಂತರ ಒಂದೊಂದೇ ಹಂತಗಳನ್ನು ಏರಿ ಬಂದೆ ಎಂದು ಪ್ರಾಮಾಣಿಕವಾಗಿ ತನ್ನ ಮನದಾಳದ ಮಾತುಗಳನ್ನಾಡಿದರು ಆಂಧ್ರಪ್ರದೇಶದ ರಾಜ್ಯಪಾಲ ಎಸ್. ಅಬ್ದುಲ್ ನಜೀರ್.

ಮೂಡುಬಿದಿರೆ ಶ್ರೀ ಮಹಾವೀರ ಕಾಲೇಜಿನ ವಜ್ರಮಹೋತ್ಸವ ಸಂಭ್ರಮಾಚರಣೆಯ ಅಂಗವಾಗಿ ಶನಿವಾರ ನಡೆದ ಸಂಸ್ಥಾಪಕರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಮಾಂತೆರೆಗ್ಲಾ ನಮಸ್ಕಾರ' ಎಂದು ತುಳು ಭಾಷೆಯಲ್ಲಿ ಭಾಷಣ ಆರಂಭಿಸಿದರು. ಮನುಷ್ಯದ ಅಭಿವೃದ್ಧಿಗೆ ಮೊದಲು ಮನಸ್ಥಿತಿ ಸರಿಯಿರಬೇಕಾಗಿದೆ. ಸರಿಯಾದ ದಿಕ್ಕಿನಲ್ಲಿ ಮೊದಲು ಯೋಚಿಸುವ ಕಾರ್ಯ ಮಾಡಬೇಕು ಎಂದರು.

ಅಧ್ಯಕ್ಷತೆವಹಿಸಿದ್ದ ಮಣಿಪಾಲ ಅಕಾಡೆಮಿ ಆಫ್ ಜನರಲ್ ಎಜುಕೇಶನ್ ಅಧ್ಯಕ್ಷ ಡಾ. ಎಚ್. ಎಸ್. ಬಲ್ಲಾಳ್, ಈ ಶಿಕ್ಷಣ ಸಂಸ್ಥೆಯನ್ನು ಡೀಮ್ಡ್ ಆಗಿ ಪರಿವರ್ತಿಸುವ ಮೊದಲು ಸ್ವಾಯುತ್ತ ಸಂಸ್ಥೆಯನ್ನಾಗಿಸುವ ಎಂದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿದ್ಯಾ ಸಂಸ್ಥೆಗಳ ಉಪಾಧ್ಯಕ್ಷ ಡಿ. ಸುರೇಂದ್ರ ಕುಮಾರ್ ಅವರು ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಸಂದೇಶ ವಾಚಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಸಾಮಾಜಿಕ –ಧಾರ್ಮಿಕ ಚಿಂತಕಿ ಅನಿತಾ ಸುರೇಂದ್ರ ಕುಮಾರ್ , ಶ್ರೀ ಮಹಾವೀರ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಕೆ. ಅಭಯಚಂದ್ರ ಜೈನ್, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ಮಂಗಳೂರಿನ ಉದ್ಯಮಿ ಮನೋಹರ ಎಸ್. ಮೂಡುಬಿದಿರೆ, ಅದಾನಿ ಗ್ರೂಪ್‌ನ ಕಾರ್ಯ ನಿರ್ವಾಹಕ ನಿರ್ದೇಶಕ, ಅಧ್ಯಕ್ಷ ಕಿಶೋರ್ ಆಳ್ವ ಅತಿಥಿಗಳಾಗಿದ್ದರು. ಆಡಳಿತ ಮಂಡಳಿ ಉಪಾಧ್ಯಕ್ಷ ಎಸ್.ಡಿ. ಸಂಪತ್ ಸಾಮ್ರಾಜ್ಯ ಸ್ವಾಗತಿಸಿ, ಆಡಳಿತ ಮಂಡಳಿ ಕಾರ್ಯದರ್ಶಿ ಶ್ರೀ ಮಹಾವೀರ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ರಾಧಾಕೃಷ್ಣ ಶ್ರೀ ಮಹಾವೀರ ಪದವಿ ಕಾಲೇಜಿನ ಪ್ರಾಂಶುಪಾಲೆ ವಿಜಯಲಕ್ಷ್ಮಿ ವಿದ್ಯಾರ್ಥ ಕ್ಷೇಮಪಾಲನಾಧಿಕಾರಿ ಪ್ರೊ. ಹರೀಶ್ , ಚೈತ್ರಾ ಮತ್ತಿತರರಿದ್ದರು.

ಯಶಸ್ಸಿಗೆ ಪ್ರಯತ್ನ ಮುಖ್ಯ

ಕಲಿಕೆ ಎಂಬುದು ಅದ್ಭುತವಾದದ್ದು, ಅದು ತಾಯಿ ಇದ್ದಂತೆ. ಎಲ್ಲ ನೋವುಗಳನ್ನು ಕಷ್ಟಗಳ ಸಹಿಸಿ ಕಲಿಕೆ ಪೂರೈಸುವುದು ಮುಖ್ಯ.. ಪ್ರತಿಯೊಂದು ಯಶಸ್ಸಿಗೂ ಪ್ರಯತ್ನ ಎಂಬುದು ಬುನಾದಿ. ಸೋಲು ಸಾಮಾನ್ಯ, ಸೋಲಿನ ಹಿಂದೆ ಗೆಲುವೆಂಬುದಿರುತ್ತದೆ.

● ಎಸ್. ಅಬ್ದುಲ್ ನಜೀರ್

ಇಂದು ಶ್ರೀ ಹಂದೆ ಶ್ರೀ ದೇವಳ ರಥೋತ್ಸವ: 'ರತ್ನಾವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ

ಕೋಟ: ಅಂತರಾಷ್ಟ್ರೀಯ ಖ್ಯಾತಿಯ ಬೆಂಗಳೂರಿನ ಯಕ್ಷದೇಗುಲ ತಂಡದವರಿಂದ ಕೋಟ ಶ್ರೀ ಹಂದೆ ವಿಷ್ಣುಮೂರ್ತಿ– ಹಂದೆ ವಿನಾಯಕ ದೇವಸ್ಥಾನದ ರಥೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಏ.19ರಂದು ಸಂಜೆ 7.30ಕ್ಕೆ ಕವಿ ಮುದ್ದಣ ವಿರಚಿತ 'ರತ್ನಾವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನ ನಡೆಯಲಿದೆ. ಕಲಾವಿದರಾಗಿ ಭಾಗವತರಾಗಿ ರಾಘವೇಂದ್ರ ಮಯ್ಯ ಹಾಲಾಡಿ, ಲಂಬೋದರ ಹೆಗಡೆ ನಿಟ್ಟೂರು, ಮದ್ದಳೆಯಲ್ಲಿ ರಾಘವೇಂದ್ರ ಹೆಗಡೆ, ಚಂಡೆಯಲ್ಲಿ ಸುದೀಪ ಉರಾಳ ಹಂದಟ್ಟು, ಮುಮ್ಮೇಳದಲ್ಲಿ ಹೆಚ್. ಸುಜಯೀಂದ್ರ ಹಂದೆ, ಉದಯ ಹೆಗಡೆ ಕಡಬಾಳ, ತಮ್ಮಣ್ಣ ಗಾಂವ್ಕರ್, ಸ್ಫೂರ್ತಿ ಭಟ್ ಟಿವಿಎಸ್., ದಿನೇಶ್ ಕನ್ನಾರ್, ರಾಘವೇಂದ್ರ ತುಂಗ ಕೆ., ನರಸಿಂಹ ತುಂಗ ಕೆ., ನಾಗರಾಜ ಪೂಜಾರಿ, ರಾಜು ಪೂಜಾರಿ ಭಾಗವಹಿಸಲಿದ್ದಾರೆ. ಎಂದು ಸಂಯೋಜಕ ಕೋಟ ಸುದರ್ಶನ ಉರಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿ ಪ್ರದಾನ, ಸನ್ಮಾನ

ದಿ. ನರಸಿಂಹ ಸೋಮಯಾಜಿ ಪ್ರಶಸ್ತಿಯನ್ನು ಪ್ರಸಿದ್ಧ ಯಕ್ಷಗಾನ ಭಾಗವತರಾದ ರಾಘವೇಂದ್ರ ಮಯ್ಯ ಹಾಲಾಡಿ ಇವರಿಗೆ ನೀಡಿ ಗೌರವಿಸಲಾಗುವುದು. ಯಕ್ಷಗಾನ ಪ್ರೋತ್ಸಾಹಕರಾದ ಎಚ್. ಸೂರ್ಯನಾರಾಯಣ ಹಂದೆ ಪ್ರಾಯೋಜನೆಯಲ್ಲಿ ಯಕ್ಷಗಾನ ಬಡಗು ತಿಟ್ಟಿನ ಪ್ರಸಿದ್ಧ ಸ್ತ್ರೀ ವೇಷಧಾರಿಗಳಾದ ರಾಜೀವ ಶೆಟ್ಟಿ ಹೊಸಂಗಡಿ, ಸುಬ್ರಹ್ಮಣ್ಯ ಹೆಗಡೆ ಯಲಗುಪ್ಪ ಮತ್ತು ಮಾಧವ ಜೋಗಿ ನಾಗೂರು ಇವರನ್ನು ಸನ್ಮಾನಿಸಲಾಗುವುದು.

ಅಧಿಕಾರಿಗಳಿಂದ ಪರಿಶೀಲನೆ ನಡೆದಿದ್ದರೂ ಪ್ರಯೋಜನವಾಗಿಲ್ಲ | ಬೇಡಿಕೆಗೂ ಸಿಕ್ಕಿಲ್ಲ ಮನ್ನಣೆ

ಕನಸಾಗಿಯೇ ಉಳಿದ ಅಡ್ಕತೊಟ್ಟಿ ಕಿರು ಅಣೆಕಟ್ಟು ನಿರ್ಮಾಣ

ಕಾಸರಗೋಡು: ಜಿಲ್ಲೆಯಲ್ಲಿ ಹರಿಯುತ್ತಿರುವ ಪಯಸ್ವಿನಿ ಹೊಳೆಗೆ ಮುಳ್ಳೇರಿಯ ಆದೂರು ಸಮೀಪದ ಅಡ್ಕತೊಟ್ಟಿಯಲ್ಲಿ ಮಿನಿ ಡ್ಯಾಮ್ (ಕಿರು ಅಣೆಕಟ್ಟು) ನಿರ್ಮಿಸಲಿರುವ ಪ್ರಯತ್ನ ಇನ್ನೂ ಕೈಗೂಡದಿರುವುದು ವಿಪರ್ಯಾಸವಾಗಿದೆ.

ಕಾಸರಗೋಡು ಜಿಲ್ಲೆಯ ಅಡ್ಕತೊಟ್ಟಿ ಪ್ರದೇಶದ ಕೃಷಿಕರು ಹಾಗೂ ಇತರ ನಾಗರಿಕರು ಈ ಭಾಗದಲ್ಲಿ ಅಣೆಕಟ್ಟು ನಿರ್ಮಿಸಬೇಕೆಂದು ಅನೇಕ ವರ್ಷಗಳಿಂದ ಬೇಡಿಕೆ ಮುಂದಿರಿಸಿದ್ದಾರೆ. ಪಯಸ್ವಿನಿಯು ಜಿಲ್ಲೆಯ ಪ್ರಧಾನ ಹೊಳೆಯಾಗಿದ್ದರೂ ಬೇಸಿಗೆ ಕಾಲದಲ್ಲಿ ಕಾರಡ್ಕ ಮತ್ತು ದೇಲಂಪಾಡಿ ಗ್ರಾಮ ಪಂಚಾಯತ್‌ಗಳ ವಿವಿಧ ಪ್ರದೇಶಗಳಲ್ಲಿ ಬಹುತೇಕವಾಗಿ ಬತ್ತುತ್ತಿದ್ದು, ಅಪಾರ ಸಮಸ್ಯೆಗೆ ಕಾರಣವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಕುಡಿಯುವ ನೀರು ಹಾಗೂ ಕೃಷಿ ನೀರಾವರಿ ವ್ಯವಸ್ಥೆಗೆ ಕಾರಡ್ಕ ಗ್ರಾ.ಪಂ. ವ್ಯಾಪ್ತಿಯ ಅಡ್ಕತೊಟ್ಟಿಯಲ್ಲಿ ಅಣೆಕಟ್ಟು ಸ್ಥಾಪಿಸುವುದಕ್ಕಾಗಿ 1970 ರಿಂದಲೇ ಜನರು ಬೇಡಿಕೆ ಮುಂದಿರಿಸುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ



ಕಡೆಯಿಂದ ಪರಿಶೀಲನೆ ನಡೆದಿದ್ದರೂ ನಂತರ ಯೋಜನೆ ಬಗ್ಗೆ ಪ್ರಗತಿ ಕಂಡುಬರದಿರುವುದು ದುರಂತವಾಗಿದೆ.

ಪ್ರಸ್ತುತ ಪಯಸ್ವಿನಿ (ಚಂದ್ರಗಿರಿ) ಹೊಳೆಗೆ ಬಾವಿಕ್ಕೆರೆ ಕುಡಿಯುವ ನೀರು ಯೋಜನೆ ಪ್ರದೇಶದಲ್ಲಿ ಮತ್ತು ಪಾಂಡಿಕಂಡದಲ್ಲಿ ಅಣೆಕಟ್ಟು ನಿರ್ಮಿಸಲಾಗಿದೆ. ನಿರ್ದಿಷ್ಟ ಅಂತರ ಇರಿಸಿಕೊಂಡು ಮಿನಿ ಡ್ಯಾಮ್ ಸ್ಥಾಪಿಸಿದಲ್ಲಿ ಕಾರಡ್ಕ, ಬೆಳ್ಳೂರು, ಕುಂಬ್ಡಾಜೆ, ದೇಲಂಪಾಡಿ ಗ್ರಾಮ ಪಂಚಾಯತ್ ಭಾಗಗಳ ನೀರಿನ ಕೊರತೆ ಸಂಪೂರ್ಣ ಪರಿಹರಿಸಲು ಸಾಧ್ಯವಿದೆ ಎಂದು ನಾಗರಿಕರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಕರ್ನಾಟಕದಿಂದ ಉದ್ಭವಿಸುವ ಪಯಸ್ವಿನಿ ಹೊಳೆಯು ಪಂಜಿಕಲ್ಲಿನಿಂದ ದೇಲಂಪಾಡಿ ಪಂಚಾಯತ್ ವ್ಯಾಪ್ತಿಯ ಮೂಲಕ ಹರಿಯುವುದರೊಂದಿಗೆ ಜಿಲ್ಲೆಯನ್ನು ಪ್ರವೇಶಿಸುತ್ತಿದೆ. ಇದೇ ನದಿಯು ಬಳಿಕ ಚಂದ್ರಗಿರಿ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಆದೂರು ಬಳಿಯ ಅಡ್ಕತೊಟ್ಟಿ ಸಹಿತ ವಿವಿಧ ಪ್ರದೇಶಗಳಲ್ಲಿ ಅಣೆಕಟ್ಟು ನಿರ್ಮಿಸಿದರೆ ಪಯಸ್ವಿನಿ ಹೊಳೆಯು ಬೇಸಿಗೆಯಲ್ಲೂ ಜಲಸಮೃದ್ಧವಾಗಲಿದೆ. ಜೊತೆಗೆ ವಿವಿಧ ಕುಡಿಯುವ ನೀರು ಯೋಜನೆಗಳಿಗೆ ಅಗತ್ಯದ ನೀರು ಲಭಿಸಲಿದೆ.

ಮೂಲೆಗುಂಪಾಗಿದೆ

ಕಳೆದ ಕೆಲವು ವರ್ಷಗಳ ಹಿಂದೆ ಜಿಲ್ಲೆಯ ನೀರಿನ ಕೊರತೆಗೆ ಪರಿಹಾರ ಪಯಸ್ವಿನಿ ಹೊಳೆಗೆ 3 ಕಡೆಗಳಲ್ಲಾಗಿ ಅಣೆಕಟ್ಟುಗಳ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಅದರಲ್ಲಿ ಅಡ್ಕತೊಟ್ಟಿ ಮಿನಿ ಡ್ಯಾಮ್ ನಿರ್ಮಾಣ ಯೋಜನೆ ಸೇರಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಪ್ರಾಥಮಿಕ ಹಂತದ ಮುಂದಿನ ಕಾರ್ಯಚಟುವಟಿಕೆ ಜಾರಿಗೊಳಿಸದೆ ಯೋಜನೆ ಮೂಲೆಗುಂಪಾಗಿದೆ.

ಅಧ್ಯಯನ ನಡೆದಿದ್ದರೂ ಪ್ರಗತಿಯಿಲ್ಲ

ಅಡ್ಕತೊಟ್ಟಿ ಭಾಗಕ್ಕೆ ಹಲವಾರು ಬಾರಿ ಅಧ್ಯಯನ ನಡೆಸಲು ತಜ್ಞ ಅಧಿಕಾರಿಗಳು ಆಗಮಿಸಿದ್ದರು. ಮಾತ್ರವಲ್ಲದೆ ಅಡ್ಕತೊಟ್ಟಿಯಲ್ಲಿ ಡ್ಯಾಮ್ ಕಂ ಬ್ರಿಡ್ಜ್ ನಿರ್ಮಿಸಿದರೆ ಈ ಪ್ರದೇಶದ ಜನರಿಗೆ ಮಳೆಗಾಲದಲ್ಲಿ ವಾಹನ ಸಂಚಾರ ಸುಗಮ ವಾಗಲಿದೆ ಎಂಬುದಾಗಿ ತಿಳಿಸಲಾಗಿತ್ತು. ಅಲ್ಲದೆ ಸಮೀಪದ ಕಡುಮನೆ ಭಾಗದ

ಉಪಯುಕ್ತವಾಗಲಿದೆ

ಅಡ್ಕತೊಟ್ಟಿ ಯೋಜನೆ ಕಾರ್ಯಗತಗೊಂಡಲ್ಲಿ ನೆಲ್ಲಿತಟ್ಟು, ಕಡುಮನೆ ದೇವಾಲಯಗಳಿಗೆ ಆಗಮಿಸುವ ಭಕ್ತರಿಗೆ ದಾರಿ ಸುಲಭವಾಗುತ್ತಿತ್ತು ಎಂಬ ಆಶಾವಾದವಿದೆ. ಅಸ್ತಿತ್ವದಲ್ಲಿರುವ ಅರಣ್ಯ ಮಾರ್ಗ ನವೀಕರಿಸಿದರೆ ಪಾಂಡಿ ಭಾಗಕ್ಕಿರುವ ದೂರ ಕಡಿಮೆಯಾಗಲಿದೆ. ಅಣೆಕಟ್ಟು ನಿರ್ಮಾಣಗೊಂಡರೆ ಅಡ್ಕತೊಟ್ಟಿ, ಕಡುಮನೆ ಪ್ರದೇಶದ ಅಭಿವೃದ್ಧಿಗೂ ಹೆಚ್ಚು ಸಹಾಯಕ ವಾಗಲಿದೆ. ಇನ್ನೊಂದೆಡೆ ಅಡ್ಕತೊಟ್ಟಿಯಲ್ಲಿ ನೂತನ ಮಿನಿ ಡ್ಯಾಮ್ ನಿರ್ಮಾಣ ಸಾಧ್ಯವಾ ದರೆ ಕಾರಡ್ಕ - ದೇಲಂಪಾಡಿ ಗ್ರಾಪಂಗಳಲ್ಲಿ ನೀರಾವರಿ ವ್ಯವಸ್ಥೆಗೆ, ಭೂಗರ್ಭ ಜಲ ರೀಚಾರ್ಜ್‌ಗೆ ಬಹಳಷ್ಟು ಉಪಯುಕ್ತವಾಗಬಹುದು.

ನಿವಾಸಿಗಳಿಗೆ ಸಾರಿಗೆ ಸೌಕರ್ಯ ಒದಗಿಸಿದಂತಾಗುತ್ತಿತ್ತು ಎಂಬ ಸಮಾಲೋಚನೆ ನಡೆದಿತ್ತು. ಆದರೆ ಅಧ್ಯಯನಕ್ಕೆ ಆಗಮಿಸಿದ ಅಧಿಕಾರಿಗಳು ಹಿಂತಿರುಗಿ ಹೋದ ನಂತರ ಯಾವುದೇ ಸಮರ್ಪಕ ಮಾಹಿತಿ ಒದಗಿಸಲಿಲ್ಲ.

ಸುತ್ತಮುತ್ತ

ಇಂದಿನಿಂದ ಕೆದುಮೂಲೆ ದೈವ ಕ್ಷೇತ್ರದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶ

ಮಂಜೇಶ್ವರ: ಬಡಾಜೆ ಗ್ರಾಮದ ಅರಿಬೈಲು ಕೆದುಮೂಲೆ ಶ್ರೀ ಧೂಮಾವತಿ ಮತ್ತು ಕಲ್ಲಾಲ್ದ ಗುಳಿಗ ದೈವ ಕ್ಷೇತ್ರದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಮತ್ತು ಶ್ರೀ ದೈವಗಳ ನೇಮವು ಏ.19ರಿಂದ 21ರ ತನಕ ವಿವಿಧ ವೈದಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.

ಏ.19ರಂದು ಕಡಂಬಾರು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ಹೊರಟು ಶ್ರೀ ಕ್ಷೇತ್ರಕ್ಕೆ ತಲುಪಲಿದೆ. ಏ.20ರಂದು ಬೆಳಿಗ್ಗೆ 10ರಿಂದ 10.32ರ ಒಳಗೆ ನಡೆಯುವ ಮಿಥುನ ಲಗ್ನ ಶುಭ ಮುಹೂರ್ತದಲ್ಲಿ ಶ್ರೀ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ನಡೆಯಲಿದೆ. ಮಧ್ಯಾಹ್ನ 12ಗಂಟೆಗೆ ಸಭಾ ಕಾರ್ಯಕ್ರಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ರಾತ್ರಿ 7.30ರಿಂದ ನೃತ್ಯ ವೈವಿಧ್ಯ ಮತ್ತು 8.30ಕ್ಕೆ ಕಲಾಸಂಗಮ ಕುಡ್ಲ ಇವರಿಂದ ಶಿವದೂತೆ ಗುಳಿಗೆ ತುಳು ನಾಟಕ ಪ್ರದರ್ಶನಗೊಳ್ಳಲಿದೆ. ಏ.21ರಂದು ಬೆಳಗ್ಗೆ 9ರಿಂದ ಶ್ರೀ ದೈವಗಳಿಗೆ ನೇಮ ನೆರವೇರಲಿದೆ.

ಇಂದು ಸಂಪೂರ್ಣ ಸಾಕ್ಷರತೆ ಘೋಷಣೆಯ 35ನೇ ವಾರ್ಷಿಕೋತ್ಸವ

ಕಾಸರಗೋಡು: ಕೇರಳ ರಾಜ್ಯ ಸಂಪೂರ್ಣ ಸಾಕ್ಷರತೆ ಸಾಧಿಸಿದ ಘೋಷಣೆಯ 35ನೇ ವಾರ್ಷಿಕೋತ್ಸವವನ್ನು ಕಾಸರಗೋಡು ಜಿಲ್ಲಾ ಸಾಕ್ಷರತಾ ಮಿಷನ್ ಆಶ್ರಯದಲ್ಲಿ ಏ.19 ರಂದು ಬೆಳಗ್ಗೆ 10.30ಕ್ಕೆ ಹೊಸದುರ್ಗ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ. ಸಾಕ್ಷರತಾ ಕಾರ್ಯಕರ್ತರು, ವಿವಿಧ ಅಧಿಕಾರಿಗಳು ಮತ್ತು ಕಲಿಕಾ ವಿಭಾಗದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ತಿಂಗಳುಗಳ ಕಾಲ ನಡೆದ ಜನಪ್ರಿಯ ಅಭಿಯಾನದ ಮೂಲಕ ಕೇರಳ ರಾಜ್ಯ ಸಾಧಿಸಿದ ವಿಶಿಷ್ಟ ಸಾಧನೆಯ ಐತಿಹಾಸಿಕ ಘೋಷಣೆಯನ್ನು 1991ನೇ ಏಪ್ರಿಲ್ 18 ರಂದು ಕೋಝಿಕ್ಕೋಡ್‌ನ ಮಣಂಚಿರಾ ಮೈದಾನದಲ್ಲಿ ನಿರ್ವಹಿಸಲಾಗಿತ್ತು. ಸಂಪೂರ್ಣ ಸಾಕ್ಷರತೆ ಘೋಷಣೆಯನ್ನು ಮಲಪ್ಪುರಂ ಜಿಲ್ಲೆಯ ಕಾವನೂರಿನ ಚೆಲಕ್ಕೋಡನ್ ಆಯಿಶುಮ್ಮ ಎಂಬ ಮಹಿಳೆ ನೆರವೇರಿಸಿದ್ದರು. ಆಗ ಅವರು ಹೊಸದಾಗಿ ಸಾಕ್ಷರರಾಗಿದ್ದರು.

ಕುಡಿಯುವ ನೀರು ಪೂರೈಕೆ ನಿಯಂತ್ರಣ

ಕಾಸರಗೋಡು: ವಿದ್ಯುತ್ ಪೂರೈಕೆಯಲ್ಲಿ ವೋಲ್ಟೇಜ್ ಏರಿಳಿತಗಳಿಂದಾಗಿ ಕಾಸರಗೋಡು ನಗರಸಭೆ, ಮಧೂರು, ಮೊಗ್ರಾಲ್ ಪುತ್ತೂರು, ಮುಳಿಯಾರು, ಚೆಂಗಳ ಗ್ರಾ.ಪಂ.ಗಳಲ್ಲಿ ಏ.19, 20 , 21 ರಂದು ಕುಡಿಯುವ ನೀರು ಸರಬರಾಜಿ ನಲ್ಲಿ ಭಾಗಶಃ ನಿಯಂತ್ರಣ ಹೇರಲಾಗುವುದು ಎಂದು ಕೇರಳ ಜಲ ಪ್ರಾಧಿಕಾರದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾನಸಿಕ ಆರೋಗ್ಯ ತಜ್ಞರಿಂದ ಉಚಿತ ಸೇವೆ

ಕಾಸರಗೋಡು: ಮಾನಸಿಕ ಆರೋಗ್ಯ ಚಿಕಿತ್ಸೆ ಸಕಾಲಕ್ಕೆ ಪಡೆಯಬೇಕಾದ ಅಗತ್ಯತೆ , ಮಾನಸಿಕ ಆರೋಗ್ಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಹಿಂಜರಿಕೆ ಅನುಭವಿಸುತ್ತಿರುವವರಿಗೆ ಕಾಸರಗೋಡು ವಿದ್ಯಾನಗರದ ಸಿವಿಲ್ ಸ್ಟೇಷನ್‌ನಲ್ಲಿರುವ ಮಹಿಳಾ ರಕ್ಷಣಾ ಕಚೇರಿಯಲ್ಲಿ ತಿಂಗಳಿಗೊಮ್ಮೆ ಮಾನಸಿಕ ಆರೋಗ್ಯ ತಜ್ಞರು ಲಭ್ಯವಿರುತ್ತಾರೆ. ಈ ಸೇವೆ ಉಚಿತವಾಗಿದ್ದು ಏ.21 ರಂದು ಲಭ್ಯವಿರುವ ಈ ಸೇವೆ ಬಯಸುವವರು ಏ.20 ರೊಳಗೆ 8281999065 ಅಥವಾ 9847000302 ಮೊ. ನಂ.ಗೆ ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬೇಕು.

ಶೃಂಗೇರಿ ಜಗದ್ಗುರುಗಳು ಎಡನೀರು ಮಠಕ್ಕೆ ಭೇಟಿ: ಏ.21ರಂದು ಮಹಾಸಭೆ

ಕಾಸರಗೋಡು: ಎಡನೀರು ಮಠದಲ್ಲಿ ಶ್ರೀ ಶಂಕರಾಚಾರ್ಯರ ಪೂರ್ಣ ಪ್ರತಿಮೆ ಸ್ಥಾಪನೆಯಾಗಲಿದ್ದು, ಈ ಕಾರ್ಯಕ್ರಮದ ವಿಧಿ ವಿಧಾನಗಳು ಮೇ 11ರಂದು ಜರಗಲಿವೆ. ಈ ಹಿನ್ನೆಲೆಯಲ್ಲಿ ಮೇ 10ರಂದು ಶೃಂಗೇರಿ ಜಗದ್ಗುರುಗಳು ಎಡನೀರು ಮಠಕ್ಕೆ ಆಗಮಿಸಲಿದ್ದು, ಈ ಸಂದರ್ಭ ಹೋಮ ಹವನಾದಿ ಕಾರ್ಯಕ್ರಮಗಳು ನಡೆಯಲಿವೆ. ಈ ಎಲ್ಲಾ ಕಾರ್ಯಕ್ರಮಗಳ ಯಶಸ್ವಿಗೆ ಸ್ಥಳೀಯರ , ಎಡನೀರು ಮಠದ ಭಕ್ತರ ಮಹಾಸಭೆಯು ಏ.21ರಂದು ಸಂಜೆ 6ಗಂಟೆಗೆ ಎಡನೀರು ಮಠದಲ್ಲಿ ಜರಗಲಿದೆ ಎಂದು ಸಂಬಂಧಪಟ್ಟವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.1: ಶಾಲಾ ಪ್ರವೇಶೋತ್ಸವ

ಕಾಸರಗೋಡು: 2026–27ನೇ ಶೈಕ್ಷಣಿಕ ವರ್ಷದ ಶಾಲಾ ಪ್ರವೇಶೋತ್ಸವವು ಜೂನ್ 1ರಂದು ಸಂಭ್ರಮ ಸಡಗರದಿಂದ ಜರಗಲಿದೆ. 9ನೇ ತರಗತಿ ತನಕದ ವಿದ್ಯಾರ್ಥಿಗಳ ಭಡ್ತಿ ಪಟ್ಟಿಯನ್ನು ಮೇ 2ರಂದು ಪ್ರಕಟಿಸಲು ನಿರ್ಧರಿಸಲಾಗಿದೆ. ಒಂದನೇ ತರಗತಿಗಾಗಿರುವ ಪ್ರವೇಶ ಪ್ರಕ್ರಿಯೆಗಳು ಮೇ 22ರಂದು ಆರಂಭಗೊಳ್ಳಲಿವೆ ಎಂದು ಶಿಕ್ಷಣ ಇಲಾಖೆ ತಿಳಿಸಿದೆ. ಬೇಸಿಗೆ ಕಾಲದ ರಜೆಯಲ್ಲಿ ಇತರ ಯಾವುದೇ ರೀತಿಯ ತರಗತಿಗಳನ್ನು ನಡೆಸಬಾರದೆಂದು ಶಿಕ್ಷಣ ಇಲಾಖೆಯು ಸ್ಪಷ್ಟ ಆದೇಶ ನೀಡಿದೆ.

ಅಂಬೇಡ್ಕರ್ ಜಯಂತಿ

ಕಾಸರಗೋಡು: ಎಸ್‌ಸಿ – ಎಸ್‌ಟಿ ಕಾನ್ಫಡರೇಶನ್‌ನ ಆಶ್ರಯದಲ್ಲಿ ವಿದ್ಯಾನಗರದಲ್ಲಿ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಚೆಂಗಳ ಗ್ರಾ.ಪಂ.ಅಧ್ಯಕ್ಷ ವಸಂತ ಅಜಕ್ಕೋಡು ಕಾರ್ಯಕ್ರಮ ಉದ್ಘಾಟಿಸಿದರು. ಸಂಘಟನೆ ಜಿಲ್ಲಾಧ್ಯಕ್ಷ ಐ.ಲಕ್ಷ್ಮಣ ಪೆರಿಯಡ್ಕ ಅಧ್ಯಕ್ಷತೆ ವಹಿಸಿದ್ದರು. ರಾಜ್ಯಾಧ್ಯಕ್ಷ ಬಾಬು ನೀಲೇಶ್ವರ ಮುಖ್ಯ ಭಾಷಣ ಮಾಡಿದರು. ಅತ್ಯುತ್ತಮ ಅಧ್ಯಾಪಕರಿಗಿರುವ ಪುರಸ್ಕಾರ ಪಡೆದ ಡಾ.ಮಾಧವ ಕಾರಡ್ಕ ಅವರನ್ನು ಗೌರವಿಸಲಾಯಿತು. ಪೊನ್ನಪ್ಪ ಅಮ್ಮಂಗೋಡು, ರಾಘವನ್ ಉದುಮ, ಸಿ.ಕೆ.ಗಣೇಶ್, ಡಾ.ಮಾಧವ ಕಾರಡ್ಕ ಮಾತನಾಡಿದರು.

ದೇವಂದಪಡ್ಪು ಶ್ರೀ ದೇವಳದಲ್ಲಿ ವಾರ್ಷಿಕ ಜಾತ್ರೆ: ಆಮಂತ್ರಣ ಪತ್ರಿಕೆಯ ಬಿಡುಗಡೆ



ಮಂಜೇಶ್ವರ: ಉಡುಪಿ ಪಲಿಮಾರು ಮಠಾಧೀಶ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರಿಂದ ಪುನರ್ ಪ್ರತಿಷ್ಠಾಪಿಸಲ್ಪಟ್ಟ ವರ್ಕಾಡಿ ಸಮೀಪದ ದೇವಂದಪಡ್ಪು ಶ್ರೀ ಮಹಾವಿಷ್ಣು ದೇವಳದಲ್ಲಿ ಪಲಿಮಾರು ಮಠದ ಕಿರಿಯ ಸ್ವಾಮೀಜಿ ಶ್ರೀ ವಿದ್ಯಾರಾಜೇಶ್ವರ ತೀರ್ಥ ಶ್ರೀಪಾದಂಗಳವರಉಪಸ್ಥಿತಿಯೊಂದಿಗೆ, ಬ್ರಹ್ಮಶ್ರೀ ಶಿಬರೂರು ವೇದವ್ಯಾಸ ತಂತ್ರಿ ಮಾರ್ಗದರ್ಶನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಮೇ 2ರಂದು ಜರಗಲಿದ್ದು, ಈ ಜಾತ್ರಾ ಮಹೋತ್ಸವ ಆಮಂತ್ರಣ ಪತ್ರಿಕೆಯನ್ನು ಶ್ರೀ ಕ್ಷೇತ್ರದ ಅರ್ಚಕ ರಾಘವೇಂದ್ರ ಆಚಾರ್ಯ ಬಿಡುಗಡೆಗೊಳಿಸಿ ಶುಭಕೋರಿದರು.

ಗಡಿ ಪ್ರಧಾನ ನೆತ್ತಿಲ ಬಾಳಿಕೆ ದೇವು ಶೆಟ್ಟಿ, ಶ್ರೀ ಕ್ಷೇತ್ರದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕರುಣಾಕರ ಶೆಟ್ಟಿ ಮೊರ್ಲ, ಕಾರ್ಯದರ್ಶಿ ಮೋಹನದಾಸ್ ಶೆಟ್ಟಿ ನೆತ್ತಿಲ, ಸದಸ್ಯರಾದ ಪ್ರೇಮಾನಂದ ರೈ ನೆತ್ತಿಲ ಕೋಡಿ, ಮಾಧವ ಪೂಜಾರಿ ಕುದುಕೋರಿ, ರವಿ ಮುಡಿಮಾರು, ಕೇಶವ ಕಜೆ ಕಿನ್ಯ, ಶಾಂಭ ನಾಯ್ಗ ಕೆದುಂಬಾಡಿ ಮತ್ತಿತರರಿದ್ದರು.

ವಾರ್ಷಿಕ ಜಾತ್ರಾ ಮಹೋತ್ಸವದ ಪ್ರಯುಕ್ತ ಶ್ರೀ ಕ್ಷೇತ್ರದಲ್ಲಿ ಮೇ 2ರಂದು ಬೆಳಿಗ್ಗೆ 8 ಗಂಟೆಗೆ ಸಾಮೂಹಿಕ ಪ್ರಾರ್ಥನೆ, ಗಣಪತಿ ಯಾಗ ನಂತರ ಮನು ಸೂಕ್ತ ಹೋಮ, ವಾಯುಸ್ತುತಿ ಪುರಶ್ಚರಣ ಹೋಮ, ಪ್ರಧಾನ ಹೋಮ, ಕಲಶಾಭಿಷೇಕ, ಶ್ರೀ ನಾಗದೇವರ ಮತ್ತು ರಕ್ತೇಶ್ವರಿ ಸನ್ನಿಧಿಯಲ್ಲಿ ಕಳಸ ಪೂಜೆ, ಕಲಶಾಭಿಷೇಕ, ಪಂಚಾಮೃತ ಅಭಿಷೇಕ, ತಂಬಿಲ ಸೇವೆ ಮತ್ತು ಪ್ರಸನ್ನ ಪೂಜೆ ಬಳಿಕ ಮಧ್ಯಾಹ್ನ ಮಹಾಪೂಜೆ, ದೇವರ ಬಲಿ, ಪ್ರಸಾದ ವಿತರಣೆ, ಸ್ವಾಮೀಜಿಯವರಿಂದ ಆಶೀರ್ವಚನ, ಅನ್ನಸಂತರ್ಪಣೆ, ಸಂಜೆ 6 ಗಂಟೆಗೆ ಹೂವಿನ ಪೂಜೆ, ರಂಗ ಪೂಜೆ, ಶ್ರೀ ದೇವರ ಉತ್ಸವ ಬಲಿ, ರಾಜಾಂಗಣ ಪ್ರಸಾದ ವಿತರಣೆ ನೆರವೇರಲಿದೆ.

ಮಂಜೇಶ್ವರ ಸಮುದ್ರ ಕರಾವಳಿಯಲ್ಲಿ ಮಾಲಿನ್ಯ ರಾಶಿ: ತೆರವುಗೊಳಿಸಲು ಆಗ್ರಹ



ಮಂಜೇಶ್ವರ: ಮಂಜೇಶ್ವರ ಸಮುದ್ರ ಕರಾವಳಿ ಪ್ರದೇಶದಲ್ಲಿ ಮಾಲಿನ್ಯ ರಾಶಿ ತುಂಬಿ ತುಳುಕುತ್ತಿದ್ದರೂ ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರಲ್ಲಿ ಭಾರೀ ಆಕ್ರೋಶಕ್ಕೆ ಕಾರಣವಾಗಿದೆ. ಮಾತ್ರವಲ್ಲದೆ ಈ ಮಾಲಿನ್ಯ ರಾಶಿಯಿಂದಾಗಿ ಜನರಿಗೆ ಅಪಾರ ಸಮಸ್ಯೆ ಎದುರಾಗಿದೆ.

ಮಂಜೇಶ್ವರ ಸಮುದ್ರ ಕಿನಾರೆಯಲ್ಲಿರುವ ಭಾರೀ ಪ್ರಮಾಣದ ಈ ತ್ಯಾಜ್ಯ ರಾಶಿಗೆ ಬೀದಿ ನಾಯಿಗಳು ಮುತ್ತಿ ಎಲ್ಲೆಂದರಲ್ಲಿ ಕಸ ಕಡ್ಡಿಗಳನ್ನು ಹರಡುತ್ತಿವೆ. ಈ ನಿಟ್ಟಿನಲ್ಲಿ ಮಕ್ಕಳು ಸಹಿತ ಸಾರ್ವಜನಿಕರಿಗೆ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಇನ್ನೊಂದೆಡೆ ಈ ಭಾಗದಲ್ಲಿ ಇರಿಸಲಾದ ಪೆಟ್ಟಿಗೆಯಲ್ಲಿ ಕುಡಿಯುವ ನೀರು ಬಾಟಲಿಗಳನ್ನು ಮಾತ್ರವೇ ಹಾಕಬೇಕಾಗಿದ್ದು, ಆದರೆ ಇದರಲ್ಲಿ ಇತರ ತ್ಯಾಜ್ಯವನ್ನು ಹಾಕಿ ಪರಿಸರವನ್ನು ಹಾಳು ಮಾಡುತ್ತಿರುವ ತಪ್ಪಿತಸ್ಥರ ವಿರುದ್ಧ ಅಧಿಕಾರಿಗಳು ಕಠಿಣ ಕ್ರಮಕ್ಕೆ ಮುಂದಾಗಬೇಕೆಂದು ಆಗ್ರಹಿಸಲಾಗಿದೆ. ಮಾತ್ರವಲ್ಲದೆ ತ್ಯಾಜ್ಯ ತೆರವುಗೊಳಿಸಿ ಪರಿಸರವನ್ನು ಸಂಪೂರ್ಣವಾಗಿ ಶುಚಿಗೊಳಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಪ್ರವಾಸಿಗರಿಗೆ ಸಂಕಷ್ಟ

ಈ ಪ್ರದೇಶದಲ್ಲಿ ತಂಪು ಪಾನೀಯ ಸಹಿತ ವಿವಿಧ ಬಾಟಲಿಗಳನ್ನು ಹಾಕಲು ಪೆಟ್ಟಿಗೆ ಇರಿಸಲಾ ಗಿದೆ ಆದರೆ ಅದರಲ್ಲಿ ಇತರ ತ್ಯಾಜ್ಯಗಳನ್ನು ಹಾಕಿ ಪರಿಸರ ಮಲಿನೀಕರಣ ಗೊಂಡಿರುವುದಾಗಿ ದೂರಲಾಗಿದೆ. ಈ ಹಿನ್ನೆಲೆಯಲ್ಲಿ ಕಡಲ ತೀರಕ್ಕೆ ಆಗಮಿಸುವ ಪ್ರವಾಸಿಗರು ಹಾಗೂ ಊರವರು ಈ ತ್ಯಾಜ್ಯದಿಂದ ಆರೋಗ್ಯ ಸೇರಿದಂತೆ ವಿವಿಧ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ.



ಕಾಸರಗೋಡು ನುಳ್ಳಿಪ್ಪಾಡಿ ಶ್ರೀ ಅಯ್ಯಪ್ಪಸ್ವಾಮಿ ಕ್ಷೇತ್ರದಲ್ಲಿ ನಡೆಯುವ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಶನಿವಾರ ಬೆಳಗ್ಗೆ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದಿಂದ ಪ್ರಾರ್ಥನೆಗೈದು ಕರಂದಕ್ಕಾಡು ಶ್ರೀ ವೀರಹನುಮಾನ್ ಮಂದಿರದ ಪರಿಸರದಿಂದ ಹಸಿರುವಾಣಿ ಹೊರಕಾಣಿಕೆ ಮೆರವಣಿಗೆ ಕುಣಿತ ಭಜನೆ, ಮುತ್ತುಕೊಡೆ, ವಾದ್ಯಘೋಷಗಳೊಂದಿಗೆ ಹೊಸ ಬಸ್ ನಿಲ್ದಾಣ ಮೂಲಕ ಶ್ರೀ ಕ್ಷೇತ್ರಕ್ಕೆ ಆಗಮಿಸಿತು.



ಬದಿಯಡ್ಕ ಬಳಿಯ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಏ.17ರಿಂದ ಆರಂಭವಾಗಿದ್ದು, ಏ.28ರ ವರೆಗೆ ಜರಗಲಿರುವ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ 'ಹೊಸ ದಿಗಂತ' ಪತ್ರಿಕೆ ಶನಿವಾರ ಪ್ರಕಟಿಸಿದ ವಿಶೇಷ ಪುಟವನ್ನು ಶ್ರೀ ಕ್ಷೇತ್ರದಲ್ಲಿ ವಿವಿಧ ವಲಯ ಪ್ರಮುಖರು ಬಿಡುಗಡೆಗೊಳಿಸಿದರು.

ಐಲ ಶ್ರೀ ದುರ್ಗಾಪರಮೇಶ್ವರೀ ದೇವಳ: ಸಾಂಸ್ಕೃತಿಕ ಕಲಾ ವೈಭವ ಕಾರ್ಯಕ್ರಮ



ಮಂಜೇಶ್ವರ: ಉಪ್ಪಳ ಐಲ ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ವಾರ್ಷಿಕ ಜಾತ್ರೆ ಹಲವಾರು ವೈದಿಕ, ಧಾರ್ಮಿಕ- ಸಾಂಸ್ಕೃತಿಕ ಕಾರ್ಯಕ್ರಮ ದ ಜರಗಿತು. ಈ ಉತ್ಸವದ ಪ್ರಯುಕ್ತ ಹಮ್ಮಿಕೊಳ್ಳಲಾದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆ ವತಿಯಿಂದ ಸಾಂಸ್ಕೃತಿಕ ಕಲಾ ವೈಭವ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗುರುರಾಜ್ ಕಾಸರಗೋಡು ಅವರ ಸಂಯೋಜನೆ ಹಾಗೂ ನಿರೂಪಣೆಯೊಂದಿಗೆ ಜರಗಿದ ಕಾರ್ಯಕ್ರಮದಲ್ಲಿ ಅಪ್ರತಿಮ ಕಲಾವಿದರು ವೈವಿಧ್ಯಮಯ ಕಲಾ ಪ್ರಸ್ತುತಿಗೈದು ಜನಮನ ರಂಜಿಸಿದರು.

ವೇದಿಕೆಯಲ್ಲಿದ್ದ ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ನಾರಾಯಣ ಹೆಗ್ಡೆ ಕೋಡಿಬೈಲು, ಸೇವಾ ಸಮಿತಿ ಅಧ್ಯಕ್ಷ ಸುಧೀಶ್ಚಂದ್ರ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಎಂ. ವಿಜಯಕುಮಾರ್ ರೈ, ಮೊಕ್ತೇಸರ ಮಂಡಳಿ ಸದಸ್ಯ ಕೃಷ್ಣಕುಮಾರ್ ಐಲ, ಪುರುಷೋತ್ತಮ, ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆ ಗೌರವಾಧ್ಯಕ್ಷ ಗಣೇಶ್ ಪ್ರಸಾದ್ ಆಳ್ವ, ಕೆ.ಜಯಪ್ರಭಾ, ಅನ್ನಪೂರ್ಣ ಶೆಟ್ಟಿ, ಸಂಸ್ಥೆ ಜೊತೆ ಕಾರ್ಯದರ್ಶಿ ವರ್ಷಾ ಶೆಟ್ಟಿ ಗಣ್ಯರ ಸಮ್ಮುಖದಲ್ಲಿ ಸಂಸ್ಥೆಯ ಕಲಾ ಪ್ರತಿಭೆಗಳನ್ನು ಕಲಾ ಸೌರಭ – 2026 ಪ್ರಶಸ್ತಿ ಪುರಸ್ಕಾರ ನೀಡಿ ಗೌರವಿಸಲಾಯಿತು.

ಅಪ್ರತಿಮ ಕಲಾವಿದೆ ವರ್ಷಾ ಶೆಟ್ಟಿ ಅವರಿಗೆ ಸಂಸ್ಥೆಯ ನೂರು ವೇದಿಕೆಗಳನ್ನು ಪೂರೈಸಿದ ಪ್ರಯುಕ್ತ ಕಲಾ ಸಾರಥಿ – 2026 ಗೌರವ ಸನ್ಮಾನ ನೀಡಿ ಪುರಸ್ಕರಿಸಲಾಯಿತು. ಸಂಸ್ಥೆಯ ಎಲ್ಲಾ 50 ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಉನ್ನತಿಯಲ್ಲಿ ಪಾಲ್ಗೊಂಡು ಸಹಕರಿಸಿದ ವರ್ಷಾ ಶೆಟ್ಟಿ ಅವರನ್ನು 50ರ ಸಂಭ್ರಮ ವಿಶೇಷ ಸನ್ಮಾನಿಸಿ ಗೌರವಿಸಲಾಯಿತು. ಭಾಗವಹಿಸಿದ ಕಲಾವಿದರಿಗೆ ಸಂಸ್ಥೆಯ ವತಿಯಿಂದ ಗೌರವ ಸ್ಮರಣಿಕೆ ನೀಡಲಾಯಿತು.

ಕೇರಳ ಕೃಷಿ ವಿವಿ ನೇತೃತ್ವದಲ್ಲಿ ತ್ರಿಶೂರು ಪೂರಂ ಪ್ರದರ್ಶನ ಮಂಟಪ ಉದ್ಘಾಟನೆ



ಕಾಸರಗೋಡು: ಕೇರಳ ಕೃಷಿ ವಿವಿ ನೇತೃತ್ವದಲ್ಲಿ ತ್ರಿಶೂರು ಪೂರಂ ಪ್ರದರ್ಶನ ಮಂಟಪವನ್ನು ವಿಶ್ವವಿದ್ಯಾಲಯದ ಕುಲಸಚಿವ ಡಾ.ಎ.ಜಾಕಿರ್ ಹುಸೇನ್ ಅವರು ಶನಿವಾರ ಉದ್ಘಾಟಿಸಿ ಶುಭಕೋರಿದರು.

ವಿವಿ ಜ್ಞಾನ ಪ್ರಸರಣ ವಿಭಾಗದ ಮುಖ್ಯಸ್ಥ ಡಾ.ಬಿನು ಪಿ.ಬೋನಿ, ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಕೆ.ಎನ್.ಅನಿತ್, ವಿದ್ಯಾರ್ಥಿ ಕಲ್ಯಾಣ ವಿಭಾಗದ ಮುಖ್ಯಸ್ಥೆ ಡಾ.ಲತಾ ಎ., ಅಧ್ಯಾಪಕರ ಡೀನ್ (ಅರಣ್ಯ ವಿಭಾಗ) ಡಾ.ಗೋಪಕುಮಾರ್ ಎಸ್., ಸಾರ್ವಜನಿಕಸಂಪರ್ಕಅಧಿಕಾರಿಡಾ.ಸುಲಜಾ ಒ.ಆರ್., ತ್ರಿಶೂರು ಪೂರಂ ಪ್ರದರ್ಶನ ಸಮಿತಿ ಅಧ್ಯಕ್ಷರು, ಕಾರ್ಯದರ್ಶಿ ಹಾಗೂ ಕೃಷಿ ವಿವಿ ಹಿರಿಯ ಅಧಿಕಾರಿಗಳು , ಕಾಸರಗೋಡು ಜಿಲ್ಲೆ ಸಹಿತ ವಿವಿಧ ಜಿಲ್ಲೆಗಳ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

ವಿವಿ ಅಭಿವೃದ್ಧಿಪಡಿಸಿದ ಬೀಜಗಳು, ಸಸಿಗಳು, ಔಷಧೀಯ ಸಸ್ಯಗಳು, ಅಂಗಾಂಶ ಕೃಷಿ ಮಾಡಿ ಬೆಳೆಸಿದ ಬಾಳೆಹಣ್ಣುಗಳು, ಮೌಲ್ಯ ವರ್ಧಿತ ಉತ್ಪನ್ನಗಳು, ವಿವಿ ಪ್ರಕಟಣೆಗಳು ಇತ್ಯಾದಿಗಳು ಮಾರಾಟಕ್ಕೆ ಸಿದ್ಧವಾಗಿವೆ. ಇದರ ಜೊತೆಗೆ ವಿವಿ ಅಭಿವೃದ್ಧಿಪಡಿಸಿದ ಹೊಸ ತಂತ್ರಜ್ಞಾನ ಪ್ರದರ್ಶನ ಏರ್ಪಡಿಸಲಾಗಿದೆ.

ಕೃಷಿ ವಿವಿ ಅಧೀನದಲ್ಲಿರುವ ಸಂವಹನ ಕೇಂದ್ರ ಮಣ್ಣುತ್ತಿ, ಕೃಷಿ ತಂತ್ರಜ್ಞಾನ ಕೇಂದ್ರ ಮಣ್ಣುತ್ತಿ, ಕೃಷಿ ಸಂಶೋಧನಾ ಕೇಂದ್ರ, ಮದಕಥರದಲ್ಲಿರುವ ಗೋಡಂಬಿ ಸಂಶೋಧನಾ ಕೇಂದ್ರ, ಕಣ್ಣಾರದ ಲ್ಲಿರುವ ಬಾಳೆ ಸಂಶೋಧನಾ ಕೇಂದ್ರ, ವೆಲ್ಲನಿಕ್ಕರದಲ್ಲಿರುವ ಖಗೋಳಶಾಸ್ತ್ರ ಕಾಲೇಜು, ಔಷಧೀಯ ಸಸ್ಯಗಳ ಕುರಿತು ಎಐಸಿಆರ್‌ಪಿ, ಕೋಕೋ ಸಂಶೋಧನಾ ಕೇಂದ್ರ, ಕೃಷಿ ವ್ಯವಹಾರ ಇನ್ಕ್ಯುಬೇಟರ್, ಪಿಪಿಎನ್ ಎಂಯು, ಸಿಪಿಬಿಎಂಬಿ ಮತ್ತು ಪಟ್ಟಾಂಬಿ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ ದಂತಹ ಸಂಸ್ಥೆಗಳು ಸ್ಥಾಪಿಸಿರುವ ಮಳಿಗೆಗಳು ಈ ಮಂಟಪದಲ್ಲಿವೆ.

ಪೆರಡಾಲ ಕ್ಷೇತ್ರ: ರಾಜಗೋಪುರ, ರಾಜಾಂಗಣ ಮೇಲ್ಛಾವಣಿ, ಭೋಜನ ಶಾಲೆ ಲೋಕಾರ್ಪಣೆ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಳ ಬ್ರಹ್ಮಕಲಶದ ಸಂದರ್ಭ ನವೀಕರಿಸಿದ ರಾಜಗೋಪುರ, ರಾಜಾಂಗಣ ಮೇಲ್ಛಾವಣಿ , ನೂತನ ಭೋಜನ ಶಾಲೆ ಲೋಕಾರ್ಪಣೆ ಸಮಾರಂಭ ಶನಿವಾರ ವಿವಿಧ ವಿಧಿ ವಿಧಾನಗಳೊಂದಿಗೆ ನಡೆಯಿತು.

ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ದೀಪ ಬೆಳಗಿಸಿ ನಾಮಫಲಕ ಅನಾವರಣಗೊಳಿಸಿ ಅನುಗ್ರಹಿಸಿದರು.

ವಿಶ್ರಾಂತ ಪ್ರಾಂಶುಪಾಲ ಡಾ. ಪಾದೆಕಲ್ಲು ವಿಷ್ಣು ಭಟ್, ಆಡಳಿತ ಮೊಕ್ತೇಸರ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಪ್ರಮುಖರಾದ ಜಯದೇವ ಖಂಡಿಗೆ, ನಿರಂಜನ ರೈ ಪೆರಡಾಲ, ಜಗನ್ನಾಥ ರೈ, ಸೀತಾರಾಮ ನವಕಾನ, ಕೃಷ್ಣ ಬದಿಯಡ್ಕ, ಗಣೇಶಕೃಷ್ಣ ಅಳಕ್ಕೆ, ಭಾಸ್ಕರ ಪಂಜಿತ್ತಡ್ಕ, ಕೃಷ್ಣರಾಜ ಬಲ್ಲಾಳ್ ಕೊಡ್ಯಮೆ ಅರಮನೆ, ಕೃಷ್ಣಮೂರ್ತಿ ಪುದುಕೋಳಿ ಅಲ್ಲದೆ ವಿವಿಧ ಸಮಿತಿಗಳ ಪ್ರತಿನಿಧಿಗಳಿದ್ದರು.



ಬದಿಯಡ್ಕ ಸಮೀಪದ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶದ ಸಂದರ್ಭ ನಡೆಯುವ ಭಜನಾ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರದ ಅರ್ಚಕ ಶಿವರಾಮ ಭಟ್ ಉದ್ಘಾಟಿಸಿ ಶುಭಹಾರೈಸಿದರು.

ಪೆರಡಾಲ ಶ್ರೀ ಕ್ಷೇತ್ರದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಸಂಭ್ರಮ

ಕ್ಷೇತ್ರಾಚಾರ್ಯರಾದ ಕುಂಟಾರು ರವೀಶ ತಂತ್ರಿಗೆ ಪೂರ್ಣಕುಂಭ ಸ್ವಾಗತ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಳದಲ್ಲಿ ಹಮ್ಮಿಕೊಳ್ಳಲಾದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವಕ್ಕೆ ಕ್ಷೇತ್ರಾಚಾರ್ಯ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರನ್ನು ಶ್ರೀ ಕ್ಷೇತ್ರದ ಬ್ರಹ್ಮಕಲಶೋತ್ಸವ ಸಮಿತಿಯ ವತಿಯಿಂದ ಪೂರ್ಣಕುಂಭಸ್ವಾಗತನೀಡಿವಾದ್ಯಘೋಷಗಳೊಂದಿಗೆ ಬರಮಾಡಿಕೊಳ್ಳಲಾಯಿತು.

ಶನಿವಾರ ಬೆಳಿಗ್ಗೆ ಆಗಮಿಸಿದ ತಂತ್ರಿಯವರನ್ನು ಆಡಳಿತ ಮೊಕ್ತೇಸರ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಬ್ರಹ್ಮಕಲಶ ಸಮಿತಿ ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು ಪುಷ್ಪಮಾಲೆ ಹಾಕಿ ಸ್ವಾಗತಿಸಿದರು.

ಶ್ರೀ ಕ್ಷೇತ್ರದ ಅರ್ಚಕ ಶಿವರಾಮ ಭಟ್ ಪೆರಡಾಲ, ವೆಂಕಟೇಶ್ವರ ಭಟ್ ಪಟ್ಟಾಜೆ, ಮೊಕ್ತೇಸರರಾದ ಸೀತಾರಾಮ ನವಕಾನ ಹಾಗೂ ಕೃಷ್ಣ ಬದಿಯಡ್ಕ,



ಮಾಜಿ ಮೊಕ್ತೇಸರ ಚಂದ್ರಹಾಸ ರೈ ಪೆರಡಾಲಗುತ್ತು, ಬ್ರಹ್ಮಕಲಶ ಸಮಿತಿ ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ವಿವಿಧ ಸಮಿತಿಗಳ ಪದಾಧಿಕಾರಿಗಳಾದ ಶ್ಯಾಮಪ್ರಸಾದ ಮಾನ್ಯ, ಮಹೇಶ್ ವಳಕ್ಕುಂಜ, ಭಾಸ್ಕರ ಪಂಜಿತ್ತಡ್ಕ, ಅವಿನಾಶ್ ರೈ, ಗಂಗಾಧರ ಗೋಳಿಯಡ್ಕ, ಬಾಲಕೃಷ್ಣ ಶೆಟ್ಟಿ ಕೆ., ಸದಾಶಿವ ಮುರಿಯಂಕೂಡ್ಲು, ಡಾ.ಶ್ರೀಶಕುಮಾರ ಪಂಜಿತ್ತಡ್ಕ, ವಿನಯ ಜೆ.ರೈ, ಗಣೇಶಕೃಷ್ಣ ಅಳಕ್ಕೆ, ಗಣೇಶ ಪ್ರಸಾದ ಕಡವು ಮಾತೃ ಸಮಿತಿ ಸದಸ್ಯೆಯರು ಪಾಲ್ಗೊಂಡಿದ್ದರು.

ದೇವಾಲಯಕ್ಕೆ ಉಚಿತ ಬಸ್ ಸೇವೆ

ಬ್ರಹ್ಮಕಲಶದ ಸಂದರ್ಭ ಭಗವದ್ಭಕ್ತರ ಅನುಕೂಲಕ್ಕಾಗಿ ಉಚಿತ ಬಸ್ ಸೇವೆ ಏರ್ಪಡಿಸಲಾಗಿದೆ. ಬದಿಯಡ್ಕ ಮೇಲಿನ ಪೇಟೆಯಿಂದ ಹಾಗೂ ನೀರ್ಚಾಲು ಸಮೀಪದ ಕನ್ನೆಪ್ಪಾಡಿಯಿಂದ ಈ ಬಸ್ ಸೇವೆ ಬ್ರಹ್ಮಕಲಶದ ಸಂದರ್ಭದಲ್ಲಿ ಲಭ್ಯವಿದೆ.

ದೇವಸ್ಥಾನದಲ್ಲಿ ಇಂದಿನ ಕಾರ್ಯಕ್ರಮ

ಬ್ರಹ್ಮಕಲಶದ ಪ್ರಯುಕ್ತ ಏ.19ರಂದು ಬೆಳಗ್ಗೆ 6ರಿಂದ ವೈದಿಕ, ತಾಂತ್ರಿಕ ಕಾರ್ಯಕ್ರಮಗಳು ನಡೆಯಲಿವೆ. ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ನೇತೃತ್ವದಲ್ಲಿ ಗಣಪತಿ ಹೋಮ, ಪ್ರಾಯಶ್ಚಿತ್ತ ಹೋಮ, ಚತುಃಶುದ್ಧಿ, ಧಾರಾ, ಅವಗಾಹ, ಪಂಚಕ, ಅಂಕುರ ಪೂಜೆ ನೆರವೇರಲಿದೆ. ಬೆಳಗ್ಗೆ 9.30ಕ್ಕೆ ನಟರಾಜ ವೇದಿಕೆಯಲ್ಲಿ ನಂದಿತಾ ಪೈ ಮತ್ತು ಬಳಗ ಮಂಗಳೂರು ಇವರಿಂದ ಹಿಂದೂಸ್ಥಾನಿ ಸಂಗೀತ ಮತ್ತು ಭಜನ್, ಮಧ್ಯಾಹ್ನ 12.30ರಿಂದ ನೃತ್ಯ ಕಾರ್ಯಕ್ರಮ, 1ರಿಂದ ಭಕ್ತಿ ತರಂಗಿಣಿ, 2 ಗಂಟೆಗೆ ರಾಮಕೃಷ್ಣ ಕಾಟುಕುಕ್ಕೆ ಮತ್ತು ಬಳಗದವರಿಂದ ದಾಸವಾಣಿ ಕಾರ್ಯಕ್ರಮವಿದೆ. ಸಂಜೆ 4 ಗಂಟೆಗೆ ಜರಗುವ ಧಾರ್ಮಿಕ ಸಭೆಯಲ್ಲಿ ಉಪ್ಪಳ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ರಾತ್ರಿ 7 ಗಂಟೆಗೆ ಪ್ರಸಿದ್ಧ ಗಾಯಕ ರಾಹುಲ್ ವೆಳ್ಳಾಲ್ ಮತ್ತು ಬಳಗ ಬೆಂಗಳೂರು ಇವರಿಂದ ಸಂಗೀತ ಸಂಧ್ಯಾ ಕಾರ್ಯಕ್ರಮ, 9ರಿಂದ ವಿದುಷಿ ಡಾ.ವಿದ್ಯಾಲಕ್ಷ್ಮಿ ಕೆ. ನಾಟ್ಯವಿದ್ಯಾಲಯ ಕುಂಬಳೆ ಇವರ ಶಿಷ್ಯವೃಂದದವರಿಂದ ನೃತ್ಯ ಸಂಭ್ರಮ ಜರಗಲಿದೆ. ಕೈಲಾಸ ವೇದಿಕೆಯಲ್ಲಿ ಬೆಳಿಗ್ಗೆ 10ಕ್ಕೆ ಶಾಸ್ತ್ರೀಯ ಸಂಗೀತ, ಮಧ್ಯಾಹ್ನ 1 ಗಂಟೆಗೆ ತಾಳಮದ್ದಳೆ, ಅಪರಾಹ್ನ 3.30ಕ್ಕೆ ಮಿಮಿಕ್ರಿ, ಸಂಜೆ 4ರಿಂದ ಹರಿಕಥಾ ಸತ್ಸಂಗ, 5ರಿಂದ ಜಾನಪದ ನೃತ್ಯ, 5.30ರಿಂದ ಭರತನಾಟ್ಯ ಪ್ರದರ್ಶನಗೊಳ್ಳಲಿದೆ.

ಸುತ್ತ ಮುತ್ತ

ಏ.21: ವಿದ್ಯುತ್ ವ್ಯತ್ಯಯ

ಉಡುಪಿ: ಹಿರಿಯಡ್ಕ-ಮಧುವನ-ಕುಂದಾಪುರ ನಿರ್ವಹಣೆಗಾಗಿ ಹಾಗೂ ಇನ್ಸುಲೇಟರ್‌ಬದಲಾವಣೆ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಏ.21 ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಮಧುವನ, ಕುಂದಾಪುರ, ನಾವುಂದ ವಿದ್ಯುತ್ ಉಪಕೇಂದ್ರ ಮತ್ತು ಗಂಗೊಳ್ಳಿ, ಬೈಂದೂರು, ತಲ್ಲೂರು,ಕೊಲ್ಲೂರು, ಜಿ.ಐ.ಎಸ್ ಕೋಟ, ಮತ್ತು ಸೇನಾಪುರ, ಬಾರ್ಕೂರು ರೈಲ್ವೆ ಟ್ರಾಕ್ಷನ್ ವಿದ್ಯುತ್‌ಉಪಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಎಲ್ಲಾ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಏ.22: ಮೆಸ್ಕಾಂ ಜನಸಂಪರ್ಕ ಸಭೆ

ಉಡುಪಿ: ಮೆಸ್ಕಾಂ ಬೈಂದೂರು ಉಪವಿಭಾಗ ಕಚೇರಿಯಲ್ಲಿ ಏ. 22 ರಂದು ಸಮಯ ಬೆಳಗ್ಗೆ 10.30 ರಿಂದ 12 ಗಂಟೆಯವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದಾರೆ. ದೂರವಾಣಿ ಸಂಖ್ಯೆ 08254-252028 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಮೆಸ್ಕಾಂನ ಕಚೇರಿ ಪ್ರಕಟಣೆ ತಿಳಿಸಿದೆ.

ಏ. 25: ವರ್ಧಂತಿ ಮಹೋತ್ಸವ

ಪಡುಬಿದ್ರಿ: ಮೂಡು ಪಲಿಮಾರು ಧರ್ಮಚಾವಡಿ ಶ್ರೀ ಆದಿ ಬ್ರಹ್ಮಲಿಂಗೇಶ್ವರ ದೇವಸ್ಥಾನ ಪಾರ್ವತಿ ದೇವಿ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ವರ್ಧಂತಿ ಮಹೋತ್ಸವ ಹಾಗೂ ದೀಪಾಲಂಕೃತ ಮಹಾರಂಗಪೂಜೆ ಎ.25ರಂದು ನೆರವೇರಲಿದೆ. ಬೆಳಗ್ಗೆ ದೇವತಾ ಪ್ರಾರ್ಥನೆ, ಸ್ವಸ್ತಿ ಪುಣ್ಯಾಹ, ತೋರಣ ಮುಹೂರ್ತ, ಪ್ರದಾನ ಹೋಮ, ನವಕ ಕಲಶ, ಪಂಚಾಮೃತ ಅಭಿಷೇಕ, ಪೂರ್ವಕ ಕಲಶಾಭಿಷೇಕ, ಮಹಾಪೂಜೆ, ಪಲ್ಲಪೂಜೆ, ಮಧ್ಯಾಹ್ನ 12ರಿಂದ ಭಜನಾ ಕಾರ್ಯಕ್ರಮ, ಸಂಜೆ ದೀಪಾರಾಧನೆ ಪೂರ್ವಕ ಮಹಾರಂಗಪೂಜೆ, ಮಹೋತ್ಸವ ನಡೆಯಲಿದೆ ಎಂದು ಪಲಿಮಾರು ಧರ್ಮಚಾವಡಿ ಸೇವಾ ಸಮಿತಿ ಪ್ರಕಟಣೆ ತಿಳಿಸಿದೆ.

ಬಂಟಕಲ್ಲು ಕಾಲೇಜಿನಲ್ಲಿ ಕಾರ್ಯಾಗಾರ

ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾ ವಿದ್ಯಾಲಯದ ಅಟಲ್ ಟಿಂಕರಿಂಗ್ ಲ್ಯಾಬ್ ಮತ್ತು ಐಇಇಇ ಘಟಕದ ಸಹಯೋಗದೊಂದಿಗೆ ವಿದ್ಯಾರ್ಥಿಗಳಾದ ಭೂಷಣ್ ಪೂಜಾರಿ, ಶ್ರೀಕಿರಣ್, ಸೂರಜ್ ಭಾಗವತ್, ರಿಸ್ವನ್ ಮತ್ತು ಪ್ರದ್ಯುಮ್ನ ಎಮ್ ಇವರು ಶುಕ್ರವಾರ ಗಂಗೊಳ್ಳಿಯ ಸರಸ್ವತಿ ಆಂಗ್ಲ ಮಾಧ್ಯಮ ಶಾಲೆಯ ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ವಿದ್ಯಾರ್ಥಿಗಳಿಗೆ 'ಐಒಟಿ ಅಪ್ಲಿಕೇಶನ್ ಗಳ'' ಬಗ್ಗೆ ಮಾಹಿತಿಯನ್ನು ನೀಡಿದರು.
ಈ ಕಾರ್ಯಕ್ರಮದ ಮುಖ್ಯ ಉದ್ದೇಶ ವಿದ್ಯಾರ್ಥಿಗಳಿಗೆ ಇಂಟರ್‌ನೆಟ್ ಆಫ್ ಥಿಂಗ್ಸ್‌ಗಳ ಮೂಲಭೂತ ತತ್ವಗಳನ್ನು ಪರಿಚಯಿಸುವುದರೊಂದಿಗೆ ನೈಜ ಜಗತ್ತಿನ ಅನ್ವಯಿಕೆಗಳ ಬಗ್ಗೆ ಮಾಹಿತಿ ನೀಡಿದರು. ಸಂಸ್ಥೆಯ ಗಣಕ ಯಂತ್ರ ವಿಭಾಗದ ರಾಘವೇಂದ್ರ ಈಶ್ವರ ಹೆಗ್ಡೆ ಕಾರ್ಯಕ್ರಮ ಸಂಯೋಜಿಸಿದರು.

ಮಣೂರು ಸ್ನೇಹಕೂಟದಿಂದ ಯುಗಾದಿ ಆಚರಣೆ

ಕೋಟ: ಸ್ನೇಹಕೂಟ ಮಣೂರು ಇವರ ಆಶ್ರಯದಲ್ಲಿ ಯುಗಾದಿಯ ನವ ಪರ್ವವನ್ನು ನವೀನ ರೀತಿಯ ಸಂಗೀತಧಾರೆಯ ಮುಖಾಂತರ ಆಹ್ವಾನಿಸುವ ಸಂಗೀತ ಸಂಧ್ಯಾ ವಿಶೇಷ ಕಾರ್ಯಕ್ರಮ ಬುಧವಾರ ಮಣೂರು ಮಹಾಲಿಂಗೇಶ್ವರ ದೇವಸ್ಥಾನದ ಹೇರಂಬ ಸಾಂಸ್ಕೃತಿಕ ಕಲಾವೇದಿಕೆಯಲ್ಲಿ ಜರಗಿತು.
ಸಾಮಾಜಿಕ ಕಾರ್ಯಕರ್ತ ಶ್ರೀಕಾಂತ್ ಶೆಣೈ ಕೋಟ ಕಾರ್ಯಕ್ರಮವನ್ನು ಉದ್ಘಾಟಿಸಿ, ಸ್ನೇಹಕೂಟದ ದಶಮಾನೋತ್ಸವದ ಪ್ರಯುಕ್ತ ರಚಿಸಲಾದ ರಂಗಮಂಟಪ ಹೇರಂಬ ಸಾಂಸ್ಕೃತಿಕ ಕಲಾವೇದಿಕೆಯಲ್ಲಿ ನವ ನವೀನ ಕಾರ್ಯಕ್ರಮಗಳು ಜರಗಲಿ ನಿರಂತರ ಸಂಗೀತ ಭಜನಾ ಕಾರ್ಯಕ್ರಮಕ್ಕೆ ಈ ವೇದಿಕೆ ಸಾಕ್ಷಿಯಾಗಲಿ ನಿಮ್ಮ ಅರ್ಥಪೂರ್ಣ ಕೊಡುವಿಕೆ ಕಾರ್ಯಕ್ರಮ ಸಾರ್ಥಕ್ಯವನ್ನು ಕಾಣಲಿ ಎಂದು ಹಾರೈಸಿದರು. ಸ್ನೇಹಕೂಟ ಸಂಘದ ಅಧ್ಯಕ್ಷೆ ಭಾರತಿ ವಿ.ಮಯ್ಯ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಭೆಯಲ್ಲಿ ಸಂಗೀತ ಶಿಕ್ಷಕಿ ಶಾರದಾ ಹೊಳ್ಳ ಮಣೂರು, ಮಾಲಿನಿ ರಮೇಶ್ ಚಿತ್ರಪಾಡಿ ಹಾಗೂ ಮೀನಾ ಕಾರಂತ್ ಸಾಸ್ತಾನ ಉಪಸ್ಥಿತರಿದ್ದರು. ಕಾರ್ಯದರ್ಶಿ ಸ್ಮಿತಾರಾಣಿ ಸ್ವಾಗತಿಸಿದರು. ಸಂಘದ ಕಾರ್ಯಕ್ರಮ ಸಂಯೋಜಕಿ ಸುಜಾತ ಬಾಯಿರಿ ನಿರೂಪಿಸಿದರು . ಸ್ವರ್ಣಲತಾ ಕೋರ್ನಾಯ ವಂದಿಸಿದರು.

ರಾಜ್ಯಮಟ್ಟದಲ್ಲಿ ಗಮನ ಸೆಳೆದ ಕುಂದಾಪುರ, ಬೈಂದೂರಿನ ತಾಲೂಕಿನ ಪ್ರತಿಷ್ಠಿತ ವಿದ್ಯಾ ಸಂಸ್ಥೆ

ಹೆಮ್ಮಾಡಿ ಜನತಾ ಪದವಿಪೂರ್ವ ಕಾಲೇಜಿನ ಶೈಕ್ಷಣಿಕ ಸಾಧನೆ

ಉಡುಪಿ: ಸ್ಪರ್ಧಾತ್ಮಕ ಜಗತ್ತಿನ ವೇಗದ ಜೊತೆಗೆ ಹೆಜ್ಜೆ ಹಾಕಲು ಇಂದಿನ ಯುವ ಪೀಳಿಗೆಗೆ ಸ್ಪರ್ಧಾತ್ಮಕತೆಗೆ ಅನುಗುಣವಾಗಿ ಭವಿಷ್ಯವನ್ನು ರೂಪಿಸಿಕೊಳ್ಳಲು ಕುಂದಾಪುರ ತಾಲೂಕಿನ ಹೆಮ್ಮಾಡಿಯ ಹೃದಯ ಭಾಗದಲ್ಲಿ ಪ್ರಕೃತಿ ರಮಣೀಯ ಪರಿಸರದಲ್ಲಿ ಮೈ ತಳೆದು ನಿಂತಿರುವ, ಆತ್ಯಾಕರ್ಷಣೀಯವಾದ ಭವ್ಯವಾದ ಕಟ್ಟಡದೊಂದಿಗೆ ದಕ್ಷ ಆಡಳಿತ ಮಂಡಳಿ, ಅನುಭವಿಶಾಲಿ ಪ್ರಾಂಶುಪಾಲರು, ಹಾಗೂ ಉಪನ್ಯಾಸಕ ವೃಂದದವರಿಂದ ಸಮ್ಮಿಳಿತಗೊಂಡ ಸಂಸ್ಥೆಯೇ ಜನತಾ ಪದವಿಪೂರ್ವ ಕಾಲೇಜು.
ಶ್ರೀ ವಿ.ವಿ.ವಿ ಮಂಡಳಿ(ರಿ) ಆಡಳಿತ ಮಂಡಳಿಯವರಿಂದ 2007-08ರಲ್ಲಿ ಪ್ರಾರಂಭಗೊಂಡ ಜನತಾ ಪದವಿಪೂರ್ವ ಕಾಲೇಜನ್ನು ಶ್ರೀ ವಿ.ವಿ.ವಿ. ಮಂಡಳಿಯವರು ಹಲವು ವರ್ಷಗಳ ಕಾಲ ಮುನ್ನಡೆಸಿದರು. 2022-23ನೇ ಶೈಕ್ಷಣಿಕ ವರ್ಷದಿಂದ ಸಮರ್ಪಣಾ ಎಜುಕೇಶನಲ್ ಟ್ರಸ್ಟ್ (ರಿ) ಹೆಮ್ಮಾಡಿ ನೂತನ ಆಡಳಿತ ಮಂಡಳಿಯವರು ಕಾಲೇಜನ್ನು ಮುನ್ನಡೆಸುತ್ತಿದ್ದಾರೆ.
ಕಾಲೇಜು ಆಡಳಿತ ಮಂಡಳಿ

ಸಮರ್ಪಣಾ ಎಜುಕೇಶನಲ್ ಟ್ರಸ್ಟ್ (ರಿ) ಶೀರ್ಷಿಕೆಯಡಿ ಆರಂಭವಾದ ಕಾಲೇಜು .

ಅನುಭವಿಶಾಲಿ ಹಾಗೂ ಬೋಧನೆಯಲ್ಲಿ ಸಾಕಷ್ಟು ವರ್ಷಗಳ ಅನುಭವವಿರುವ ಶಿಕ್ಷಣ ಕ್ಷೇತ್ರದಲ್ಲಿ ಅಂತರಾಷ್ಟ್ರೀಯ ಮಟ್ಟದ ಪ್ರಶಸ್ತಿ ಪುರಸ್ಕೃತರಾದ ಗಣೇಶ ಮೊಗವೀರರವರು, ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳಲ್ಲಿ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಿ ಪ್ರಸಿದ್ಧಿ ಪಡೆದಿರುವ ಚಿತ್ರಾ ಕಾರಂತ್ ಮಾರ್ಗದರ್ಶನದಡಿಯಲ್ಲಿ ಆರಂಭಿಸಿದ ಕಾಲೇಜು ಇದಾಗಿದ್ದು, ಗ್ರಾಮೀಣ ಭಾಗದಲ್ಲಿ ಉತ್ತಮ ಶಿಕ್ಷಣ ನೀಡುವ ಸದಾಶಯದೊಂದಿಗೆ ಸಮರ್ಪಣಾ ಎಜುಕೇಶನಲ್ ಟ್ರಸ್ಟ್ ಎನ್ನುವ ಆಡಳಿತ ಮಂಡಳಿಯನ್ನು ರಚಿಸಿಕೊಂಡಿದ್ದಾರೆ.
ಆಡಳಿತ ಮಂಡಳಿ ಅಧ್ಯಕ್ಷ ಹಾಗೂ ಪ್ರಾಂಶುಪಾಲ ಗಣೇಶ ಮೊಗವೀರ ಹಾಗೂ ಕಾರ್ಯದರ್ಶಿಯಾಗಿ ಶ್ರೀಮತಿ ಶ್ಯಾಮಲ ಗಣೇಶ್ ಕಾರ್ಯನಿರ್ವಹಿಸುತ್ತಿದ್ದಾರೆ.
ಶಿಕ್ಷಣಕ್ಕಾಗಿ ನಿರಂತರ ಬದ್ಧತೆಯನ್ನು ಕಾಯ್ದುಕೊಳ್ಳುವ ಉದ್ದೇಶವನ್ನಿಟ್ಟುಕೊಂಡು ಆರಂಭವಾದ ಕಾಲೇಜು ಪದವಿಪೂರ್ವ ಹಂತದಲ್ಲಿ 2022-23ನೇ ಶೈಕ್ಷಣಿಕ ವರ್ಷದಿಂದ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಶಿಕ್ಷಣ ನೀಡುತ್ತಾ ರಾಜ್ಯದ ಗಮನ ಸೆಳೆದಿದೆ.ವಿಜ್ಞಾನ ವಿಭಾಗದಲ್ಲಿ PCMB,PCMC ಹಾಗೂ CEBA, SEBA, ABCS ಪಠ್ಯಕ್ರಮ ವಿಭಾಗಗಳನ್ನು ಹೊಂದಿದೆ. ಶಿಸ್ತು, ಅಚ್ಚುಕಟ್ಟುತನ, ಗುಣಮಟ್ಟದ ಹಾಗೂ ಮೌಲ್ಯಯುತ ಶಿಕ್ಷಣ ಮಕ್ಕಳ ಅಂತರ್ಯದಲ್ಲಿ ಬಿತ್ತುವ ಮೂಲಕ ಸ್ಪರ್ಧಾತ್ಮಕ ಯುಗಕ್ಕೆ ಅನುಗುಣವಾಗಿ ಶಿಕ್ಷಣ ನೀಡಲಾಗುತ್ತಿದೆ.
ಮೌಲ್ಯಯುತ ಶಿಕ್ಷಣವನ್ನು ನೀಡುವುದರ ಜೊತೆ-ಜೊತೆಗೆ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಯ ಉದ್ದೇಶವನ್ನಿಟ್ಟು ಕೊಂಡು ಅನೇಕ ಸೃಜನಶೀಲ ಚಟುವಟಿಕೆಗಳನ್ನು ಆಯೋಜನೆ ಮಾಡಲಾಗುತ್ತಿದೆ.
ವಿದ್ಯಾರ್ಥಿಗಳ ಚಿತ್ತ ಭಿತ್ತಿಯಲ್ಲಿ ಚಿಗುರೊಡೆಯುವ ಆಲೋಚನೆಗಳಿಗೆ ಪುಷ್ಟಿ ನೀಡಿ ಬಲಪಡಿಸುವ ಉದ್ದೇಶದಿಂದ, ಕೇವಲ ಓದಿಗಷ್ಟೇ ಸೀಮಿತವಾಗಿರದೆ ಸ್ಪರ್ಧಾತ್ಮಕತೆಗೆ ಅನುಗುಣವಾಗಿ ಇಂದಿನ ಯುವ ಪೀಳಿಗೆಗೆ ವಿಶೇಷ ತರಬೇತಿಗಳ ಅಗತ್ಯವಿರುವುದನ್ನು ಮನಗೊಂಡು ಭವಿಷ್ಯದಲ್ಲಿ ವಿವಿಧ ಉದ್ಯೋಗಗಳನ್ನು ಪಡೆಯಲು ಬೇಕಾಗಿರುವ ಸಂದರ್ಶನಗಳನ್ನು ಎದುರಿಸುವಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಆಂಗ್ಲ ಭಾಷಾ ಕೌಶಲ್ಯವನ್ನು ಹೆಚ್ಚಿಸುವ ಸಲುವಾಗಿ ವಿವಿಧ ಚಟುವಟಿಕೆ ಆಧಾರಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಗಾಗಿ ವ್ಯಕ್ತಿತ್ವ ವಿಕಸನದಂತಹ ತರಬೇತಿ ಹಾಗೂ ವಿದ್ಯಾರ್ಥಿಗಳ ಮನೋವಿಕಾಸಕ್ಕಾಗಿ ವಿದ್ಯಾರ್ಥಿ ಕೌನ್ಸಲಿಂಗ್



ರಾಜ್ಯಮಟ್ಟದಲ್ಲಿ ಸಾಧನೆ ಹೆಮ್ಮೆಯ ವಿಷಯ

ಕೃಷಿ ಕೂಲಿ ಕಾರ್ಮಿಕ ವರ್ಗದ ಬಡ ಕುಟುಂಬದ ಮಕ್ಕಳು, ಆರ್ಥಿಕವಾಗಿ ಅಶಕ್ತ ಸಾಮಾನ್ಯ ವರ್ಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ರೀತಿಯಲ್ಲಿ ಜೀವನ ಕಟ್ಟಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಶಿಕ್ಷಣ ಸಂಸ್ಥೆ ಆರಂಭಿಸಲಾಗಿದೆ. ನಮ್ಮ ಉದ್ದೇಶ ಈಡೇರಿದೆ ಎನ್ನುವ ಖುಷಿ ಇದೆ. ಗ್ರಾಮೀಣ ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಸಾಧನೆ ಮಾಡುತ್ತಿರುವುದು ಜನತಾ ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ.



● **ಗಣೇಶ್ ಮೊಗವೀರ**
ಅಧ್ಯಕ್ಷರು, ಪ್ರಾಂಶುಪಾಲರು, ಜನತಾ ಪಪೂ ಕಾಲೇಜು, ಹೆಮ್ಮಾಡಿ

ಕ್ರೀಡಾಚಟುವಟಿಕೆಗೂ ಉತ್ತೇಜನ

ಜನತಾ ಪಿಯು ಹೆಮ್ಮಾಡಿಯಲ್ಲಿ ಉತ್ತಮ ರೀತಿಯಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿದ್ದು, ದಾಖಲೆಯ 67 ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ 10ವಿದ್ಯಾರ್ಥಿಗಳು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕಾಲೇಜು ವಿಭಾಗದ ವಿವಿಧ ಕ್ರೀಡೆಗಳಿಗೆ ಉತ್ತಮ ರೀತಿಯ ತರಬೇತಿ ನೀಡಿ ಸ್ಪರ್ಧಾತ್ಮಕವಾಗಿ ವಿದ್ಯಾರ್ಥಿಗಳನ್ನು ತಯಾರಿ ಮಾಡಲು ಕ್ರೀಡಾ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿರುವ ದೈಹಿಕ ಶಿಕ್ಷಣ ಉಪನ್ಯಾಸಕರ ತಂಡದಿಂದ ಸೂಕ್ತ ತರಬೇತಿ ನೀಡಿ ಕ್ರೀಡಾ ರಂಗದಲ್ಲಿಯು ವಿಶೇಷವಾಗಿ ವಿದ್ಯಾರ್ಥಿ ಪ್ರತಿಭೆಗಳನ್ನು ಗುರುತಿಸಿಕೊಳ್ಳುವ ಕಾರ್ಯವನ್ನು ನಡೆಸಲಾಗುತ್ತಿದೆ.

ನಡೆಸಲಾಗುತ್ತಿದೆ. ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ವರ್ಷದುದ್ದಕ್ಕೂ ಆಯೋಜನೆ ಮಾಡುವುದರ ಮೂಲಕ ಕ್ರೀಡೆ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ವಿದ್ಯಾರ್ಥಿ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಗುತ್ತಿದೆ. ಇದಕ್ಕೆ ಸಾಕ್ಷಿವೆಂಬಂತೆ ಕಳೆದ 2 ಶೈಕ್ಷಣಿಕ ವರ್ಷಗಳಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ, ಸಾಹಿತ್ಯಕ ಕ್ಷೇತ್ರಗಳಲ್ಲಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಹತ್ತಾರು ಪ್ರಶಸ್ತಿಗಳನ್ನು ಪಡೆಯುವುದರ ಮೂಲಕ ರಾಜ್ಯ,ರಾಷ್ಟ್ರೀಯ ಮಟ್ಟದಲ್ಲಿ ಕಾಲೇಜು ಗುರುತಿಸಿಕೊಂಡಿದೆ.

ಸಂಸ್ಥೆಯಲ್ಲಿರುವ ವಿಶೇಷ ಸೌಲಭ್ಯಗಳು

- ಶಿಕ್ಷಣ ಕ್ಷೇತ್ರದಲ್ಲಿ ಹಲವು ವರ್ಷಗಳ ಅನುಭವವಿರುವ ಉತ್ತಮ ಉಪನ್ಯಾಸಕ ವೃಂದ ಸ್ಪರ್ಧಾತ್ಮಕ ಪರೀಕ್ಷೆ ಗಳಾದ CET/ NEET/ JEE-M/IIT/NATA/NDA/ CA, CS ತರಗತಿಗಳು ಹಾಗೂ Banking Foundation Courceಗಳಿಗೆ ಅನುಭವಶಾಲಿ ಉಪನ್ಯಾಸಕರಿಂದ ಉತ್ತಮ ರೀತಿಯ ತರಬೇತಿ.
- ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ತರಗತಿ ಕಲಿಕೆಯ ಜೊತೆಗೆ ಪ್ರಾಯೋಗಿಕ ಜ್ಞಾನಕ್ಕಾಗಿ Business Day, industrial Visit ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.
- ಕ್ರೀಡಾ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಷ್ಟ್ರಮಟ್ಟವನ್ನು ಪ್ರತಿನಿಧಿಸಿದ ವಿದ್ಯಾರ್ಥಿಗಳಿಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಉತ್ತೇಜನಕ್ಕಾಗಿ ನಮ್ಮ ಕಾಲೇಜಿನಲ್ಲಿ ಉಚಿತ ಪ್ರವೇಶವನ್ನು ನೀಡಿ ಪ್ರತಿಭೆಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.
- ಕಲಿಕೆಯಲ್ಲಿ ಹಿಂದುಳಿದ, ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗಾಗಿ ಸಂಜೆ (5-7)ಗಂಟೆಯವರೆಗೆ ಉಚಿತ ವಿಶೇಷ ತರಗತಿಗಳು.
- ಮಧ್ಯಾಹ್ನದ ಭೋಜನದ ವ್ಯವಸ್ಥೆ ದೂರದ ಊರುಗಳಿಂದ ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗಾಗಿ ಸುರಕ್ಷಿತ ಬಸ್ ವ್ಯವಸ್ಥೆ
- ಶಿರೂರು,ಬೈಂದೂರು, ಕೊಲ್ಲೂರು,ಮುದೂರು, ಕಮಲಶಿಲೆ,ಆಜ್ರಿ,ನೇರಳಕಟ್ಟೆ,ಮಾವಿನಕಟ್ಟೆ,ಕಕಿ೯, ಹಟ್ಟಿಯಂಗಡಿ, ಆಲೂರು, ಹೊಸಂಗಡಿ, ಸಿದ್ಧಾಪುರ, ಅಂಪಾರು, ಬಸ್ರೂರು, ಬ್ರಹ್ಮಾವರ ಹಾಗೂ ಕುಂದಾಪುರ ಶಾಸ್ತ್ರೀ ವೃತ್ತದಿಂದ- ಕಾಲೇಜಿನ ಕ್ಯಾಂಪಸ್. ಈ ಮಾರ್ಗಗಳ ಮೂಲಕ ಕಾಲೇಜಿನ ಕ್ಯಾಂಪಸ್ ವರೆಗೆ ಬಸ್ ವ್ಯವಸ್ಥೆ ಮಾಡಲಾಗಿದೆ.
- ಸಾಂಸ್ಕೃತಿಕ,ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಉತ್ತೇಜನ ನೀಡಲು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಸೂಕ್ತ ತರಬೇತಿಯನ್ನು ನೀಡುತ್ತಾ ಆ ಮೂಲಕ ಜಿಲ್ಲಾ,ರಾಜ್ಯ,ರಾಷ್ಟ್ರ ಮಟ್ಟದ ಬ್ರಹತ್ ವೇದಿಕೆಗಳಿಗೆ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ.
- ಸುಸಜ್ಜಿತವಾದ ಗ್ರಂಥಾಲಯ ವ್ಯವಸ್ಥೆ. ವಿದ್ಯಾರ್ಥಿಗಳ ದೈಹಿಕ ಕ್ರೀಡೆಗಳಿಗೆ ವಿಶೇಷ ಅವಕಾಶಗಳನ್ನು ಒದಗಿಸಲು ವಿಶಾಲವಾದ ಆಟದ ಮೈದಾನ.
- ವಿಜ್ಞಾನ ಕಲಿಕೆಗೆ ಪೂರಕವಾದ ಸುಸಜ್ಜಿತವಾದ ಹಾಗೂ ಆಕರ್ಷಕವಾದ ವಿಜ್ಞಾನ ಪ್ರಯೋಗಾಲಯಗಳು.
- ವಿಶಾಲವಾದ ಹಾಗೂ ಅತ್ಯಾಧುನಿಕವಾದ ಗಣಕಯಂತ್ರ ಕೊಠಡಿ (Computer lab)
- ಬಾಲಕ, ಬಾಲಕಿಯರಿಗಾಗಿ ಪ್ರತ್ಯೇಕವಾದ, ಸುಸಜ್ಜಿತವಾದ ಹವಾ ನಿಯಂತ್ರಿತ ಹಾಸ್ಟೆಲ್ ವ್ಯವಸ್ಥೆ. ವಿದ್ಯಾರ್ಥಿಗಳಿಗೆ ಕಲಿಕೆಗೆ ಅನುಕೂಲ ವಾಗುವಂತೆ ಬಾಲಕ ಬಾಲಕಿಯರಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯ ಕಲ್ಪಿಸಲಾಗಿದೆ. ಮುಂಜಾನೆ 5ಗಂಟೆಗೆ ಯೋಗ, ಧ್ಯಾನ ಹಾಗೂ ರಾತ್ರಿ 10.30ತನಕ ಶಿಸ್ತುಬದ್ಧವಾಗಿ ಓದುವ ವಾತಾವರಣ ಕಲ್ಪಿಸಲಾಗಿದೆ. ಪ್ರತಿ ದಿನ ಬಗೆ ಬಗೆಯ ಉಪಹಾರ, ಮಧ್ಯಾಹ್ನ ದ ಊಟ, ಸಂಜೆ ಲಘು ಉಪಹಾರ, ಹಾಗೂ ರಾತ್ರಿಯ ಊಟವನ್ನು ಶುಚಿ ರುಚಿ ಯಾಗಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ.
- ಆರ್ಥಿಕವಾಗಿ ಹಿಂದುಳಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಾಗಿ ಸಮರ್ಪಣಾ ಎಜುಕೇಶನ್ ಟ್ರಸ್ಟ್ ನ ಮೂಲಕ ವಿದ್ಯಾರ್ಥಿ ಪ್ರೋತ್ಸಾಹ ಧನ ನೀಡಲಾಗುವುದು.
- ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ (ಸರ್ಕಾರಿ ಹಾಗೂ ವಿವಿಧ ಸಂಘ ಸಂಸ್ಥೆಗಳ ಮೂಲಕ) ವಿದ್ಯಾರ್ಥಿ ವೇತನ.
- ಕಾಲೇಜು ಆವರಣದಲ್ಲಿಯೇ ಸುಸಜ್ಜಿತವಾದ ಕ್ಯಾಂಟಿನ್ ವ್ಯವಸ್ಥೆ.
- ಗ್ರಾಮೀಣ ಭಾಗದ ಪರಿಸರದಲ್ಲಿ ಆರಂಭಗೊಂಡಿರುವ ಶಿಕ್ಷಣ ಸಂಸ್ಥೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅತ್ಯುತ್ತಮ ತರಬೇತಿ ನೀಡುತ್ತಾ ಉತ್ತಮ ಶಿಕ್ಷಣ ನೀಡುತ್ತಿದೆ.

ಒಟ್ಟಾರೆಯಾಗಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಪೂರಕ ವಾತಾವರಣ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳ ಜ್ಞಾನಕೌಶಲ್ಯವನ್ನು ಗಟ್ಟಿಗೊಳಿಸಲು ಗುಣಮಟ್ಟದ ಹಾಗೂ ಮೌಲ್ಯಯುತ ಶಿಕ್ಷಣವನ್ನು ನೀಡುವ ಹೊಂಗನಸು ನನಸಾಗುವ ಸಂಸ್ಥೆಯ ಆಡಳಿತ ಮಂಡಳಿಯವರ ಕನಸಿನೊಂದಿಗೆ, ಶೈಕ್ಷಣಿಕ ಮಾರ್ಗದರ್ಶಕಿ ಚಿತ್ರಾ ಕಾರಂತ ಅವರ ಸೂಕ್ತ ಮಾರ್ಗದರ್ಶನದಲ್ಲಿ ಕಾಲೇಜಿನ ಪ್ರಾಂಶುಪಾಲ ಗಣೇಶ ಮೊಗವೀರರವರ ಉತ್ತಮ ನಾಯಕತ್ವ ಗುಣ, ಕಾಲೇಜು ಉಪನ್ಯಾಸಕರ ಕಠಿಣ ಪರಿಶ್ರಮದಿಂದ ಕಾಲೇಜು ಉತ್ತಮ ಮಟ್ಟದಲ್ಲಿ ಮುನ್ನಡೆಯಲು ಯೋಜನೆಯನ್ನು ರೂಪಿಸಿದೆ.
ಹೀಗೆ ಕಾಲೇಜು ಆರಂಭ ವಾದ ಅತ್ಯಲ್ಪ ಅವಧಿಯಲ್ಲಿ ವಿಶೇಷ ಸಾಧನೆ ಮಾಡಿರುವುದು ಅಭಿನಂದನಾರ್ಹ ಸಂಗತಿ.ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅತ್ಯುತ್ತಮ ತರಬೇತಿ ನೀಡುತ್ತಾ ಪದವಿಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅತ್ಯುನ್ನತ ಸಾಧನೆಯೊಂದಿಗೆ ಕಾಲೇಜು ವಿಶೇಷವಾಗಿ ಗುರುತಿಸಿಕೊಂಡಿದೆ.

ಜೆಇಇ ಮೈನ್ಸ್ ಪರೀಕ್ಷೆಯಲ್ಲಿ ಸಂಸ್ಥೆಯ ಸಾಧನೆ

ಕೇಂದ್ರ ಸರಕಾರದ ಎನ್ ಟಿ ಎ ಪ್ರಾಧಿಕಾರವು ನಡೆಸುವ ರಾಷ್ಟ್ರಮಟ್ಟದ ಜೆಇಇ ಮೈನ್ಸ್ 2026ರ ಪ್ರಥಮ ಹಂತದ ಪರೀಕ್ಷೆಯಲ್ಲಿ ಹೆಮ್ಮಾಡಿಯ ಜನತಾ ಪಿಯು ಕಾಲೇಜಿನ ವಿದ್ಯಾರ್ಥಿಗಳು ಬೈಂದೂರು, ಕುಂದಾಪುರ ತಾಲ್ಲೂಕಿನಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ವಿದ್ಯಾರ್ಥಿಗಳಾದ ಧೀರಜ್ ಜಿ.ಡಿ 99.3604 ಪರ್ಸಂಟೈಲ್,ಮಾನ್ಯ ಪೂಜಾರಿ 98.6832 ಪರ್ಸಂಟೈಲ್, ಶ್ರೇಯಸ್ ಪಿ. ಗಾಣಿಗ 98.4693 ಪರ್ಸಂಟೈಲ್, ಶ್ರೀರಾಮ್ ಪಿ ಭಟ್ 97.4402ಪರ್ಸಂಟೈಲ್, ಶ್ರೀಧಾನ್ ಎಂ ಶೆಟ್ಟಿ 97.5834ಪರ್ಸಂಟೈಲ್, ನಹುಷ್ ಚಂದ್ರ ಬಿಲ್ಲವ 96.1127,ಆಯುಷ್ ಯು ಮೆಂಡನ್ 96.1817 ಪರ್ಸಂಟೈಲ್‌ಅಂಕಗಳಿಸಿ ಸಾಧನೆ ಮೆರೆದಿದ್ದಾರೆ. ರಾಷ್ಟ್ರಮಟ್ಟದ UCEED ಪರೀಕ್ಷೆಯಲ್ಲಿ ಹೆಮ್ಮಾಡಿ ಜನತಾ ಪದವಿಪೂರ್ವ ಕಾಲೇಜಿಗೆ 179 ರ್‍ಯಾಂಕ್ ವಿದ್ಯಾರ್ಥಿ ಸುಜಲ್ ತೋಳಾರ್ ಅಮೋಘ ಸಾಧನೆ -ಉಡುಪಿ ಜಿಲ್ಲೆಗೆ ಪ್ರಥಮ. ದೇಶದ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಯಾದ ಐಐಟಿ ಬಾಂಬೆ ನಡೆಸುವ ಬ್ಯಾಚುಲರ್ ಆಫ್ ಡಿಸೈನ್ (B.Des) ಕೋರ್ಸ್ ಪ್ರವೇಶ ಪಡೆಯಲು ನಡೆಯುವ ಯುಸೀಡ್ (UCEED)) 2026 ಪ್ರವೇಶ ಪರೀಕ್ಷೆಯಲ್ಲಿ ಹೆಮ್ಮಾಡಿ ಜನತಾ ಪಿಯು ಕಾಲೇಜಿನ ವಿದ್ಯಾರ್ಥಿ ಸುಜಲ್ ತೋಳಾರ್ ಅಮೋಘ ಸಾಧನೆ ಮಾಡಿದ್ದಾರೆ. ಜನವರಿ 2026 ರಲ್ಲಿ ನಡೆದ ಈ ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ಸುಜಲ್ ತೋಳಾರ್ ಪ್ರಥಮ ಪ್ರಯತ್ನದಲ್ಲೇ ರಾಷ್ಟ್ರಮಟ್ಟದಲ್ಲಿ ಕೆಟಗರಿ ವಿಭಾಗದಲ್ಲಿ 179ನೇ ರ್‍ಯಾಂಕ್ ಪಡೆದು ಮುಂದಿನ ಹಂತದ ಕೌನ್ಸೆಲಿಂಗ್‌ಗೆ ಅರ್ಹತೆ ಪಡೆದಿದ್ದಾರೆ. ಕಂಪೆನಿ ಸೆಕ್ರೆಟರಿ ಪ್ರವೇಶ ಪರೀಕ್ಷೆಯಲ್ಲಿ (CS) ಜನತಾ ಪಿ.ಯು ಕಾಲೇಜು ಹೆಮ್ಮಾಡಿ -ರಾಜ್ಯಕ್ಕೆ ಪ್ರಥಮ ಸ್ಥಾನ ಪರೀಕ್ಷೆ ಬರೆದ 44ವಿದ್ಯಾರ್ಥಿಗಳಲ್ಲಿ ದಾಖಲೆಯ 42 ವಿದ್ಯಾರ್ಥಿಗಳು ತೇರ್ಗಡೆ. ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯ ನಡೆಸಿದ ಸಿ.ಎಸ್.ಇ. ಇ.ಟಿ. (ಕಂಪನಿ ಸಕ್ರೇಟರಿ ಎಕ್ಸಿಕ್ಯೂಟಿವ್ ಎಂಟ್ರೆನ್ಸ್ ಟೆಸ್ಟ್ -ಜನವರಿ 2026)ನಲ್ಲಿ ಜನತಾ ಪದವಿಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ಪರೀಕ್ಷೆ ಬರೆದ 43 ವಿದ್ಯಾರ್ಥಿಗಳಲ್ಲಿ 41 ವಿದ್ಯಾರ್ಥಿಗಳು ಅತ್ಯಧಿಕ ಅಂಕಗಳನ್ನು ಪಡೆಯುದರ ಮೂಲಕ ಸಿ. ಎಸ್ ಎಕ್ಸಿಕ್ಯೂಟಿವ್ ಪ್ರೋಗ್ರಾಮ್ ಗೆ ಅರ್ಹತೆ ಪಡೆದಿದ್ದಾರೆ.ಸಾಧನೆ ಮೆರೆದು ಅರ್ಹತೆ ಪಡೆದ ವಿದ್ಯಾರ್ಥಿಗಳು ಕ್ರಮವಾಗಿ ಸಹನಾ (168),ಅಮೂಲ್ಯ ಆರ್ ಶೆಟ್ಟಿ(166), ಧನುಷ್ ಆರ್. ಹೆಬ್ಬಾರ್(164) ಪ್ರಥಮ್ ಜಿ. ಕಾಂಚನ್(159),ಶಮ್ಯ(156) ಶಿವಮ್ (155), ಶಯನ್(154), ಶ್ರೀಶಾ ಆರ್. ಶೆಟ್ಟಿ (154), ಆಶಿತಾ ತೋಳಾರ್ (154) ದ್ರಶ್ಯ ಜಿ. ದೇವಾಡಿಗ(153),ಸಂಕೇತ್ ಎಸ್ ಬಿಲ್ಲವ (153), ಆದಿತ್ಯ ಆರ್. ಶೆಟ್ಟಿ(151),ಪ್ರಜ್ವಲ್ (148),ಶಮಿತ್ ಬಿ. ಪೂಜಾರಿ(145), ಪ್ರೀಥನ್ (142), ಸಂಜಯ್ (142), ಶ್ರೀಶಾ ಕೆ.ಎಸ್. (136), ವೈಭವ್(134), ರಾಹುಲ್ ಶ್ರೀಯಾನ್ (134) ಮೋಹಿತ್ (133), ಸ್ಪಂದನ (130), ನಿಶ್ಚಿತ್ (130), ಪೂಜಾರಿ ತನ್ವಿ ಲವ (126),ಶ್ರೇಷ್ಠ ಆರ್ ನಾಯಕ್ (125), ಪಲ್ಲವಿ ಆರ್. ಪೂಜಾರಿ (123), ಪ್ರಥಮ್ ಮಯ್ಯ (122), ಹಿರಣ್ಮಯಿ(120), ಸತ್ಯನಾರಾಯಣ (118), ಸಾನಿಕ (116),ಶಶಾಂಕ್ ಡಿ. ರಾವ್(115), ರಥಾ (114) ಶ್ರೇಯಸ್ ಎನ್ ಪೂಜಾರಿ (112), ಸಾತ್ವಿಕ್ ಶೆಟ್ಟಿ(112),ಅಮೂಲ್ಯ ಯು ಗಾಣಿಗ (111), ಲೆಸ್ಟರ್ (111),ಶಿವಾನಿ ಎನ್. (110), ಐಶ್ವರ್ಯ (109),ಶಶಾಂಕ್ ಆರ್. ನಾಯಕ್(100), ಸನದ್ (100), ಸಾನ್ವಿ(100), ಸನ್ನಿಧಿ (100) ಅಂಕ ಪಡೆದು ಅರ್ಹತೆ ಪಡೆದಿರುತ್ತಾರೆ. ಗ್ರಾಮೀಣ ಭಾಗದ ಪರಿಸರದಲ್ಲಿ ಆರಂಭಗೊಂಡಿರುವ ಶಿಕ್ಷಣ ಸಂಸ್ಥೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅತ್ಯುತ್ತಮ ತರಬೇತಿ ನೀಡುತ್ತಾ ಉತ್ತಮ ಶಿಕ್ಷಣ ನೀಡಲಾಗುತ್ತಿದೆ.

ಗಣೇಶ್ ಮೊಗವೀರರ ಶೈಕ್ಷಣಿಕ ಸಾಧನೆಗೆ ಒಲಿದ ಪ್ರಶಸ್ತಿಗಳು

- **ಸನಾತನ ಫೌಂಡೇಶನ್ ಬೆಂಗಳೂರು ಸಾರಥ್ಯದಲ್ಲಿ ಉಡುಪಿ ಮಠದ ಪುತ್ತಿಗೆ ಶ್ರೀ ಸುಗುಣೇಂದ್ರತೀರ್ಥರು, ಶಿಷ್ಯ ಶ್ರೀ ಸುಶ್ರೀಂದ್ರತೀರ್ಥ ಸ್ವಾಮೀಜಿ ಅವರಿಂದ ಕೊಡಮಾಡುವ ಅತ್ಯುನ್ನತ ಪ್ರಶಸ್ತಿ ವಿಕ್ರಮ ಪ್ರಶಸ್ತಿ**
- **ಶ್ರೀ ರಾಘವೇಂದ್ರ ಸ್ವಾಮೀಜಿಗಳ ಮಠ ಶ್ರೀ ಕ್ಷೇತ್ರ ಮಂತ್ರಾಲಯ ದಿವ್ಯ ಸಾನಿಧ್ಯದಲ್ಲಿ ಕೊಡ ಮಾಡಿದ ಪ್ರತಿಷ್ಠಿತ ಪರಿಮಳ ಪ್ರಶಸ್ತಿ-2025**
- **ಗೋವಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರತಿಷ್ಠಿತ ಟೊಪ್ಸೆಟೆಕ್ ಫೌಂಡೇಶನ್ ಕೊಡಮಾಡಿರುವ ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಸರ್ದಾರ್ ಪಟೇಲ್ ಯುನಿಟಿ ಅವಾರ್ಡ್ಸ್ 2025**
- **ಏಷ್ಯನೆಟ್ ಸುವರ್ಣ ಹಾಗೂ ಕನ್ನಡ ಪ್ರಭ ಪತ್ರಿಕೆಯವರು ಕೊಡಮಾಡುವ ಅಂತಾರಾಷ್ಟ್ರೀಯ ಮಟ್ಟದವಿಯೆಟ್ನಾಂ ಇಂಡಿಯಾ ಅಂತರಾಷ್ಟ್ರೀಯ ಐಕಾನಿಕ್ ಪ್ರಶಸ್ತಿ**

ಪರಾರಿ ಬೊಬ್ಬರ್ಯ ದೈವಸ್ಥಾನ ಪುನರ್ ಪ್ರತಿಷ್ಠೆ: ಹಸಿರು ಹೊರೆಕಾಣಿಕೆ

ಬ್ರಹ್ಮಾವರ: ಪರಾರಿ ಬೊಬ್ಬರ್ಯ ದೈವಸ್ಥಾನ ಜೀರ್ಣೋದ್ಧಾರಗೊಂಡು ಏ.19 ಹಾಗೂ ಏ.20ರಂದು ಪುನರ್ ಪ್ರತಿಷ್ಠಾ ಕಾರ್ಯಕ್ರಮಗಳು ನಡೆಯಲಿದ್ದು ಇದರ ಅಂಗವಾಗಿ ಶನಿವಾರ ಹಸಿರು ಹೊರೆಕಾಣಿಕೆ ಮೆರವಣಿಗೆ ಕೊಳಲಗಿರಿ ಜಂಕ್ಷನ್‌ನಿಂದ ಆರಂಭಗೊಂಡಿತು.



ಉಡುಪಿ ಜಿಲ್ಲಾ ಪೋಲೀಸ್ ಅಕ್ಷಕ ಹರಿರಾಂ ಶಂಕರ್ ಮೆರವಣಿಗೆಗೆ ಚಾಲನೆ ನೀಡಿ ಶುಭ ಹಾರೈಸಿದರು. ಅತಿಥಿಗಳಾಗಿ ಪಂಚಾಯತ್‌ರಾಜ್ ಇಂಜೀನಿಯರ್ ಉಪವಿಭಾಗದ ಸಹಾಯ ಕಾರ್ಯ ನಿರ್ವಾಹಕ ಇಂಜೀನಿಯರ್ ಶ್ರೀಕಾಂತ್ ನಾಯಕ್, ಉಪ್ಪೂರು ಗ್ರಾಮದ ಗ್ರಾಮ ಲೆಕ್ಕಿಗ ಪ್ರಮೋದ್ ಕುಮಾರ್, ಉಡುಪಿ ಉಜ್ವಲ್ ಗ್ರೂಪ್ಸ್‌ನ ಅಜಯ್ ಪಿ.ಶೆಟ್ಟಿ, ಉಪ್ಪೂರು ಮಹತೋಭಾರ ಸಿದ್ದಿವಿನಾಯಕ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಶಾಂತ್ ಸುವರ್ಣ ಮಾಯಾಡಿ, ಉಪ್ಪುರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಮಹೇಶ್ ಕೋಟ್ಯಾನ್, ಮಣಿಪಾಲ ಯುನಿವರ್ಸಿಟಿಯ ಎಸ್ಟೇಟ್ ಆಫೀಸರ್ ಬಾಲಕೃಷ್ಣ ಪ್ರಭು ಭಾಗವಹಿಸಿದ್ದರು. ಪರಾರಿ ಬೊಬ್ಬರ್ಯ ದೈವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಗುರುರಾಜ್ ಭಟ್ ಕೊಳಲಗಿರಿ, ಗೌರವಾಧ್ಯಕ್ಷ ಕೀಳಿಂಜೆ ಸತೀಷ್ ಪೂಜಾರಿ, ಪ್ರಧಾನ ಅರ್ಚಕ ಲಕ್ಷ್ಮೀಶ ಭಟ್ ಪರಾರಿ, ತುಳುನಾಡು ರಕ್ಷಣಾವೇದಿಕೆ ಜಿಲ್ಲಾಧ್ಯಕ್ಷ ಫ್ರ್ಯಾಂಕಿ ಡಿಸೋಜ, ದೈವಸ್ಥಾನದ ಜೀರ್ಣೋದ್ಧಾರ ಸಮಿತಿಯ ಆತ್ಮರಾಮ ಪಾಟೀಲ್, ಉಪಾಧ್ಯಕ್ಷ ಜ್ಯೋತಿ ಪಾಟೀಲ್, ಕೋಶಾಧಿಕಾರಿ ಸತೀಶ್ ನಾಯ್ಕ್, ಕಾರ್ಯದರ್ಶಿ ಕೃಷ್ಣರಾಜ್ ಭಟ್ ಹಾಗೂ ಸಮಿತಿಯ ಜೀರ್ಣೋದ್ಧಾರ ಸಮಿತಿಯ ಸದಸ್ಯರು ಇದ್ದರು. ಶಿಕ್ಷಕ ಹಾವಂಜೆ ಪ್ರಶಾಂತ್ ಶೆಟ್ಟಿ ನಿರೂಪಿಸಿ ವಂದಿಸಿದರು.

ನಿಟ್ಟೆ ತಾಂತ್ರಿಕ ಕಾಲೇಜಿನಲ್ಲಿ ಎಕ್ಸ್‌ಪ್ರೊ ಉದ್ಘಾಟನೆ



ನಿಟ್ಟೆ: ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯವು ತನ್ನ ಹಳೆಯ ವಿದ್ಯಾರ್ಥಿ ಸಂಘವಾದ 'ವೆನಮಿತಾ'ದ ಸಹಯೋಗದಲ್ಲಿ ಅಂತಿಮ ವರ್ಷದ ಯುಜಿ ಪ್ರಾಜೆಕ್ಟ್ಸ್‌ನ ವಾರ್ಷಿಕ ಪ್ರದರ್ಶನ ಎಕ್ಸ್‌ಪ್ರೊ2025-2026 ನ್ನು ಹಮ್ಮಿಕೊಂಡಿತು. ಮಣಿಪಾಲದ ಸ್ಕೂಲ್ ಆಫ್ ಕಂಪ್ಯೂಟರ್ ಇಂಜಿನಿಯರಿಂಗ್ ನ ಪ್ರಾಧ್ಯಾಪಕ ಡಾ. ಕೃಷ್ಣಮೂರ್ತಿ ಮಕ್ಕಿತ್ತಾಯ ಉದ್ಘಾಟಿಸಿದರು. ಪ್ರಾಂಶುಪಾಲ ಡಾ.ನಿರಂಜನ್ ಎನ್. ಚಿಪ್ಳೂಂಕರ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ವಿವಿಧ ವಿಭಾಗಗಳ ಒಟ್ಟು 360 ಯೋಜನೆಗಳನ್ನು ಪ್ರದರ್ಶಿಸಲಾಯಿತು. ಎಕ್ಸ್ ಪ್ರೋ ಅಬ್ಸ್ಟ್ರ್ಯಾಕ್ಟ್ ವಾಲ್ಯೂಮ್-24 ನ್ನು ಬಿಡುಗಡೆಗೊಳಿಸಲಾಯಿತು. ಡಾ.ನಯನಾ ಶೆಟ್ಟಿ ಸ್ವಾಗತಿಸಿದರು. ಡಾ.ಸ್ನೇಹಾ ನಾಯಕ್ ನಿರೂಪಿಸಿದರು.

ಏ.26ಕ್ಕೆ ಪಡುಬಿದ್ರಿಗೆ ಹಸಿರು ಹೊರೆಕಾಣಿಕೆ ಮೆರವಣಿಗೆ, ಸಹಕಾರ ರತ್ನ ಡಾ.ಎಂಎನ್‌ಆರ್ ಚಾಲನೆ

ಪಡುಬಿದ್ರಿ: ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ವೈಭವದ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ದೇವಾಲಯಗಳಿಗೆ ಬರುವ ಲಕ್ಷಾಂತರ ಭಕ್ತರು ನೀಡುವ ದೇವರ ಪಾದಕ್ಕೆ ಸೇರುವದೇವರು ಅತೀ ತೃಪ್ತರಾಗುವ ಅನ್ನದಾನಪ್ರಸಾದಕ್ಕೆ ಭಕ್ತರಿಗಾಗಿ ಭಕ್ತರಿಂದ ಕೊಡಮಾಡುವ ಬೃಹತ್ ಹಸಿರುಹೊರೆಕಾಣಿಕೆ ಮೆರವಣಿಗೆಯನ್ನು ಏ.26ರಂದು ಸಮಯ ಸಂಜೆ 3.30ಕ್ಕೆ ಧಾರ್ಮಿಕ-ಸಾಮಾಜಿಕ-ಶೈಕ್ಷಣಿಕ ಹಾಗೂ ಸಹಕಾರ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆಗೈದಿರುವ ಸಹಕಾರರತ್ನ ಡಾ. ಎಂ.ಎನ್. ರಾಜೇಂದ್ರಕುಮಾರ್ ಚಾಲನೆ ನೀಡಲಿದ್ದಾರೆ. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಪ್ರಕಾಶ್ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೊರೆ ಕಾಣಿಕೆ ಸಮಿತಿ ಪ್ರಧಾನಸಂಚಾಲಕ ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು ತಿಳಿಸಿದ್ದಾರೆ.
ಪಡುಬಿದ್ರಿ ಮತ್ತು ಆಸುಪಾಸಿನ ಗ್ರಾಮಗಳಲ್ಲಿ



ಮನೆ-ಮನೆಯಿಂದ ದೇವರ ಸನ್ನಿಧಾನಕ್ಕೆ ಹೊರೆಕಾಣಿಕೆಗೆ ಸಂಕಲ್ಪ ಕೈಗೊಂಡು ಕಾಪು ಕ್ಷೇತ್ರದ ಪ್ರತಿ ಗ್ರಾಮಗಳಿಂದಲೂ, ಉಡುಪಿ ಜಿಲ್ಲೆಯ ಎಲ್ಲಾಭಾಗಗಳಿಂದ ಉಡುಪಿ, ಕಾರ್ಕಳ, ಬೈಂದೂರು, ಕುಂದಾಪುರ, ಪೆರ್ಡೂರು, ಹಿರಿಯಡ್ಕ ಕಡೆಯಿಂದಲೂ ಹೊರೆಕಾಣಿಕೆ ಉಲ್ಲಾಯನ ಸನ್ನಿಧಾನಕ್ಕೆ ಬರುವ ಬಗ್ಗೆ ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಿದೆ. ದ.ಕ. ಜಿಲ್ಲೆಯ ಸಂಚಾಲಕ ಚಂದ್ರಹಾಸ ಶೆಟ್ಟಿ, ಬಂಟ್ವಾಳ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ, ಮಂಗಳೂರು, ಬಂಟ್ವಾಳ, ಸುರತ್ಕಲ್, ಉಳ್ಳಾಲ, ಬೆಳ್ತಂಗಡಿ, ಪುತ್ತೂರು ಭಾಗದಿಂದ ಕೂಡಾ ಹೊರೆಕಾಣಿಕೆಸಮರ್ಪಣೆಗೆ ಸಿದ್ಧತೆಗಳು ನಡೆದಿವೆ. ಡಾ. ಮೋಹನ್ ಆಳ್ವ ನೇತೃತ್ವದಲ್ಲಿ ಮೂಡುಬಿದಿರೆಯ ಭಾಗದಿಂದ ವಿಶೇಷ ಹೊರಕಾಣಿಕೆ ಬರಲಿದೆ. ರಾಜ್ಯ ಕಂಬಳ ಅಸೋಸಿಯೇಶನ್ ಮೂಲಕ ಕಂಬಳದ ವ್ಯವಸ್ಥಾಪಕರು, ಕೋಣದ ಯಜಮಾನರು ಹೊರೆಕಾಣಿಕೆ ನೀಡುವ ಭರವಸೆ ನೀಡಿದ್ದಾರೆ. ಕಾಪು ಹೊಸ ಮಾರಿಗುಡಿಯಿಂದ 99 ವಾಹನಗಳೊಂದಿಗೆ, ಡಾ. ಜಿ.ಶಂಕರ್ ನೇತೃತ್ವದ ಮೊಗವೀರ ಮಹಾಸಭಾ ಮತ್ತು ಉಚ್ಚಿಲ ಮಹಾಲಕ್ಷ್ಮೀ ಸನ್ನಿಧಾನದಿಂದ 100 ವಾಹನಗಳಲ್ಲಿ ಹೊರೆಕಾಣಿಕೆ ಉಲ್ಲಾಯನ ಸನ್ನಿಧಾನಕ್ಕೆ ನೀಡುವ ಭರವಸೆ ನೀಡಿದ್ದಾರೆ. ಬಿಲ್ಲವರ ಯುವಬಳಗದಿಂದ 1200ಕ್ಕೂ ಮಿಕ್ಕಿ ಅಕ್ಕಿ ಚೀಲಗಳು, ಅವಿಭಜಿತ ದ.ಕ. ಜಿಲ್ಲೆಯ ಎಲ್ಲಾ ಬಂಟರ ಸಂಘಗಳಿಂದ ಹಾಗೂ ವಿವಿಧ ಸಂಘಗಳಿಂದಲೂ ಬೃಹತ್ ಹೊರೆಕಾಣಿಕೆ ಬರಲಿದೆಂದರು. ನವೋದಯ ಗ್ರಾಮ ವಿಕಾಸಚಾರಿಟೇಬಲ್ ಟ್ರಸ್ಟ್ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಇವರಿಂದ ಉಲ್ಲಾಯನ ಸನ್ನಿಧಾನಕ್ಕೆಹೊರೆಕಾಣಿಕೆ ಬರಲಿದೆಂದರು.
ಕಾರ್ಯಕ್ರಮದಲ್ಲಿ ಡಾ.ಜಿ. ಶಂಕರ್, ಡಾ. ಮೋಹನ್ ಆಳ್ವ, ಸೂರ್ಯಕಾಂತ ಜಯ ಸುವರ್ಣ, ಐಕಳಹರೀಶ್ ಶೆಟ್ಟಿ, ಜಯ ಸಿ. ಕೋಟ್ಯಾನ್, ನವೀನ್ ಚಂದ್ರ ಡಿ. ಸುವರ್ಣ, ಸಾಹುಕರ ಕಿರಣ್ ಪೈ, ಎಂ.ಬಿ. ಪುರಾಣಿಕ್, ಮಧು ಆಚಾರ್ಯ, ರವಿ ಶೆಟ್ಟಿಗಾರ್ ಕಾರ್ಕಳ, ಗೋಕುಲದಾಸ್, ಸದಾಶಿವ ಭಂಡಾರಿ ಸಕಲೇಶಪುರ, ಕೋಟ ಶ್ರೀನಿವಾಸ ಪೂಜಾರಿ, ಗುರ್ಮೆ ಸುರೇಶ್ ಶೆಟ್ಟಿ, ವಿನಯಕುಮಾರ್ ಸೊರಕೆ, ಕಿನ್ನಿಗರಾಜ್ ರತ್ನಾಕರ ರಾಜ್ ಅರಸರು ಪಡುಬಿದ್ರಿಬೀಡು, ಪೇಟೆಮನೆ ಭವಾನಿ ಶಂಕರ ಹೆಗ್ಡೆ, ಶ್ರೀಪತಿ ಕೊರ್ನೆಯ, ಜಯಕರ ಶೆಟ್ಟಿ ಇಂದ್ರಾಳಿ, ಪಾಂಡು ಪಾಣಾರ ಹಿರಿಯಡ್ಕ, ದಯಾನಂದ ಕತ್ತಲ್ಸಾರ್, ವಿಠಲ ಗುರಿಕಾರ, ಪ್ರಕಾಶ್ ರಾವ್, ಉಪಸ್ಥಿತರಿರುವರು.

ಪುತ್ತಿಗೆ ಮಠದಿಂದ 17 ಟನ್ ಅಕ್ಕಿ

ಪುತ್ತಿಗೆ ಮಠ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರಿಂದ ಸುಮಾರು 7ಲಕ್ಷ ವೆಚ್ಚದ 17 ಟನ್ ಅಕ್ಕಿ ನೀಡುವುದರ ಮೂಲಕ ಅನ್ನಪ್ರಸಾದಕ್ಕೆ ಹೊರೆ ಕಾಣಿಕೆ ನೀಡಿ ಆಶೀರ್ವದಿಸಲಿದ್ದಾರೆ ಎಂದು ಹೇಳಿದರು.

ಹಸಿರು ಹೊರೆಕಾಣಿಕೆ ಸಾಗಿ ಬರುವ ದಾರಿ

ಮಂಗಳೂರು ಕಡೆಯಿಂದ ಬರುವ ಹಸಿರು ಹೊರೆ ಕಾಣಿಕೆ ವಾಹನಗಳು, ಎರ್ಮಾಳು ಮಸೀದಿ ಬಳಿಯಾಗಿ ತಿರುಗಿಸಿ, ಎರ್ಮಾಳು ನರಳ್ತಾಯ ದೇವಸ್ಥಾನದ ಬಳಿಯಿಂದ ಸಾಲಾಗಿ ನಿಲ್ಲುವುದು. ಉಡುಪಿ ಕಡೆಯಿಂದಬರುವ ವಾಹನಗಳು ಜನಾರ್ದನ ದೇವಸ್ಥಾನದ ಬಳಿಯಿಂದ ಉಚ್ಚಿಲದವರೆಗೆ ಏಕಮುಖವಾಗಿ ನಿಲ್ಲುವುದು. ಸುಮಾರು 1000 ವಾಹನ 10 ಸಾವಿರಕ್ಕೂ ಮಿಕ್ಕಿ ಭಕ್ತರ ಸಂಗಮವಾಗಲಿದೆ. ಪಡುಬಿದ್ರಿ ದೇವಸ್ಥಾನದಲ್ಲಿ ಎಲ್ಲಾ ಭಕ್ತರಿಗೆ ಉಪಾಹಾರದ ವ್ಯವಸ್ಥೆ ಕಲ್ಪಿಸಲಾಗಿದೆ. ಗುಂಡ್ಲಾಡಿ ಕಟ್ಟೆ ಬಳಿ ಖಾಸಗಿ ವಾಹನಗಳಿಗೆ ವಾಹನದ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ವಿಶಿಷ್ಟ ಬೋರ್ಡ್ ಅಳವಡಿಸಿ ಗಮನ ಸೆಳೆದರು ಸುಳ್ಯದ ಲಕ್ಷ್ಮಣ

ಬಾಂಗ್ಲಾ ವಲಸಿಗರ ಪತ್ತೆಗೆ ಆಗ್ರಹ

ಸುಳ್ಯ: ಸುಳ್ಯ ಸೇರಿದಂತೆ ಬಾಂಗ್ಲಾ ವಲಸಿಗರು ಅಕ್ರಮವಾಗಿ ಊರು ಊರಲ್ಲಿ ನೆಲೆಸುತ್ತಿದ್ದು ಅವರನ್ನು ಪತ್ತೆ ಹಚ್ಚಬೇಕು. ಅಲ್ಲದೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸುಳ್ಯ ತಾಲೂಕಿನ ಗುತ್ತಿಗಾರಿನ ಲಕ್ಷ್ಮಣ ದೇವಸ್ಯ ಎಂಬವರು ಆಗ್ರಹಿಸಿದ್ದಾರೆ.

ಆಕ್ರೋಶ ಹೊರ ಹಾಕಿದ್ದಾರೆ

ಅವರ ಬೇಡಿಕೆಗೆ ಗ್ರಾಮ ಪಂಚಾಯತ್ ಮತ್ತು ಜನಪ್ರತಿನಿಧಿಗಳು ಸ್ಪಂದಿಸದೇ ಇರುವ ಕಾರಣ ಇದೀಗ ವಿಶೇಷ ಬೋರ್ಡ್ ಅಳವಡಿಸುವ ಮೂಲಕ ತಮ್ಮ ಆಕ್ರೋಶ ಹೊರ ಹಾಕಿದ್ದಾರೆ.

ಸುಳ್ಯ ತಾಲೂಕಿನ ಗುತ್ತಿಗಾರು ಗ್ರಾಮದ ಚತ್ರಪ್ಪಾಡಿ ಸಮೀಪ ದೇವಸ್ಯ ಎಂಬಲ್ಲಿ 'ಎಲೆಕ್ಷನ್ ಮತ್ತು ಕಲೆಕ್ಷನ್‌ನವರಿಗೆ ಕಡ್ಡಾಯವಾಗಿ ಒಳಗೆ ಪ್ರವೇಶವಿಲ್ಲ, ಕಚ್ಚುವ ನಾಯಿಗಳಿವೆ ಜಾಗ್ರತೆ' ಎಂಬ ಬರಹದ ಬೋರ್ಡ್ ಅಳವಡಿಸಿದ್ದಾರೆ.

ಕಚ್ಚುವ ನಾಯಿಗಳಿವೆ ಜಾಗ್ರತೆ ಎಂದು ಬರೆದಿರುವ ಬ್ಯಾನರ್ ಈಗ ಎಲ್ಲರನ್ನು ಸೆಳೆಯುತ್ತಿದೆ.



ಕಾನೂನು ಕ್ರಮ ಕೈಗೊಳ್ಳಲಾಗುವುದು

ಈ ವಿಚಾರದ ಕುರಿತು ಯಾವುದೇ ಮಾಹಿತಿ ಬಂದಿಲ್ಲ ಹಾಗೂ ಕೂಡಲೇ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಕಾನೂನು ಪ್ರಕಾರ ಕ್ರಮ ವಹಿಸಲಾಗುವುದು ಎಂದು ತಾಲೂಕು ತಹಶೀಲ್ದಾರ್ ಮಂಜುಳ ಎಂ. ತಿಳಿಸಿದ್ದಾರೆ.

ದೂರು ನೀಡಿದರೂ ಸ್ಪಂದನೆಯಿಲ್ಲ

ಹಿಂದಿ ಭಾಷಿಗರು ಗುತ್ತಿಗಾರು ಗ್ರಾಮ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಕಂಡು ಬರುತ್ತಿದ್ದು ಅವರ ಪೂರ್ವಾಪರ ಯಾವುದೂ ತಿಳಿದಿಲ್ಲ. ಜೊತೆಗೆ ಪ್ರಶ್ನಿಸಿದಾಗ ಅವರು ಕಲ್ಕತ್ತಾ ಹಾಗೂ ಉತ್ತರ ಭಾರತೀಯರು ಎಂದು ಹೇಳುತ್ತಿದ್ದಾರೆ. ಅವರ ಬಳಿಯಲ್ಲಿ ಯಾವುದೇ ದಾಖಲಾತಿಗಳು ಇರುವುದಿಲ್ಲ ಈ ಬಗ್ಗೆ ಗ್ರಾಮ ಸಭೆಯಲ್ಲಿ ಧ್ವನಿಯೆತ್ತಿದ್ದು ಈ ಬಗ್ಗೆ ಸ್ಥಳೀಯ ಪಂ. ಅಥವಾ ಪೋಲೀಸ್ ಇಲಾಖೆಗೆ ಮಾಹಿತಿ ನೀಡಿ ಪರಿಶೀಲನೆ ನಡೆಸುವ ಕೆಲಸ ಮಾಡಿಲ್ಲ ದೂರು ನೀಡಿದರೂ ಪಂಚಾಯತ್ ಸ್ಪಂದನೆ ನೀಡುತ್ತಿಲ್ಲ.

● ಲಕ್ಷಣ ದೇವಸ್ಯ

ಪಿಲಿಕುಳ ಗುತ್ತು ಮನೆ, ಕುಶಲಕರ್ಮಿ ಗ್ರಾಮಕ್ಕೆ ವಿದೇಶಿ ಪ್ರವಾಸಿಗರ ಭೇಟಿ

ಮಂಗಳೂರು: ನವಮಂಗಳೂರು ಬಂದರಿಗೆ ಶನಿವಾರ ಆಗಮಿಸಿದ್ದ ಸೆವೆನ್ ಸೀಸ್ ಮರೈನರ್ ಐಷಾರಾಮಿ ಹಡಗಿನಲ್ಲಿ ಆಗಮಿಸಿದ್ದ ನೂರಾರು ವಿದೇಶಿ ಪ್ರವಾಸಿಗರು ಪಿಲಿಕುಳದ ಗುತ್ತುಮನೆ ಮತ್ತು ಕುಶಲಕರ್ಮಿ ಗ್ರಾಮಕ್ಕೆ ಭೇಟಿ ನೀಡಿದರು.

ಪ್ರವಾಸಿಗರನ್ನು ಆಕರ್ಷಿಸಿತು

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಕುಶಲಕರ್ಮಿ ಗ್ರಾಮದಲ್ಲಿ ಮುಂದಿನ ತಲೆಮಾರಿಗೆ ಪಾರಂಪರಿಕವಾಗಿ ಉಳಿಸಿಕೊಂಡು ಬಂದಿರುವ ವಿವಿಧ ಕುಶಲಕರ್ಮಿ ವೃತ್ತಿಗಳ ನೈಜ ಅನುಭವ ಪ್ರವಾಸಿಗರನ್ನು ಆಕರ್ಷಿಸಿತು. ಇಲ್ಲಿ ಕುಂಬಾರಿಕೆ, ಕುಟ್ಟಣದ ಅವಲಕ್ಕಿ ತಯಾರಿಕೆ, ಎಣ್ಣೆ ಗಾಣದ ಕಾರ್ಯವಿಧಾನ, ಕಮ್ಮಾರಿಕೆ, ಬಡಗಿ ಕೆಲಸಗಳು ಹಾಗೂ ಬೆತ್ತ-ಬಿದಿರು ವಿಭಾಗಗಳಲ್ಲಿ ದೈನಂದಿನವಾಗಿ ನಡೆಯುವ ನೇರ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಿದರು.

ಪ್ರತಿ ವಿಭಾಗದಲ್ಲಿಯೂ ಕುಶಲಕರ್ಮಿಗಳು ತಮ್ಮ ತಮ್ಮ ಕೌಶಲ್ಯವನ್ನು ನೈಜವಾಗಿ ಪ್ರದರ್ಶಿಸುತ್ತಿರುವುದನ್ನು ಗಮನಿಸಿದ ಪ್ರವಾಸಿಗರು, ಪರಂಪರೆಯ ಈ ವೃತ್ತಿಗಳು ಇಂದಿಗೂ ಹೇಗೆ ಜೀವಂತವಾಗಿವೆ ಎಂಬುದರ ಬಗ್ಗೆ ಕುತೂಹಲದಿಂದ ವಿಚಾರಿಸಿದರು.

ಮಾಹಿತಿ ಪಡೆದುಕೊಂಡರು

ಗ್ರಾಮ್ಯ ಜೀವನ ಶೈಲಿ, ಪರಂಪರೆಯ ತಂತ್ರಜ್ಞಾನ, ಹಾಗೂ ಸ್ಥಳೀಯರ ಜೀವನೋಪಾಯಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ಮಾರ್ಗದರ್ಶಕರಿಂದ ಪಡೆದುಕೊಂಡರು. ಒಟ್ಟು 200 ಕ್ಕಿಂತಲೂ ಹೆಚ್ಚು ವಿದೇಶಿ ಪ್ರವಾಸಿಗರು ಪಿಲಿಕುಳಕ್ಕೆ ಭೇಟಿ ನೀಡಿದ್ದಾರೆ.



ಚೆರ್ಕಳದಲ್ಲಿ ಲಾರಿಗೆ ಬೆಂಕಿ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಕಾಮಗಾರಿ ನಡೆಯುತ್ತಿರುವ ಚೆರ್ಕಳ ಭಾಗದಲ್ಲಿ ಶುಕ್ರವಾರ ರಾತ್ರಿ ಟೋರಸ್ ಲಾರಿಗೆ ಬೆಂಕಿ ತಗುಲಿ ಪೂರ್ಣ ನಾಶಗೊಂಡಿದೆ. ಈ ಸಂದರ್ಭ ಚಾಲಕ ಲಾರಿಯಿಂದ ಹೊರಕ್ಕೆ ಜಿಗಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ತಗುಲಿರಬಹುದೆಂದು ಸಂಶಯಿಸಲಾಗಿದೆ. ಮಾಹಿತಿ ಲಭಿಸಿದ ಕೂಡಲೇ ಕಾಸರಗೋಡು ಅಗ್ನಿಶಾಮಕ ದಳದ ಅಧಿಕಾರಿಗಳು ಬೆಂಕಿ ನಂದಿಸಿದರು.

ವಾಣಿ ಪದವಿ ಪೂರ್ವ ಕಾಲೇಜು ಬೆಳ್ತಂಗಡಿ

ಹಳೆಕೋಟೆ, ಬೆಳ್ತಂಗಡಿ ತಾಲೂಕು–574214, ಫೋ:08256,233399, ಮೊ: 8108375408, 8618450848

Name	Marks
Shobhitha K	518
Lakshmikantha	517
Ramlath	515
Thrusha	515
Prajwal HR	514
Ramyashree	513
Shravya	513
Guruprasad	512
M Prajna	512
Monisha AN	512
Sandhya	512
Adithya Raj	511
Bhavish	511
Shalini	511
Deepak S.	510

DISTINCTIONS - SCIENCE

Name	Marks
Gowthami	584
Shruthi S	584
Sandesh Gowda	583
Pramitha Rai	582
Abhijna	581
Anusha Rodrigues	581
Sindhoor R Phadke	580
Jasmitha	579
Moksha	579
Nishmitha V R	579
Sandhyashree	579
Sameeksha	577
Deeptha	576
Kavyashree	575
Vaishali	575
Sanjana	573
Deepak B	572
Tripthi	572
Deepthi	571
Krithika V	571
Chaithra S	570
Sathvik Joshi	570
Veekshitha	570
Ananya Adapa	569
Anvitha K	569
Mohammad Asahad	569
Nishanth	568
Sharanya S	568
Prathvi	567
Ananya N Udupa	565
Jagadeesh Kumar	564
Sanvi	564
Chethana Das	563
Nikhil	563
Raksha	563
MU Manya	562
Prapushya P Poojary	560
Pratheeksha	558
Thanvi	555
Muhammad Ubaid	554
Rathan	554
Deeksha	553
Harshitha	553
Subin Sandy	553
Shwetha	552
Ankitha JN	551
Sameeksha	551
Drushya	550
Shivani	549
Shreya	549
Archana K S	548
Harshitha S Poojary	547
KV Anjali Kumari	547
Yashaswi	547
Havisha	546
Nishmitha HS	546
P Amulya	546
BS Srujan	545
Suprith S	545
Sathvik Bangera	544
Thanushri	544
Vamshika	544
Radhika	543
Roylin Ashmi Veigas	543
Steven Devasia Paikatte	543
Swasthik Kumar	543
Ananya	542
Inchara p shetty	542
Nithyashree UN	542
Sapthami Shetty S	542
Vaibhavi H Acharya	542
Vijoy Serrao	542
Tanvi	541
Sameeksha	540
Yashwith Gowda K.	540
Jesna MD	539
J Samarth Naik	538
Krithi	538
Shreyas BA	538
Shruthika	538
Nishitha	537
Abhishek Agasti	536
Manya	536
Moksha M	536
Sanika	536
Manvitha Poojary	532
Harsha N.S	529
Kavana	529
Nisha	529
Shravya	529
Ashitha	528
Krithi US	528
Dheeraj	527
Hithashree AS	527
Karthik	527
Rithesh Gowda	527
Thulasi	527
Abhishek	526
Dhanush PS	526
Keerthi	526
Mahammad Nawaz	526
Nisha	526
Shreya	526
Sambhramaraj	525
Shravan PG	524
Shravya Shetty	523
Thanushree	523
Rithika	522
Spandan L Poojary	522
Sameeksha	521
Shamith	521
Shravya	521
Havyashree	519
Nanjusha	519
Manya	519
Rakshitha	518
AJ Martina	517
Nivya AT	517
Shrutha B Jain	517
Yajna	517
Shraddha	516
Spandana MS	516
Charan	514
Kulal Pranam Harishchandra	514
Nithesh S Gowda	514
Sanchitha P Poojary	514
Vivek	514
Rakshith	513
Disha	512
Prajna Anant Bandekar	510
Samiksha	510

DISTINCTIONS ARTS

Name	Marks
Pavithra	571
Thrisha B	566
Bhavith HS	560
Srijani	560
Harshitha	549
Archana	539
Pranamya Bhat	533
Manoj	524
Arufa Suhana	522
Yashavanth	519
Yathiksha	517

EXCELLENCE SPEAKS

- 95% Above- 51 Students
- 90% Above- 172 Students
- 85% Above - 278 Students
- 80% Above - 350 Students
- 60% Above - 611 Students
- 100/100- 79 STUDENTS

....:ನಿಮ್ಮ ಭವಿಷ್ಯವು ಇನ್ನಷ್ಟು ಉಜ್ವಲವಾಗಲಿ ಎಂದು ಶುಭ ಹಾರೈಸುವ:...

ಗೌರವಾಧ್ಯಕ್ಷರು, ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಆಡಳಿತ ಮಂಡಳಿ
ವಾಣಿ ಶಿಕ್ಷಣ ಸಂಸ್ಥೆ , ಹಳೆಕೋಟೆ, ಬೆಳ್ತಂಗಡಿ

ಪ್ರಾಂಶುಪಾಲರು, ಉಪನ್ಯಾಸಕರ ವೃಂದ ಮತ್ತು ಸಿಬ್ಬಂದಿ ವರ್ಗ
ವಾಣಿ ಪದವಿ ಪೂರ್ವ ಕಾಲೇಜು, ಹಳೆಕೋಟೆ, ಬೆಳ್ತಂಗಡಿ